ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮುಖ್ಯಮಂತ್ರಿ ಪದಕ

ರಾಜ್ಯದಲ್ಲಿ ನಕ್ಸಲ್ ಚಟುವಟಿಕೆ ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರವಹಿಸಿದ ರಾಜ್ಯ ಗುಪ್ತಚರ ಇಲಾಖೆಯ ನಿರ್ದೇಶಕ ಹೇಮಂತ್ ನಿಂಬಾಳ್ಕರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ನಡೆದ ಪೊಲೀಸ್ ಧ್ವಜ ದಿನಾಚರಣೆ ಸಭಾರಂಭದಲ್ಲಿ ಮುಖ್ಯಮಂತ್ರಿ ಪದಕ ಪ್ರದಾನ ಮಾಡಿದರು. ನಿಂಬಾಳ್ಕರ್ ಅವರು ಗುಪ್ತಚರ ಇಲಾಖೆಯ ನಿರ್ದೇಶಕ ಸ್ಥಾನದೊಂದಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಸೊಂಪಾದ ಪುಟಗಳು

ಒಂದು ಮರ ಉಳಿಸಲು ಯೋಜನೆ ಬದಲಿಸಿದ ಜಪಾನ್ ಸರಕಾರ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ಅನಾಮಧೇಯನ ಆಗಮನ ಮತ್ತು ನಿರ್ಗಮನ

ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಸಂಕಷ್ಟದಲ್ಲಿ ಇದ್ದಾಗ ಪ್ರಾಮಾಣಿಕವಾಗಿರಬೇಕು. ಶ್ರೀಮಂತಿಕೆ ಬಂದಾಗ ಸರಳವಾಗಿರಬೇಕು. ಅಧಿಕಾರ ಬಂದಾಗ ವಿನಮ್ರರಾಗಿರಬೇಕು ಮತ್ತು ಸಿಟ್ಟು ಬಂದಾಗ ಮೌನವಹಿಸಬೇಕು. ಜೀವನ ನಿರ್ವಹಣೆ ಅಂದ್ರೆ ಇಷ್ಟೇ.

ವಕ್ರತುಂಡೋಕ್ತಿ

ಕೆಲವರಿಗೆ ಸಿಟ್ಟು ಒಂದು ವಿಷಯವೇ ಅಲ್ಲ. ಜನರೇ ಅವರಿಗೆ ಸಿಟ್ಟು ತರಿಸುತ್ತಾರೆ. ನಂತರ ಅದೇ ಒಂದು ವಿಷಯವಾಗುತ್ತದೆ.

ನ್ಯಾ.ಶಿವರಾಜ್ ಸೇರಿ ಮೂವರಿಗೆ ನಾಡೋಜ

ವಿಜಯನಗರ: ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ, ಮಾಜಿ ಲೋಕಾಯುಕ್ತ ನ್ಯಾ.ಶಿವರಾಜ್ ವಿ. ಪಾಟೀಲ್, ಲೇಖಕ ಕುಂ.ವೀರಭದ್ರಪ್ಪ, ಧಾರವಾಡದ ಹಿಂದೂಸ್ತಾನಿ ಗಾಯಕ ಪದ್ಮಶ್ರೀ ಎಂ.ವೆಂಕಟೇಶ್ ಕುಮಾರ್ ನಾಡೋಜ ಪದವಿ ಪ್ರದಾನ ಮಾಡಲಾಗುವುದು ಎಂದು ಹಂಪಿ ಕನ್ನಡ ವಿವಿ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ತಿಳಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ 33ನೇ ನುಡಿಹಬ್ಬ ಏಪ್ರಿಲ್ 4ರಂದು ನಡೆಯಲಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

'ಗ್ಯಾರಂಟಿ' ಹೆಸರಿನ ನ್ಯೂಸ್ ಚಾನಲ್ ಲೋಕಾರ್ಪಣೆ ಮಾಡಿದ ನೇತಾರ
ಸುದ್ದಿ



ಸುರ್ಜೇವಾಲ ನಿವಾಸದಲ್ಲಿ ತಡರಾತ್ರಿ ಸಭೆ | ರಾಹುಲ್ ಗಾಂಧಿ ಭೇಟಿ ಬಳಿಕ ನಾಲ್ವರ ಹೆಸರು ಅಂತಿಮ ಸಾಧ್ಯತೆ

ಪರಿಷತ್ ಸ್ಥಾನ ಇಂದು ಫೈನಲ್

ಬೆಂಗಳೂರು: ರಾಜ್ಯ ವಿಧಾನ ಪರಿಷತ್‌ನಲ್ಲಿ ಖಾಲಿಯಾಗಿರುವ ನಾಲ್ಕು ಸ್ಥಾನಗಳಿಗೆ 40ಕ್ಕೂ ಹೆಚ್ಚು ಆಕಾಂಕ್ಷಿಗಳು ಇರುವುದರಿಂದ ಯಾರನ್ನು ನೇಮಕ ಮಾಡಬೇಕು ಎನ್ನುವ ಸಂಬಂಧ ಬುಧವಾರ ತಡರಾತ್ರಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ನಿವಾಸದಲ್ಲಿ ಸುದೀರ್ಘ ಚರ್ಚೆ ನಡೆದಿದೆ.

ಕರ್ನಾಟಕ ಭವನ ಉದ್ಘಾಟನಾ ಕಾರ್ಯಕ್ರಮದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪ್ರಮುಖ ನಾಯಕರು ಸಭೆ ನಡೆಸಿದ್ದಾರೆ. ಸುರ್ಜೇವಾಲ ನಿವಾಸದಲ್ಲಿ ನಡೆದ ಸಭೆಯಲ್ಲಿ ಕೆಲವೊಂದಷ್ಟು ತೀರ್ಮಾನವನ್ನೂ ಕೈಗೊಂಡಿದ್ದು, ಗುರುವಾರ ಬೆಳಗ್ಗೆ 11ಗಂಟೆಗೆ ರಾಹುಲ್ ಗಾಂಧಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಭೇಟಿಯಾಗಲಿದ್ದಾರೆ. ಈ ವೇಳೆ ಪರಿಷತ್ ಸ್ಥಾನಗಳಿಗೆ ಯಾರನ್ನು ನಾಮನಿರ್ದೇಶನ ಮಾಡಬೇಕು ಎನ್ನುವುದು ಸ್ಪಷ್ಟವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಬುಧವಾರ ರಾತ್ರಿಯೇ ರಾಹುಲ್ ಗಾಂಧಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿಯಾಗಬೇಕಿತ್ತು. ಆದರೆ ಲೋಕಸಭೆಯಲ್ಲಿ ವಕ್ಫ್ ವಿಧೇಯಕವನ್ನು ಕೇಂದ್ರ ಸರಕಾರ ಮಂಡಿಸಿರುವುದರಿಂದ ಸುದೀರ್ಘ ಚರ್ಚೆ ನಡೆದಿದೆ. ಆದ್ದರಿಂದ ಆ ಚರ್ಚೆಯ ಸಮಯದಲ್ಲಿ ರಾಹುಲ್ ಗಾಂಧಿ ಇರಬೇಕಿರುವುದರಿಂದ ಭೇಟಿಯನ್ನು ಗುರುವಾರಕ್ಕೆ ಮುಂದೂಡಲಾಗಿದೆ. ಕರ್ನಾಟಕ ಭವನ ಉದ್ಘಾಟನೆಯ ಸಮಯದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಪ್ರತ್ಯೇಕ ಚರ್ಚೆ ನಡೆಸಿರುವ ಸಿದ್ದರಾಮಯ್ಯ ಅವರು, ಕಾಂಗ್ರೆಸ್‌ನಲ್ಲಿನ ಬೆಳವಣಿಗೆಗೆ ಸಂಬಂಧಿಸಿದಂತೆ ವರದಿ ನೀಡಿದ್ದಾರೆ.

ಹನಿಟ್ರ್ಯಾಪ್ ವರದಿ ಕುರಿತು ಸಲ್ಲಿಸುವರೇ?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇನ್ನೆರಡು ದಿನ ದೆಹಲಿಯಲ್ಲೇ ಇರಲಿದ್ದು, ಗುರುವಾರ ಕಾಂಗ್ರೆಸ್ ಹೈಕಮಾಂಡ್ ಅನ್ನು ಭೇಟಿಯಾಗಿ ಹಲವು ವಿಷಯಗಳ ಬಗ್ಗೆ ಚರ್ಚಿಸಲಿದ್ದಾರೆ. ಪ್ರಮುಖವಾಗಿ ಹನಿಟ್ರ್ಯಾಪ್ ಪ್ರಕರಣದ ವರದಿಯನ್ನು ಸಲ್ಲಿಸುವರೇ ಎನ್ನುವ ಕುತೂಹಲ ಬಹುತೇಕರಲ್ಲಿದೆ.

ಲೋಕಸಭೆಯಲ್ಲಿ ಬಹುಮತದಿಂದ ಉಮೀದ್ ಮಸೂದೆಗೆ ಅಸ್ತು

ವಕ್ಫ್ ವಿಧೇಯಕ ಅಂಗೀಕಾರ

ದೆಹಲಿ: ಬಹುಚರ್ಚಿತ ಹಾಗೂ ವಿವಾದಿತ ವಕ್ಫ್ ತಿದ್ದುಪಡಿ ಮಸೂದೆಯನ್ನು ಬುಧವಾರ ಲೋಕಸಭೆ ಅಂಗೀಕರಿಸಿದೆ. ವಿರೋಧಪಕ್ಷಗಳ ತೀವ್ರ ವಿರೋಧದ ನಡುವೆಯೂ ಕೇಂದ್ರ ಸಚಿವ ಕಿರಣ್ ರಿಜಿಜು ಮಸೂದೆಯನ್ನು ಮಂಡಿಸಿದರು. ಅದಾದ ಬಳಿಕ ಮಸೂದೆ ಮೇಲೆ ಸುಮಾರು ಎಂಟು ಗಂಟೆಗಳ ಸುದೀರ್ಘ ಚರ್ಚೆ ನಡೆಯಿತು. ಬಳಿಕ ವಕ್ಫ್ ಬಿಲ್ ಅನ್ನು ಸ್ಪೀಕರ್ ಓಂ ಬಿರ್ಲಾ ಮತಕ್ಕೆ ಹಾಕಿದರು. ಅದನ್ನು 288-232 ಮತಗಳ ಅಂತರದಲ್ಲಿ ಅಂಗೀಕರಿಸಲಾಯಿತು.

ವಕ್ಫ್ ತಿದ್ದುಪಡಿ ಮಸೂದೆ- 2024 ಹೆಸರಿನ ಮೂಲ ವಿಧೇಯಕವನ್ನು ಏಕೀಕೃತ ವಕ್ಫ್ ನಿರ್ವಹಣೆ, ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ ವಿಧೇಯಕ (ಉಮೀದ್)-2025 ಹೆಸರಿನಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಂಡಿಸಿದರು. ವಿಧೇಯಕದಿಂದ ದೇಶದಲ್ಲಿರುವ ಯಾವುದೇ ಮಸೀದಿಗೆ ತೊಂದರೆಯುಂಟಾಗುವುದಿಲ್ಲ. ಮಸೂದೆ ಮಂಡನೆಗೆ ಅಗತ್ಯವಾದ ಎಲ್ಲ ಕಾನೂನು ಕ್ರಮವನ್ನು ನಾವು ಅನುಸರಿಸಿದ್ದೇವೆ. 25 ರಾಜ್ಯಗಳ ವಕ್ಫ್ ಬೋರ್ಡ್ ಅಭಿಪ್ರಾಯವನ್ನು ಸಂಗ್ರಹಿಸಿದ್ದೇವೆ. 25 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಕ್ಫ್ ಮಂಡಳಿಗಳ 284 ನಿಯೋಗಗಳು ಜೆಪಿಸಿಯಲ್ಲಿ ತಮ್ಮ ವಾದಗಳನ್ನು ಮಂಡಿಸಿವೆ. ಇವುಗಳನ್ನು ಪರಿಗಣಿಸಿಯೇ ಮಸೂದೆಯನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕದ ವಿಚಾರ ಪ್ರಸ್ತಾಪ

ಮಸೂದೆ ಮಂಡಿಸಿದ ಬಳಿಕ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಪಕ್ಷಗಳ ವಿರುದ್ಧ ಗುಡುಗಿದರು. ಈ ವೇಳೆ ಅವರು ಕರ್ನಾಟಕದ ಉದಾಹರಣೆ ನೀಡಿದರು. ದತ್ತಪೀಠ ದೇವಸ್ಥಾನಕ್ಕೆ ಸೇರಿದ ಭೂಮಿಯ ಮೇಲೆ ಕರ್ನಾಟಕ ವಕ್ಫ್ ಮಂಡಳಿಯು ಹಕ್ಕು ಮಂಡಿಸಿದೆ ಎಂದು ಅಮಿತ್ ಶಾ ತಿಳಿಸಿದರು. ಅಲ್ಲದೆ ಕರ್ನಾಟಕದ ವಿಜಯಪುರದ ಹೊನ್ವಾಡ್ ಗ್ರಾಮದಲ್ಲಿ, ವಕ್ಫ್ ಮಂಡಳಿಯು ಹಕ್ಕು ಮಂಡಿಸಿದ ನಂತರ 1,500 ಎಕರೆ ಭೂಮಿ ವಿವಾದಕ್ಕೆ ಒಳಗಾಯಿತು ಎಂದು ಪ್ರಸ್ತಾವಿಸಿದರು.

ಹೊಸ ಮಸೂದೆ: ಡಿಸಿಗೆ ಅಧಿಕಾರ, ಅಪೀಲಿಗೆ ಅವಕಾಶ

- 1995ರ ವಕ್ಫ್ ಮಸೂದೆ ಅನ್ವಯ ಸರಕಾರಿ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಘೋಷಿಸಲಾಗುತ್ತಿತ್ತು. 2024ರ ತಿದ್ದುಪಡಿ ಮಸೂದೆಯಲ್ಲಿ ಸರಕಾರಿ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಪರಿಗಣಿಸಿದರೂ ವಿವಾದವನ್ನು ಜಿಲ್ಲಾಧಿಕಾರಿ ಪರಿಹರಿಸಬೇಕು.
- ವಕ್ಫ್ ಆಸ್ತಿ ಸಮೀಕ್ಷೆಗೆ ಅವಕಾಶವಿದ್ದರೂ ಅದನ್ನು ಅನುಷ್ಠಾನಗೊಳಿಸಲು ವಿಳಂಬ ಮಾಡಲಾಗುತ್ತಿತ್ತು. ಹೊಸ ಮಸೂದೆಯಲ್ಲಿ ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಕಂದಾಯ ಕಾನೂನಿನಡಿ ವಕ್ಫ್ ಆಸ್ತಿಯನ್ನು ಗುರುತಿಸಿ, ಸರ್ವೇ ಪೂರ್ಣಗೊಳಿಸುವುದನ್ನು ಕಡ್ಡಾಯಗೊಳಿಸಲಾಗಿದೆ.
- 1995ರ ಕಾಯ್ದೆಯನ್ವಯ ಕೇಂದ್ರ ವಕ್ಫ್ ಮಂಡಳಿಯಲ್ಲಿ ಮುಸ್ಲಿಮರು ಮಾತ್ರ ಇರಬೇಕು ಎಂದಿತ್ತು. 2024ರ ತಿದ್ದುಪಡಿ ಮಸೂದೆಯಲ್ಲಿ ಇಬ್ಬರು ಮುಸ್ಲಿಮೇತರರು ಮತ್ತು ಇಬ್ಬರು ಮುಸ್ಲಿಂ ಮಹಿಳೆಯರು ಇರಬೇಕು ಎಂದು ಬದಲಿಸಲಾಗಿದೆ.
- ವಕ್ಫ್ ನ್ಯಾಯಮಂಡಳಿಯಲ್ಲಿ ಈ ಹಿಂದೆ ಒಬ್ಬರು ನ್ಯಾಯಾಧೀಶರು ಮತ್ತು ಮುಸ್ಲಿಂ ಕಾನೂನು ತಜ್ಞರು ಇರಬೇಕಿತ್ತು. ಈಗ ತಜ್ಞರ ಬದಲು ಜಿಲ್ಲಾ ನ್ಯಾಯಾಧೀಶರು, ಅಲ್ಪಸಂಖ್ಯಾತರ ಸಚಿವಾಲಯದ ಜಂಟಿ ಕಾರ್ಯದರ್ಶಿ ಇರಬೇಕು ಎಂದೆನ್ನಲಾಗಿದೆ.
- ಈ ಹಿಂದೆ ವಕ್ಫ್ ನ್ಯಾಯಮಂಡಳಿ ತೀರ್ಮಾನವೇ ಅಂತಿಮ ಎಂದಿತ್ತು. ಪರಿಷ್ಕೃತ ಕಾಯ್ದೆಯಲ್ಲಿ ಆದೇಶದ ಮೇಲೆ 90 ದಿನಗಳ ಒಳಗಾಗಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
- ಮಸೂದೆಯನ್ನು ಏಕೀಕೃತ ವಕ್ಫ್ ನಿರ್ವಹಣಾ ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ(UMEED) ಮಸೂದೆ ಎಂದು ಮರು ನಾಮಕರಣ ಮಾಡಲಾಗಿದೆ. ವಕ್ಫ್ ಆಸ್ತಿಗಳ ಆಡಳಿತ ಸುಧಾರಿಸಲು, ತಂತ್ರಜ್ಞಾನ ಆಧಾರಿತ ನಿರ್ವಹಣೆ ಪರಿಚಯಿಸಲು ಅವಕಾಶ ಕಲ್ಪಿಸಲಾಗಿದೆ.

ಜಾಮೀನು ರದ್ದು 22ಕ್ಕೆ ವಿಚಾರಣೆ

ಬೆಂಗಳೂರು: ರೇಣುಕಾ ಸ್ವಾಮಿ ಕೊಲೆ ಪ್ರಕರಣದ ಕೆಲ ಆರೋಪಿಗಳ ಜಾಮೀನು ರದ್ದು ಮಾಡಬೇಕೆಂದು ಕೋರಿ ರಾಜ್ಯ ಪೊಲೀಸ್ ಇಲಾಖೆಯು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಯ ವಿಚಾರಣೆ ಏಪ್ರಿಲ್ 22ಕ್ಕೆ ಮುಂದೂಡಲಾಗಿದೆ. ರೇಣುಕಾ ಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಡಿಸೆಂಬರ್‌ನಲ್ಲಿ ದರ್ಶನ್, ಪವಿತ್ರಾ ಸೇರಿ ಹಲವು ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿತ್ತು. ಬಳಿಕ ರಾಜ್ಯ ಪೊಲೀಸ್ ಇಲಾಖೆಯು ಗೃಹ ಇಲಾಖೆಯ ಅನುಮತಿ ಪಡೆದುಕೊಂಡು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

6 ವಾರಗಳಲ್ಲಿ ಸೇವೆ ಸ್ಥಗಿತಕ್ಕೆ ಓಲಾ, ಉಬರ್, ರ್‍ಯಾಪಿಡೊಗಳಿಗೆ ಆದೇಶ

ಬೈಕ್ ಟ್ಯಾಕ್ಸಿ ಸೇವೆಗೆ ಹೈ ಬ್ರೇಕ್

ಬೆಂಗಳೂರು: ಉಬರ್, ರ್‍ಯಾಪಿಡೋ ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ನಿಲ್ಲಿಸಲು ಹೈಕೋರ್ಟ್ ಆದೇಶ ಹೊರಡಿಸಿದೆ.

ರಾಜ್ಯ ಸರಕಾರ ಬೈಕ್ ಟ್ಯಾಕ್ಸಿಗಳಿಗೆ ನಿಯಮ ರೂಪಿಸಿಲ್ಲ. ನಿಯಮಗಳಿಲ್ಲದೇ ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ಮಾಡುವಂತಿಲ್ಲ. ಹೀಗಾಗಿ ಬೈಕ್ ಟ್ಯಾಕ್ಸಿ ಸ್ಥಗಿತಗೊಳಿಸುವಂತೆ ಓಲಾ, ಉಬರ್ ಮತ್ತು ರ್‍ಯಾಪಿಡೊಗಳಿಗೆ 6 ವಾರಗಳ ಕಾಲಾವಕಾಶ ನೀಡಿ, ನ್ಯಾ.ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಹೈಕೋರ್ಟ್ ಪೀಠ ಆದೇಶಿಸಿದೆ. 3 ತಿಂಗಳಿನಲ್ಲಿ ನಿಯಮ ರೂಪಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆಯೂ ಸರಕಾರಕ್ಕೆ ಸೂಚನೆ ನೀಡಿದೆ.

→ 4

- ರಾಜ್ಯ ಸರಕಾರ ಬೈಕ್ ಟ್ಯಾಕ್ಸಿಗಳಿಗೆ ಯಾವುದೇ ನಿಯಮ ರೂಪಿಸಿಲ್ಲ
- ನಿಯಮಗಳಿಲ್ಲದೇ ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ಮಾಡುವಂತಿಲ್ಲ
- ಮೂರು ತಿಂಗಳಿನಲ್ಲಿ ನಿಯಮ ರೂಪಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು

ಸರಕಾರಿ ಕಚೇರಿ ಸಮಯ ಬದಲು

ಬೆಂಗಳೂರು: ಉತ್ತರ ಕರ್ನಾಟಕದ ಜಿಲ್ಲೆಗಳಾದ ವಿಜಯಪುರ, ಬಾಗಲಕೋಟೆ ಹಾಗೂ ಕಲಬುರಗಿ ವಿಭಾಗದ ಎಲ್ಲ ಜಿಲ್ಲೆಗಳಲ್ಲಿ ಸರಕಾರಿ ಕಚೇರಿಗಳ ಕೆಲಸದ ಸಮಯವನ್ನು ಬೆಳಗ್ಗೆ 8ರಿಂದ ಮಧ್ಯಾಹ್ನ 1.30ರವರೆಗೆ ನಿಗದಿ ಮಾಡಿ ಸರಕಾರ ಆದೇಶ ಹೊರಡಿಸಿದೆ.

ಉ.ಕ.ದ ಹಲವು ಜಿಲ್ಲೆಗಳಲ್ಲಿ ಬೇಸಿಗೆ ತಾಪಮಾನ ಗಣನೀಯವಾಗಿ ಏರಿಕೆಯಾಗಿದ್ದು, ಸರಕಾರಿ ನೌಕರರು ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಹಾಗಾಗಿ, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸರಕಾರಿ ಕಚೇರಿಗಳ ಕೆಲಸದ ಸಮಯವನ್ನು ಬದಲಾಯಿಸಬೇಕು ಎಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಮನವಿ ಮಾಡಿದ ಹಿನ್ನೆಲೆಯಲ್ಲಿ ಸರಕಾರ ಆದೇಶ ಹೊರಡಿಸಿದೆ.

ಮುಡಾ ಪ್ರಕರಣ: ಇ.ಡಿ ತನಿಖೆಗೆ ಅಸ್ತು

ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿಗೆ ಸಂಕಷ್ಟ

ಬೆಂಗಳೂರು: ಮುಡಾ ಹಗರಣ ಪ್ರಕರಣದಲ್ಲಿ ಇ.ಡಿ ತನಿಖೆಗೆ ಹೈ ಕೋರ್ಟ್ ವಿಭಾಗೀಯ ಪೀಠ ಅನುಮತಿ ನೀಡಿದ್ದು , ಮುಖ್ಯಮಂತ್ರಿ ಸೇರಿದಂತೆ ಇತರರಿಗೆ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ.

ಮುಡಾದ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅವರ ಹೇಳಿಕೆ ಆಧರಿಸಿ ಇತರ ಆರೋಪಿಗಳ ವಿರುದ್ಧದ ತನಿಖೆಗೆ ಇ.ಡಿಗೆ ಅನುಮತಿ ನೀಡಿ ಹೈಕೋರ್ಟ್ ವಿಭಾಗೀಯ ಪೀಠ ಬುಧವಾರ ಆದೇಶ ಹೊರಡಿಸಿದೆ. ಇದೀಗ ಮುಡಾ ಹಗರಣದಲ್ಲಿ ಇ.ಡಿ ಪ್ರವೇಶ ಮಾಡುವುದರಿಂದ ಪ್ರಕರಣದ ಎ1 ಆರೋಪಿಯಾಗಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಎ2 ಆಗಿರುವ ಪತ್ನಿ ಪಾರ್ವತಿ ಸೇರಿದಂತೆ ಇತರರಿಗೂ ಸಂಕಷ್ಟ ಎದುರಾಗುವ ಸಾಧ್ಯತೆಗಳಿವೆ.

ಇಡಿ ಸಮನ್ಸ್ ರದ್ದು ಕೋರಿ ಡಾ.ಡಿ.ಬಿ. ನಟೇಶ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಏಕಸದಸ್ಯ ಪೀಠ ವಜಾ ಮಾಡಿತ್ತು. ಇದನ್ನು ಪ್ರಶ್ನಿಸಿ ನಟೇಶ್ ಅವರು ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಇದನ್ನು ವಿಚಾರಣೆ ನಡೆಸಿದ ಸಿಜೆ ಎನ್.ವಿ.ಅಂಜಾರಿಯಾ, ನ್ಯಾ.ಕೆ.ವಿ.ಅರವಿಂದ್ ಅವರಿದ್ದ ಹೈಕೋರ್ಟ್ ವಿಭಾಗೀಯ ಪೀಠ, ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲು ನಿರಾಕರಿಸಿದೆ. ಹಾಗೇ ಡಿ.ಬಿ.ನಟೇಶ್ ಹೇಳಿಕೆ ಆಧರಿಸಿ ಇ.ಡಿ ತನಿಖೆ ಮುಂದುವರಿಸಬಹುದು ತಿಳಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ದಂತೆ ಹೈಕೋರ್ಟ್ ಏಕಸದಸ್ಯ ಪೀಠವು ಇ.ಡಿ ಶೋಧನೆ, ಜಪ್ತಿ ರದ್ದುಪಡಿಸಿತ್ತು. ಆದರೆ ಏಕಸದಸ್ಯ ಪೀಠದ ಆದೇಶ ಇತರ ಪ್ರಕರಣಕ್ಕೆ ಅನ್ವಯವಿಲ್ಲ. ಹೀಗಾಗಿ ಸಿಎಂ ಸಿದ್ದರಾಮಯ್ಯಗೆ ಮತ್ತೆ ಇ.ಡಿ ತನಿಖೆಯ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ. ಇನ್ನೊಂದೆಡೆ ಲೋಕಾಯುಕ್ತ ಸಲ್ಲಿಸಿರುವ ಈ ವರದಿ ತಿರಸ್ಕರಿಸುವಂತೆ ಇ.ಡಿ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಕೆ ಮಾಡಿದೆ.

→ 5

'ಬಿ' ರಿಪೋರ್ಟ್ ವಿರೋಧಿಸಿ ಪ್ರತಿಭಟನಾ ಅರ್ಜಿ

ಲೋಕಾಯುಕ್ತ ಪೊಲೀಸರು 'ಬಿ' ರಿಪೋರ್ಟ್ ಸಲ್ಲಿಸಿರುವುದನ್ನು ವಿರೋಧಿಸಿ ಜಾರಿ ನಿರ್ದೇಶನಾಲಯವು ವಿಚಾರಣಾಧೀನ ನ್ಯಾಯಾಲಯಕ್ಕೆ ಮಂಗಳವಾರ ಪ್ರತಿಭಟನಾ ಅರ್ಜಿ ಸಲ್ಲಿಸಿದೆ. ಮುಕ್ತಾಯ ವರದಿಗೆ ಸಂಬಂಧಿಸಿದಂತೆ ಆದೇಶ ಪ್ರಕಟಿಸುವುದಕ್ಕೂ ಮುನ್ನ ಭಾದಿತರಾಗಿರುವ ತಮ್ಮ ಪ್ರತಿಭಟನೆ ಆಲಿಸಬೇಕು ಎಂದು ಜಾರಿ ನಿರ್ದೇಶನಾಲಯ ಕೋರಿದೆ. ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ.ಪಾರ್ವತಿ, ಅವರ ಸಹೋದರ ಬಿ.ಎಂ.ಮಲ್ಲಿಕಾರ್ಜುನ ಸ್ವಾಮಿ ಮತ್ತು ಭೂಮಾಲೀಕ ಜೆ.ದೇವರಾಜು ಅವರಿಗೆ ಲೋಕಾಯುಕ್ತ ಪೊಲೀಸರು 2025ರ ಫೆಬ್ರವರಿ 20ರಂದು ಕ್ಲೀನ್‌ಚಿಟ್ ನೀಡಿ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಮುಕ್ತಾಯ ವರದಿ ಸಲ್ಲಿಸಿದ್ದಾರೆ. ಪಿಎಂಎಲ್‌ಎ ಅಡಿ ಇ.ಡಿಯು ಪ್ರಾಸಿಕ್ಯೂಷನ್ ಸಂಸ್ಥೆಯಾಗಿರುವುದರಿಂದ ಇಲ್ಲಿ ಇ.ಡಿಯನ್ನು ಬಾಧಿತ ವ್ಯಕ್ತಿ ಎಂದು ಪರಿಗಣಿಸಬೇಕು ಎಂದು ಕೋರಲಾಗಿದೆ. ಆದ್ದರಿಂದ, ಪ್ರೆಡಿಕೇಟ್ ಅಪರಾಧದಲ್ಲಿ ಇಡಿಯು ಸಂತ್ರಸ್ತ/ಬಾಧಿತ ವ್ಯಕ್ತಿಯಾಗಿದೆ. ಹೀಗಾಗಿ, ಅಂತಿಮ ವರದಿಯ ಸಂಬಂಧ ಆದೇಶ ಮಾಡುವುದಕ್ಕೂ ಮುನ್ನ ಪ್ರತಿಭಟನೆ ಆಲಿಸಬೇಕು ಎಂದು ಕೋರಲಾಗಿದೆ.

ವಕ್ಫ್: ಪ್ರತಿಪಕ್ಷದ ವಾದದಲ್ಲಿ ಯಾವ ಸಮರ್ಥನೆಯೂ ಇಲ್ಲ

ಅಶೋಕ್ ಹಾರನಹಳ್ಳಿ
ಮಾಜಿ ಅಡ್ವೋಕೇಟ್ ಜನರಲ್

2025ರ ತಿದ್ದುಪಡಿ ಕಾನೂನು ಲೋಕಸಭೆಯಲ್ಲಿ ಚರ್ಚೆಗೆ ಗ್ರಾಸವಾಗಿದೆ. ಪ್ರತಿಪಕ್ಷಗಳು ಈ ಕಾನೂನು ಸಂವಿಧಾನ ವಿರೋಧಿ ಎಂದು ಆಕ್ಷೇಪಣೆ ಎತ್ತಿದ್ದಾರೆ ಮತ್ತು ಸರಕಾರಕ್ಕೆ ಧರ್ಮದ ವಿಷಯದಲ್ಲಿ ಮೂಗು ತೋರಿಸುವ ಅಧಿಕಾರವಿಲ್ಲ ಎಂದು ಪ್ರಶ್ನಿಸಿದ್ದಾರೆ. ಪ್ರತಿಪಕ್ಷಗಳು ಈ ತಿದ್ದುಪಡಿ ಆಳುವ ಪಕ್ಷದ ಇನ್ನೊಂದು ಸಂವಿಧಾನ ವಿರೋಧಿಯ ಮನೋಭಾವಕ್ಕೆ ಉದಾಹರಣೆ ಎಂದು ಹೇಳಿದ್ದಾರೆ. ಆಳುವ ಪಕ್ಷ ಈ ರೀತಿಯ ತಿದ್ದುಪಡಿ ಈಗಿನ ಕಾಲಕ್ಕೆ ಸಮರ್ಥನೀಯ ಮತ್ತು ಅತ್ಯಂತ ಅವಶ್ಯಕ ಎಂದು ತಿಳಿಸಿದ್ದಾರೆ. ಈ ಎರಡು ವಿರೋಧಿ ನೆಲೆಗಳಲ್ಲಿ ನಾವು ಸತ್ಯವನ್ನು ಅರಸಬೇಕು. ಎಲ್ಲದಕ್ಕಿಂತ ಮೊದಲಿಗೆ ಧರ್ಮದ ವಿಷಯ ಎಂದರೆ ಯಾವುದು ಮತ್ತು ಆಸ್ತಿ ವ್ಯವಹಾರ ಮತ್ತು ಇತರ ಧರ್ಮಕ್ಕೆ ಸಂಬಂಧಿಸಿ ಪಟ್ಟಲ್ಲದ ವಿಷಯಗಳು ಯಾವುದು ಎಂದು ವಿವೇಚಿಸಬೇಕಾಗಿದೆ.

ಸಂವಿಧಾನದ ಅನುಚ್ಛೇದ 26ರಂತೆ ಎಲ್ಲ ಧರ್ಮದವರಿಗೂ ಧಾರ್ಮಿಕ ಸ್ವಾತಂತ್ರ್ಯ ನೀಡಲಾಗಿದೆ. ಎಲ್ಲ ಮತಗಳು ತಮ್ಮದೇ ಆದಂತ ಆಸ್ತಿಯನ್ನು ಹೊಂದಿರುವುದು ಮತ್ತು ತಮ್ಮ ಮತಾಚರಣೆ ಮಾಡುವ ರೀತಿ ನೀತಿಗಳನ್ನು ನಿರ್ಧರಿಸುವ ಸ್ವಾತಂತ್ರ್ಯ ಇದೆ. ಅನುಚ್ಛೇದ 25ರ ಪ್ರಕಾರ ಪ್ರತಿಯೊಬ್ಬರಿಗೂ ತಮ್ಮದೇ ಆದ ರೀತಿಯಲ್ಲಿ ಧಾರ್ಮಿಕ ಆಚರಣೆ ಮಾಡುವ ಸ್ವಾತಂತ್ರ್ಯ ಇದೆ. ಆದರೆ ಇದು ಅನಿಯಂತ್ರಿತ ಮತ್ತು ಅಭಾದಿತ ಸ್ವಾತಂತ್ರ್ಯವಲ್ಲ. ಇದೇ ಅನುಚ್ಛೇದದಲ್ಲಿ ಧಾರ್ಮಿಕ ಆಚರಣೆಯ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಇನ್ನಿತರ ಧರ್ಮದ ಆಚರಣೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಕಾನೂನು ಮಾಡುವ ಅಧಿಕಾರವನ್ನು ಸರಕಾರಕ್ಕೆ ನೀಡಲಾಗಿದೆ. ಉದಾಹರಣೆಗೆ ತಮಿಳುನಾಡಿನ ಚಿದಂಬರ ದೇವಸ್ಥಾನಕ್ಕೆ ಆಡಳಿತ ಅಧಿಕಾರಿಯನ್ನು ನೇಮಿಸಿದಾಗ ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿತ್ತು. ಆ ಸಂದರ್ಭದಲ್ಲಿ ಈ ರೀತಿ ಆಡಳಿತ ಅಧಿಕಾರಿಯನ್ನು ನೇಮಿಸುವುದು ಸಂವಿಧಾನ ವಿರೋಧಿ ಎಂದು ವಾದ ಮಂಡಿಸಲಾಗಿತ್ತು. 2009ರಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನಲ್ಲಿ ಈ ವಾದವನ್ನು ತಳ್ಳಿ ಹಾಕಿ ಸರಕಾರಕ್ಕೆ ಈ ರೀತಿಯಾಗಿ ಧಾರ್ಮಿಕ ಆಚರಣೆಗೆ ಸಂಬಂಧಪಡದ ವ್ಯವಹಾರಗಳನ್ನು ನಿಯಂತ್ರಿಸುವ ಅಧಿಕಾರವಿದೆ ಎಂದು ತೀರ್ಪು ನೀಡಲಾಯಿತು.

ಈ ಹಿನ್ನೆಲೆಯಲ್ಲಿ ನಾವು ವಕ್ಫ್ ತಿದ್ದುಪಡಿ ಕಾನೂನಿನ ಸಂವಿಧಾನ ಬದ್ಧತೆಯನ್ನು ವಿಮರ್ಶಿಸಬೇಕಾಗುತ್ತದೆ. ವಕ್ಫ್ ಸೃಷ್ಟಿ ಮಾಡುವಾತ ವಾಕಿಫ್ ಮತ್ತು ವಾಕಿಫ್‌ನ ಉದ್ದೇಶ ಧಾರ್ಮಿಕವಾದದ್ದು. ಇದೇ ವಕ್ಫ್ ಮತ್ತು ಟ್ರಸ್ಟ್‌ಗೆ ಇರುವ ಭಿನ್ನತೆ. ಆಸ್ತಿಯನ್ನು ಭಗವಂತನಿಗೆ ಶಾಶ್ವತವಾಗಿ ಸಮರ್ಪಣೆ ಮಾಡುವುದು ವಕ್ಫ್ ಆಸ್ತಿ ಎಂದು ಅನಿಸಿಕೊಳ್ಳುತ್ತದೆ. ಈ ಸಮರ್ಪಣೆ ಶಾಶ್ವತವಾದದ್ದು ಮತ್ತು ಒಮ್ಮೆ ಸಮರ್ಪಣೆ ಆದರೆ ಹಿಂದೆ ಹೋಗುವ ಮಾತಿಲ್ಲ. ಈ ಆಸ್ತಿಯನ್ನು ಮೇಲ್ವಿಚಾರಣೆ ಮಾಡುವಾತ ಮುತವಲ್ಲಿ ಎನಿಸಿಕೊಳ್ಳುತ್ತಾನೆ.

→ 5

SUCO BANK
ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್
SUCO SOUHARDA SAHAKARI BANK

ನಮ್ಮ ಗ್ರಾಹಕರಿಗೆ ಹೃತ್ಪೂರ್ವಕ ಅಭಿನಂದನೆಗಳು

DOWNLOAD
Suco Mobile Banking App
from
Google Play

2120 ಕೋಟಿ ವ್ಯವಹಾರ ದಾಟಿದ ಕಲ್ಯಾಣ ಕರ್ನಾಟಕದ ಪ್ರಥಮ ಸಹಕಾರಿ ಬ್ಯಾಂಕ್

DEPOSITS 1313 Cr. | ADVANCE 807 Cr. | Gross PROFIT 6 Cr. | Net NPA 5.60%

SUCO BANK INVITES EXPERIENCED BANKERS for Audit, IT, Risk Management & Other Departments
Visit sucobank.com/careers to apply

Suco Bank has been issuing ID cards to its members, those desirous to obtain ID cards are requested to contact Bank Whatsapp no. 81979 44402
81979 44402 | /sucobank | /sucobank | www.sucobank.in

ಸಮಾಚಾರ ಸಣ್ಣದಲ್ಲ

ರಾಮಕೃಷ್ಣಾಶ್ರಮದಲ್ಲಿ ಸಂಸ್ಕೃತಿ ಸುಧಾ ಏ.5ಕ್ಕೆ

ತುಮಕೂರು: ನಗರದ ರಾಮಕೃಷ್ಣ-ವಿವೇಕಾನಂದ ಆಶ್ರಮದಲ್ಲಿ ಶ್ರೀರಾಮನವಮಿಯ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಏ.5ರಂದು ಶನಿವಾರ ಆಶ್ರಮವು ಉಡುಪಿ ಜಿಲ್ಲೆಯ ಕಾರ್ಕಳ ಸಾಹಿತ್ಯ ಸಂಘದ ಸಂಯುಕ್ತಾಶ್ರಯದಲ್ಲಿ ಸಂಸ್ಕೃತಿ ಸುಧಾ ಕಾರ್ಯಕ್ರಮವನ್ನು ಸಂಜೆ 6 ಗಂಟೆಗೆ ಆಯೋಜಿಸಿದೆ. ಈ ಸಂದರ್ಭದಲ್ಲಿ ಕಾರ್ಕಳದ ಶ್ರೀ ಅನಂತ ಪದ್ಮನಾಭ ಭಟ್ಟರವರು ಭಕ್ತ ಭೀಷ್ಮ ಪ್ರಸಂಗದ ಕುರಿತಾದ ಹರಿಕಥೆ ನಡೆಸಿಕೊಡುವರು. ಏ.6ರಂದು ಭಾನುವಾರ ಸಂಜೆ 5.30 ಗಂಟೆಗೆ ಮೈಸೂರಿನ ಖ್ಯಾತ ಸಂಗೀತ ಕಲಾವಿದರಾದ ವಿದ್ವಾನ್ ಡಾ.ಕೆ.ಟಿ.ಉದಯ್ ಕಿರಣ್ ಕೀಬೋರ್ಡ್ ವಾದನವನ್ನು ನಡೆಸಿಕೊಡುವರು. ಏ.7ರಂದು ಸೋಮವಾರ ಬೆಳಗ್ಗೆ 10 ಕ್ಕೆ ಯುವಕಲಾವಿದ ಮೈಸೂರು ಹರೀಶ್ ಪಾಂಡವ್ ಸ್ಯಾಕ್ಸಾಫೋನ್ ವಾದನವನ್ನು ನಡೆಸಿಕೊಡುವರು ಎಂದು ಶ್ರೀ ವಿರೇಶಾನಂದ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮಗಳಿಗೆ ಶಾಸಕ ಪ್ರದೀಪ್ ಈಶ್ವರ್ ಭೇಟಿ | ಜನರ ಅಹವಾಲು ಸ್ವೀಕಾರ

ಪ್ರಚಾರಕ್ಕಾಗಿ ಬಿಜೆಪಿ ಪ್ರತಿಭಟನೆ ಸರಿಯಲ್ಲ

ಚಿಕ್ಕಬಳ್ಳಾಪುರ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರಗೆ ಜನರ ಬಗ್ಗೆ ನಿಜವಾದ ಕಾಳಜಿ, ಸ್ವಾಭಿಮಾನ ಇದ್ದರೆ ಕೇವಲ ಒಂದು ದಿನದ ಅಹೋರಾತ್ರಿ ಪ್ರತಿಭಟನೆ ಬದಲು 6 ತಿಂಗಳ ಕಾಲ ಆಮರಣಾಂತ ಉಪವಾಸ ಕೈಗೊಳ್ಳಲಿ. ಬೆಳಗ್ಗೆ ತಿಂಡಿ ತಿಂದು ಉಪವಾಸ ಮಾಡಿದರೆ ಹೇಗೇ? ಕನಿಷ್ಠ 6 ತಿಂಗಳಾದರೂ ಆಮರಣಾಂತ ಉಪವಾಸ ಮಾಡಲಿ ಎಂದು ಶಾಸಕ ಪ್ರದೀಪ್ ಈಶ್ವರ್ ಟಾಂಗ್ ನೀಡಿದರು.

ನಮ್ಮ ಊರಿಗೆ ನಮ್ಮ ಶಾಸಕರು ಕಾರ್ಯಕ್ರಮದಡಿ ಬುಧವಾರದಂದು ತಾಲೂಕಿನ ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೋಟೂರು,ನಾರೇನಹಳ್ಳಿ, ಕೊಂಡೇನಹಳ್ಳಿ, ನಾಸ್ತಿಮನಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿದ್ದ ವೇಳೆ ಜನತೆಯ ಅಹವಾಲು ಸ್ವೀಕರಿಸಿದ ನಂತರ ನಾಸ್ತಿಮನಹಳ್ಳಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಹಾಲಿನ ಬೆಲೆ ಏರಿಕೆ ವಿರೋಧಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಬಿಜೆಪಿ ನಡೆಸುತ್ತಿರುವ ಪ್ರತಿಭಟನೆ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದರು. ಹಾಲಿನ ಬೆಲೆಯೇರಿಕೆಯಿಂದ ಬರುವ ಹಣ ನೇರವಾಗಿ ಹಾಲು ಉತ್ಪಾದಕರಿಗೆ ಸೇರಲಿದೆ. ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಬೆಲೆಯೇರಿಕೆ ಮಾಡಿರಲಿಲ್ಲವೆ? ಮಾಧ್ಯಮಗಳಲ್ಲಿ ತೋರಿಕೆಗಾಗಿಯೋ, ಪ್ರಚಾರಕ್ಕಾಗಿಯೋ ಒಂದು ದಿನ ಪ್ರತಿಭಟನೆ ಮಾಡೋದಲ್ಲ ಎಂದ ಅವರು ಇದು ಕೇಂದ್ರ ಸರಕಾರದವರ ಒತ್ತಡಕ್ಕೆ ಮಣಿದು ಮಾಡುತ್ತಿರುವ ಅಹೋರಾತ್ರಿ ಧರಣಿಯಾಗಿದೆ. ಅದು ಬಿಟ್ಟು ನೇರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮನೆಗೆ ಬಂದು ಮಾತಾಡಲಿ, ವಿಜಯೇಂದ್ರ ಅವರೇ ಬನ್ನಿ ಸಿಎಂ ಬಳಿ ಈ ಬಗ್ಗೆ ಮಾತಾನಾಡಿ, ಅದು ಬಿಟ್ಟು ಪ್ರಚಾರಕ್ಕಾಗಿ ಪ್ರತಿಭಟನೆ ಮಾಡೋದು ಸರಿಯಲ್ಲ ಎಂದು ಬಿಜೆಪಿ ನಡೆಸುತ್ತಿರುವ ಪ್ರತಿಭಟನೆಗೆ ಕಿಡಿಕಾರಿದರು.

ನಾಸ್ತಿಮ್ಮನಹಳ್ಳಿ ಗ್ರಾಮದಲ್ಲಿ ಶಾಸಕ ಪ್ರದೀಪ್ ಈಶ್ವರ್ ಅವರು ಜನರ ಅಹವಾಲು ಆಲಿಸಿದರು.

> 10 ಕೋಟಿ ಅನುದಾನ ಇಟ್ಟುಕೊಂಡು ಗೊಲ್ಲಹಳ್ಳಿ ಪಂಚಾಯಿತಿಗೆ ಬಂದೆ. 5 ಹಳ್ಳಿಗಳ ಅಭಿವೃದ್ಧಿ ಈಗಾಗಲೇ ಆಗಿದೆ. ದಲಿತರ ಸಮಸ್ಯೆ ಪರಿಹಾರಕ್ಕೆ ನಾನು ಮೊದಲು ನಿಲ್ಲುತ್ತೇನೆ.
> **ಪ್ರದೀಪ್ ಈಶ್ವರ್**, ಶಾಸಕ

ರ‍್ರನಾಗೇನಹಳ್ಳಿ, ಮೋಟೂರು, ನಾರೇನಹಳ್ಳಿ, ಕೊಂಡೇನಹಳ್ಳಿ ನಾಸ್ತಿಮನಹಳ್ಳಿಗಳಲ್ಲಿ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರೇ ಹೆಚ್ಚಾಗಿದ್ದಾರೆ. ಈ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸುಮಾರು 7 ಕಿಲೋ ಮೀಟರ್ ರಸ್ತೆ ಕಳೆದ 12 ವರ್ಷಗಳಿಂದ ಹಾಳಾಗಿದೆ. ಅದಕ್ಕೆ 7 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಿಸಲು ಅಧಿಕಾರಿಗಳಿಗೆ ನೀಲನಕ್ಷೆ ತಯಾರಿಸಲು ತಿಳಿಸಿದ್ದೇನೆ. ಶೀಘ್ರದಲ್ಲೇ ರಸ್ತೆ ನಿರ್ಮಿಸಿ ಕೊಡುತ್ತೇನೆ ಎಂದರು.

ಈ ಭಾಗದ ಗ್ರಾಮಗಳು ಕುಗ್ರಾಮಗಳಾಗಿದ್ದು ಇಲ್ಲಿನವರಿಗೆ ಮೂಲಭೂತ ಸೌಕರ್ಯಗಳು ಸಿಕ್ಕಿಲ್ಲ. ಬಸ್ ವ್ಯವಸ್ಥೆಯಿಲ್ಲ. ಸಂಪರ್ಕಕ್ರಾಂತಿ ಎನ್ನುವ ಕೇಂದ್ರ ಸರಕಾರ ಇಲ್ಲಿಗೆ ಟವರ್ ಹಾಕಿಸುವ ಕೆಲಸ ಮಾಡಿಲ್ಲ. ಮೊಬೈಲ್ ನೆಟ್‌ವರ್ಕ್ ಸಮಸ್ಯೆ ಬಗ್ಗೆ ವಿದ್ಯಾರ್ಥಿಗಳು ಸೇರಿ ಅನೇಕ ಮಂದಿ ಸಮಸ್ಯೆ ಹೇಳಿಕೊಂಡಿದ್ದಾರೆ. ಹಿಂದೆ ಶಾಸಕರಾಗಿ ಮತ್ತು ಈಗ ಸಂಸದರಾಗಿ ಮಹಾನುಭಾವರು ಸಿಂಗಾಪೂರ್ ಮಾಡುತ್ತೇನೆ ಎಂದು ಬೊಗಳೆ ಬಿಟ್ಟರೆ ವಿನಃ ಈ ಗ್ರಾಮಗಳಿಗೆ ಬಂದು ಇಲ್ಲಿನ ಸಮಸ್ಯೆ ಕೇಳಿಲ್ಲ. ಚಿಕ್ಕಬಳ್ಳಾಪುರ ಸಿಂಗಾಪುರ ಮಾಡೋದಾಗಿ ಹೇಳಿದರೆ ಸಾಲದು ಚರಂಡಿಯೂ ಹಾಕಿಲ್ಲ, ಲೈಟ್ ಹಾಕಿಸಿಲ್ಲ, ಇದೇನಾ ಅವರ ಅಭಿವೃದ್ಧಿ ಎಂದು ಸಂಸದ ಡಾ.ಕೆ.ಸುಧಾಕರ್ ಹೆಸರು ಹೇಳದೆ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಡೀಮ್ಡ್ ಕೊಡುಗೆ:

ಹಿಂದೆ 2022ರಲ್ಲಿ ಇದ್ದ ಜಿಲ್ಲಾಧಿಕಾರಿ ಆರ್.ಲತಾ ಮತ್ತು ಸಚಿವರಾಗಿದ್ದ ಡಾ.ಕೆ.ಸುಧಾಕರ್ ಇಬ್ಬರೂ ಸೇರಿ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 20 ಸಾವಿರ ಎಕರೆ ರೈತರ ಭೂಮಿಯನ್ನು ದುರುದ್ದೇಶದಿಂದ ಡೀಮ್ಡ್ ಫಾರೆಸ್ಟ್ ಎಂದು ಮಾಡಿದ್ದಾರೆ. ನಾನು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ 8 ರಿಂದ 10 ಸಭೆ ಮಾಡಿದ್ದೇವೆ. ಸುಪ್ರಿಂಕೋರ್ಟಿಗೆ ಮನವಿ ಮಾಡಿದ್ದೇವೆ. ಈಗಾಗಲೇ ನಾಲ್ಕುವರೆ ಸಾವಿರ ಎಕರೆ ಬಿಡಿಸಲಾಗಿದೆ. ರ‍್ರನಾಗೇನಹಳ್ಳಿ 60 ರೈತರ ಮೇಲೆ ಅರಣ್ಯ ಇಲಾಖೆ ಕೇಸು ಹಾಕಿದೆ. ರೈತರ ಪರವಾಗಿ ಸರಕಾರ ಇದ್ದು ಡೀಮ್ಡ್ ಫಾರೆಸ್ಟ್ ಸರಿಪಡಿಸಲು ಮುಂದಾಗಿದ್ದೇವೆ ಎಂದರು.

ನಗರಸಭೆಯಲ್ಲಿ ಅನುದಾನವೇ ಇಲ್ಲ, ಬಜೆಟ್ ಹೇಗೆ ಮಾಡುತ್ತಾರೆ.ಇನ್ನೇನು ನಗರಸಭೆ ಅಧಿಕಾರಾವಧಿ ಮುಗಿಯುತ್ತಿದೆ. ಆಮೇಲೆ ನಮ್ಮದೇ ಆಡಳಿತ ಬರಲಿದೆ. ಆಗ ಅಭಿವೃದ್ಧಿ ಬಗ್ಗೆ ಮಾತಾಡೋಣ, ಟೈಮ್ ಟೇಬಲ್ ಹಾಕಿ ಕೆಲಸ ಮಾಡಿಸುತ್ತೇನೆ ಎನ್ನುವ ಮೂಲಕ ನಾಳಿನ ನಗರಸಭೆ ಬಜೆಟ್ ಬಗ್ಗೆ ಲೇವಡಿ ಮಾಡಿದರು.

ಬಿ ಖಾತೆ ಬಗ್ಗೆ ಮಾತನಾಡಿದ ಶಾಸಕರು ಕಾಂಗ್ರೆಸ್ ನಗರಸಭಾ ಸದಸ್ಯ ಅಫ್ಜಲ್ ವಾರ್ಡಿನಿಂದ ಖಾತೆ ನೀಡುವ ಕೆಲಸ ಆರಂಭವಾಗಲಿದೆ. ಈ ವಾರ್ಡಿನಲ್ಲಿ 200 ಖಾತೆ ವಿತರಣೆಗೆ ಸಿದ್ದವಾಗಿವೆ. ಮುಂದಿನ ದಿನಗಳಲ್ಲಿ ಎಲ್ಲಾ ವಾರ್ಡ್‌ಗಳಲ್ಲಿ ಈ ಕೆಲಸ ನಡೆಯಲಿದೆ ಎಂದರು.

ನಗರಸಭೆ ಮಳಿಗೆಗಳ ಹರಾಜಿನ ಬಗ್ಗೆ ಅಧ್ಯಕ್ಷ ಉಪಾಧ್ಯಕ್ಷ ಕಮಿಷನರ್ ಅವರನ್ನು ಕೇಳಿ, ಶಾಸಕರನ್ನು ಕೇಳಿದರೆ ಏನು ಹೇಳುತ್ತಾರೆ? ಎನ್ನುವ ಮೂಲಕ ಹರಾಜಿಗೂ ನನಗೂ ಯಾವ ಸಂಬಂಧವೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ಈ ವೇಳೆ ತಾಲೂಕು ತಹಸೀಲ್ದಾರ್ ಅನಿಲ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಂಜುನಾಥ್, ತಾಲೂಕು ಆರೋಗ್ಯ ಅಧಿಕಾರಿ ಡಾ.ಮಂಜುಳಾ, ಪಿಡಿಒ ಸತ್ಯಪ್ರಸಾದ್, ಮಂಡಿಕಲ್ ಮತ್ತು ಮಂಚೇನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗಭೂಷಣ್, ನಗರಸಭಾ ಸದಸ್ಯ ಕಣಿತಹಳ್ಳಿ ವೆಂಕಟೇಶ್, ಮುಖಂಡರಾದ ಅರವಿಂದ್, ಪೆದ್ದಣ್ಣ, ನುಗುತಹಳ್ಳಿ ರವಿ, ರಮೇಶ್ ಬಾಬು, ಜಿ.ಉಮೇಶ್, ಅಲ್ಲು ಅನಿಲ್, ವಿನಯ್ ಬಂಗಾರಿ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು

ನೂತನ ಅಧ್ಯಕ್ಷ ಬಾಬು ರೆಡ್ಡಿ ಆಯ್ಕೆ

ಆನೇಕಲ್: ಆನೇಕಲ್ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾಗಿದ್ದ ವೆಂಕಟಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಹಾಪ್ ಕಾಮ್ಸ್ ಮಾಜಿ ನಿರ್ದೇಶಕ, ಸಹಕಾರಿ ಧುರೀಣ ಎಂ. ಬಾಬುರೆಡ್ಡಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

IN THE COURT OF THE PRL CIVIL JUDGE AND J.M.F.C. AT PAVAGADA
C.Mis. No. 65/2025

PETITIONERS Nagarajappa W/o late Narasuppa, aged about 56 years,2. Narasamma W/o late narasappa aged about 85 years 3.Nagappa W/o late Hanumappa aged about 70 years. 4 Sakamma W/o late Hangappa aged about 75 years. 5. Peddakka W/o late Madletappa aged about 60 years. 6. Narasamma W/o late Govindappa, aged about 55 years. 7. Venkateshwrappa S/o late Narasappa age about 59 years, 8. Lakshminarasamma D/o late Sriramappa, aged about 45 years, All are R/0 Old A.K. Colony. Pavagada Town, Kasaba Hobli Pavagada Taluk, Tumakuru Dist.

V/s

RESPONDENT: The Chief Officer Cum Register of Birth and Death, Town Municipal Counsel, Pavagada Town.

PAPIER PUBLICATION

WHEREAS, the petitioners have filed the above petition seeking vastre of Death Certificate of 1 petitionor's mother SAKAMMA WWo LATE NARASAPPA was died on 08-11-1992 in the house of 1st petitioner in old A.K.Colony, Pavagada town, Pavagada taluk, now the matter set down for issue notice/suit summons to all or any interested persons or legal heirs whoever got any objection over the above said. Death Certificate may appear in this case either as respondents/petitjoners and may prosecute the same on the date of hearing i.e. 23/05/2025.

You are hereby called upon to appear before this Hon'ble court at 11:00 AM. on the said date of hearing either in person or through your counsel. If you fail to appear this court, the matter will be heard and decided exparte.

Given under the hand and seat of the court this day of 27/03/2025.

By Order of Court
Sheristedar
THE PRL CIVIL JUDGE AND J.M.F.C. AT PAVAGADA.

Advocate for petitioner
K.Raghu, Pavagada.

IN THE COURT OF THE PRL CIVIL JUDGE AND J.M.F.C. AT PAVAGADA
C.Mis. No. 67/2025

PETITIONERS : Venkateshwrappa S/o late Narasappa age about 59 years, 2. Narasemma Wo late Narasappa, aged about 85 years, 3. Nagappa Slo late Hanumappa, aged about 79 years, 4. Sakamma W/o late Gangapps, aged about 75 years, 5. Peddakka W/o late Madletappa aged about 60 years 6. Narasamma W/o late Govindappa, aged about 55 years 7. Nagarajappa S/o late Narasappa, aged about 53 years, 8. Lakshminarasamma D/o late Sriramappa, aged about 45 years, All are R/0 Old A.K. Colony. Pavagada Town, Kasaba Hobli Pavagada Taluk, Tumakuru Dist.

..Vs..

RESPONDENT: The Chief Officer Cum Register of Birth and Death. Town Municipal Counsel, Pavagada Town.

PAPER PUBLICATION

WHEREAS, the petitioners have filed the above petition seeking issue of Death Certificate of 1st petitioner's uncle BABANNA S/o LATE KURIDODU KONAPPA was died on 13-06-2005 in the house of 1ª petitioner in old A.K.Colony, Pavagada town, Pavagada taluk, now the matter set down for issue notice/suit summons to all or any interested persons or legal heirs whoever got any objection over the above said Death Certificate may appear in this case either as respondents/petitioners and may prosecute the same on the date of hearing i.e. 23/05/2025.

You are hereby called upon to appear before this Hon'ble court at 11-00 A.M. on the said date of hearing either in person or through your counsel. If you fail to appear this court, the matter will be heard and decided exparte.

Given under the hand and seal of the court this day of 21/03/2025.

By Order of Court
Sheristedar
THE PRL CIVIL JUDGE AND J.M.F.C. AT PAVAGADA.

Advocate for petitioner
K.Raghu, Pavagada.

IN THE COURT OF THE PRL CIVIL JUDGE AND J.M.F.C. AT PAVAGADA
C.Mis. No. 66/2025

PETITIONERS : Venkateshwrappa S/o late Narasappa age about 59 years, 2. Narasemma Wo late Narasappa, aged about 85 years, 3. Nagappa Slo late Hanumappa, aged about 79 years, 4. Sakamma W/o late Gangapps, aged about 75 years, 5. Peddakka W/o late Madletappa aged about 60 years 6. Narasamma W/o late Govindappa, aged about 55 years 7. Nagarajappa S/o late Narasappa, aged about 53 years, 8. Lakshminarasamma D/o late Sriramappa, aged about 45 years, All are R/0 Old A.K. Colony. Pavagada Town, Kasaba Hobli Pavagada Taluk, Tumakuru Dist.

..Vs..

RESPONDENT: The Chief Officer Cum Register of Birth and Death. Town Municipal Counsel, Pavagada Town.

PAPER PUBLICATION

WHEREAS, the petitioners have filed the above petition seeking fanue of Death Certificate of 1 petitioner's aunt LAKSHMAMMA W/O LATE BABANNA was died on 25-01-1997 in the house of 1 petitioner in old A.K.Colony, Pavagada town, Pavagada taluk, now the matter set down for issue notice/suit summons to all or any interested persons or legal heirs whoever got any objection over the above said Death Certificate may appear in this case either as respondents/petitioners and may prosecute the same on the date of hearing ie. 23/05/2025

You are hereby called upon to appear before this Hon'ble court at 11.00 AM. on the said date of hearing either in person or through your counsel. If you fail to appear this court, the matter will be heard and decided exparte.

Given under the hand and seal of the court this day of 22/03/2025.

By Order of Court
Sheristedar
THE PRL CIVIL JUDGE AND J.M.F.C. AT PAVAGADA.

Advocate for petitioner
K.Raghu, Pavagada.

ಕಾಮಗಾರಿ ಗುಣಮಟ್ಟ ಕಾಯ್ದುಕೊಳ್ಳಲು ಸಿಇಒ ಸೂಚನೆ

ಕೊರಟಗೆರೆ: ತಾಲೂಕಿನ ಹೂಲೀಕುಂಟೆ, ತುಂಬಾಡಿ ಹಾಗೂ ಹೊಳವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಾ ತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಲಾದ ಶಾಲಾಭಿವೃದ್ಧಿ ಕಾಮಗಾರಿಗಳು, ಬೂದು ನೀರು ನಿರ್ವಹಣಾ ಕಾಮಗಾರಿಗಳು ಹಾಗೂ ಜಲ ಜೀವನ್ ಮಿಷನ್ ಗ್ರಾಮೀಣ ಕಾಮಗಾರಿಗಳನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಭು ಜಿ ಅವರು ಭೇಟಿ ನೀಡಿ ಪರಿಶೀಲಿಸಿದರು.

ಹೂಲೀಕುಂಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಮೇನಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ, ಮಕ್ಕಳ ಹಾಜರಾತಿ ಸೇರಿದಂತೆ ಅಡುಗೆಕೋಣೆ ಹಾಗೂ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿದರು. ಬಳಿಕ ಜೆಜೆಎಂ ಕಾಮಗಾರಿಯನ್ನು ವೀಕ್ಷಿಸಿದರು. ಇದೇ ವೇಳೆ ಸ್ಥಳದಲ್ಲಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕಾಮಗಾರಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಸೂಚನೆ ನೀಡಿದರು. ಆನಂತರ ನರೇಗಾ ಯೋಜನೆಯಡಿ ಅನುಷ್ಠಾನಿಸಲಾದ ಸಿಸಿ ಚರಂಡಿ ಕಾಮಗಾರಿಯನ್ನು ವೀಕ್ಷಿಸಿದರು. ಕಾಮೇನಹಳ್ಳಿ ಮುಖ್ಯರಸ್ತೆಯಲ್ಲಿ ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆಯಡಿ ಅನುಷ್ಠಾನಗೊಳಿಸಿದ ಬೂದು ನೀರು ನಿರ್ವಹಣಾ ಕಾಮಗಾರಿಯನ್ನು ಪರಿಶೀಲಿಸಿದರು.

ತುಂಬಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಂಬದಹಳ್ಳಿ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನಿರ್ಮಿಸಿದ ಶಾಲಾ ಕಾಂಪೌಂಡ್ ಕಾಮಗಾರಿಯನ್ನು ಪರಿಶೀಲಿಸಿ, ಶಾಲಾ ಮಕ್ಕಳೊಂದಿಗೆ ಸಂವಾದ ನಡೆಸಿದರು. ಬಳಿಕ ಪಕೀರಪ್ಪನ ಪಾಳ್ಯ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ನರೇಗಾ ಯೋಜನೆಯಡಿ ನಿರ್ಮಿಸಿದ ಶೌಚಾಲಯ ಕಾಮಗಾರಿ ಪರಿಶೀಲನೆ ನಡೆಸಿದರು. ಮುಗ್ಗೊಂಡನಹಳ್ಳಿ ಗ್ರಾಮದಲ್ಲಿ ನರೇಗಾ ಯೋಜನೆಯಡಿ ನಿರ್ಮಿಸಿದ ಸಿಸಿ ರಸ್ತೆ ಹಾಗೂ ಸಿಸಿ ಚರಂಡಿ ಕಾಮಗಾರಿಯನ್ನು ಪರಿಶೀಲಿಸಿದರು.

ನರೇಗಾ ಕಾಮಗಾರಿಗಳ ಸ್ಥಳಕ್ಕೆ ಜಿಪಂ ಸಿಇಒ ಪ್ರಭು ಜಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತುಂಬಾಡಿ ಗ್ರಾಮದ ಹಳೇ ಕೆರೆ ಹಳ್ಳದ ಹೂಳೆತ್ತುವ ಕಾಮಗಾರಿ, ಸರಕಾರಿ ಪ್ರಾಥಮಿಕ ಪಾಠ ಶಾಲೆಯ ಶಾಲಾ ಶೌಚಾಲಯ ಕಾಮಗಾರಿಯನ್ನು ಮುಖ್ಯ ಕಾರ್ಯನಿರ್ವಾಹಕ ಅದಿಕಾರಿಗಳು ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಪೂರ್ವ ಸಿ ಅನಂತರಾಮು, ಸಹಾಯಕ ನಿರ್ದೇಶಕ(ಗ್ರಾ.ಉ) ರಾದ ಗುರುಮೂರ್ತಿ ಎಂ.ಬಿ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಕಾಂತರಾಜು, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರ ಾದ ದಯಾನಂದ್, ತುಂಬಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ನಟರಾಜ್, ತಾಂತ್ರಿಕ ಸಂಯೋಜಕರಾದ ಮಧು, ಪಂಚಾಯಿತಿ

ಬಸ್ ಕಾಣದ ಕುಗ್ರಾಮ, ಡೋಲಿಯಲ್ಲಿ ರೋಗಿ ಆಸ್ಪತ್ರೆಗೆ

ಚಾಮರಾಜನಗರ : ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತುಳಸಿಕೆರೆ ಗ್ರಾಮಕ್ಕೆ ವಾಹನ ವ್ಯವಸ್ಥೆ ಇಲ್ಲದ ಕಾರಣ ರೋಗಿಯೊಬ್ಬನನ್ನು ಡೋಲಿಯಲ್ಲಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿರುವ ಘಟನೆ ಜರುಗಿದೆ.

ತುಳಸಿಕೆರೆ ಗ್ರಾಮದ ಪುಟ್ಟ ಎಂಬವರಿಗೆ ವಾಂತಿಭೇದಿ ಕಾಣಿಸಿಕೊಂಡು ಅಸ್ವಸ್ಥಗೊಂಡಿದ್ದ. ಸಂಬಂಧಿಕರು ಡೋಲಿಯಲ್ಲಿ ಹೊತ್ತು ಮಲೆ ಮಹದೇಶ್ವರ ಬೆಟ್ಟಕ್ಕೆ ಕರೆತಂದು ತಮಿಳುನಾಡಿನ ಕೊಳತ್ತೂರು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಿದ್ದಾರೆ.

ಮಾದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳಿಗೆ ಮೂಲ ಸೌಲಭ್ಯ ಕಲ್ಪಿಸಿಕೊಡದೇ ಅನೇಕ ಪ್ರತಿಭಟನೆಗಳು ನಡೆದಿವೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಗ್ರಾಮಸ್ಥರು ಮತಗಟ್ಟೆ ಧ್ವಂಸ ಮಾಡುವಷ್ಟು ರೊಚ್ಚಿಗೆದ್ದಿದ್ದನ್ನು ಇಲ್ಲಿ ಸ್ಮರಿಸಬಹುದು.

ಗ್ರಾಮಸ್ಥರಿಂದ ಪ್ರತಿಭಟನೆ: ತುಳಸಿಕೆರೆ ಗ್ರಾಮಕ್ಕೆ ರಸ್ತೆ ಸಾರಿಗೆ ವ್ಯವಸ್ಥೆ ಕಲ್ಪಿಸಿ ಕೊಡುವಂತೆ ಗ್ರಾಮಸ್ಥರು ಮಲೆ ಮಹದೇಶ್ವರ ಬೆಟ್ಟ ಹಾಗೂ ತುಳಸಿಕೆರೆ ಗ್ರಾಮದ ರಸ್ತೆ ಮಾರ್ಗ ಮಧ್ಯದಲ್ಲಿ ಪ್ರತಿಭಟನೆ ನಡೆಸಿದ್ದಾರೆ.

ಗ್ರಾಪಂ ಮಾಜಿ ಸದಸ್ಯ ಕೆಂಪಣ್ಣ ಮಾತನಾಡಿ, ನಮ್ಮ ಗ್ರಾಮಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಿ ಕೊಡುವಲ್ಲಿ ಸರಕಾರ ವಿಫಲವಾಗಿದೆ. ನಾವು ವನ್ಯ ಪ್ರಾಣಿಗಳಂತೆ ಜೀವನ ನಡೆಸುತಿದ್ದೇವೆ. ಜನಪ್ರತಿನಿಧಿಗಳಿಗೆ ಹಲವಾರು ಬಾರಿ ಮನವಿ ಮಾಡಿದ್ದರು ಇದುವರೆಗೂ ಯಾವುದೇ ರೀತಿ ಸ್ಪಂದಿಸಿಲ್ಲ.

ರೋಗಿಯೊಬ್ಬನನ್ನು ಡೋಲಿಯಲ್ಲಿ ಆಸ್ಪತ್ರೆಗೆ ಹೊತ್ತೊಯ್ಯುತ್ತಿರುವುದು.

ಇನ್ನು ಮುಂದೆ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

RBI Licence No.UBD KA 1063P
ಸ್ಥಾಪನೆ : 1932

ಪ್ರಧಾನ ಕಛೇರಿ : 2423575
ವಿದ್ಯಾರಣ್ಯಪುರಂ ಶಾಖೆ: 2487301
ಕುವೆಂಪುನಗರ ಶಾಖೆ : 2540095

ಶ್ರೀ ಕನ್ಯಕಾಪರಮೇಶ್ವರೀ ಕೋ– ಆಪರೇಟಿವ್ ಬ್ಯಾಂಕ್ ಲಿ.

ಕೇಂದ್ರ ಕಛೇರಿ: ಕೆ.ಆರ್.ಸರ್ಕಲ್, ಮೈಸೂರು– 570001.

ಶಾಖೆಗಳು: 1) ನಂ. 10 ಮತ್ತು 11, ಸರ್ವೀಸ್ ರಸ್ತೆ, ಕೆ.ಆರ್. ಸರ್ಕಲ್, ಮೈಸೂರು–570001
2) ವಿದ್ಯಾರಣ್ಯಪುರಂ 7ನೇ ಕ್ರಾಸ್, ಮೈಸೂರು–570008
3) ಕುವೆಂಪುನಗರ, ಅನಿಕೇತನ ರಸ್ತೆ, ಮೈಸೂರು–570023

ನಿಯಮ 13(4) ಪರಿಶಿಷ್ಟ IV
ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಕೆಳಸಹಿದಾರರು **ಶ್ರೀ ಕನ್ಯಕಾಪರಮೇಶ್ವರೀ ಕೋ– ಆಪರೇಟಿವ್ ಬ್ಯಾಂಕ್ ಲಿ. ಮೈಸೂರು.** ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ [4][ನಿಯಮ, 2002 (2002ರ 54)] ರ ಅನ್ವಯ ಸೆಕ್ಷನ್ 13(12)ರ [5][ನಿಯಮ 3] ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ಸೆಕ್ಷನ್ 13(2) ರ ಅಡಿ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲು ವಿಫಲರಾಗಿದ್ದು ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳ ಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4) ಕಾಯಿದೆ ನಿಯಮ 8 ಮತ್ತು 9 ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕದಂದು ವಿವರಿಸಲಾಗಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ **ಶ್ರೀ ಕನ್ಯಕಾಪರಮೇಶ್ವರೀ ಕೋ– ಆಪರೇಟಿವ್ ಬ್ಯಾಂಕ್ ಲಿ. ಮೈಸೂರು** ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕಾಯಿದೆ ಸೆಕ್ಷನ್ 13(8) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಮಯಕ್ಕೆ ತಮ್ಮ ಸ್ವತ್ತುಗಳನ್ನು ಪಡೆದುಕೊಳ್ಳಲು ಸಾಲಗಾರರ ಗಮನಕ್ಕೂ ತರಲಾಗಿದೆ.

ಕ್ರಮ ಸಂಖ್ಯೆ	ಸಾಲಗಾರರ ಹೆಸರು	ಸ್ಥಿರಾಸ್ತಿ ವಿವರ	ಡಿಮ್ಯಾಂಡ್ ನೋಟೀಸ್ ದಿನಾಂಕ	ಸ್ವಾಧೀನ ಪಡಿಸಿಕೊಂಡಿರುವ ದಿನಾಂಕ	ಬಾಕಿ ಇರುವ ಮೊತ್ತ (ರೂ.ಗಳಲ್ಲಿ)
1.	**ಶ್ರೀ ರಾಘವೇಂದ್ರ ಬಿ. ಬಿನ್ ಬಸವರಾಜು** ಮನೆ ನಂ.2586, ಸಿಹೆಚ್–71, 5ನೇ ಅಡ್ಡರಸ್ತೆ, ಸಿದ್ದಪ್ಪಾಜಿ ದೇವಸ್ಥಾನದ ಹಿಂಭಾಗ, ಕೆ.ಜಿ. ಕೊಪ್ಪಲ್, ಚಾಮರಾಜ ಮೊಹಲ್ಲಾ, ಮೈಸೂರು–570009. **ಜಾಮೀನುದಾರರು:** **ಶ್ರೀ ಲೋಕೇಶ್ ಎಸ್. ಬಿನ್ ಸೋಮಣ್ಣ** ಮನೆ ನಂ.2585, 5ನೇ ಅಡ್ಡರಸ್ತೆ, ಕೆ.ಜಿ. ಕೊಪ್ಪಲ್, ಸರಸ್ವತಿಪುರಂ, ಮೈಸೂರು–570014.	ಎಲ್ಲಾ ಭಾಗ ಮತ್ತು ವಿಭಾಗಗಳ ವಾಸಯೋಗ್ಯ ಸ್ವತ್ತು ನೆಲ ಅಂತಸ್ತು, ಮೊದಲನೇ ಅಂತಸ್ತು ಮತ್ತು ಎರಡನೇ ಅಂತಸ್ತು ಒಳಗೊಂಡಿರುವ ಸ್ವತ್ತು ನಂ.2586, ಸಿ.ಹೆಚ್. 71/1, ಮೈಸೂರು ನಗರ ಕಾರ್ಪೊರೇಶನ್ ಪಿಐಡಿ ನಂ.33570, 5ನೇ ಅಡ್ಡರಸ್ತೆ, ಕೆ.ಜಿ. ಕೊಪ್ಪಲ್, ಚಾಮರಾಜ ಮೊಹಲ್ಲಾ, ಮೈಸೂರು ಇಲ್ಲಿದೆ. **ವಿಸ್ತೀರ್ಣ:** ಪೂರ್ವದಿಂದ ಪಶ್ಚಿಮ: 32.00 ಅಡಿಗಳು ಮತ್ತು ಉತ್ತರದಿಂದ ದಕ್ಷಿಣ: 22.00 ಅಡಿಗಳು. **ಚಕ್ಕುಬಂಧಿ: ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ನಾಗೇಶ್ ರವರ ಸ್ವತ್ತು, **ಉತ್ತರಕ್ಕೆ:** ಸೋಮಣ್ಣ ರವರ ಸ್ವತ್ತಿನ ನಂ.2583 ಸಿಹೆಚ್–72, **ದಕ್ಷಿಣಕ್ಕೆ:** ಲೇನ್.	06.12.2024 ಎನ್‌ಪಿಎ ದಿನಾಂಕ 29.08.2024	27.03.2025	ಸಾಲದ ಖಾತೆ ಸಂಖ್ಯೆ ಎಲ್‌ಎಪಿ–39 ರೂ.47,23,870.60 + ದಿನಾಂಕ 06.12.2024 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
2.	1) **ಶ್ರೀಮತಿ ಕೆಂಪಮ್ಮ ಕೋಂ ಹುಚ್ಚಯ್ಯ** ಮನೆ ನಂ.3019, ರಾಮಮಂದಿರ ರಸ್ತೆ, ತೊಂಚಿಕೊಪ್ಪಲ್, ಸರಸ್ವತಿಪುರಂ, ಮೈಸೂರು–570009. 2) **ಶ್ರೀ ಭರತ್ ಹೆಚ್. ಬಿನ್ ಹುಚ್ಚಯ್ಯ** ಮನೆ ನಂ.3019, ರಾಮಮಂದಿರ ರಸ್ತೆ, ತೊಂಚಿಕೊಪ್ಪಲ್, ಸರಸ್ವತಿಪುರಂ, ಮೈಸೂರು–570009. **ಜಾಮೀನುದಾರರು:** **ಶ್ರೀಮತಿ ಭಾಗ್ಯವತಿ ಸಿ.ಬಿನ್ ಚನ್ನಯ್ಯ** ಮನೆ ನಂ.184, 1ನೇ ಅಡ್ಡರಸ್ತೆ, ಡಿ. ಸುಬ್ಬಯ್ಯ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು–570024.	ಎಲ್ಲಾ ಭಾಗ ಮತ್ತು ವಿಭಾಗಗಳ ವಾಸಯೋಗ್ಯ ಸ್ವತ್ತು ನೆಲ ಅಂತಸ್ತು, ಮೊದಲನೇ ಅಂತಸ್ತು ಮತ್ತು ಎರಡನೇ ಅಂತಸ್ತು ಒಳಗೊಂಡಿರುವ ಸ್ವತ್ತು ನಂ.3019/1, ಸಿಹೆಚ್–1, 3019/ಎ ಸಿಹೆಚ್–1/ಎ, ಮೈಸೂರು ನಗರ ಕಾರ್ಪೊರೇಶನ್ ಪಿಐಡಿ ನಂ.37106, ಟಿ.ಕೆ. ಲೇಔಟ್, ರಾಮಮಂದಿರ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು ಇಲ್ಲಿದೆ. **ವಿಸ್ತೀರ್ಣ:** ಪೂರ್ವದಿಂದ ಪಶ್ಚಿಮ: 14.50 ಅಡಿಗಳು ಮತ್ತು ಉತ್ತರದಿಂದ ದಕ್ಷಿಣ: 47.00 ಅಡಿಗಳು. **ಚಕ್ಕುಬಂಧಿ: ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಕಾಳಯ್ಯ ರವರ ಮನೆ, **ಉತ್ತರಕ್ಕೆ:** ಅಮಾಸೆ ಜವನಪ್ಪ ರವರ ಮನೆ, **ದಕ್ಷಿಣಕ್ಕೆ:** ರಸ್ತೆ.	08.11.2024 ಎನ್‌ಪಿಎ ದಿನಾಂಕ 11.06.2024	27.03.2025	ಸಾಲದ ಖಾತೆ ಸಂಖ್ಯೆ ಎಲ್‌ಎಪಿ–125 ರೂ.26,70,324.14 + ದಿನಾಂಕ 08.11.2024 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ

ದಿನಾಂಕ: 02.04.2025
ಸ್ಥಳ : ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ಶ್ರೀ ಕನ್ಯಕಾಪರಮೇಶ್ವರೀ ಕೋ–ಆಪರೇಟಿವ್ ಬ್ಯಾಂಕ್ ಲಿ, ಕೆ.ಆರ್. ಸರ್ಕಲ್, ಮೈಸೂರು.

IN THE COURT OF THE PRL CIVIL JUDGE AND J.M.F.C. AT PAVAGADA
C.Mis. No. 64/2024

Petitioners; 1. Sannamma W/o late Gangappa Aged about 64 years. 2. Siddagangamma D/o late Gangappa W/o Ramanna Aged about 42 years A.K.Colony, Pavagada town, pavagada. 3. Anjinappa S/o late Gangappa Aged about 36 years The petitioner No. 1 and 3 arae R/o Chikkanayakanahalli, village. Kasaba hobli, pavagada. Taluk .

V/s

Respondent; 1. The Tahasildar cum The Births and deaths Registrar pavagada. Pavagada taluk.

PAPER PUBLICATION

WHERE AS, the petitioners has filed the above petition seeking issue of Death certificate of 1 petitioner husband by name GANGAPPA s/o late Obaleshappa was died on 10-06-2001 in the house of the petitioner's at Chikkanayakanhalli village, kasab hobli of pavagada taluk., now the matter is set down for issue notice/ summons to all or any interested persons or legal heirs whoever got any objection over the above said death certificate may appear in this case either as respondent/ petitioners and may prosecute the same on the date of hearing i.e. 23/05/2025 you are hereby called upon to appear before this Hon'ble court at 11.00 a.m. on the said date of hearing either in person or through your counsel. If you fail to appear this court, the matter will be heard and decided exparte.

Given under my hand and seal of the court this day of 22/03/2025

By Order of Court
Sheristedar
THE PRL CIVIL JUDGE AND J.M.F.C. AT PAVAGADA.

Advocate for petitioner
K.Raghu, Pavagada.

ಗುಣ ಮಟ್ಟದ ಹಾಲು ಪೂರೈಸಿ ಸಂಘದ ಅಭಿವೃದ್ಧಿಗೆ ಕೈಜೋಡಿಸಿ

ಮದ್ದೂರು: ಹಾಲು ಉತ್ಪಾದಕರು ಸಹಕಾರ ಸಂಘಕ್ಕೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘದ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ತಿಳಿಸಿದರು.

ಮನ್‌ಮುಲ್ ಉಪವಿಭಾಗದ ಕಚೇರಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ಮತ್ತು ನೌಕರರ ಕಲ್ಯಾಣ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸದಸ್ಯರಿಗೆ ರಾಸು ವಿಮೆ ಚೆಕ್ ವಿತರಣೆ ಮಾಡಿ ಮಾತನಾಡಿದರು.

ಗುಣಮಟ್ಟದ ಹಾಲು ಪೂರೈಕೆಯಲ್ಲಿ ನಾವು 5ನೇ ಸ್ಥಾನದಲ್ಲಿರುವುದು ಆತಂಕಕಾರಿ ವಿಚಾರ. ಮುಂದಿನ ದಿನಗಳಲ್ಲಿ ನಮ್ಮ ತಾಲೂಕು ಪ್ರಥಮ ಸ್ಥಾನದಲ್ಲಿರಲು ಸಹಕರಿಸುವಂತೆ ಕೋರಿದರು. ಸಹಕಾರ ಸಂಘದ ಅಭಿವೃದ್ಧಿ ಜತೆಗೆ ಒಕ್ಕೂಟವೂ ಅಭಿವೃದ್ಧಿಯಾಗಲಿದ್ದು ಮತ್ತು ಒಕ್ಕೂಟವನ್ನೇ ನಂಬಿ ಲಕ್ಷಾಂತರ ಮಂದಿ ಉದ್ಯೋಗ ನಿರ್ವಹಿಸುತ್ತಿದ್ದು ಯಾರೋ ಮಾಡಿದ ತಪ್ಪಿಗೆ ಪ್ರತಿಯೊಬ್ಬರು ಕಷ್ಟ ಅನುಭವಿಸಬೇಕಾದ ಸ್ಥಿತಿಯಿದೆ. ಇದನ್ನರಿತು ಗುಣಮಟ್ಟದ ಹಾಲು ಪೂರೈಕೆಗೆ ಪ್ರಥಮ ಆದ್ಯತೆ ನೀಡಬೇಕೆಂದರು.

ಮನ್‌ಮುಲ್ ನಿರ್ದೇಶಕ ಹರೀಶ್‌ಬಾಬು ಮಾತನಾಡಿ, ತಾಲೂಕಿನಲ್ಲಿ 98 ಮಂದಿಗೆ 43 ಲಕ್ಷ ರಾಸು ವಿಮೆ ಸೌಲಭ್ಯ ಕಲ್ಪಿಸಿದ್ದು ಜತೆಗೆ ನೂತನ ಕಟ್ಟಡ ನಿರ್ಮಿಸಲು ಒಕ್ಕೂಟ ಸೌಲಭ್ಯ ಕಲ್ಪಿಸಿದೆ. ಸರಕಾರ ಪ್ರೋತ್ಸಾಹ ಧನದ ಜತೆಗೆ 4 ರೂ.ಗಳನ್ನು ಪ್ರತಿ ಲೀ. ಗೆ ಹೆಚ್ಚಳ ಮಾಡಿದೆ ಎಂದು ತಿಳಿಸಿದರು.

ಈ ವೇಳೆ ತಾಲೂಕು ಉಪ ವ್ಯವಸ್ಥಾಪಕ ಮಂಜೇಶ್ ಗೌಡ, ಸಹಾಯಕ ವ್ಯವಸ್ಥಾಪಕ ಜೀವನ್, ವೈದ್ಯರಾದ ಗೋವರ್ಧನ್, ಹನುಮಂತು ತೋಳಮರಡಿ, ವಿಸ್ತರಣಾಧಿಕಾರಿ ಹರೀಶ್‌ಹೆಗಡೆ, ಅಧಿಕಾರಿಗಳಾದ ಮಂಜುನಾಥ್, ಭವ್ಯಶ್ರೀ, ಅಶ್ವಿನಿ, ರತ್ನಮ್ಮ ಇತರರಿದ್ದರು.


ನೌಕರರ ಕಲ್ಯಾಣ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸದಸ್ಯರಿಗೆ ರಾಸು ವಿಮೆ ಚೆಕ್ ವಿತರಣೆ ಮಾಡಲಾಯಿತು.

ಸಮಾಚಾರ ಸಣ್ಣದಲ್ಲ

ಮನೆ ಬಾಗಿಲು ಒಡೆದು ಕಳ್ಳತನ

ಚಿಂತಾಮಣಿ: ಯುಗಾದಿ ಹಬ್ಬದ ಹಿನ್ನೆಲೆ ನೆಂಟರ ಮನೆಗೆ ಹೋಗಿದ್ದ ಮನೆಗೆ ಕನ್ನ ಹಾಕಿದ ಕಳ್ಳರು ನಗದು ಹಣ,ಚಿನ್ನ,ಬೆಳ್ಳಿ, ದೋಚಿ ಪರಾರಿಯಾಗಿರುವ ಘಟನೆ ಚಿಂತಾಮಣಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಗುಂಡಪ್ಪ ಬಡಾವಣೆಯಲ್ಲಿ ಬೆಳಕಿಗೆ ಬಂದಿದೆ.
ಗುಂಡಪ್ಪ ಬಡಾವಣೆಯ ವಾಸಿ, ನಾಗೇಂದ್ರ ರವರು ತಮ್ಮ ಕುಟುಂಬದೊಂದಿಗೆ ನೆಂಟರ ಮನೆಗೆ ಹೋಗಿದ್ದ ವೇಳೆ ಕಳ್ಳರು ಮನೆಯ ಬಾಗಿಲು ಕಿಟಕಿ ಒಡೆದು ಸುಮಾರು150 ಗ್ರಾಂ ಚಿನ್ನ,2 ಕೆಜಿ ಬೆಳ್ಳಿ ,3 ಲಕ್ಷ ಹಣ ಕದ್ದು ಪರಾರಿಯಾಗಿದ್ದಾರೆ. ನಾಗೇಂದ್ರ ಅವರ ಹೊಸ ಮನೆಯಾಗಿದ್ದು ಗೃಹಪ್ರವೇಶ ಮುಗಿದು ಇನ್ನು ವಾರ ಕೂಡ ಕಳೆದಿರಲಿಲ್ಲ. ಘಟನೆ ತಿಳಿದ ತಕ್ಷಣ ನಗರ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಆಕಸ್ಮಿಕ ಬೆಂಕಿ : ಖಾಸಗಿ ಬಸ್ ಸುಟ್ಟು ಭಸ್ಮ

ಚಿಂತಾಮಣಿ: ನಗರದ ಬೆಂಗಳೂರು ವೃತ್ತದಲ್ಲಿ ಇರುವ ಖಾಸಗಿ ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ್ದ ಬಸ್ಸಿಗೆ ಆಕಸ್ಮಿಕ

ಬೆಂಕಿ ಬಿದ್ದು ಸಂಪೂರ್ಣವಾಗಿ ಸುಟ್ಟು ಹೋದ ಘಟನೆ ಬುಧವಾರ ಬೆಳಗಿನ ಜಾವ ನಡೆದಿದೆ. ಗ್ರಾಮಾಂತರ ಠಾಣೆಯ ಪೊಲೀಸರು ಹಲವು ಪ್ರಕರಣಗಳಲ್ಲಿ ವಶಕ್ಕೆ ಪಡೆದುಕೊಂಡಿರುವ ದ್ವಿಚಕ್ರ ವಾಹನಗಳು ಬೆಂಕಿ ಬಿದ್ದು ಅವು ಸಹ ಸಂಪೂರ್ಣ ಸುಟ್ಟು ಹೋಗಿವೆ. ಪಕ್ಕದಲ್ಲಿ ಇರುವ ಪೆಟ್ರೋಲ್ ಬಂಕ್‌ಗೆ ಬೆಂಕಿ ವ್ಯಾಪಿಸಿ ಬೆಂಕಿ ಅವಘಡ ಆಗದಂತೆ ಬೆಂಕಿ ನಂದಿಸುವಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ಲೋಕೇಶ್ ಮತ್ತು ಅವರ ತಂಡ ಹಾಗೂ ಪೋಲೀಸರು ಯಶಸ್ವಿಯಾಗಿದ್ದಾರೆ. ಪ್ರತಿದಿನ ಬೆಳಿಗ್ಗೆ 7 ಗಂಟೆಗೆ ಹೊಸಕೋಟೆ ಇಂಡಸ್ಟ್ರಿಯಲ್ ಏರಿಯಾಗೆ ನೌಕರರನ್ನು ಕರೆದುಕೊಂಡು ಹೋಗುತ್ತಿದ್ದ ಅನ್ನಪೂರ್ಣೇಶ್ವರಿ ಖಾಸಗಿ ಬಸ್ಸನ್ನು ಚಾಲಕ ಇಲ್ಲಿ ನಿಲ್ಲಿಸಿ ಮನೆಗೆ ಹೋಗಿದ್ದ ಎನ್ನಲಾಗಿದೆ. ರಾತ್ರಿ ಗಸ್ತು ಮಾಡುತ್ತಿದ್ದ ಪೊಲೀಸ್ ಮಳ್ಳೂರಪ್ಪ ಮಾಹಿತಿ ನೀಡಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸೀತಿಯ ಶ್ರೀ ಭೈರವೇಶ್ವರ ರಥೋತ್ಸವ ಸಂಪನ್ನ

ಕೋಲಾರ: ತಾಲೂಕಿನ ಸೀತಿ ಗ್ರಾಮದ ಪತೇಶ್ವರ ಮತ್ತು ಭೈರವೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ಭಕ್ತರ ಸಮ್ಮುಖದಲ್ಲಿ ಬುಧವಾರ ವಿಜೃಂಭಣೆಯಿಂದ ನಡೆಯಿತು. ರಥೋತ್ಸವಕ್ಕೆ ಶಾಸಕ ಕೊತ್ತೂರು ಜಿ ಮಂಜುನಾಥ್, ಎಂ.ಎಲ್.ಸಿ ಅನಿಲ್ ಕುಮಾರ್, ಮಾಜಿ ಸಭಾಪತಿ ವಿ.ಆರ್ ಸುದರ್ಶನ್ ಚಾಲನೆ ನೀಡಿದರು. ಶಾಸಕ ಕೊತ್ತೂರು ಮಂಜುನಾಥ್ ಮಾತನಾಡಿ, ಜನರು ತಮ್ಮ ದೈನಂದಿನ ಕೆಲಸ ಕಾರ್ಯಗಳಿಂದಾಗಿ ಪ್ರತಿನಿತ್ಯ ಜಂಜಾಟದಲ್ಲಿ ಇರುತ್ತಾರೆ. ಇಂತಹ ಜಾತ್ರೆಗಳಿಂದ ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿಕೊಂಡು ಹೋಗುವ ಶಕ್ತಿಯು ಪರಮಾತ್ಮ ನೀಡುತ್ತಾನೆ. ಜಾತ್ರೆಗಳಿಂದ ಎಲ್ಲರೂ ಒಟ್ಟುಗೂಡುವ ವಾತಾವರಣದಿಂದ ಜಾತಿ ಮತ ಮರೆತು ಸಂತಸದಿಂದ ಪಾಲ್ಗೊಂಡಾಗ ನೆಮ್ಮದಿ ದೈವ ಭಕ್ತಿ ಕಾಣಬಹುದು ಎಂದು ಅಭಿಪ್ರಾಯಪಟ್ಟರು. ಮದ್ದೇರಿ ಸೊಸೈಟಿ ಅಧ್ಯಕ್ಷ ಚಂಜಿಮಲೆ ರಮೇಶ್, ಕೆಪಿಸಿಸಿ ಸದಸ್ಯ ನಂದಿನಿ ಪ್ರವೀಣ್, ಗ್ರಾಪಂ ಅಧ್ಯಕ್ಷೆ ಕವಿತಾ ಮುನಿರಾಜು, ಉಪಾಧ್ಯಕ್ಷೆ ಅನಿತಾ ಶ್ರೀನಿವಾಸ್, ಕಾಂಗ್ರೆಸ್ ಮುಖಂಡರಾದ ಖಾಜಿಕಲ್ಲಹಳ್ಳಿ ಮುನಿರಾಜು, ಉರಟ ಅಗ್ರಹಾರ ಚೌಡರೆಡ್ಡಿ, ಸೀತಿಹೊಸೂರು ಮುರಳಿಗೌಡ, ಮೈಲಾಂಡಹಳ್ಳಿ ಮುರಳಿ ಇದ್ದರು.

ವಿರಾಮ
ಪ್ರತಿ ಭಾನುವಾರ

ಇನ್ನಷ್ಟು ಹೊಸ ಮೆರಗು ಕಾಣಲಿ

ವಿಧಾನಸಭಾ ಕ್ಷೇತ್ರದ 150 ಗ್ರಾಮಗಳಲ್ಲಿ 'ನಮ್ಮೂರಿಗೆ ನಮ್ಮ ಶಾಸಕ' ಯಶಸ್ವಿ ಅಭಿಯಾನ

ಮುನಿರಾಜು ಅರಿಕೆರೆ, ಚಿಕ್ಕಬಳ್ಳಾಪುರ

ಶಾಸಕ ಪ್ರದೀಪ್ ಈಶ್ವರ್ ಅವರಿಗೆ ಜನಪ್ರಿಯತೆ ತಂದುಕೊಟ್ಟಿರುವ 'ನಮ್ಮೂರಿಗೆ ನಮ್ಮ ಶಾಸಕ' ಕಾರ್ಯಕ್ರಮ ಜನತೆಗೆ ಬಹಳಷ್ಟು ಉಪಯುಕ್ತ ಕಾರ್ಯಕ್ರಮ. ಆದರೆ ಇದು ಇನ್ನಷ್ಟು ಹೊಸ ರೀತಿಯಲ್ಲಿ ಕಾಣಿಸಿಕೊಳ್ಳಬೇಕಿದೆ.

ಬೆಳ್ಳಂಬೆಳಿಗ್ಗೆ ಗ್ರಾಮಗಳಿಗೆ ಭೇಟಿ ನೀಡಿ ಅಧಿಕಾರಿಗಳು, ಪಕ್ಷದ ಮುಖಂಡರೊಟ್ಟಿಗೆ ಹಿಂದಿನ ಕಾಲದ ಶಾನುಭೋಗರು, ಪಟೇಲರಂತೆ ಸಭೆ ನಡೆಸಿ ಮುಗಿಸುವ ಬದಲಿಗೆ, ಅಧಿಕಾರಿಗಳನ್ನು ಬಳಸಿಕೊಂಡು ಗ್ರಾಮದ ಸಮಸ್ತರನ್ನೂ ಭಾಗಿಯಾಗಿಸುವತ್ತ ಕಾರ್ಯಯೋಜನೆ ಸಿದ್ಧವಾಗಬೇಕಿದೆ.

ಹೌದು. 'ನಮ್ಮೂರಿಗೆ ನಮ್ಮ ಶಾಸಕ' ಈವರೆಗೆ 150 ಗ್ರಾಮಗಳಲ್ಲಿ ಯಶಸ್ವಿಯಾಗಿ ತನ್ನ ಅಭಿಯಾನವನ್ನು ಮುಗಿಸಿದೆ.ಕ್ಷೇತ್ರದ ಬಗ್ಗೆ ಸಂಪೂರ್ಣ ಮಾಹಿತಿಯಿಲ್ಲದ ಅಧಿಕಾರಿಗಳಿಗೆ ಮಾತ್ರವಲ್ಲದೆ ಮಾಧ್ಯಮದವರಿಗೆ ಕೂಡ ಮೊದಲ ಬಾರಿಗೆ ಕ್ಷೇತ್ರದರ್ಶನ ಮಾಡಿಸಿ ಗ್ರಾಮಗಳ ತಳಮಟ್ಟದ ಸಮಸ್ಯೆಗಳು, ಜನತೆ ಎದುರಿಸುತ್ತಿರುವ ಕಷ್ಟ ಸುಖಗಳನ್ನು ಆಲಿಸಿದಂತೆ ಆಡಳಿತ ಯಂತ್ರ ಕೆಲ ಸಮಸ್ಯೆಗಳಿಗೆ ತಾತ್ಕಾಲಿಕ ಉಪಶಮನ, ಹಲವೊಂದಿಷ್ಟಕ್ಕೆ ಶಾಶ್ವತ ಪರಿಹಾರ ಕಾಣಿಸುವ ಮಹತ್ಕಾರ್ಯಕ್ಕೆ ಶ್ರೀಕಾರ ಹಾಡಿರುವುದು ಆಶಾದಾಯಕ ಬೆಳವಣಿಗೆ.

ರಾಜ್ಯದ ಇತಿಹಾಸದಲ್ಲಿ ಶಾಸಕರೊಬ್ಬರೂ ಚುನಾವಣೆ ಅಲ್ಲದ ಹೊತ್ತಿನಲ್ಲಿ ತಮ್ಮದೇ ಕ್ಷೇತ್ರದ 150ನೇ ಗ್ರಾಮಗಳಿಗೆ ಭೇಟಿ ನೀಡಿ ಅವರ ಕಷ್ಟಗಳಿಗೆ ಸ್ಥಳದಲ್ಲಿಯೇ ಪರಿಹಾರ ಕೊಡಿಸುವುದು ದಾಖಲೆಯೇ ಸರಿ.

ಇಂತಹ ಜನಪ್ರಿಯ ಕಾರ್ಯಕ್ರಮದ ಯೋಜನೆ ಇನ್ನಷ್ಟು ಬದಲಾಗಲಿ ಎನ್ನುತ್ತಾರೆ ಸಾರ್ವಜನಿಕರು.

ಆಂತರಿಕ ಸಭೆ ನಡೆಸಲಿ: ಶಾಸಕರು ತಿಂಗಳಲ್ಲಿ ಭೇಟಿ ನೀಡುವ ಗ್ರಾಮಗಳ ಬಗ್ಗೆ ಕಂದಾಯ ಇಲಾಖೆ ಗ್ರಾಮೀಣಾಭಿವೃದ್ಧಿ ಇಲಾಖೆ,ಆರೋಗ್ಯ ಇಲಾಖೆ ಸಣ್ಣ ನೀರಾವರಿ ಇಲಾಖೆ, ಕೃಷಿ, ತೋಟಗಾರಿಕೆ, ಅರಣ್ಯ ಹೀಗೆ 36 ಇಲಾಖೆ ಅಧಿಕಾರಿಗಳು ಕಾರ್ಯಕ್ರಮದ ಪೂರ್ವದಲ್ಲಿ ಒಂದು ಆಂತರಿಕ ಸಭೆ ನಡೆಸಬೇಕು.
ನಂತರ ತಮ್ಮ ಅಧೀನದ ಅಧಿಕಾರಿಗಳ ಮೂಲಕ ಗ್ರಾಮದಲ್ಲಿ ಸಭೆಗಳನ್ನು ಆಯೋಜಿಸಿ ಜನರ ಕಷ್ಟನಷ್ಟ ಆಲಿಸಲಿ.ಅಲ್ಲಿ

ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರ ನಮ್ಮೂರಿಗೆ ನಮ್ಮ ಶಾಸಕ ಕಾರ್ಯಕ್ರಮ.

ಕಂಡು ಬರುವ ಸಮಸ್ಯೆಗಳಿಗೆ ಶಾಸಕರು ಗ್ರಾಮಕ್ಕೆ ಬರುವ ಪೂರ್ವದಲ್ಲಿಯೇ ಕೈಗೊಂಡ ಕ್ರಮಗಳು, ಬಿಡಿಸಲಾಗದ ಸಮಸ್ಯೆಗಳು, ಅವುಗಳಿಗೆ ಕಾರಣಗಳನ್ನು ಶಾಸಕರು ಗ್ರಾಮಕ್ಕೆ ಭೇಟಿ ನೀಡಿದಾಗ ತಿಳಿಸಿದರೆ ಅವನ್ನು ಪರಿಹರಿಸಲು ಅನುಕೂಲವಾಗಬಹುದು.

ಶಾಲಾವರಣ ಉತ್ತಮ ಸ್ಥಳ: ನಮೂರಿಗೆ ನಮ್ಮ ಶಾಸಕ ಕಾರ್ಯಕ್ರಮವನ್ನು ಊರ ಮುಂದೆ ಮಾಡುವ ಬದಲಿಗೆ ಶಾಲಾವರಣದಲ್ಲಿ ಆಯೋಜಿಸುವುದು ಉತ್ತಮ. ಶಾಲಾವರಣದಲ್ಲಿ ಶಾಸಕರ ಭೇಟಿಯ ನೆನಪಿಗೆ ಸಸಿ ನೆಟ್ಟು ಪೋಷಿಸುವ ಜವಾಬ್ದಾರಿ ಗ್ರಾಮಸ್ಥರಿಗೆ ನೀಡಲಿ.

ಎನ್‌ಎಸ್‌ಎಸ್ ಬಳಕೆ: ಪ್ರೌಢಶಾಲೆ,ಪಿಯುಸಿ,ಪದವಿ ಕಾಲೇಜುಗಳಲ್ಲಿ ಎನ್‌ಎಸ್‌ಎಸ್ ಘಟಕಗಳು ಇವೆ.ಈ ಕಾರ್ಯಕ್ರಮದ ಹಿಂದಿನ ದಿನ ಶಾಸಕರು ಭೇಟಿ ನೀಡುವ ಗ್ರಾಮದಲ್ಲಿ ಶ್ರಮದಾನ ಸಹಿತ ನಡೆದರೆ ಚೆನ್ನಾಗಿರಲಿದೆ. ವಿದ್ಯಾರ್ಥಿಗಳು ಮನೆಮನೆಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಪಟ್ಟಿ ಮಾಡಿ ವೇದಿಕೆ ಕಾರ್ಯಕ್ರಮದಲ್ಲಿ ಶಾಸಕರ ಗಮನಕ್ಕೆ ತರುವ ಕೆಲಸ ಮಾಡಲಿ. ಶಾಸಕರು ಈ ಸಮಸ್ಯೆಗಳಿಗೆ ಪರಿಹಾರ ಕಾಣಿಸಬಹುದು.

ಮಾಸಿಕ ವರದಿ: ಶಾಸಕರು ಆಯಾ ತಿಂಗಳಲ್ಲಿ ಭೇಟಿ ನೀಡುವ ಗ್ರಾಮಗಳು, ಅಲ್ಲಿ ಚರ್ಚೆಗೆ ಬಂದ ವಿಚಾರಗಳು, ನೀಡಿದ ವಾಗ್ದಾನಗಳು,ತಿಂಗಳಾಂತ್ಯಕ್ಕೆ ಕಾಣಿಸಿದ ಶಾಶ್ವತ ಪರಿಹಾರಗಳನ್ನು ಸಾರ್ವಜನಿಕವಾಗಿ ವರದಿ ಪ್ರಕಟಿಸುವ ಮೂಲಕ ನಮ್ಮೂರಿಗೆ ನಮ್ಮ ಶಾಸಕ ಕೇವಲ ತೋರಿಕೆಯ ಕಾರ್ಯಕ್ರಮವಲ್ಲ, ಬದಲಿಗೆ ಜನಪರ ನಾಯಕನೊಬ್ಬನ ನೈಜ ಕಾಳಜಿಯ ಕಾರ್ಯಕ್ರಮ ಎಂಬುದನ್ನು ತೋರಿಸುವ ಕೆಲಸವಾಗಬೇಕಿದೆ.

ನಿಜಕ್ಕೂ ಮಾದರಿ: ಶಾಸಕರು ಜನರೊಟ್ಟಿಗೆ ಬೆರೆಯುವ ಪರಿ, ದಲಿತರ ಬಗ್ಗೆ ಅವರು ತೋರುವ ವಿಶೇಷ ಕಾಳಜಿ, ಹಿರಿಯರಿಗೆ ಕೊಡುವ ಗೌರವ, ಪಕ್ಷ ಸಂಘಟನೆಗೆ ಹೊಸಬರನ್ನು ಕರೆತರುವ ಪ್ರಯತ್ನಗಳು ನಿಜಕ್ಕೂ ಮಾದರಿ ಹೌದು..! ಆದರೆ ಇನ್ನಷ್ಟು ಹೊಸ ವಿಧಾನ ತಂತ್ರ ಕಾರ್ಯಯೋಜನೆ ಅಳವಡಿಕೆ ಆಗಲಿ ಎನ್ನುತ್ತಾರೆ ಕ್ಷೇತ್ರದ ಜನತೆ.

ಮಂಜೂರಿಗೆ ಜಮೀನೇ ಇಲ್ಲ

ಕೋಲಾರ: ನಗರಸಭೆ ಹಾಗೂ ವೇಮಗಲ್ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಭೂಮಿ ಮಂಜೂರಾತಿಗೆ ಅವಕಾಶವಿಲ್ಲವಾಗಿದೆ. ಉಳಿದೆಡೆ ಕೊಡಲು ಜಮೀನೂ ಇಲ್ಲ, ಮಂಜೂರು ಮಾಡಲು ಬಹಳಷ್ಟು ನಿರ್ಬಂಧಗಳಿದ್ದು, ದರ್ಖಾಸ್ತು ಸಮಿತಿ ಇದ್ದರೂ ಏನೂ ಪ್ರಯೋಜನವಿಲ್ಲವಾಗಿದೆ ಎಂದು ಶಾಸಕ ಕೊತ್ತೂರು ಜಿ. ಮಂಜುನಾಥ್ ಹೇಳಿದರು.

ತಾಲೂಕು ಕಚೇರಿಯಲ್ಲಿ ದರ್ಖಾಸ್ತು ಸಮಿತಿ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ನಗರಸಭೆ ಹಾಗೂ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಭೂ ಮಂಜೂರಾತಿ ಮಾಡುವಂತಿಲ್ಲ ಎಂಬ ಕಾನೂನು ಇದೆ. ಆದರೆ, ಹೆಚ್ಚಿನವರು ಪಟ್ಟಣ ಪಂಚಾಯಿತಿ ರೂಪುಗೊಳ್ಳುವ ಮುನ್ನವೇ ಅರ್ಜಿ ಹಾಕಿಕೊಂಡಿದ್ದಾರೆ. ವಿಲೇವಾರಿ ಮಾಡಿ ಪಟ್ಟಣ ಪಂಚಾಯಿತಿ ರೂಪಿಸಬೇಕಿತ್ತು. ಈ ವಿಚಾರದ ಬಗ್ಗೆ ಕಂದಾಯ ಸಚಿವರು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಜೊತೆ ಚರ್ಚಿಸು ತ್ತೇನೆ. ಇದಕ್ಕೆ ಏನಾದರೂ ಪರಿಹಾರ ಕಂಡು ಕೊಳ್ಳಬೇಕಿದೆ ಎಂದರು. ವಕ್ಫ್ ಮಂಡಳಿಯನ್ನೇ ರದ್ದು ಮಾಡಲು ಸಾಧ್ಯವಿಲ್ಲ. ಹಾಗೆ ಮಾಡಲು ಮುಂದಾದರೆ ರಾಜ್ಯಗಳ ಒಪ್ಪಿಗೆಯೂ ಬೇಕಾಗುತ್ತದೆ. ಧರ್ಮಗಳ ಆಚರಣೆ ಪಾಲನೆ ಮಾಡಲು ಅಡ್ಡಿ ಮಾಡಬಾರದು. ಯಾವುದೇ ಧರ್ಮದ ಬಗ್ಗೆ ತಾರತಮ್ಯ ಮಾಡಲು ಹೋಗಬಾರದು ಎಂದರು. ಸಭೆಯಲ್ಲಿ ತಹಸೀಲ್ದಾರ್ ಎಂ.ನಯನ, ಸಮಿತಿ ಸದಸ್ಯರಾದ ಸವಿತಾ ಮಂಜುನಾಥ್, ಖಾದ್ರಿಪುರ ಬಾಬು, ಕ್ಯಾಲನೂರು ಬಾಬಾಸಾಬ್ ಇದ್ದರು.



ಕೋಲಾರದಲ್ಲಿ ಶಾಸಕ ಕೊತ್ತೂರು ಮಂಜುನಾಥ್ ದರ್ಖಾಸ್ತು ಸಮಿತಿ ಸಭೆ ನಡೆಸಿದರು.

ಹೆಜ್ಜೇನು ದಾಳಿ: 20 ಮಂದಿ ಗಾಯ

ಕೊರಟಗೆರೆ: ಪ್ರಥಮ ದರ್ಜೆ ಕಾಲೇಜಿನಿಂದ ಮನೆಗಳಿಗೆ ತೆರಳುತ್ತಿದ್ದ ಉಪನ್ಯಾಸಕರು, ವಿದ್ಯಾರ್ಥಿಗಳು ಸೇರಿದಂತೆ ಪಾದಚಾರಿಗಳ ಮೇಲೆ ಹೆಜ್ಜೇನು ನೊಣಗಳು ದಾಳಿ ನಡೆಸಿ 20ಕ್ಕೂ ಅಧಿಕ ಮಂದಿ ಸಾರ್ವಜನಿಕಆಸ್ಪತ್ರೆಗೆದಾಖಲಾದ ಘಟನೆ ಬುಧವಾರ ನಡೆದಿದೆ.

ಕೊರಟಗೆರೆ ಪಟ್ಟಣದ ಊರ್ಡಿಗೆರೆ ಕ್ರಾಸಿನ ಸಮೀಪದ ಮುಖ್ಯ ರಸ್ತೆಯ ಮರದ ಮೇಲಿದ್ದ ಹೆಜ್ಜೆನು ಬಿಸಿಲಿನ ತಾಪಕ್ಕೆ ಏಕಾಏಕಿ ಎದ್ದು ಕಾಲೇಜಿನಿಂದ ಮನೆಗಳಿಗೆ ತೆರಳುತ್ತಿದ್ದ ವಿದ್ಯಾರ್ಥಿಗಳ ಮೇಲೆ ದಾಳಿ ನಡೆಸಿವೆ.

ಹೆಜ್ಜೆನು ದಾಳಿಯಿಂದ ವಾಹನ ಸವಾರರು ಮತ್ತು ಪಾದಚಾರಿಗಳು ಓಡಿ ಹೋಗಿ ಇಡೀ ಪಟ್ಟಣವೇ ಬೆಚ್ಚಿಬಿದ್ದಿದೆ. ಸಾರ್ವಜನಿಕ ಪ್ರದೇಶದಲ್ಲಿಗೂಡುಕಟ್ಟಿರುವ ಹೆಜ್ಜೆನು ಗೂಡನ್ನ ತೆರವುಗೊಳಿಸಿ ಜನರರಕ್ಷಣೆಗೆ ಸ್ಥಳೀಯ ಪಪಂ, ಗ್ರಾಪಂ ಮತ್ತುಅರಣ್ಯ ಇಲಾಖೆ ಮುಂದಾಗಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಗಾಯಗೊಂಡ 20ಕ್ಕೂ ಅಧಿಕ ಜನರನ್ನು ಕೊರಟಗೆರೆ ಸಾರ್ವಜನಿಕ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಸ್ಥಳಕ್ಕೆ ಕೊರಟಗೆರೆ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ರಾಜ್ಯಮಟ್ಟದ ಹೊನಲು ಬೆಳಕಿನ ಕ್ರಿಕೆಟ್ ಟೂರ್ನಿ

ಕೊರಟಗೆರೆ: ಪಟ್ಟಣದಲ್ಲಿ ಪ್ರಪ್ರಥಮ ಬಾರಿಗೆ ರಾಜ್ಯ ಮಟ್ಟದ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಯನ್ನ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೆಸರಿನಲ್ಲಿ ಏ. 4ರಿಂದ 6ರವರೆಗೆ ಜೂನಿಯರ್ ಕಾಲೇಜ್ ಕ್ರೀಡಾಂಗಣದಲ್ಲಿ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕೆರೆ ಶಂಕರ್ ಮಾತನಾಡಿ, ಟೂರ್ನಿಯಲ್ಲಿ ರಾಜ್ಯದ ಪ್ರತಿಷ್ಠಿತ 24 ತಂಡಗಳು ಭಾಗವಹಿಸಲಿದ್ದು ಸ್ಥಳೀಯ ಕ್ರೀಡಾ ಪ್ರತಿಭೆಗಳಿಗೆ ಅವಕಾಶ ನೀಡುವ ಸಲುವಾಗಿ ಕೊರಟಗೆರೆಯ ಎರಡು ತಂಡ ಆಯ್ಕೆ ಮಾಡಲಾಗಿದೆ.

ಮ್ಯಾನ್ ಆಫ್‌ದ ಮ್ಯಾಚ್‌ಗೆ ಟಿವಿಎಸ್ ಬೈಕ್ ನೀಡಲಾಗುವುದು ಎಂದರು.

ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಯ ಪ್ರಥಮ ಬಹುಮಾನ 2,22,222 ರು.ನಗದು, ದ್ವಿತೀಯ 1,11,111 ರು. ನಗದು ಮತ್ತು ತೃತೀಯ, ಚತುರ್ಥ ಬಹುಮಾನಗಳ ಜತೆ ವಿಶೇಷ ಪ್ರಶಸ್ತಿ ಇವೆ. ಪಂದ್ಯಗಳು 6 ಓವರ್‌ಗಳಲ್ಲಿ, ಸೆಮಿಫೈನಲ್ 7 ಓವರ್‌ಗಳಲ್ಲಿ ನಡೆಯಲಿವೆ ಎಂದರು.

ಪಪಂ ಸದಸ್ಯ ನಂದೀಶ್ ಮಾತನಾಡಿ,ಡಾ. ಅಂಬೇಡ್ಕರ್‌ಜಯಂತಿ ಅಂಗವಾಗಿ ಈ

ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕೆರೆ ಶಂಕರ್ ಮಾತನಾಡಿದರು.

ಟೂರ್ನಿಆಯೋಜಿಸಲಾಗಿದ್ದು, ಬೆಂಗಳೂರು, ತುಮಕೂರು, ಹಾಸನ, ವಿವಿಧ ಜಿಲ್ಲೆಸೇರಿದಂತೆ ಕೊರಟಗೆರೆಯ 2 ತಂಡಗಳು ಭಾಗವಹಿಸಲಿವೆ ಎಂದು ಹೇಳಿದರು.

ಯುವಕಾಂಗ್ರೆಸ್‌ಅಧ್ಯಕ್ಷ ಬೈರೇಶ್ ಮಾತನಾಡಿ, ನಾವು ಸರಳವಾಗಿ ಜಿಲ್ಲಾ ಮಟ್ಟದಕ್ರಿಕೆಟ್ ಪಂದ್ಯಆಯೋಜಿಸಲು ಮುಂದಾದಾಗ ಸಚಿವ ಡಾ. ಜಿ ಪರಮೇಶ್ವರ್ ರಾಜ್ಯ ಮಟ್ಟದ ಕ್ರಿಕೆಟ್ ಆಯೋಜಿಸಲು ಹೇಳಿದರು. ಏ.4ರಂದು ಉದ್ಘಾಟನೆಯಾಗಲಿದ್ದು ಸಮರೋಪ ಸಮಾರಂಭದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಬಹುಮಾನ ವಿತರಣೆ ಮಾಡಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶ್ವಥ್ ನಾರಾಯಣ್,ಯುವ ಕಾಂಗ್ರೆಸ್ ಅಧ್ಯಕ್ಷ ಬೈರೇಶ್, ಶಿವು, ರಘುವೀರ್, ದೀಪಕ್, ಕಿರಣ್, ರಂಜು, ಅಭಿ, ಭರತ್, ಹರೀಶ್, ರಾಕೇಶ್ ಇದ್ದರು.

ವಿಶೇಷ ದಿನಗಳಲ್ಲಿ ಹೆಚ್ಚುವರಿ ಬಸ್ ಓಡಿಸಿ

ಬಾಗೇಪಲ್ಲಿ: ಭಾನುವಾರ, ಸೋಮವಾರ ಮತ್ತು ಹಬ್ಬ ಹರಿದಿನ-ರಜೆ ದಿನಗಳಂದ ಬಾಗೇಪಲ್ಲಿ ಯಿಂದ ಬೆಂಗಳೂರಿನತ್ತ ಪ್ರಯಾಣಿಸಬೇಕಾದರೆ ಪ್ರಯಾಣಿಕರು ಬಸ್ಸಿಗಾಗಿ ಪರದಾಡುವ ಸ್ಥಿತಿ ಬಗ್ಗೆ ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯುಗಾದಿ, ರಂಜಾನ್ ಹಬ್ಬಕ್ಕಾಗಿ ಬಾಗೇಪಲ್ಲಿ ಹಾಗೂ ನೆರೆಹೊರೆ ಗ್ರಾಮಗಳಿಗೆ ಬೆಂಗಳೂರಿನಿಂದ ಬಂದಿದ್ದ ಸಾರ್ವಜನಿಕರು ಹಬ್ಬ ಹರಿದಿನ ಮುಗಿಸಿ ಬೆಂಗಳೂರಿಗೆ ತೆರಳಲು ಬಾಗೇಪಲ್ಲಿ ಬಸ್ ನಿಲ್ದಾಣದಲ್ಲಿ ಗಂಟೆ ಗಟ್ಟಲೆ ಕಾದರೂ ಬಸ್ ಸಮಯಕ್ಕೆ ಬಾರದೇ ಪರದಾಡಿದರು.

ಬಸ್‌ಗಳು ನಿಗದಿತ ಸ್ಥಳದಲ್ಲಿ ನಿಲ್ಲಿಸದೇ ಎಲ್ಲೆಂದರಲ್ಲಿ ನಿಲ್ಲುಸುವುದರಿಂದ ಬಸ್ ನಿಲ್ದಾಣದಲ್ಲಿ ಕಾದಿರುವ ಪ್ರಯಾಣಿಕರು ಅಲ್ಲಿಗೆ ಬರುವ ವೇಳೆಗೆ ಬೇರೆ ಪ್ರಯಾಣಿಕರು ಬಸ್ ಏರುವುದರಿಂದ ಸ್ಥಳಾವಕಾಶ ದೊರಯದೇ ಮತ್ತೊಂದು ಬಸ್ಸಿಗೆ ಕಾಯಬೇಕಾದ ಅನಿವಾರ್ಯತೆ ಎದುರಾಗಿತ್ತು.

ಸಂಚಾರ ದಟ್ಟಣೆ ಇರುವ ಸಂದರ್ಭಗಳಲ್ಲಿ ಹೆಚ್ಚಿನ ಬಸ್‌ಗಳನ್ನು ಓಡಿಸುವ ಮೂಲಕ ಪ್ರಯಾಣಿಕರಿಗೆ ಸೇವೆ ಒದಗಿಸಿ ಸಂಸ್ಥೆಗೆ ವರಮಾನ ತಂದುಕೊಳ್ಳಬೇಕಾದ ಸಾರಿಗೆ ಸಂಸ್ಥೆ ಅಧಿಕಾರಿಗಳು ಮಾತ್ರ ಜಾಣಕಿವುಡರಂತೆ ವರ್ತಿಸುತ್ತಿದ್ದಾರೆಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ನಿಲ್ದಾಣದಲ್ಲಿ ಪ್ರಯಾಣಿಕರು ಬಸ್ಸಿಗಾಗಿ ಪರದಾಡುವ ಸ್ಥಿತಿ.

ಸರಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ

ಚಿಕ್ಕಬಳ್ಳಾಪುರ: ಜಿಲ್ಲಾ ಮಟ್ಟದ ಸರಕಾರಿ ನೌಕರರ ಕ್ರೀಡಾಕೂಟ ಏಪ್ರಿಲ್ 7 ಹಾಗು 8 ರಂದು ಸರ್. ಎಂ.ವಿ.ಕ್ರೀಡಾಂಗಣದಲ್ಲಿ ಆಯೋಜಿಸಿದ್ದು,ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಹಾಗು ಶಾಸಕರು ಭಾಗವಹಿಸಲಿದ್ದು ಜಿಲ್ಲೆಯ ನೌಕರರು ಭಾಗವಹಿಸಲಿದ್ದಾರೆ ಎಂದು ನೌಕರರ ಸಂಘದ ಜಿಲ್ಲಾಧ್ಯಕ್ಷ ಎ.ನಾರಾಯಣಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ,ಎರಡು ದಿನಗಳ ಕಾಲ ನಡೆಯುವ ಕ್ರೀಡಾಕೂಟದಲ್ಲಿ ಭಾಗವಹಿಸುವ ಸರ್ಕಾರಿ ನೌಕರರಿಗೆ ಜಿಲ್ಲಾ ಸಂಘ ಸೌಕರ್ಯ ಕಲ್ಪಿಸಲು ಬದ್ಧವಾಗಿದೆ. ಏ.14 ರಂದು ನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿರುವ ರಕ್ತದಾನ ಶಿಬಿರದಲ್ಲಿ ಜಿಲ್ಲೆಯ ಸರಕಾರಿ ನೌಕರರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಬೇಕೆಂದು ಮನವಿ ಮಾಡಿದರು.

ಇನ್ನು ಇದೇ ತಿಂಗಳ 23 ಹಾಗು 24 ರಂದು ಚಿಕ್ಕಬಳ್ಳಾಪುರದಲ್ಲಿ ಕನ್ನಡ ಕಲಾ ಭವನ ಹಾಗು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲೆಯ

ಸುದ್ದಿಗೋಷ್ಠಿಯಲ್ಲಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಎ.ನಾರಾಯಣಸ್ವಾಮಿ ಮಾತನಾಡಿದರು.

ನೌಕರರು ಭಾಗವಹಿಸಬೇಕೆಂದರು.ಇನ್ನು ಜಿಲ್ಲೆಯ ನೌಕರರಿಗೆ ರಾಜ್ಯ ಸಂಘದ ನಿರ್ದೇಶನದಂತೆ 20 ನೌಕರರಿಗೆ ಜಿಲ್ಲಾ ಮಟ್ಟದ ಸರ್ವೋತ್ತಮ ಪ್ರಶಸ್ತಿ, ಇಬ್ಬರಿಗೆ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೌಕರರ ದಿನಾಚರಣೆಯಲ್ಲಿ ನೀಡಲಾಗುತ್ತದೆ. ಶಿಕ್ಷಕರನ್ನು ಹೊರತುಪಡಿಸಿ ಎಲ್ಲಾ ನೌಕರರು ಏ. 14 ರೊಳಗಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಸುನಿಲ್, ಜಿಲ್ಲಾಗೌರವಾಧ್ಯಕ್ಷ ಕೆ.ಸಿ.ರೆಡ್ಡಪ್ಪ, ಗುಡಿಬಂಡೆ ಅಧ್ಯಕ್ಷ ಕೆ.ವಿ. ನಾರಾಯಣಸ್ವಾಮಿ,ಶಿಡ್ಲಘಟ್ಟ ಅಧ್ಯಕ್ಷ ಕೆ.ಎನ್.ಸುಬ್ಬಾರೆಡ್ಡಿ, ಚಿಂತಾಮಣಿ ಅಧ್ಯಕ್ಷ ಆರ್.ಅಶೋಕ್ ಕುಮಾರ್,ಗೌರಿಬಿದನೂರು ಅಧ್ಯಕ್ಷ ಎನ್.ಆರ್.ಮಂಜುನಾಥ ಇದ್ದರು.

ಕಾಯಕ ತತ್ವ ಪೂಜಿಸಿದ ದೇವರ ದಾಸಿಮಯ್ಯ

ದೇವಾಂಗ ಸಮಾಜದ ಆರಾಧ್ಯ ಪುರುಷರಾದ ದೇವರ ದಾಸಿಮಯ್ಯ ಜಯಂತಿ ಆಚರಿಸಲಾಯಿತು.

ನೆಲಮಂಗಲ: ದಾಸಿಮಯ್ಯನವರು ಕಾಯಕ ತತ್ವಕ್ಕೆ ಹೆಚ್ಚು ಆದ್ಯತೆ ನೀಡಿದವರು. ಅವರ ಆದರ್ಶ ಎಲ್ಲರೂ ಪಾಲನೆ ಮಾಡಬೇಕು ಎಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಲಾಗಿದ್ದ ದೇವಾಂಗ ಸಮಾಜದ ಆರಾಧ್ಯ ಪುರುಷರಾದ ದೇವರ ದಾಸಿಮಯ್ಯ ಜಯಂತಿಯಲ್ಲಿ ಭಾಗವಹಿಸಿ ಮಾತನಾಡಿದರು.

ಹಿಂದಿನ ಮಹನೀಯರ ಆದರ್ಶ ಪಾಲನೆಯಿಂದ ಮಾತ್ರ ಯಶಸ್ಸು ಸಿಗಲು ಸಾಧ್ಯ. ಸ್ವಾರ್ಥಕ್ಕೆ ಯೋಚನೆ ಮಾಡದೆ ಸಮಾಜದ ಪರ ಯೋಚನೆ ಮಾಡುತ್ತಿದ್ದ ಮಹನೀಯರನ್ನು ನಾವು ನೆನೆಯಬೇಕು ಎಂದರು.

ನಗರಸಭೆ ವ್ಯಾಪ್ತಿಯ ವಿವರ್ಸ್ ಕಾಲೋನಿ ಚೌಡೇಶ್ವರಿ ದೇವಾಲಯದಿಂದ ತಾಲೂಕು ಕಚೇರಿಯವರೆಗೂ ದೇವರ ದಾಸಿಮಯ್ಯನವರ ಭಾವಚಿತ್ರವನ್ನು ಬೆಳ್ಳಿ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಲಾಯಿತು.

ಈ ಸಂದರ್ಭದಲ್ಲಿ ಎನ್‌ಪಿಎ ಅಧ್ಯಕ್ಷ ನಾರಾಯಣಗೌಡ, ತಹಸೀಲ್ದಾರ್ ಅಮೃತ್ ಅತ್ರೇಶ್, ನಗರಸಭೆ ಅಧ್ಯಕ್ಷ ಎನ್. ಗಣೇಶ್, ಉಪಾಧ್ಯಕ್ಷ ಆನಂದ್, ಸದಸ್ಯ ಪಪ್ಪಸಾಬ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ .ನಾಗರಾಜು, ರಮೇಶ್, ಲಕ್ಷ್ಮೀನಾರಾಯಣ್, ಕಾಚನಹಳ್ಳಿ ಮನು ಸಿ ಎಂ ಗೌಡ ಇದ್ದರು.

ಡ್ಯಾಂ ವೀಕ್ಷಣೆಗೆ ತೆರಳಿದ್ದ ಮೂವರ ದುರ್ಮರಣ

ಚಿಕ್ಕಬಳ್ಳಾಪುರ: ತಾಲೂಕಿನ ಪುರಾತನ ಶ್ರೀನಿವಾಸಸಾಗರ ಜಲಾಶಯದ ವೀಕ್ಷಣೆಗೆ ತೆರಳಿದ್ದ ವೇಳೆ ಆರು ವರ್ಷದ ಬಾಲಕ ನೀರಿಗೆ ಬಿದ್ದು ಮುಳುಗುತ್ತಿದ್ದ ವೇಳೆ ಜೀವ ಉಳಿಸಲು ಹೋದ ಮೂವರು ಸಂಬಂಧಿಕರು ಜಲಸಮಾಧಿಯಾಗಿರುವ ದಾರುಣ ಘಟನೆ ಚಿಕ್ಕಬಳ್ಳಾಪುರದಲ್ಲಿ ನಡೆದಿದೆ. ಬೆಂಗಳೂರು ಮೂಲದ ಫರ್ಹೀನಾ (35), ಚಿಕ್ಕಬಳ್ಳಾಪುರ ನಿವಾಸಿ ಬಷೀರಾ (35), ಬೆಂಗಳೂರಿನ ಇಮ್ರಾನ್ (45) ಮೃತರು. ರಂಜಾನ್ ಹಬ್ಬ ಮುಗಿದ ಕಾರಣ ಸಂಬಂಧಿಕರು 10 ಮಂದಿ ಮಕ್ಕಳೊಡನೆ ಎರಡು ಕಾರುಗಳಲ್ಲಿ ಪ್ರವಾಸಿತಾಣಗಳಿಗೆ ಹೋಗಿದ್ದರು. ಬೆಳಗ್ಗೆ ನಂದಿಬೆಟ್ಟಕ್ಕೆ ಹೋಗಿದ್ದು, ನಂತರ ಶ್ರೀನಿವಾಸ ಸಾಗರಕ್ಕೆ ಬಂದಿದ್ದಾರೆ. ಮಧ್ಯಾಹ್ನ ಊಟ ಮಾಡೋಣ ಎಂದು ಜಲಾಶಯದ ಬಂಡೆ ಮೇಲೆ ಕೂತು ಊಟ ಮಾಡೋಕೆ ಮುಂದಾಗಿದ್ದರು. ಅಷ್ಟರಲ್ಲಿ ಫರ್ಹೀನಾರ 6 ವರ್ಷದ ಗಂಡು ಮಗು ಅನಂ ನೀರಿನಲ್ಲಿ ಇಳಿದು ಆಟವಾಡುತ್ತಿದ್ದು, ಆಕಸ್ಮಿಕವಾಗಿ ಕಾಲು ಜಾರಿ ನೀರಿನೊಳಗೆ ಮುಳುಗಿದ್ದಾನೆ.ಕೂಡಲೇ ಫರ್ಹೀನಾ ಮಗನ ರಕ್ಷಣೆಗೆ ನೀರಿಗೆ ಇಳಿದಿದ್ದು, ನಂತರ ಇಮ್ರಾನ್ ಹಾಗೂ ಬಷೀರಾ ಸಹ ಒಬ್ಬೊಬ್ಬರಾಗಿ ನೀರಿಗೆ ಧುಮುಕಿದ್ದಾರೆ. ಆದರೆ ಅನಂನ ರಕ್ಷಣೆ ಮಾಡಿ ಮೂವರು ಸಹ ಮರಳಿ ಮೇಲೆ ಬರಲಾಗದೇ ನೀರಿನಲ್ಲೇ ಮುಳುಗಿದ್ದಾರೆ. ಅಲ್ಲೇ ಇದ್ದ ಸ್ಥಳೀಯರು ಮೂವರನ್ನು ಮೇಲೆ ತಂದು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದ್ದಾರೆ. ಶಾಸಕ ಪ್ರದೀಪ್ ಈಶ್ವರ್ ಅವರ 'ಅಮ್ಮ' ಅಂಬ್ಯುಲೆನ್ಸ್‌ನಲ್ಲಿ ಮೃತದೇಹಗಳನ್ನು ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆಗೆ ರವಾನಿಸಿದ್ದಾರೆ. ಸಂಬಂಧಿಕರ ಆಕ್ರಂದನ ಮುಗಿಲುಮುಟ್ಟಿತ್ತು.

ಶಾಸಕ ರಾಜೇಂದ್ರ ಹತ್ಯೆ ಸುಪಾರಿ: ಸೋಮ ಪೊಲೀಸರಿಗೆ ಶರಣು

ತುಮಕೂರು: ಎಂಎಲ್‌ಸಿ ರಾಜೇಂದ್ರ ಹತ್ಯೆಗೆ ಸುಪಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಯಾತ್ಸಂದ್ರ ಪೊಲೀಸರ ಮುಂದೆ ಆರೋಪಿ ಎ1 ಆರೋಪಿ ಸೋಮ ಶರಣಾಗಿದ್ದಾನೆ. ಕ್ಯಾತ್ಸಂದ್ರ ಪೊಲೀಸರ ಮುಂದೆ ಸೋಮ ತಾನಾಗಿಯೇ ಬಂದು ಶರಣಾಗಿದ್ದು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ನನ್ನ ಕೊಲೆಗೆ ಸಂಚು ರೂಪಿಸಿದ್ದು, ತನಿಖೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ವಿಧಾನ ಪರಿಷತ್ ಸದಸ್ಯ ಆರ್. ರಾಜೇಂದ್ರ ನೀಡಿದ ದೂರಿನ ಮೇರೆಗೆ ಸೋಮ, ಭರತ್, ಅಮಿತ್, ಗುಂಡ, ಯತೀಶ್ ಸೇರಿ ಇತರರ ವಿರುದ್ಧ ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಈ ಸಂಬಂಧ ಪೊಲೀಸರು ಭರತ್, ಅಮಿತ್, ಗುಂಡ, ಯತೀಶ್, ಯಶೋಧರನ್ನು ಬಂಧಿಸಿದ್ದರು. ತದನಂತರ ಆಡಿಯೂ ವೈರಲ್ ಆದ ಬಳಿಕ ಪುಷ್ಪಾ ಹಾಗೂ ಇಬ್ಬರು ಯುವಕರನ್ನು ಬಂಧಿಸಿದ್ದರು. ರಾಜೇಂದ್ರ ಹತ್ಯೆಗೆ 5 ಲಕ್ಷ ರೂಪಾಯಿ ಮುಂಗಡ ಪಡೆದುಕೊಂಡಿದ್ದಾನೆ ಎಂದು ಸೋಮನ ವಿರುದ್ಧ ಸುಪಾರಿ ಪಡೆದ ಆರೋಪ ಕೇಳಿಬಂದಿದ್ದು ಸೋಮ ತಲೆಮರೆಸಿಕೊಂಡಿದ್ದನು. ಪ್ರಕರಣವನ್ನು ಕ್ಯಾತ್ಸಂದ್ರ ಇನ್‌ಸ್ಪೆಕ್ಟರ್ ರಾಮ್ ಪ್ರಸಾದ್, ಎಸ್‌ಪಿ ಕಚೇರಿಯ ಇನ್ ಸ್ಪೆಕ್ಟರ್ ಅವಿನಾಶ್, ಸಿರಾ ಗ್ರಾಮಾಂತರ ಠಾಣೆಯ ಸಿಪಿಐ ರಾಘವೇಂದ್ರ ನೇತೃತ್ವದ ತನಿಖಾ ತಂಡಕ್ಕೆ ನೀಡಿದ ಬೆನ್ನಲ್ಲೆ ಸೋಮ ತಾನಾಗಿಯೇ ಬಂದು ಪೊಲೀಸರ ಮುಂದೆ ಶರಣಾಗಿದ್ದಾನೆ.

ಹಲ್ಲೆಯಿಂದ ವ್ಯಕ್ತಿ ಸಾವು: ಸಿಪಿಐ, ಪಿಎಸ್‌ಐ ಅಮಾನತು

ರಾಯಚೂರು: ಪಶ್ಚಿಮ ಪೊಲೀಸ್ ಠಾಣೆಯ ಪಿಎಸ್‌ಐ ಮತ್ತು ಸಿಪಿಐ ಅವರನ್ನು ಅಮಾನತು ಮಾಡಲಾಗಿದೆ ಎಂದು ಬಳ್ಳಾರಿ ವಲಯದ ಡಿಐಜಿಪಿ ಬಿ.ಎಸ್. ಲೋಕೇಶ್ ಕುಮಾರ್ ತಿಳಿಸಿದ್ದಾರೆ.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಮಾತನಾಡಿದ ಅವರು, ಕೌಟುಂಬಿಕ ಕಲಹ ಪ್ರಕರಣವೊಂದರಲ್ಲಿ ಪಶ್ಚಿಮ ಪೊಲೀಸ್ ಠಾಣೆಯ ಪಿಎಸ್‌ಐ ಮಂಜುನಾಥ ಹಾಗೂ ಸಿಪಿಐ ನಾಗರಾಜ ಮೇಕಾ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಾನತು ಗೊಳಿಸಿ ಆದೇಶಿಸಿದ್ದಾರೆ ಎಂದರು.

ಕೌಟುಂಬಿಕ ಕಲಹ ಪ್ರಕರಣದಲ್ಲಿ ವೀರೇಶ್ ಎಂಬವರನ್ನು ಮಹಿಳಾ ಠಾಣೆಗೆ ಹಾಗೂ ಪಶ್ಚಿಮ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿತ್ತು. ಈ ವೇಳೆ ಮಾರಣಾಂತಿಕವಾಗಿ ಹಲ್ಲೆ ಮಾಡಲಾಗಿದೆ. ಇದರಿಂದ ವೀರೇಶ್ ಮೃತಪಟ್ಟರು ಎಂಬ ದೂರಿನ ಆಧಾರದಲ್ಲಿ ಪಿಎಸ್‌ಐ ಮತ್ತು ಸಿಪಿಐ ಅವರನ್ನು ಅಮಾನತುಗೊಳಿಸಲಾಗಿದೆ.

ಪ್ರಕರಣವನ್ನು ಡಿವೈಎಸ್‌ಪಿ ನೇತೃತ್ವದಲ್ಲಿ ತನಿಖೆ ನಡೆಸಲಾಗುವುದು. ಬಳಿಕ ಸಿಐಡಿಗೆ ವಹಿಸಲಾಗುವುದು ಎಂದು ಅವರು ತಿಳಿಸಿದರು.

ಹೊಸ ಪಕ್ಷ ಕಟ್ಟಿ ಗೆದ್ದು ಬಂದರೆ ಸನ್ಮಾನಿಸುವೆ

ದಾವಣಗೆರೆ: ಯತ್ನಾಳ್ ಹಿಂದೂ ಹುಲಿ ಅಲ್ಲ, ನಕಲಿ ಹಿಂದೂ. ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಹೊಸ ಪಕ್ಷ ಕಟ್ಟಿ ಗೆದ್ದು ಬಂದರೆ, ಹಿಂದೂ ಹುಲಿಗೆ ನಾವೇ ಸನ್ಮಾನ ಮಾಡುತ್ತೇವೆ ಎಂದು ಮಾಜಿ ಸಚಿವ ಎಂಪಿ ರೇಣುಕಾಚಾರ್ಯ ಬಿಜೆಪಿ ಪಕ್ಷದ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ವಾಗ್ದಾಳಿ ನಡೆಸಿದರು.

ದಾವಣಗೆರೆ ನಗರದ ಹಳೇ ಪ್ರವಾಸಿ ಮಂದಿರ ಬಳಿ ಶಾಸಕ ಯತ್ನಾಳ್ ಹೊಸ ಪಕ್ಷ ಕಟ್ಟುವ ವಿಚಾರವಾಗಿ ಪ್ರತಿಕ್ರಿಯಿಸಿ, ಯತ್ನಾಳ್ ಪಕ್ಷ ಕಟ್ಟಿದ್ರೆ ಸಂತೋಷ, ಸ್ವಾಗತ. ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರನ್ನು ಟೀಕೆ ಮಾಡಿದ್ರೆ ಸಿಎಂ ಆಗುವ ಬಗ್ಗೆ ಹಗಲು ಕನಸು ಕಾಣುತ್ತಿದ್ದಾರೆ. ಸರ್ವಾಧಿಕಾರಿ ಧೋರಣೆ ಬಿಡಬೇಕು. ಸ್ವಯಂಘೋಷಿತ ನಾಯಕರಾಗಬಾರದು, ಜನ ಮೆಚ್ಚಿದ ನಾಯಕರಾಗಬೇಕು. ಭಾರತೀಯ ಜನತಾ ಪಕ್ಷದ ಚಿಹ್ನೆಯಡಿಯಲ್ಲಿ ನಿಂತು ಗೆದ್ದಿದ್ದೀರಿ. ನಿಮಗೆ ನಿಜವಾಗಿಯೂ ವರ್ಚಸ್ಸು ಇದ್ದರೆ, ನೀವು ನಿಜವಾಗಿಯೂ ಹಿಂದುತ್ವವಾದಿಯಾಗಿದ್ದರೆ, ಮೊದಲು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಿ ಎಂದರು.

> **ಯತ್ನಾಳ್ ಅವರಿಗೆ ಠೇವಣಿಯೂ ಸಿಗಲ್ಲ. ಹೊಸ ಪಕ್ಷ ಕಟ್ಟಲಿ. 224 ಕ್ಷೇತ್ರಗಳಲ್ಲೂ ಅಡ್ರೆಸ್ ಇಲ್ಲದಂತೆ ಆಗ್ತಾರೆ. ಯತ್ನಾಳ್‌ಗೆ ಅಭ್ಯರ್ಥಿಗಳೇ ಸಿಗಲ್ಲ. ಹಿಂದೂ ಪಕ್ಷ ಕಟ್ಟುತ್ತೇನೆ ಅಂತಾರೆ. ನಾವ್ಯಾರೂ ಹಿಂದೂಗಳಲ್ವಾ? ತಮ್ಮನ್ನು ತಾವು ರಕ್ಷಣೆ ಮಾಡೋಕೆ ಏಕಪಾತ್ರಾಭಿನಯ ಮಾಡುತ್ತಾರೆ. ಹಿಂದೂ ಹುಲಿ ಎಂದು ತಮ್ಮನ್ನು ತಾವು ಪ್ರಚಾರ ಮಾಡಿಕೊಂಡಿದ್ದಾರೆ. ಸಮಯ ಸಂದರ್ಭ ಬಂದಾಗ ಎಲ್ಲವೂ ತಿಳಿಯುತ್ತದೆ.**
> **-ಎಂ.ಪಿ. ರೇಣುಕಾಚಾರ್ಯ**, ಮಾಜಿ ಸಚಿವ

ನಿಧಿ ಆಸೆಗಾಗಿ ದೇವರ ಕಲ್ಲು ಅಗೆದ ಕಳ್ಳರು

ಹಾವೇರಿ: ನಿಧಿ ಆಸೆಗಾಗಿ ಕಳ್ಳರು ಕೋಣಕಲ್ಲ ಭರಮ ದೇವರ ಕಲ್ಲು ಅಗೆದಿರುವ ಘಟನೆ ಜಿಲ್ಲೆಯ ಹಾನಗಲ್ ತಾಲೂಕು ಮಲಗುಂದ ಗ್ರಾಮದಲ್ಲಿ ನಡೆದಿದೆ. ನಿಧಿಗಳ್ಳರ ಹಾವಳಿಗೆ ಗ್ರಾಮಸ್ಥರು ಬೆಚ್ಚಿ ಬಿದ್ದಿದ್ದಾರೆ.

ಗ್ರಾಮದ ಹೊರವಲಯದಲ್ಲಿರುವ ಜಾಗದಲ್ಲಿ ನಿಧಿ ಆಸೆಗಾಗಿ ಗ್ರಾಮದ ಜನ ಆರಾಧಿಸುತ್ತಿದ್ದ ಕೋಣಕಲ್ಲ ಭರಮ ದೇವರ ಕಲ್ಲನ್ನು ಅಗೆದು ಹಾಕಿದ್ದಾರೆ. ಆರಾಧ್ಯ ದೇವರ ಕಲ್ಲು ಅಗೆದ ಹಿನ್ನೆಲೆ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಳೆದ 2–3 ದಿನಗಳಿಂದ ಪುರಾತನ ಕಾಲದ ದೇವಾಲಯ ಬಳಿ ನಿಧಿಗಳ್ಳರು ಓಡಾಡುತ್ತಿದ್ದಾರೆ. ನಿಧಿ ಆಸೆಗಾಗಿ ಕಲ್ಲು ಅಗೆದ ದುಷ್ಕರ್ಮಿಗಳು ಪತ್ತೆ ಮಾಡಿ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಆಡೂರು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಬೈಕ್ ಟ್ಯಾಕ್ಸಿ ಸೇವೆಗೆ ಹೈ ಬ್ರೇಕ್

← ಮೊದಲಪುಟದಿಂದ

ಮೋಟಾರ್ ಸೈಕಲ್‌ಗಳನ್ನು ಸಾರಿಗೆ ವಾಹನಗಳಾಗಿ ನೋಂದಾಯಿಸಲು 2022ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸುವಂತೆ ರಾಜ್ಯ ಸರಕಾರಕ್ಕೆ ನಿರ್ದೇಶನ ಕೋರಿ ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಇತರರು ಸಲ್ಲಿಸಿದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್‌ಪ್ರಸಾದ್ ಅವರು ಈ ಆದೇಶ ಹೊರಡಿಸಿದ್ದಾರೆ. 1988ರ ಮೋಟಾರು ವಾಹನ ಕಾಯಿದೆಯ ಸೆಕ್ಷನ್ 3ರ ಅಡಿಯಲ್ಲಿ ಅಗತ್ಯ ನಿಯಮಗಳೊಂದಿಗೆ ಸಂಬಂಧಿತ ಮಾರ್ಗಸೂಚಿಗಳನ್ನು ತಿಳಿಸದ ಹೊರತು ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಆರು ವಾರಗಳ ಒಳಗೆ ಎಲ್ಲ ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ಸ್ಥಗಿತಗೊಳ್ಳುವಂತೆ ನೋಡಿಕೊಳ್ಳಲು ನ್ಯಾಯಾಲಯವು ರಾಜ್ಯ ಸರಕಾರ ಮತ್ತು ಸಾರಿಗೆ ಇಲಾಖೆಗೆ ನಿರ್ದೇಶನ ನೀಡಿದೆ.

2,800 ಬೋಧಕರ ಹುದ್ದೆ ಖಾಲಿ

ದಾವಣಗೆರೆ: ರಾಜ್ಯದ ಎಲ್ಲ ವಿವಿಗಳು ಒಳಗೊಂಡಂತೆ ಮಂಜೂರಾದ 2800 ಬೋಧಕರ ಹುದ್ದೆಗಳು ಖಾಲಿ ಇವೆ ಎಂದು ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಇತ್ತೀಚೆಗೆ ಹೊಸದಾಗಿ ಸೇರ್ಪಡೆ ಯಾದ ಹೊಸ ಎಮರ್ಜೆನ್ಸಿ ಕೋರ್ಸ್‌ಗೆ ಸಂಬಂಧಿಸಿದಂತೆ ಬೋಧಕರು ಹುದ್ದೆ ಮಂಜೂರಾಗಿಲ್ಲ. ಈ ಎಲ್ಲ ಹುದ್ದೆ ಲೆಕ್ಕ ಹಾಕಿದರೆ 3500ಕ್ಕೂ ಹೆಚ್ಚು ಹುದ್ದೆ ಖಾಲಿ ಇದ್ದು, ಈ ಬಗ್ಗೆ ಸರಕಾರ ಖಾಲಿ ಇರುವ ಬೋಧಕರ ಹುದ್ದೆ ತುಂಬಲು ಕ್ರಮ ವಹಿಸಿದೆ ಎಂದು ಮಾಹಿತಿ ನೀಡಿದರು. ಗುಣಮಟ್ಟದ ಕಾಲೇಜು ಸ್ಥಾಪಿಸಬೇಕೆ ಹೊರತು ವಿವಿಗಳನ್ನಲ್ಲ. ಪೋಷಕರು ಹೆಸರು ನೋಡಿ ಆಯ್ಕೆ ಮಾಡಲ್ಲ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡುವ ವಿವಿಗೆ ಮಾತ್ರ ಸೇರಿಸುತ್ತಾರೆ ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU-324/15/2024–25 ದಿನಾಂಕ:02/04/2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೇ ನಂ:	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ:	ಬದಲಾವಣೆ ಕೋರಿರುವ ಭೂ ಉಪಯೋಗ:
1	ಶ್ರೀ ಧೀರೇಂದ್ರಕುಮಾರ್ ಸೇನ್ ಮತ್ತು ಇತರರು ಸಾದನ ತಿಕ್ಲಾಪುರ, ಭಗೀಚ ತಿಕ್ಲಾಪುರ ಅಲ್ ಮೋರಾ, ಉತ್ತರಕಾಂಡ್–263601.	ಯಲಹಂಕ	ಜಾಲ	ಬೆಟ್ಟ ಹಲಸೂರು	345/2	0ಎ–22ಗುಂ	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವಸತಿ ಉಪಯೋಗಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡುವುದರಿಂದ ವಸತಿ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಕರ್ನಾಟಕ ಸರಕಾರ

ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಾರ್ಯಾಲಯ

ನವಲಗುಂದ ಹಳೇ ತಹಶೀಲ್ದಾರ ಕಟ್ಟಡ, ನವಲಗುಂದ ತಾಲ್ಲೂಕು

ದೂರವಾಣಿ ಸಂಖ್ಯೆ: e-mail: mojininavalgund@gmail.com

ಸಂಖ್ಯೆ: ಭೂಸನಿ/ಬಾವ.ಡೆ/ಸಿಆರ್/05/2025–26 ದಿನಾಂಕ:–02–04–2025

ಟೆಂಡರ ಪ್ರಕಟಣೆ

ವಿಷಯ:– 2025–26 ನೇ ಸಾಲಿನ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ಕುರಿತು.

ಉಲ್ಲೇಖ:
ಸರ್ಕಾರದ ಆದೇಶ ಸಂ:ಸಿಆಸುಇ 30 ಶೀವಾನಿ 2019 ದಿನಾಂಕ: 31–03–2022.

ಟೆಂಡರ್ ಅರ್ಜಿ ವಿತರಿಸುವ ದಿನಾಂಕ: 03–04–2025 ರಿಂದ 09–04–2025.
ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17–04–2025 ಸಾಯಂಕಾಲ 5–30ರವರೆಗೆ.
ಟೆಂಡರ್ ಲಕೋಟೆ ತೆರೆಯುವ ದಿನಾಂಕ: 19–04–2025 ಬೆಳಿಗ್ಗೆ 11 ಗಂಟೆಗೆ.
ಸಂಪರ್ಕಿಸಬೇಕಾದ ವಿಳಾಸ: ಭೂದಾಖಲೆಗಳ ಸಹಾಯಕ ನಿರ್ದೇಶಕರು, ಭೂದಾಖಲೆಗಳ ಸಹಾಯಕ ನಿರ್ದೇಸಕರ ಕಚೇರಿ, ಹಳೇ ತಹಶೀಲ್ದಾರ ಕಟ್ಟಡ ಆವರಣ, ನವಲಗುಂದ.

ಸಹಿ/–
ಭೂದಾಖಲೆಗಳ ಸಹಾಯಕ ನಿರ್ದೇಶಕರು
ನವಲಗುಂದ ತಾಲ್ಲೂಕು

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ದೂರವಾಣಿ ಸಂ: 08338/ 273859 ಇ–ಮೇಲ್:eepwdckd@gmail.com

ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–2/ಟೆಂಡರ್/2024–25/6493 ದಿನಾಂಕ:29/03/2025

ಅವಧಿ ವಿಸ್ತರಣೆ–2/ತಿದ್ದುಪಡಿ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–2/ಟೆಂಡರ್/2024–25/6074 ದಿನಾಂಕ: 14/03/2025 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಗೆ ಈ ಕಚೇರಿ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–2/ಟೆಂಡರ್/2024–25/6306 ದಿನಾಂಕ: 24/03/2025 ರಡಿ ಅವಧಿ ವಿಸ್ತರಣೆ ಮಾಡಲಾದ ಕಾಮಗಾರಿಗಳಲ್ಲಿನ ಕ್ರ.ಸಂ. 1 ಮತ್ತು 2 ರಲ್ಲಿನ ಕಾಮಗಾರಿಗಳಿಗೆ ಹೆಚ್ಚಿನ ಬಿಡ್‌ಗಳನ್ನು ಆಕರ್ಷಿಸುವ ಸಲುವಾಗಿ ಈ ಕೆಳಗಿನಂತೆ ಅವಧಿ ವಿಸ್ತರಣೆ–2/ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1.ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:03–04–2025 (ಸಾಯಂಕಾಲ 5.30 ಗಂಟೆಯವರೆಗೆ), 2.ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:05–04–2025 (ಸಾಯಂಕಾಲ 5.00 ಗಂಟೆಯವರೆಗೆ), 3.ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ(Two Cover System): 07–04–2025 (ಸಾಯಂಕಾಲ 4.30 ಗಂಟೆಗೆ), 4.ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5.ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-08/KSMCA/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ). ದೂರವಾಣಿ ಸಂಖ್ಯೆ: 08488–224328, ಇ–ಮೇಲ್:kbjnleerampur@gmail.com.

ಸಂ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–2/2025–26/4 ದಿನಾಂಕ:01.04.2025

ಮರು ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ:– 1) ಈ ಕಚೇರಿಯ ಟೆಂಡರ್ ಪ್ರಕಟಣೆ ಸಂ:2847 ದಿನಾಂಕ: 10.03.2025

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಅನುಮೋದನೆಗೊಂಡಿರುವ Deployment of outsource staff in CE office, SE office, CAO Bheemarayanagudi office and Rampur division office. (I. No. SE0147/call-2) ಒಟ್ಟು 09–ಹೊರಗುತ್ತಿಗೆ ನೌಕರರ ನಿಯೋಜನೆ ಸೇವೆಗಳಿಗಾಗಿ ಹೊರಗುತ್ತಿಗೆ ನೌಕರರ ನಿಯೋಜನೆ ಸೇವೆಗಳಿಗಾಗಿ ರೂ: 16.71 ಲಕ್ಷ ಮೊತ್ತದ ಸೇವೆಗಳಿಗೆ Registration certificate of establishment from Govt of Karnataka & Department of Labour as per section 12(1) of Contract Labour Act ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಸೇವಾ ದರದ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್ ಸೈಟ್ https://kppp.karnataka.gov.in ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

- ಕೆ.ಪಿ.ಪಿ.ಪಿ.ಪೋರ್ಟಲ್ https://kppp.karnataka.gov.in ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ ದಿನಾಂಕ: 02.04.2025 ರಿಂದ 09.04.2025 ರ ಸಾಯಂಕಾಲ 4.30 ಗಂಟೆಯವರೆಗೆ ಸಲ್ಲಿಸುವುದು.
- ಗುತ್ತಿಗೆದಾರರು ದಿನಾಂಕ: 02.04.2025 ರಿಂದ 09.04.2025 ರ ಸಾಯಂಕಾಲ 4.30 ಗಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.
- ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 02.04.2025 ರಿಂದ 09.04.2025 ರ ಸಾಯಂಕಾಲ 4.30 ಗಂಟೆಯವರೆಗೆ ಸಲ್ಲಿಸುವದು.
- ದ್ವಿ–ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ ದಿನಾಂಕ: **11.04.2025** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
- ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್ ನಿಂದ ಪಡೆಯಬಹುದು.
- ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
- ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿನಿ, ನಿಮಪೋ ಐಬಿಸಿ ವಿಭಾಗ, ರಾಂಪೂರ (ಪ.ಅ)

ವಾಸಾಸಂಇ/ವಿಜಯಪುರ/04/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ — ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ

ಸಂಖ್ಯೆ:ಸಾಆಹೊ/ಹೊ.ಗು.ಟೆಂಡರು/979/2024–25 ದಿನಾಂಕ:26–03–2025

ಇ–ಟೆಂಡರ್ ಪ್ರಕಟಣೆ

2025–26 ನೇ ಸಾಲಿಗಾಗಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆಯಲ್ಲಿ ಖಾಲಿ ಇರುವ 11 ಗ್ರೂಪ್ ಡಿ ಮತ್ತು 7 ನಾನ್‌ಕ್ಲಿನಿಕ್ ಒಟ್ಟು 18 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಇ–ಪ್ರೋಕ್ಯೂರ್ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ ಇ–ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲು ಕೋರಿದೆ.

e-Tender No.: **GHH/TENDER/979 /2024-25.** E-Procurement Tender No: **DHFWS/2024-25/SE1404.** Commencement of downloading of e-Tender forms from website: **http://kppp.karnataka.gov.in ದಿನಾಂಕ:01–04–2025 ರಿಂದ 30–04–2025 ರಂದು ಸಂಜೆ 4.30 ಗಂಟೆಯವರೆಗೆ.** Last Date for seeking clarification if any: **ದಿನಾಂಕ: 30–04–2025 ರಂದು ಬೆಳಗ್ಗೆ 11.00 ಗಂಟೆಯವರೆಗೆ.** Last date for uploading of Tender in e-procurement platform: **ದಿನಾಂಕ:30–04–2025 ರಂದು ಸಂಜೆ 4.30 ಗಂಟೆಯವರೆಗೆ.** Date, Time & Venue of Opening of Tenders **ದಿನಾಂಕ:02–05–2025 ರಂದು ಬೆಳಗ್ಗೆ 11.30 ಗಂಟೆಗೆ, ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ ಇವರ ಕಛೇರಿಯಲ್ಲಿ ಇ–ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು.** EMD:**Rs.1,04,000/-**

ಇ–ಪ್ರೋಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/04

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ

ಮುಖ್ಯ ಅಭಿಯಂತರರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472-220817,
E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ನೀ.ಸ/ಕೆ.ಕೆ.ಆರ್.ಡಿ.ಬಿ /2025–26/03 ದಿನಾಂಕ: 01–04–2025

–: ಟೆಂಡರ್ ಆಹ್ವಾನಿಸುವ ಸೂಚನೆ :–

1) ಕಾಮಗಾರಿ ವಿವರ: 2024–25 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮ್ಯಾಕ್ರೋ ಅನುದಾನದಡಿ ರಾಯಚೂರು ನಗರದ ವಾರ್ಡ ಸಂಖ್ಯೆ – 13 ಕ್ಕೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ (ಲಮ್.ಸಮ್ ಟೆಂಡರ್), (ವರ್ಕ ಇಂಡೆಂಟ್ ಸಂಖ್ಯೆ: ಕೆಯುಡಬ್ಲ್ಯೂಎಸ್.ಡಿ.ಬಿ/2025–26/ವರ್ಕ_ಇಂಡೆಂಟ್ 334), 2) ಕಾಮಗಾರಿ ಅಂದಾಜು ಮೊತ್ತ: **ರೂ. 340.51 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ),** 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ರೂ. 3,41,000/–, 5) ಕಾಮಗಾರಿಯ ಅವಧಿ: 12 ತಿಂಗಳು (ಮಳೆಗಾಲ ಸೇರಿ), 6) ಇ– ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ: **07–04–2025 ಸಮಯ : 17:00 ಗಂಟೆಯ ನಂತರ,** 7) ಪೂರ್ವ ಟೆಂಡರ್ ಸಭೆ ದಿನಾಂಕ: **21–04–2025 ಸಮಯ 11:30 ಗಂಟೆಯವರೆಗೆ,** 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **06–05–2025 ಸಮಯ 17:30 ಗಂಟೆಯವರೆಗೆ,** 9) ಟೆಂಡರ್ ತೆರೆಯುವ ದಿನಾಂಕ: **07–05–2025 ಸಮಯ 11:00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, ಜಲಭವನ, ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105 ದೂ: 08472–220817, E-mail ID : kwbceklb14@gmail.com, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/– ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/08/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ — ಮಕ್ಕಳ ರಕ್ಷಣಾ ನಿರ್ದೇಶನಾಲಯ

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ದಕ್ಷಿಣ

ನಂ: 27/17, 2ನೇ ಮಹಡಿ, ಅಕ್ಷಯ ಸ್ಕ್ವೇರ್, ಪಾಪರೆಡ್ಡಿಪಾಳ್ಯ, 80 ಅಡಿ ರಿಂಗ್ ರಸ್ತೆ, ನಾಗರಭಾವಿ–2ನೇ ಹಂತ, ಬೆಂಗಳೂರು–560072.

ಇಮೇಲ್– southdcpo@gmail.com ದೂರವಾಣಿ ಸಂಖ್ಯೆ: 080–23442233.

ಸಂಖ್ಯೆ:ಜಿ.ಮ.ರ.ಘ/ಬೆಂ(ದ)/ಮ.ಸ.ಹೆ.ಡೆ/ಇ–ಟೆಂಡರ್/2024–25 ದಿನಾಂಕ: 29.03.2025

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಕೇಂದ್ರ ಸರ್ಕಾರದಿಂದ 2024–25ನೇ ಸಾಲಿನ PROJECT APPROVAL BOARD (PAB) ನಲ್ಲಿ ಬೆಂಗಳೂರು ದಕ್ಷಿಣ ವ್ಯಾಪ್ತಿಯಲ್ಲಿ ಹೊಸದಾಗಿ 04 ಮಕ್ಕಳ ಸಹಾಯವಾಣಿ ಹೆಲ್ಪ್ ಡೆಸ್ಕ್ ಗಳನ್ನು ಪ್ರಾರಂಭಿಸಲು ಅನುಮೋದಿಸಿದ್ದು, ಪ್ರತಿ ಹೆಲ್ಪ್ ಡೆಸ್ಕ್‌ಗಳಿಗೆ 06 ಹುದ್ದೆಗಳಂತೆ ಒಟ್ಟು 24 ಹುದ್ದೆಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಅರ್ಹ ಸೆಕ್ಯುರಿಟಿ ಸಂಸ್ಥೆಗಳ/ಏಜೆನ್ಸಿಗಳ ಮುಖಾಂತರ ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ನಿಯಮಾನುಸಾರ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪೋರ್ಟಲ್ ಪಾರದರ್ಶಕತೆಯ ಪ್ರಕಾರ) ಕೆಪಿಪಿಪಿ ಮುಖಾಂತರ ಮಾತ್ರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಪದ್ಧತಿಯಂತೆ ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಬೆಂಗಳೂರು ದಕ್ಷಿಣ (ಕೆಂಗೇರಿ)

ವಾಸಾಸಂಇ/ವಾಪ್ರ/37/ಎಸ್‌ಎಸ್‌ಸಿ/2025–26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994705

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017.
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)–1/2025–26/148 ದಿನಾಂಕ: 01.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಪೂರ್ಣಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲು ಈ ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ವಿವರಗಳು	ವಿಚಾರಣೆ ಸಂಖ್ಯೆ/ದಿನಾಂಕ
ಶ್ರೀರಂಗಪಟ್ಟಣ ಉಪವಿಭಾಗ ವ್ಯಾಪ್ತಿಯಲ್ಲಿ **AGRI** ಫೀಡರ್‌ಗಳ ವಿತರಣಾ ನಷ್ಟ ಮತ್ತು **HT-LT Ratios** ಗಳನ್ನು ಕಡಿಮೆ ಮಾಡಲು ಕಾಮಗಾರಿಗಳನ್ನು ಪೂರ್ಣಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲು		
1	ಎಫ್01–ಹುಂಜನಕೆರೆ	ಸಿ2–6170/01–04–2025
2	ಎಫ್7–ಮಂಡ್ಯ ಕೊಪ್ಪಲು	ಸಿ2–6171/01–04–2025
3	ಎಫ್2–ಗಾಮನಹಳ್ಳಿ	ಸಿ2–6172/01–04–2025
4	ಎಫ್8–ನೆರಳಕೆರೆ	ಸಿ2–6173/01–04–2025
5	ಎಫ್1–ಡಿಜಿ ಕೊಪ್ಪಲು	ಸಿ2–6174/01–04–2025
6	ಎಫ್11–ತಡಗವಾಡಿ	ಸಿ2–6175/01–04–2025
7	ಎಫ್9–ಬಿದರಹಳ್ಳಿ	ಸಿ2–6176/01–04–2025
8	ಎಫ್8–ಬನ್ನಹಳ್ಳಿ	ಸಿ2–6177/01–04–2025
9	ಎಫ್1–ತರಿಪುರ	ಸಿ2–6178/01–04–2025
10	ಎಫ್11–ಮರಸಿಂಗನಹಳ್ಳಿ	ಸಿ2–6179/01–04–2025
11	ಎಫ್9–ಕಲಕೆರೆ	ಸಿ2–6180/01–04–2025
12	ಎಫ್9–ದೊಡ್ಡಪಾಳ್ಯ	ಸಿ2–6181/01–04–2025
13	ಎಫ್7–ಚಿಕ್ಕಅಂಕನಹಳ್ಳಿ	ಸಿ2–6182/01–04–2025
14	ಎಫ್9–ದೊಡ್ಡಹಾರೊಹಳ್ಳಿ	ಸಿ2–6183/01–04–2025

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ **ದಿನಾಂಕ: 07.04.2025**ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ **+91–8046010000, +91–8068948777** ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

DIPR-DD-MYS/11/KSMCA-005/2025-26 ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾ.ವಿ.ಸ.ನಿನಿ., ಮೈಸೂರು

ಕರ್ನಾಟಕ ಸರಕಾರ — ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ–ಮೇಲ್: directorgimsgulbarga@gmail.com, ದೂ. 08472-260252

ಸಂಖ್ಯೆ: GIMS/KLB/Tender/Radiology/CR/198/2024-25/07 ದಿನಾಂಕ:–01/04/2025

:: ಟೆಂಡರ ಪ್ರಕಟಣೆ ::

ಜಿಮ್ಸ್ ಆಸ್ಪತ್ರೆ, ಕಲಬುರಗಿಯ ರೆಡಿಯೋಲಾಜಿ ವಿಭಾಗಕ್ಕೆ 2025–26 ನೇ ಸಾಲಿಗೆ ಉಪಯೋಗಿಸಲು ಬೇಕಾಗಿರುವ X-Ray Films & Contrast ಗಳನ್ನು 01 ವರ್ಷದ ಅವಧಿಗೆ ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No. GIMS/KLB/Tender/Radiology/CR/198/2024-25, Date:01.04.2025. IND. No: DME/2024-25/IND1339, 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು E-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **16–04–2025 ಸಾಯಂಕಾಲ 4:30ಕ್ಕೆ,** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **09–04–2025 ಸಾಯಂಕಾಲ 5.00 ಗಂಟೆಯ ವರೆಗೆ,** 4) ಟೆಂಡರ ಪೂರ್ವಭಾವಿ ಸಭೆ : ದಿನಾಂಕ: **11–04–2025 ಮಧ್ಯಾಹ್ನ 12:30ಕ್ಕೆ,** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **17–04–2025 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : **19–04–2025 11:30ಕ್ಕೆ,** 7) ಟೆಂಡರನ ಮೊತ್ತ: **ರೂ. 1,30,35,000/-,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ. 1,98,000/–, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472–260252, Office Email: directorgimsgulbarga@gmail.com Cell:+91 9482093568, Tender Section Email: gimstenderklb22@gmail.com Cell:+91 9972688602

ಸಹಿ/– ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/04/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ — ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–1/ಟೆಂಡರ–26/2024–25/5429 ದಿನಾಂಕ: 29.03.2025

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ–1 & 2) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 08–04–2025 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 09–04–2025 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 11–04–2025 17.00 ಗಂಟೆವರೆಗೆ

ಕಾಮಗಾರಿಯ ಹೆಸರು: **H/Ac 3054- MDR Road Maintainence During 2024-25:** ವರ್ಕ ಇಂಡೆಂಟ್ **(1) PWD/2024-25/RD/WORK_INDENT20739 (2) PWD/2024-25/RD/WORK_INDENT20734 (3) PWD/2024-25/RD/WORK_INDENT20876 (4) PWD/2024-25/RD/WORK_INDENT20909 (5) PWD/2024-25/RD/WORK_INDENT20736 (6) PWD/2024-25/RD/WORK_INDENT20907 (7) PWD/2024-25/RD/WORK_INDENT20901 (8) PWD/2024-25/RD/WORK_INDENT20902 (9) PWD/2024-25/RD/WORK_INDENT20872 (10) PWD/2024-25/RD/WORK_INDENT21086 (11) PWD/2024-25/RD/WORK_INDENT21092 (12) PWD/2024-25/RD/WORK_INDENT20378**

H/Ac 3054- SH Road Maintainence During 2024-25 ವರ್ಕ ಇಂಡೆಂಟ್ **(1) PWD/2024-25/RD/WORK_INDENT20729 (2) PWD/2024-25/RD/WORK_INDENT20871**

(ಕೆಡಬ್ಲು–1 & 2) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ **e-proc** ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ **https://kppp.karnataka.gov.in** ನೋಡಬಹುದು. ಹೆಚ್ಚಿನ ಮಾಹಿತಿಗಾಗಿ **help desk Bangalore (Phone No. 918025501216 & 918025501227)** ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/ADK/KSMCA/05/25-26 dt: 01.04.2025

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್
ಇತರೆ ರಾಜ್ಯಗಳಿಗೆ ಹೋಲಿಸಿದರೆ ಬೆಲೆ ಏರಿಕೆಯ ನಂತರವೂ ನಮ್ಮ ರಾಜ್ಯದಲ್ಲಿ ನಂದಿನಿ ಹಾಲು, ಮೊಸರಿನ ಬೆಲೆ ಕಡಿಮೆ ಇದೆ. ಹೆಚ್ಚಳವಾದ 4 ರೂಪಾಯಿಯನ್ನು ನೇರವಾಗಿ ರೈತರಿಗೇ ನೀಡುತ್ತೇವೆ. BJP4Karnataka ಪ್ರತಿಭಟನೆ ಮಾಡಬೇಕಿರುವುದು ಹಾಲು, ಮೊಸರಿನ ಮೇಲೆ, ಜಾನುವಾರುಗಳ ಮೇವಿನ ಮೇಲೆ ಜಿಎಸ್‌ಟಿ ಹೇರಿರುವ ಕೇಂದ್ರದ ಮೋದಿ ಸರಕಾರದ ವಿರುದ್ಧ.

ಮಾಲ್ಗುಡಿ ಕನ್ನಡಿಗ
ಫ್ಯಾಕ್ಟ್ ಚೆಕ್ ಮಾಡಿಸಕ್ಕೆ ರೆಡಿ ಪ್ರಜೆಗಳು. ರೈತರಿಗೆ ತಲುಪಲಿ. BJP4Karnataka ಕೂತ್ಕೊಂಡು ಕಡ್ಲೆ ಪುರಿ ತಿನ್ನ ಬೇಡಿ. ಪ್ರತಿ ಒಂದು ಕೆಎಂಎಫ್ ಗೆ ಹೀಗೆ, ಡೈರಿ ಸೊಸೈಟಿಗೆ, ರೈತರಿಗೆ ಕೇಳಿ... ವಿಡಿಯೊ ಮಾಡಿ. ಪೂರ ದುಡ್ಡು ಕೊಟ್ಟಿದ್ರೆ, ಹೊಗಳಿ. ಇಲ್ಲ ಉಗುಳಿ

ವಿಶ್ವವಾಣಿ ಕ್ಲಬ್ ಹೌಸ್
03.04.2025
ಸಂಜೆ: 06.55 ರಿಂದ 08.05 ರವರೆಗೆ

ಗುರುವಾರದ ಅತಿಥಿ
ಶ್ರೀ ಚಿಂತಾಮಣಿ ಜಿ ಜಿ
ವಿಷಯ
ಭಾರತೀಯ ಚಿತ್ರಕಲೆಯ ಅವಲೋಕನ
vishwavani.news

ರಾಜ್ಯದ ಹೆದ್ದಾರಿ ಯೋಜನೆಗಳಿಗೆ ಸಂಬಂಧಿಸಿದಂತೆ ಚರ್ಚೆ

ಗಡ್ಕರಿ ಭೇಟಿಯಾದ ಸಿಎಂ ಸಿದ್ದರಾಮಯ್ಯ

ಬೆಂಗಳೂರು: ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲ ದಿನವೇ, ಕೇಂದ್ರ ರಸ್ತೆ, ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿಯಾಗಿ ರಾಜ್ಯದ ಹೆದ್ದಾರಿ ಯೋಜನೆಗಳಿಗೆ ಸಂಬಂಧಿಸಿದಂತೆ ಚರ್ಚಿಸಿದರು. ಈಗಾಗಲೇ ನೀಡಿರುವ ಯೋಜನೆಗಳಿಗೆ ನೀಡಿರುವ ಸಹಕಾರದೊಂದಿಗೆ ಇನ್ನಷ್ಟು ಯೋಜನೆಗಳಿಗೆ ಅನುದಾನ ನೀಡುವಂತೆ ಮನವಿ ಮಾಡಿದ್ದಾರೆ.

ಸಂಸತ್ ಭವನದಲ್ಲಿ ಗಡ್ಕರಿ ಅವರನ್ನು ಭೇಟಿಯಾದ ಸಿದ್ದರಾಮಯ್ಯ ಅವರು, ರಾಜ್ಯದಲ್ಲಿ ಬಾಕಿ ಉಳಿದಿರುವ ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಚರ್ಚಿಸಿದರು. ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಪೂರಕವಾಗಿರುವ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡುವಂತೆ ಮನವಿ ಮಾಡಿದರು.

ಪ್ರಮುಖವಾಗಿ ರಾಷ್ಟ್ರೀಯ ಹೆದ್ದಾರಿ 275 ರಲ್ಲಿ ಮಣಿಪಾಲ್ ಆಸ್ಪತ್ರೆ ಜಂಕ್ಷನ್ (ಮೈಸೂರು ನಗರ)ದಲ್ಲಿ ಫ್ಲೈಓವರ್ ನಿರ್ಮಾಣ, 30.35 ಕಿ.ಮೀ. ಉದ್ದದ ಹುಬ್ಬಳ್ಳಿ ಧಾರವಾಡ ಷಟ್ಪಥ ಬೈಪಾಸ್ ನಿರ್ಮಾಣ, ರಾಷ್ಟ್ರೀಯ ಹೆದ್ದಾರಿ 369 ಇ(ಸಿಗಂದೂರು ಸೇತುವೆ)ರಲ್ಲಿ ಶರಾವತಿ ಹಿನ್ನೀರಿನ ಮೇಲೆ ಪ್ರಮುಖ ಸೇತುವೆ ನಿರ್ಮಾಣ ಮಾಡಬೇಕಿದೆ. ಇನ್ನು ರಾಷ್ಟ್ರೀಯ ಹೆದ್ದಾರಿ 167 ಹಗರಿ-ಜೆಡ್ಚೆಲಾರ್ ಸೆಕ್ಷನ್‌ನಲ್ಲಿ ಕೃಷ್ಣಾ ನದಿ ಮೇಲೆ 180.865 ಕಿ.ಮೀ.ನಲ್ಲಿ ಪ್ರಮುಖ ಸೇತುವೆ ನಿರ್ಮಾಣ ಸೇರಿದಂತೆ ಹಲವು ಯೋಜನೆಗಳಿಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಈ ವೇಳೆ ಸಂದರ್ಭದಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಹೊಸದಿಲ್ಲಿಯಲ್ಲಿನ ರಾಜ್ಯದ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ, ರಾಜ್ಯ ಸರಕಾರದ ಮುಖ್ಯಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಮುಖ್ಯ ಮಂತ್ರಿಯ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ರಾಜಕೀಯ ಕಾರ್ಯದರ್ಶಿ ಗೋವಿಂದ ರಾಜು ಹಾಜರಿದ್ದರು.

ನಿತಿನ್ ಗಡ್ಕರಿ ಅವರಿಗೆ ಸಿದ್ದರಾಮಯ್ಯ ಮನವಿ ಸಲ್ಲಿಸಿದ್ದರು. ಹೊಸದಿಲ್ಲಿಯಲ್ಲಿನ ರಾಜ್ಯದ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಇದ್ದರು.

ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಆದ್ಯತೆ

ರಾಜ್ಯ ಸರಕಾರವು ರಾಜ್ಯದ ರಾಷ್ಟ್ರೀಯ ಹೆದ್ದಾರಿ ಸಂಪರ್ಕ ಜಾಲದ ಅಭಿವೃದ್ಧಿಯನ್ನು ಬೆಂಬಲಿಸುತ್ತಿದ್ದು, ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗಳನ್ನು ಚುರುಕುಗೊಳಿಸಲು ಕಂದಾಯ ಇಲಾಖೆಯೊಂದಿಗೆ ಹಾಗೂ ಅರಣ್ಯ ತೀರುವಳಿ ಪ್ರಕ್ರಿಯೆ ತ್ವರಿತಗೊಳಿಸಲು ಅರಣ್ಯ ಇಲಾಖೆಯೊಂದಿಗೆ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸುತ್ತಿದೆ. ನೀರು ಹಾಗೂ ವಿದ್ಯುತ್ ಸಂಪರ್ಕ ಸೇರಿದಂತೆ ಯೂಟಿಲಿಟಿ ಶಿಫ್ಟಿಂಗ್ ಕಾರ್ಯವನ್ನು ಚುರುಕುಗೊಳಿಸಲು ಸಂಬಂಧಪಟ್ಟ ಇಲಾಖೆಗೊಂದಿಗೆ ಸಭೆ ನಡೆಸುವ ಮೂಲಕ ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಆದ್ಯತೆ ನೀಡಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ವಿವರಿಸಿದರು.

ನ್ಯಾ. ಶಿವರಾಜ ವಿ. ಪಾಟೀಲ, ಕುಂ.ವೀರಭದ್ರಪ್ಪ ಎಂ.ವೆಂಕಟೇಶ್‌ಕುಮಾರ್ ಭಾಜನ

ಹಂಪಿ ವಿವಿಯಲ್ಲಿ ನಾಳೆ ನಾಡೋಜ ಗೌರವ ಪ್ರದಾನ



ಹೊಸಪೇಟೆ: 33ನೇ ಘಟಿಕೋತ್ಸವದಲ್ಲಿ ನಾಡೋಜ ಗೌರವ ಪದವಿಗೆ ಭಾಜನರಾದ ಮೂವರು ಮಹನೀಯರ ಹೆಸರುಗಳನ್ನು ಹಂಪಿ ವಿವಿ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಪ್ರಕಟಿಸಿದರು.

ಕನ್ನಡ ವಿಶ್ವವಿದ್ಯಾಲಯ ತನ್ನ 33ನೇ ಘಟಿಕೋತ್ಸವದ ಪ್ರಯುಕ್ತ ಮಂಟಪ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ್ಯಾ. ಶಿವರಾಜ ವಿ. ಪಾಟೀಲ, ಕುಂ.ವೀರಭದ್ರಪ್ಪ (ಕು.ವೀ) ಪ್ರಖ್ಯಾತ ಬರಹಗಾರರು ಮತ್ತು ಚಿಂತಕರು, ಪದ್ಮಶ್ರೀ ಎಂ.ವೆಂಕಟೇಶ್ ಕುಮಾರ್ ಪ್ರಖ್ಯಾತ ಹಿಂದೂಸ್ತಾನಿ ಗಾಯಕರು ಇವರಿಗೆ ಏ.4ರಂದು ರಾಜ್ಯಪಾಲರು ನಾಡೋಜ ಗೌರವ ಪದವಿ ಪ್ರದಾನ ಮಾಡುತ್ತಾರೆ ಎಂದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರು ಪಿಎಚ್.ಡಿ. ಪದವಿ ಪ್ರದಾನ ಮಾಡುತ್ತಾರೆ. ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳು ಹಾಗೂ ಬೆಂಗಳೂರಿನ ರಾಮಯ್ಯ ತಾಂತ್ರಿಕ ಸಂಸ್ಥೆ, ಮತ್ತಿಕೆರೆ ಇದರ ಮುಖ್ಯ ಸಂಶೋಧನಾ ಸಲಹೆಗಾರರಾದ ಪ್ರೊ.ರಾಜಾಸಾಬ್ ಎ.ಎಚ್. ಘಟಿಕೋತ್ಸವ ಭಾಷಣ ಮಾಡುತ್ತಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕುಲಸಚಿವ ಡಾ. ವಿಜಯ್ ಪೂಣಚ್ಚ ತಂಬಂಡ, ಡಾ.ಎ. ಶ್ರೀಧರ, ಡಾ.ಅಮರೇಶ ಯತಗಲ್, ಡಾ.ಎಫ್.ಟಿ. ಹಳ್ಳಿಕೇರಿ, ಡಾ.ಚಲುವರಾಜು, ಡಾ.ಶಿವಾನಂದ ಎಸ್. ವಿರಕ್ತಮಠ, ಡಾ.ಶೈಲಜ ಇಂ. ಹಿರೇಮಠ, ಡಾ.ಅಶೋಕುಮಾರ ರಂಜೇರೆ, ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಡಾ.ಎಸ್.ಆರ್. ಚನ್ನವೀರಪ್ಪ, ಡಾ.ಈ. ಯರ್ರಿಸ್ವಾಮಿ, ಡಾ.ಎಸ್.ವೈ. ಸೋಮಶೇಖರ, ಡಾ. ಎ. ವೆಂಕಟೇಶ, ಡಾ.ಡಿ. ಮೀನಾಕ್ಷಿ ಇತರರಿದ್ದರು.

138 ಕೋಟಿ ರು. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಅತ್ಯಾಧುನಿಕ 'ಕಾವೇರಿ' ಕಟ್ಟಡ

ಕೇಂದ್ರ, ರಾಜ್ಯ ಸೇರಿ ದೇಶ ಅಭಿವೃದ್ಧಿಪಡಿಸಬೇಕು

ದೆಹಲಿ: ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಸೇರಿ ದೇಶ ಮತ್ತು ರಾಜ್ಯಗಳನ್ನು ಅಭಿವೃದ್ಧಿಪಡಿಸಬೇಕೆಂಬುದನ್ನು ಸಂವಿಧಾನ ಸ್ಪಷ್ಟಪಡಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ದೆಹಲಿಯಲ್ಲಿ ನೂತನವಾಗಿ ನಿರ್ಮಿಸಿರುವ ಕರ್ನಾಟಕ ಭವನ-1ರ ಕಟ್ಟಡವನ್ನು ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಉಪಸ್ಥಿತಿಯಲ್ಲಿ ಲೋಕಾರ್ಪಣೆಗೊಳಿಸಿ ಮಾತನಾಡಿ, ಯಾವುದೇ ರಾಜ್ಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜನರಿಂದ ತೆರಿಗೆಯನ್ನು ವಸೂಲು ಮಾಡುತ್ತವೆ. ಐದು ವರ್ಷಕ್ಕೊಮ್ಮೆ ರಚನೆಯಾಗುವ ಹಣಕಾಸಿನ ಆಯೋಗದ ಶಿಫಾರಸಿನಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ತೆರಿಗೆಯ ಪಾಲು ನಿಗದಿಯಾಗುತ್ತದೆ. ಅನುದಾನದಲ್ಲಿ ಕೇಂದ್ರ ಸರಕಾರದ ಅನೇಕ ಕಾರ್ಯಕ್ರಮಗಳೂ ಸೇರಿದ್ದು, ಕೇಂದ್ರ ಪುರಸ್ಕೃತ ಯೋಜನೆಗಳೂ ಇರುತ್ತವೆ. ಇದರಲ್ಲಿ ಕೇಂದ್ರ, ರಾಜ್ಯ ಸರಕಾರಗಳ ಪಾಲು ಇರುತ್ತದೆ ಎಂದರು.

ಭಾರತದ ಒಕ್ಕೂಟದ ವ್ಯವಸ್ಥೆಯಲ್ಲಿ , ಬಾಬಾ ಸಾಹೇಬ್ ಅಂಬೇಡ್ಕರ್ ರವರು ನೀಡಿದ ಸಂವಿಧಾನದ ಅನ್ವಯ ಸೆಂಟ್ರಲ್ ಲಿಸ್ಟ್, ಸ್ಟೇಟ್ ಲಿಸ್ಟ್ ಹಾಗೂ ಕನ್ಕರೆಂಟ್ ಲಿಸ್ಟ್ ಎಂದು ಅಧಿಕಾರ ಹಂಚಿಕೆಯಾಗಿದೆ.

ರಾಜಧಾನಿ ದೆಹಲಿಯ ಚಾಣಕ್ಯಪುರಿಯ ಕೌಟಿಲ್ಯ ಮಾರ್ಗದಲ್ಲಿ ನೂತನವಾಗಿ 138 ಕೋಟಿ ರು. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಅತ್ಯಾಧುನಿಕ ಕರ್ನಾಟಕ ಭವನ 'ಕಾವೇರಿ' ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉದ್ಘಾಟನೆ ನೆರವೇರಿಸಿದರು.

ಇದರನ್ವಯ ಕೇಂದ್ರ , ರಾಜ್ಯಗಳು ಕಾನೂನುಗಳನ್ನು ರಚಿಸಿದರೆ, ಕನ್ಕರೆಂಟ್ ಲಿಸ್ಟ್ ನಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಒಟ್ಟಾಗಿ ಕಾನೂನನ್ನು ರಚಿಸುತ್ತವೆ. ಕೇಂದ್ರ ಸರಕಾರದ ಕೇಂದ್ರಸ್ಥಾನವಾದ ದೆಹಲಿಯಲ್ಲಿ ಪ್ರತಿಯೊಂದು ರಾಜ್ಯಗಳ ಭವನಗಳು ಇರುತ್ತವೆ. ನವದೆಹಲಿಯಲ್ಲಿ ಒಟ್ಟು ಮೂರು ಕರ್ನಾಟಕ ಭವನಗಳಿದ್ದು, ಇಲ್ಲಿಗೆ ಆಗಮಿಸುವ ಮಂತ್ರಿಗಳು, ಸಂಸದರು, ಹಾಲಿ ಹಾಗೂ ಮಾಜಿ ಶಾಸಕರು, ಅಧಿಕಾರಿಗಳಿಗೆ ಅನುಕೂಲ ಕಲ್ಪಿಸಲಾಗಿದೆ ಎಂದರು.

ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ, ಡಾ. ಮಹದೇವಪ್ಪ, ರಾಜಣ್ಣ, ಕೆ.ಎಚ್. ಮುನಿಯಪ್ಪ ಮತ್ತಿತರರು ಹಾಜರಿದ್ದರು.

ರಾಯಭಾರಿ ಕೆಲಸ ಮಾಡಲಿ

ಕರ್ನಾಟಕ ಭವನ ಕೇಂದ್ರ ಹಾಗೂ ರಾಜ್ಯ ಸರಕಾರಗಳ ರಾಯಭಾರಿ ಕಚೇರಿಯಾಗಿ ಕೆಲಸ ಮಾಡಲಿ ಎಂದು ಮುಖ್ಯಮಂತ್ರಿಗಳು ಹಾರೈಸಿದರು. ರಾಜ್ಯ ಹಾಗೂ ಕೇಂದ್ರ ಸರಕಾರಗಳ ಪರಸ್ಪರ ಅಭಿವೃದ್ಧಿಯಾದಾಗ ದೇಶ ಅಭಿವೃದ್ಧಿಯಾಗುತ್ತದೆ. ಈ ದಿಕ್ಕಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟುಗೂಡಿ ಕೆಲಸ ಮಾಡಲು ಪ್ರಯತ್ನ ಮಾಡಬೇಕು.ನಾವು ಒಕ್ಕೂಟದ ವ್ಯವಸ್ಥೆಯಲ್ಲಿರುವುದರಿಂದ ಒಟ್ಟಾಗಿ ಅಭಿವೃದ್ಧಿಯಾಗುವುದು ಅಗತ್ಯ. ಈ ದಿಕ್ಕಿನತ್ತ ಸಚಿವರು, ಅಧಿಕಾರಿಗಳು ಪ್ರಯತ್ನ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ

ಯುಕೆಪಿ: ಗೆಜೆಟ್ ಅಧಿಸೂಚನೆ ಶೀಘ್ರ

ಬಾಗಲಕೋಟೆ: ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಗೆಜೆಟ್ ಅಧಿಸೂಚನೆ ಹೊರಡಿಸಲು ಸಿದ್ಧತೆಗಳನ್ನು ಸರಕಾರ ಮಾಡಿಕೊಳ್ಳಲಾಗುತ್ತಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ ತಿಳಿಸಿದರು.

ಜಮಖಂಡಿ ನಗರದಲ್ಲಿ ದಿ ಜಮಖಂಡಿ ಕೋ ಆಪರೇಟಿವ್ ಬ್ಯಾಂಕಿನ ನೂತನ ಕಚೇರಿ ಉದ್ಘಾಟಿಸಿ ಅವರು ಮಾತನಾಡಿ, 524.256 ಮೀಟರ್ ಎತ್ತರದ ವರೆಗೆ ಏಕಕಾಲಕ್ಕೆ ಭೂಸ್ವಾಧೀನ ಕೈಗೊಳ್ಳಲು ಈ ಭಾಗದ ಜನಪ್ರತಿನಿಧಿಗಳ ಆಗ್ರಹವಿದೆ. ಯುಕೆಪಿ ಮೂರನೇ ಹಂತದ ನ್ಯಾಯಾಧೀಕರಣದ ಆದೇಶಕ್ಕೆ ಸಂಬಂಧಿಸಿದಂತೆ ಗೆಜೆಟ್ ಅಧಿಸೂಚನೆ ಹೊರಡಿಸುವುದಕ್ಕೂ ಸಿದ್ಧತೆಗಳು ನಡೆದಿವೆ ಎಂದು ತಿಳಿಸಿದರು.

ಭೂಸ್ವಾಧೀನ ವಿಷಯದಲ್ಲಿ ಕೆಲವು ಕಡೆಗಳಲ್ಲಿ ವಕೀಲರು ಶಾಮೀಲಾಗಿ ಹೆಚ್ಚಿನ ಮೊತ್ತ ನೀಡುವಂತೆ ಆದೇಶಗಳಾಗಿರುವುದು ಕಂಡು ಬಂದಿದೆ. ನಾವು ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಕನ್ಸೆಂಟ್ ಅವಾರ್ಡ್ ಘೋಷಿಸುತ್ತಿದ್ದೇವೆ. ಒಪ್ಪಿತ ದರದಂತೆ ಭೂಸ್ವಾಧೀನ ಪರಿಹಾರ ನೀಡಲಾಗುತ್ತದೆ ಎಂದರು.

ಸಂಪುಟ ಪುನಾರಚನೆ ಸಿಎಂಗೆ ಬಿಟ್ಟ ವಿಚಾರ

ಸಂಪುಟ ಪುನಾರಚನೆ ಮುಖ್ಯಮಂತ್ರಿಗೆ ಬಿಟ್ಟ ವಿಚಾರ. ಅವರು ಏನು ನಿರ್ಧಾರ ಮಾಡುತ್ತಾರೋ ಅದು ಆಗುತ್ತದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ ತಿಳಿಸಿದರು. ಸುದ್ದಿಗಾರರೊಂದಿಗೆ ಅವರು ಮಾತನಾಡಿ,ದೆಹಲಿಯಲ್ಲಿ ಕರ್ನಾಟಕ ಭವನದ ನೂತನ ಕಟ್ಟಡದ ಉದ್ಘಾಟನೆ ಇದೆ. ಅದಕ್ಕಾಗಿ ದೆಹಲಿಗೆ ಹೊರಟಿದ್ದೇನೆ. ಕೇಂದ್ರ ಸಚಿವ ರಾಜನಾಥ ಸಿಂಗ್ ಅವರನ್ನು ಸೇರಿ ಬೇರೆ ಬೇರೆ ಇಲಾಖೆಯವರನ್ನು ಕರೆದಿದ್ದೇವೆ. ಜತೆಗೆ ಎಂಎಲ್‌ಸಿ ಸೇರಿದಂತೆ ಬೇರೆ ಬೇರೆ ಕೆಲಸಗಳ ಕಾರಣದಿಂದ ನಾನು ದೆಹಲಿಗೆ ಹೊರಟಿದ್ದೇನೆ ಎಂದು ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಮಗು ರಕ್ಷಿಸಲು ಹೋಗಿ 3 ಸಾವು

ಚಿಕ್ಕಬಳ್ಳಾಪುರ: ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ಪ್ರವಾಸಕ್ಕೆಂದು ತೆರಳಿದ್ದ ಮೂವರು ನೀರುಪಾಲಾಗಿರುವ ಘಟನೆ ಚಿಕ್ಕಬಳ್ಳಾಪುರ ತಾಲೂಕಿನ ಶ್ರೀನಿವಾಸ ಸಾಗರ ಜಲಾಶಯದಲ್ಲಿ ನಡೆದಿದೆ. ಮೃತರನ್ನು ಚಿಕ್ಕಬಳ್ಳಾಪುರ ನಿವಾಸಿಗಳಾದ ಫರೀನಾ ಬೇಗಂ (35), ಬಶೀರ್ (35) ಮತ್ತು ಬೆಂಗಳೂರಿನ ಮುನಿರೆಡ್ಡಿಪಾಳ್ಯ ನಿವಾಸಿ ಇಮ್ರಾನ್ (45) ಎಂದು ಗುರುತಿಸಲಾಗಿದೆ. ಫರೀನಾ ಬೇಗಂ ಮತ್ತು ಸಂಬಂಧಿಕರು ಮೊದಲಿಗೆ ನಂದಿಬೆಟ್ಟಕ್ಕೆ ತೆರಳಲು ಮುಂದಾಗಿದ್ದರು. ಆದರೆ ನಂದಿಬೆಟ್ಟ ಬಂದ್ ಆಗಿದ್ದರಿಂದ ಜಲಾಶಯಕ್ಕೆ ಭೇಟಿ ನೀಡಿದ್ದರು. ಜಲಾಶಯದ ಬಂಡೆಯ ಮೇಲೆ ಕುಳಿತು ಊಟ ಮಾಡುತ್ತಿದ್ದ ವೇಳೆ ಮಗುವೊಂದು ಜಾರಿ ನೀರಿಗೆ ಬಿದ್ದಿದ್ದೆ. ಮಗುವನ್ನು ರಕ್ಷಿಸಲು ಹೋಗಿ ಮೂವರು ಮೃತಪಟ್ಟಿದ್ದಾರೆ. ಅದೃಷ್ಟವಶಾತ್ ಮಗುವನ್ನು ರಕ್ಷಿಸಲಾಗಿದ್ದು ನೀರಿನಲ್ಲಿ ಮುಳುಗಿದ್ದ ಮತ್ತೋರ್ವನ ಸ್ಥಿತಿ ಗಂಭೀರವಾಗಿದೆ. ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಕುಟುಂಬಸ್ಥರನ್ನು ಕಳೆದುಕೊಂಡ ಸಂಬಂಧಿಗಳ ಆಕ್ರಂದನ ಮುಗಿಲು ಮುಟ್ಟಿದೆ.

ಯುವತಿಗೆ ಕಿರುಕುಳ: ಆತ್ಮಹತ್ಯೆಗೆ ಯತ್ನ

ಹುಬ್ಬಳ್ಳಿ: ಪ್ರೀತಿ ನಿರಾಕರಿಸಿದ ಹಿನ್ನೆಲೆಯಲ್ಲಿ ಯುವಕನೋರ್ವ ಯುವತಿಗೆ ಕಿರುಕುಳ ನೀಡಿದ್ದು, ಮನನೊಂದ ಯುವತಿ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ನಗರದಲ್ಲಿ ನಡೆದಿದೆ. ಕುಂದಗೋಳ ಪಟ್ಟಣದ ಸಿರಾಜ್ ಎಂಬಾತ ಕಿರುಕುಳ ನೀಡಿದ್ದಾನೆ. ಇಲ್ಲಿನ ವಿದ್ಯಾನಗರದ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿರುವ ಯುವತಿಗೆ ಸಿರಾಜ್ ಪ್ರೀತಿ ಹೆಸರಿನಲ್ಲಿ ಕಿರುಕುಳ ನೀಡಿದ್ದಾನೆ ಎನ್ನಲಾಗಿದೆ. ಅಲ್ಲದೇ ಆಕೆಯ ಫೋಟೊ ಇಟ್ಟುಕೊಂಡು ಬ್ಲ್ಯಾಕ್ ಮೇಲ್ ಮಾಡಿರುವ ಆರೋಪ ಕೇಳಿ ಬಂದಿದೆ. ಯುವತಿ ಪ್ರೀತಿ ನಿರಾಕರಣೆ ಮಾಡಿದ್ದಕ್ಕೆ ರಂಜಾನ್ ಹಬ್ಬದಂದು ನಗರದಲ್ಲಿ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದಾನೆ ಎಂದು ತಿಳಿದು ಬಂದಿದೆ. ಸಿರಾಜ್ ಕಿರುಕುಳಕ್ಕೆ ಬೇಸತ್ತು ಯುವತಿ ಆತ್ಮಹತ್ಯೆ ಯತ್ನ ಮಾಡಿದ್ದು, ಸದ್ಯ ನಗರದ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ತನಿಖೆ ಮುಂದುವರಿದಿದೆ.

ರಜೆ ಕೊಡದ್ದಕ್ಕೆ ಚಾಲಕ ಆತ್ಮಹತ್ಯೆ

ಬೆಳಗಾವಿ: ಬಸ್ ಚಾಲಕನೊಬ್ಬ ಬಸ್ಸಿನಲ್ಲಿಯೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ನಗರದ ಎರಡನೇ ಡಿಪೊದಲ್ಲಿ ಬುಧವಾರ ನಡೆದಿದೆ. ಇಲ್ಲಿನ ಹಳೆ ಗಾಂಧಿನಗರದ ನಿವಾಸಿ ಬಾಲಚಂದ್ರ ಶಿವಪ್ಪ ಹುಕ್ಕೋಜಿ (47) ಸಾವಿಗೆ ಶರಣಾದವರು. ಶಹಾಪುರ ನಾಕಾದಿಂದ ವಡಗಾವಿಗೆ ಸಂಚರಿಸುವ ಬಸ್ಸಿನಲ್ಲಿ ಅವರು ಚಾಲಕರಾಗಿದ್ದರು. ಅದೇ ಬಸ್ಸಿನಲ್ಲಿ ಬುಧವಾರ ನಸುಕಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮನೆಯಲ್ಲಿ ಬಾಲಚಂದ್ರ ಅವರ ಅಕ್ಕನ ಮಗಳ ಮದುವೆ ನಿಶ್ಚಯವಾಗಿತ್ತು. ಮದುವೆಗೆ ಕೆಲ ದಿನ ರಜೆ ಕೊಡುವಂತೆ ಡಿಪೊ ಮ್ಯಾನೇಜರ ಬಳಿ ಅರ್ಜಿ ಸಲ್ಲಿಸಿದ್ದರು. ಆದರೆ ಅವರು ರಜೆ ಕೊಡದ ಕಾರಣ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಟುಂಬದವರು ದೂರಿದ್ದಾರೆ. ಎರಡು ವಾರಗಳ ಹಿಂದಷ್ಟೇ ಹಿರಿಯ ಅಧಿಕಾರಿಗಳ ಕಿರುಕುಳಕ್ಕೆ ಬೇಸತ್ತು ಮೆಕ್ಯಾನಿಕ್ ಕೂಡ ಬಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ವಕ್ಫ್: ಪ್ರತಿಪಕ್ಷ ವಾದದಲ್ಲಿ ಯಾವ ಸಮರ್ಥನೆಯೂ ಇಲ್ಲ

← ಮೊದಲಪುಟದಿಂದ

ಒಟ್ಟಿನಲ್ಲಿ ಈ ವಕ್ಫ್ ಆಸ್ತಿಯ ಸಮರ್ಥ ನಿರ್ವಹಣೆಯ ಉದ್ದೇಶ ಮಾತ್ರ ವಕ್ಫ್ ಕಾನೂನಿಗೆ ಸಂಬಂಧಪಡುತ್ತದೆ. ಹಾಗಿದ್ದಲ್ಲಿ ವಕ್ಫ್ ಆಸ್ತಿಯ ನಿರ್ವಹಣೆಯಲ್ಲಿ ಧಾರ್ಮಿಕ ಆಚರಣೆಯ ವಿಷಯ ಎಲ್ಲಿ ಬಂತು? ಧಾರ್ಮಿಕ ಆಚರಣೆಯ ವಿಷಯ ವಕ್ಫ್ ತಿದ್ದುಪಡಿ ಕಾನೂನಿನ ಒಳಗೆ ಬರದಿದ್ದಲ್ಲಿ ಸಂವಿಧಾನ ವಿರೋಧಿ ಹೇಗಾಗುತ್ತದೆ? ಎನ್ನುವ ಪ್ರಶ್ನೆಗೆ ಪ್ರತಿಪಕ್ಷಗಳು ಲೋಕಸಭೆಯಲ್ಲಿ ಮಂಡಿಸಿರುವ ವಾದದಲ್ಲಿ ಯಾವ ರೀತಿಯ ಸಮರ್ಥನೆಯೂ ಕಾಣುವುದಿಲ್ಲ.

ಇವೆಲ್ಲ ಅಂಶಗಳನ್ನು ಪರಿಶೀಲಿಸಿದಾಗ ಪ್ರತಿಪಕ್ಷಗಳು ಕೇವಲ ರಾಜಕೀಯ ಕಾರಣಕ್ಕೋಸ್ಕರವೇ ವಿರೋಧ ಮಾಡುತ್ತಿರುವಂತೆ ಕಾಣುತ್ತದೆ. ಈ ತಿದ್ದುಪಡಿ ಕಾನೂನಿನಲ್ಲಿ ಸಮರ್ಥನೆ ಮಾಡಬಹುದಾದ ಒಂದು ವಿಷಯವೂ ಇಲ್ಲವೇ? ಎಲ್ಲ ಅಂಶಗಳಿಗೂ ವಿರೋಧವೇ ಕಾಣುತ್ತದೆ. ಕೆಲವು ಅಂಶಗಳನ್ನು ಗಮನಿಸಿದಾಗ ವಿರೋಧ ಮಾಡುವ ಕಾರಣ ಹೊಳೆಯುವುದಿಲ್ಲ. ಉದಾಹರಣೆಗೆ ವಕ್ಫ್ ಟ್ರಿಬ್ಯುನಲ್‌ನ ಆದೇಶದ ಮೇಲೆ ಹಿಂದೆ ಅಪೀಲ್ ಹೋಗುವ ಅವಕಾಶ ಇರಲಿಲ್ಲ. ಈಗ ಆ ಅವಕಾಶ ಮಾಡಿ ಕೊಡಲಾಗಿದೆ. ವಕ್ಫ್‌ಬೋರ್ಡ್‌ನಲ್ಲಿ ಮುಸ್ಲಿಂ ಸಮುದಾಯದ ಭಿನ್ನ ಭಿನ್ನ ವರ್ಗಗಳಿಗೆ ಅವಕಾಶ ಕಲ್ಪಿಸಲಾಗಿದೆ. ಮುಸ್ಲಿಂ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. ಈ ಎಲ್ಲ ಅಂಶಗಳನ್ನು ವಿರೋಧಿಸುವ ಅವಶ್ಯಕತೆ ಏನಿದೆ?

ಈ ಕಾನೂನಿನಲ್ಲಿ ಸಂವಿಧಾನ ವಿರೋಧಿ ಅಂಶಗಳು ಕಂಡುಬರುತ್ತವೆಯೇ ಎಂದು ಗಮನಿಸಿದರೆ ಕಾಣುವ ಒಂದು ಅಂಶವೆಂದರೆ ಇಸ್ಲಾಂ ಸಮುದಾಯಕ್ಕೆ ಸೇರಿದ ವ್ಯಕ್ತಿ ವಕ್ಫ್ ರಚನೆ ಮಾಡಬೇಕಾದರೆ ಆತ ಐದು ವರ್ಷ ಇಸ್ಲಾಂ ಧರ್ಮವನ್ನು ಅನುಸರಿಸಬೇಕಾಗಿರಲೇಬೇಕು ಎನ್ನುವ ಅನುಚ್ಛೇದ. ಇದು ಮುಂದಿನ ದಿನಗಳಲ್ಲಿ ನ್ಯಾಯಾಲಯಗಳಲ್ಲಿ ಪ್ರಶ್ನೆಗೊಳ್ಳುವ ಸಾಧ್ಯತೆ ಇದೆ. ಏಕೆಂದರೆ ಒಬ್ಬ ಮುಸ್ಲಿಂ ಸಮುದಾಯಕ್ಕೆ ಸೇರಿದ ವ್ಯಕ್ತಿ ಐದು ವರ್ಷ ವಕ್ಫ್ ಆಸ್ತಿ ಘೋಷಣೆ ಮಾಡುವ ಹಾಗಿಲ್ಲ ಎಂದಾಗುತ್ತದೆ. ಈ ಅನುಚ್ಛೇದವನ್ನು ಧರ್ಮದ ವಿಷಯಕ್ಕೆ ಸಂಬಂಧಪಟ್ಟಂತೆ ಸರಕಾರದ ನಿಯಂತ್ರಣ ಎನ್ನುವ ವಾದ ಮಂಡಿಸುವ ಸಾಧ್ಯತೆ ಇದೆ. ಇದಲ್ಲದೆ ತಿದ್ದುಪಡಿ ಕಾನೂನಿನ ಬೇರೆ ವಿಷಯಗಳಲ್ಲಿ ಪ್ರತಿಪಕ್ಷದ ಸದಸ್ಯರು ಲೋಕಸಭೆಯಲ್ಲಿ ಮಂಡಿಸುತ್ತಿರುವ ವಾದದಲ್ಲಿ ಹೆಚ್ಚಿನ ಸತ್ವ ಕಂಡುಬರುವುದಿಲ್ಲ. ಕೆಲವು ರಾಜಕೀಯ ಪಕ್ಷಗಳು ಮತಬ್ಯಾಂಕಿನ ರಕ್ಷಣೆಗೋಸ್ಕರ ತೆಗೆದುಕೊಳ್ಳಬೇಕಾದ ನಿಲುವಿನಂತೆ ಕಂಡುಬರುತ್ತದೆ. ಈ ಕಾನೂನಿನ ಸಮಗ್ರ ವಿಶ್ಲೇಷಣೆಯನ್ನು ಮಾಡಿದಾಗ ಇದು ಕೇವಲ ಒಂದು ಸಮುದಾಯದ ಆಸ್ತಿಯ ನಿರ್ವಹಣೆಗೆ ಸಂಬಂಧಪಟ್ಟ ಕಾನೂನು ಮಾತ್ರ. ಈ ಕಾನೂನಿಗಿಂತ ಇನ್ನೂ ಹೆಚ್ಚು ಸರಕಾರದ ನಿಯಂತ್ರಣ ಇರುವುದು ಹಿಂದೂ ಸಮುದಾಯಗಳಿಗೆ ಸಂಬಂಧಪಟ್ಟ ಧಾರ್ಮಿಕ ಸಂಸ್ಥೆಗಳಲ್ಲಿ. ಜಗನ್ನಾಥ ಪುರಿ ದೇವಸ್ಥಾನದಲ್ಲಿ ಪ್ರಸಾದವನ್ನು ನಿರ್ವಹಣೆ ಮಾಡುವ ವಿಷಯವು ಸಹ ಸರಕಾರ ನಿಯಂತ್ರಣ ಮಾಡಬಹುದು ಎಂದು ತೀರ್ಪು ನೀಡಿದೆ. ಸಂವಿಧಾನ ರಚನೆಯ ಸಂದರ್ಭದಲ್ಲಿ ಬಹುಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ಮಾಡದ ರೀತಿಯಲ್ಲಿ ರಕ್ಷಣೆ ಕೊಡುವ ಅವಶ್ಯಕತೆ ಕಂಡುಬಂದ ಕಾರಣ ಈ ರೀತಿಯಾದ ಅಂಶಗಳು ಸಂವಿಧಾನದಲ್ಲಿ ಸೇರಿಸಲಾಗಿದೆ. ಆದರೆ ಈಗಿನ ದಿನಗಳಲ್ಲಿ ಬಹುಸಂಖ್ಯಾತರಿಗೆ ಇರದ ಸವಲತ್ತುಗಳನ್ನು ಅಲ್ಪಸಂಖ್ಯಾತರಿಗೆ ಒದಗಿಸಲಾಗಿದೆ. ಅಲ್ಪಸಂಖ್ಯಾತರು ಬಹುಸಂಖ್ಯಾತರ ಮೇಲೆ ಸವಾರಿ ಮಾಡುವ ಸಂದರ್ಭದಲ್ಲಿ ಬಹುಸಂಖ್ಯಾತರ ಪರಿಹಾರ ಮಾರ್ಗವೇನು ಎಂಬುದು ಪ್ರಶ್ನಾರ್ಥಕ.

ವಕ್ಫ್ ತಿದ್ದುಪಡಿ ಕಾನೂನಿನಲ್ಲಿ ಕಂಡುಬರುವ ಕೆಲವು ಪ್ರಮುಖ ಅಂಶಗಳು ಹೀಗಿವೆ

- **ಯಾವುದೇ ಆಸ್ತಿ ವಕ್ಫ್ ಆಸ್ತಿಯಾಗಿ ಮಾಡುವ ವ್ಯಕ್ತಿಯು ಇಸ್ಲಾಂ ಧರ್ಮಕ್ಕೆ ಸೇರಿದವನಾಗಿರಬೇಕು ಮತ್ತು 5 ವರ್ಷಕ್ಕೆ ಕಡಿಮೆ ಇಲ್ಲದೆ ಆತ ಇಸ್ಲಾಂ ಧರ್ಮವನ್ನು ಅನುಸರಿಸುವಂತಹ ಆಗಿರಬೇಕು.**
- **ವಕ್ಫ್ ಆಸ್ತಿಗಳ ಮಾಲೀಕತ್ವವನ್ನು ನಿರ್ಧರಿಸುವ ಅಧಿಕಾರ ಜಿಲ್ಲಾಧಿಕಾರಿಗಳ ಹುದ್ದೆಗಿಂತ ಮೇಲಿರುವ ಒಬ್ಬ ಅಧಿಕಾರಿಯನ್ನು ನಿಯುಕ್ತಿಗೊಂಡ ಅಧಿಕಾರಿ ಎಂದು ಘೋಷಿಸಬಹುದು.**
- **ಯಾವುದೇ ಆಸ್ತಿಯನ್ನು ವಕ್ಫ್ ಆಸ್ತಿಯಾಗಿ ಮಾಡಬೇಕಾದರೆ ಆ ವ್ಯಕ್ತಿಗೆ ಆ ಆಸ್ತಿಯ ಮೇಲೆ ಮಾಲೀಕತ್ವ ಹೊಂದಿರಬೇಕು.**
- **ಸರಕಾರಿ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಘೋಷಣೆ ಮಾಡುವಂತಿಲ್ಲ. ಅಂತಹ ಸಂದರ್ಭದಲ್ಲಿ ಈ ವಿಷಯದ ತೀರ್ಮಾನ ಮಾಡುವ ಅಧಿಕಾರ ನಿಯುಕ್ತಿಗೊಂಡ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತದೆ.**
- **ವಕ್ಫ್ ಆಸ್ತಿಗಳ ಸರ್ವೇ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.**
- **ಕೇಂದ್ರ ಕೌನ್ಸಿಲ್‌ನಲ್ಲಿ ನಿವೃತ್ತಿ ಹೊಂದಿದ ಇಬ್ಬರು ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿಗಳನ್ನು ನೇಮಿಸುವ ಅವಕಾಶ ಇದೆ ಮತ್ತು ಪ್ರಖ್ಯಾತಿ ಹೊಂದಿದ ಒಬ್ಬ ವಕೀಲರನ್ನು ನೇಮಿಸುವ ಅವಕಾಶವಿದೆ.**
- **ವಕ್ಫ್ ಬೋರ್ಡ್‌ನಲ್ಲಿ ವ್ಯಾಪಾರಿ ಕ್ಷೇತ್ರ, ಸಾಮಾಜಿಕ ಕ್ಷೇತ್ರ, ಆರ್ಥಿಕ ಕ್ಷೇತ್ರ, ಕೃಷಿ ಕ್ಷೇತ್ರ ಇದರಲ್ಲಿ ಸಾಧನೆ ಮಾಡಿದ ಇಬ್ಬರು ವ್ಯಕ್ತಿಗಳನ್ನು ನೇಮಿಸುವ ಅವಕಾಶ ಇದೆ.**
- **ಮುಸ್ಲಿಂ ಅನುಯಾಯಿಗಳನ್ನು ವಕ್ಫ್ ಬೋರ್ಡ್‌ಗೆ ನೇಮಿಸುವಾಗ ಕನಿಷ್ಠಪಕ್ಷ ಇಬ್ಬರು ವ್ಯಕ್ತಿಗಳು ಮಹಿಳೆಯಾಗಿರಬೇಕಾದ ಷರತ್ತು ವಿಧಿಸಿದೆ.**
- **ಇದಲ್ಲದೆ ವಕ್ಫ್ ಬೋರ್ಡ್‌ನಲ್ಲಿ ಕನಿಷ್ಠಪಕ್ಷ ಒಬ್ಬಾತ ಶಿಯಾ, ಸುನ್ನಿ ಮತ್ತು ಇನ್ನಿತರ ಹಿಂದುಳಿದ ವರ್ಗಗಳಿಗೆ ಸೇರಿದ ಮುಸ್ಲಿಂ ಸಮುದಾಯದ ವ್ಯಕ್ತಿಗಳಿಗೆ ಅವಕಾಶ ನೀಡಬೇಕಾಗುತ್ತದೆ.**
- **ಈ ತಿದ್ದುಪಡಿ ಕಾನೂನು ಜಾರಿಗೆ ಬಂದ ನಂತರ ಯಾವುದೇ ವಕ್ಫ್ ರಚನೆಯಾಗಬೇಕಾದರೆ ಬರವಣಿಗೆಯಲ್ಲೇ ದಾಖಲಾತಿಯಿಂದ ರಚನೆಯಾಗುವ ಅವಶ್ಯಕತೆ ಇದೆ.**

ವ್ಯಕ್ತಿಯನ್ನ ಜೋಳಿಗೆಯಲ್ಲೇ ಆಸ್ಪತ್ರೆಗೆ ಕರೆದೊಯ್ದ ಜನ

ಚಾಮರಾಜನಗರ: ಸಮರ್ಪಕ ರಸ್ತೆ ಸೌಕರ್ಯ ಇಲ್ಲದ ಹಿನ್ನೆಲೆಯಲ್ಲಿ ವಾಹನಗಳು ಬರಲಾಗದೇ, ಅನಾರೋಗ್ಯ ಕಾಣಿಸಿಕೊಂಡ ವ್ಯಕ್ತಿಯೋರ್ವನನ್ನು 4 ಕಿಮೀ. ದೂರದವರೆಗೆ ಜೋಳಿಗೆಯ ಮುಖಾಂತರ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿರುವ ಘಟನೆ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತುಳಸಿಕೆರೆ ಗ್ರಾಮದಲ್ಲಿ ಜರುಗಿದೆ.

ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತುಳಸಿಕೆರೆ ಗ್ರಾಮದ ಪುಟ್ಟ ಎಂಬವರಿಗೆ ವಾಂತಿ ಭೇದಿ ಕಾಣಿಸಿಕೊಂಡು ಅಸ್ವಸ್ಥಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಸಂಬಂಧಿಕರ ನೆರವಿನಿಂದ ಡೋಲಿಯ ಮುಖಾಂತರ ಮಲೆ ಮಹದೇಶ್ವರ ಬೆಟ್ಟಕ್ಕೆ ಕರೆತಂದು ತಮಿಳುನಾಡಿನ ಕೊಳತ್ತೂರು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಗಿದೆ.

ಗ್ರಾಮಸ್ಥರಿಂದ ಪ್ರತಿಭಟನೆ: ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳಿಗೆ ರಸ್ತೆ ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸದ ಹಿನ್ನೆಲೆಯಲ್ಲಿ ಹಿಂದಿನಿಂದಲೂ ಹಲವು ಬಾರಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದಾರೆ. ಈಗಲೂ ಸಹ, ತುಳಸಿಕೆರೆ ಗ್ರಾಮಕ್ಕೆ ಮೂಲ ಸೌಲಭ್ಯಗಳಾದ ರಸ್ತೆ, ಸಾರಿಗೆ ವ್ಯವಸ್ಥೆ ಕಲ್ಪಿಸಿ ಕೊಡುವಂತೆ ಗ್ರಾಮಸ್ಥರು ಮಲೆ ಮಹದೇಶ್ವರ ಬೆಟ್ಟ ಹಾಗೂ ತುಳಸಿಕೆರೆ ಗ್ರಾಮದ ರಸ್ತೆ ಮಾರ್ಗ ಮಧ್ಯದಲ್ಲಿ ಪ್ರತಿಭಟನೆ ನಡೆಸಿದರು.

ನಮ್ಮದು ರೈತಸ್ನೇಹಿ-ಜನಹಿತ ಸರಕಾರ

ನಂದಿನಿ ಹಾಲಿನ ದರವನ್ನು ಸ್ವಲ್ಪಮಟ್ಟಿಗೆ ಪರಿಷ್ಕರಣೆ ಮಾಡುವ ಮೂಲಕ ಹೈನುಗಾರರ ನೆರವಿಗಾಗಿ ನಮ್ಮ ಕಾಂಗ್ರೆಸ್ ಸರಕಾರ ಮುಂದಡಿ ಇಟ್ಟಿದೆ. ಆದರೆ ಇದಕ್ಕೆ ಬೆಲೆ ಏರಿಕೆ ಎಂಬ ದೊಡ್ಡ ಹಣೆಪಟ್ಟಿಯನ್ನು ಕಟ್ಟಿ ಅಪಪ್ರಚಾರ ಮಾಡುತ್ತಿರುವುದು ನೋಡಿ ಅಚ್ಚರಿ ಎನಿಸಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ, ಪಂಚ ಗ್ಯಾರಂಟಿಗಳನ್ನು ಜಾರಿ ಮಾಡಿ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದೆ. ಜನರು ಗ್ಯಾರಂಟಿಗಳಿಂದ ಉಳಿಸಿದ ಹಣದಿಂದ ಫ್ರಿಡ್ಜ್, ವಾಹನ ಖರೀದಿ ಮಾಡುತ್ತಿದ್ದಾರೆ, ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುತ್ತಿದ್ದಾರೆ, ಸ್ವತಂತ್ರವಾಗಿ ಉದ್ಯಮಗಳನ್ನು ನಡೆಸುತ್ತಿದ್ದಾರೆ. ಕೇವಲ ಐದು ಗ್ಯಾರಂಟಿಗಳು ಮಾಡಿರುವ ಮ್ಯಾಜಿಕ್‌ನಿಂದಾಗಿ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಸಾಕಷ್ಟು ಅಭಿವೃದ್ಧಿಯಾಗಿದೆ. ಇವ್ಯಾವುದನ್ನೂ ಪರಿಗಣಿಸದೆ, ನಂದಿನಿ ಹಾಲಿನ ದರ ಪರಿಷ್ಕರಣೆ ಬಗ್ಗೆ ಏಕಾಏಕಿ ದಾಳಿ ನಡೆಸುತ್ತಿರುವುದು ಕೇವಲ ರಾಜಕೀಯ ಎಂಬುದರಲ್ಲಿ ಅನುಮಾನವೇ ಇಲ್ಲ. ಇಂತಹ ಅಪಪ್ರಚಾರಕ್ಕೆ ಜನರು ಕಿವಿಗೊಡಬಾರದು.

ಇಷ್ಟಕ್ಕೂ ಇದನ್ನು ಟೀಕೆ ಮಾಡುತ್ತಿರುವವರು ಯಾರು ಎಂದು ನೋಡಿದರೆ ದೊಡ್ಡ ಹಾಸ್ಯ ಎನಿಸಬಹುದು. ಕೋವಿಡ್ ಕಳೆದ ಬಳಿಕ, 2022-2023 ರ ಸಮಯದಲ್ಲಿ ಬೆಲೆಗಳು ಗಗನಕ್ಕೇರಿತ್ತು. ಎಣ್ಣೆ, ಪೆಟ್ರೋಲ್-ಡೀಸೆಲ್, ಅಡುಗೆ ಅನಿಲ, ಬೇಳೆಕಾಳು ಸೇರಿದಂತೆ ಎಲ್ಲ ಅಗತ್ಯ ಪದಾರ್ಥಗಳ ಬೆಲೆ ದಾಖಲೆಯ ಮಟ್ಟದಲ್ಲಿತ್ತು. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ಕೈಗೊಂಡ ಎಡವಟ್ಟು ಆರ್ಥಿಕ ನೀತಿಗಳಿಂದಾಗಿ ಬೆಲೆಗಳು ಅವೈಜ್ಞಾನಿಕ ರೀತಿಯಲ್ಲಿ ಮೇಲಕ್ಕೇರಿದ್ದವು. ಇದಕ್ಕೆ ತಡೆ ಹಾಕಲು ಕರ್ನಾಟಕದಲ್ಲಿ ಕಾಂಗ್ರೆಸ್‌ನಿಂದ ಗ್ಯಾರಂಟಿಗಳನ್ನು ಘೋಷಿಸಲಾಯಿತು. ಅದಕ್ಕೆ ಅಭೂತಪೂರ್ವ ಸ್ಪಂದನೆ ವ್ಯಕ್ತವಾಯಿತು. ಬಿಜೆಪಿಯ ಆರ್ಥಿಕ ಅವ್ಯವಸ್ಥೆಯಿಂದ ಬೇಸತ್ತ ಪ್ರತಿಯೊಬ್ಬರೂ ಕಾಂಗ್ರೆಸ್‌ನ ಕೈ ಹಿಡಿದರು. ಇದು ಮುಂದಿನ 2024 ರ ಲೋಕಸಭಾ ಚುನಾವಣೆಯಲ್ಲೂ ಪ್ರತಿಧ್ವನಿಸಿತು. 300 ಸೀಟುಗಳನ್ನು ದಾಟುತ್ತೇವೆ ಎಂದು ಬೀಗುತ್ತಿದ್ದ ಬಿಜೆಪಿ ನಾಯಕರು, ಸ್ವಂತ ಬಲವಿಲ್ಲದೆ ಬೇರೆ ಪಕ್ಷಗಳ ಜತೆಗೂಡಿ ಸರಕಾರ ರಚಿಸಬೇಕಾದ ದುರಂತ ಸೃಷ್ಟಿಯಾಯಿತು. ಕರ್ನಾಟಕದಲ್ಲಿ ಬಿಜೆಪಿ ಸಂಪೂರ್ಣ ದುರ್ಬಲವಾಗಲು ಹಾಗೂ ದೇಶದಲ್ಲಿ ಸ್ವಂತ ಬಲವನ್ನು ಕಳೆದುಕೊಳ್ಳಲು ಕಾರಣವಾದ ಅಂಶಗಳಲ್ಲಿ ಬೆಲೆ ಏರಿಕೆ ಮುಖ್ಯ ಪಾತ್ರ ವಹಿಸಿತ್ತು. ನಂದಿನಿ ಹಾಲಿನ ದರ ಪರಿಷ್ಕರಣೆಯ ಸಮಯದಲ್ಲಿ ಈ ಇತಿಹಾಸವನ್ನು ಬಿಜೆಪಿ ನಾಯಕರು ಮರೆತಿದ್ದಾರೆ.

ನಂದಿನಿ ಬಗ್ಗೆ ಇಷ್ಟು ಪ್ರೀತಿ ತೋರಿಸುವವರು, ಕೇಂದ್ರ ಸಹಕಾರ ಸಚಿವರಾದ ಅಮಿತ್ ಶಾ, ಅಮೂಲ್ ಜತೆಗೆ ಕೆಎಂಎಫ್ ವಿಲೀನದ ಬಗ್ಗೆ ಪ್ರಸ್ತಾಪ ಮಾಡಿದ್ದಾಗ ಅದನ್ನೂ ಸಮರ್ಥಿಸಿಕೊಂಡಿದ್ದರು. ಇದೇ ಏಪ್ರಿಲ್ 1 ರಿಂದ ಹೆದ್ದಾರಿಗಳ ಟೋಲ್ ಶುಲ್ಕ ಶೇ.3 ರಿಂದ ಶೇ.5 ರಷ್ಟು ಹೆಚ್ಚಾಗಿದೆ. ಮಧುಮೇಹ ಹಾಗೂ ಕ್ಯಾನ್ಸರ್ ರೋಗಗಳ ಔಷಧಿಗಳ ಬೆಲೆಗಳನ್ನು ಹೆಚ್ಚಿಸಲಾಗಿದೆ. ಇದರ ಜತೆಗೆ ಅಡುಗೆ ಅನಿಲದ ಬೆಲೆ ಏರುತ್ತಲೇ ಇದೆ. ಈ ಬಗ್ಗೆ ಬಿಜೆಪಿಯಿಂದ ಯಾವುದೇ ದೂರುಗಳಿಲ್ಲ.

ದರ ಪರಿಷ್ಕರಣೆ ಏಕೆ ಬೇಕಿತ್ತು?: ಈ ಸಮಯದಲ್ಲಿ ದರ ಏರಿಕೆ ಬೇಕಿತ್ತೆ ಎಂದು ಪ್ರಶ್ನೆ ಮಾಡುವವರು ರಾಜ್ಯದ ಅನ್ನದಾತರ ಬಗ್ಗೆ ಸ್ವಲ್ಪ ಚಿಂತಿಸಬೇಕಿದೆ. ಗ್ರಾಹಕರಿಗೆ ಹೆಚ್ಚಿನ ಹೊರೆಯಾಗದಂತೆ ಹಾಗೂ ಹೈನುಗಾರರ ನೆರವಿಗೆ ಧಾವಿಸಲು ದರ ಹೆಚ್ಚಳ ಮಾಡಲಾಗಿದೆ. ನಮ್ಮ ರೈತರಿಗಾಗಿ ಹಾಗೂ ಅಭಿವೃದ್ಧಿ ಕಾರ್ಯಗಳಿಗಾಗಿ ನ್ಯಾಯವಾಗಿ ಬರಬೇಕಿದ್ದ ತೆರಿಗೆ ಹಂಚಿಕೆ ಪಾಲನ್ನು ಹಲವಾರು ಬಾರಿ ಕೇಳಲಾಗಿದೆ. ಆದರೂ ಕೇಂದ್ರ ಸರಕಾರ ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಬಿಜೆಪಿ ಸಂಸದರು ಅಥವಾ ಶಾಸಕರು ರಾಜ್ಯಕ್ಕೆ ನ್ಯಾಯವಾಗಿ ಬರಬೇಕಿರುವ ತೆರಿಗೆ ಪಾಲನ್ನು ಕೇಳಲು ನಮ್ಮೊಂದಿಗೆ ಕೈ ಜೋಡಿಸಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ರೈತರ ಆರ್ಥಿಕ ಮಟ್ಟವನ್ನು ಸುಸ್ಥಿರಗೊಳಿಸಲು ಈ ನಿರ್ಧಾರಕ್ಕೆ ಬರಲಾಗಿದೆ.

ಡಿ.ಕೆ.ಶಿವಕುಮಾರ್
ಉಪಮುಖ್ಯಮಂತ್ರಿ

ಆದರೂ ಇಲ್ಲಿ ಗ್ರಾಹಕರ ಹಿತವನ್ನು ಕೂಡ ಪರಿಗಣಿಸಿ ಅತಿ ಕಡಿಮೆ ಮಟ್ಟದಲ್ಲಿ ಹಾಲು ಹಾಗೂ ಮೊಸರಿನ ದರವನ್ನು 4 ರು.ನಂತೆ ಪರಿಷ್ಕರಿಸಲಾಗಿದೆ. ಹೈನುಗಾರಿಕೆ ಉದ್ಯಮ ಲಾಭದಾಯಕವಾಗಿದ್ದರೂ, ಅದರ ನಿರ್ವಹಣೆ ಸವಾಲಿನದ್ದು. ಪಶು ಆಹಾರ ಉತ್ಪಾದನೆಗೆ ಬಳಸುವ ಮೆಕ್ಕೆಜೋಳ, ಅಕ್ಕಿತೌಡು, ಹತ್ತಿಕಾಳು ಹಿಂಡಿ, ಖನಿಜ ಪದಾರ್ಥಗಳ ದರ ಶೇ.35-40 ರಷ್ಟು ಏರಿಕೆಯಾಗಿದೆ. ಹೆಚ್ಚಿಸಿದ ದರದ ಲಾಭವನ್ನು ನೇರವಾಗಿ ಹೈನುಗಾರರಿಗೆ ತಲುಪಿಸುವಂತೆ ಕ್ರಮ ವಹಿಸಲಾಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕಿದೆ.

ಗುಣಮಟ್ಟದಲ್ಲಿ ಅತ್ಯಂತ ಜನಪ್ರಿಯವಾಗಿರುವ ನಂದಿನಿ ಹಾಲು ಹಾಗೂ ಕೆಎಂಎಫ್ ಉತ್ಪನ್ನಗಳ ಮಾರುಕಟ್ಟೆಯನ್ನು ದೇಶಾದ್ಯಂತ ವಿಸ್ತರಿಸಲಾಗಿದೆ. ಇತ್ತೀಚೆಗೆ ರಾಜಧಾನಿ ದೆಹಲಿಯಲ್ಲೂ ಉತ್ತಮ ಮಾರುಕಟ್ಟೆಯನ್ನು ನಂದಿನಿ ಸ್ಥಾಪಿಸಿಕೊಂಡಿದೆ. ಇದಕ್ಕೆ ಬೇಕಾದ ಎಲ್ಲ ಬಗೆಯ ಪ್ರೋತ್ಸಾಹಗಳನ್ನು ನೀಡಲಾಗಿದೆ. ಈಗ ದರ ಪರಿಷ್ಕರಣೆ ಕೂಡ ಪ್ರೋತ್ಸಾಹದ ಒಂದು ಸಣ್ಣ ಭಾಗವಷ್ಟೆ.

ಅಪಪ್ರಚಾರ ಮಾಡುವುದು ಬೇಕಿರಲಿಲ್ಲ: ಇಷ್ಟಕ್ಕೂ ದರ ಪರಿಷ್ಕರಣೆ ಎಂದಾಕ್ಷಣ ಜನರು ಬೆಚ್ಚಿ ಬೀಳುವಂತೆ ಅಪಪ್ರಚಾರ ಮಾಡುವುದು ಬೇಕಿರಲಿಲ್ಲ. ಏಕೆಂದರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಂದಿನಿ ಹಾಲಿನ ದರ ಬಹಳ ಕಡಿಮೆಯೇ ಇದೆ. ಕೇರಳದ ಮಲಬಾರ್ ಹಾಲು ಒಕ್ಕೂಟದ ಹಾಲಿನ ದರ ಲೀಟರ್‌ಗೆ 52 ರು., ಗುಜರಾತ್‌ನ ಬನಸ್ಕಾಂತದ ಹಾಲಿನ ದರ ಲೀಟರ್‌ಗೆ 53 ರು., ಮಹಾರಾಷ್ಟ್ರದ ಕೊಲ್ಹಾಪುರದ ಹಾಲಿನ ದರ ಲೀಟರ್‌ಗೆ 52 ರು., ಅಸ್ಸಾಂನ ವಮುಲ್‌ನ ಹಾಲಿನ ದರ ಲೀಟರ್‌ಗೆ 60 ರು., ಹರಿಯಾಣದ ಅಂಬಲದ ಹಾಲಿನ ದರ ಲೀಟರ್‌ಗೆ 56 ರು., ರಾಜಸ್ತಾನದ ಜೈಪುರ ಹಾಲಿನ ದರ ಲೀಟರ್‌ಗೆ 50 ರು. ಇದೆ. ಆದರೆ ಕರ್ನಾಟಕದ ಕೆಎಂಎಫ್‌ನ ಹಾಲು ಲೀಟರ್‌ಗೆ 46 ರು. ನಲ್ಲಿ ದೊರೆಯುತ್ತದೆ. ದೇಶದ ಮಾರುಕಟ್ಟೆಯಲ್ಲಿ ಅತಿ ಕಡಿಮೆ ದರಕ್ಕೆ ನಂದಿನಿ ಹಾಲು ಜನರ ಕೈ ಸೇರುವಂತೆ ದರದಲ್ಲೂ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿದೆ.

ತೆರಿಗೆ ಪಾಲಿನ ಬಗ್ಗೆ ಪ್ರಶ್ನಿಸೋಣ: ಒಂದು ಉದಾಹರಣೆ ನೋಡಿ. ವಿಜಯಪುರ ಜಿಲ್ಲೆಯ ಇಂಡಿಯ ಬಬಲಾದ ಗ್ರಾಮದ 20 ಮಹಿಳೆಯರು 'ಒಡಲ ಧ್ವನಿ' ಎಂಬ ಸಂಘ ರಚಿಸಿಕೊಂಡು ಹೋಳಿಗೆ ತಯಾರಿಸಿ, ಬೆಂಗಳೂರಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ಇವರು ವಿಜಯಪುರದಿಂದ ಬೆಂಗಳೂರಿಗೆ ಬರಲು ಶಕ್ತಿ ಯೋಜನೆಯ ಉಚಿತ ಬಸ್ ನೆರವಾಗಿದೆ. ಇದೇ ರೀತಿ 200 ಯುನಿಟ್ ಉಚಿತ ವಿದ್ಯುತ್, ಅನ್ನಭಾಗ್ಯ, 2,000 ರೂ. ನೀಡುವ ಗೃಹಲಕ್ಷ್ಮಿ ಗ್ಯಾರಂಟಿಗಳ ಮೂಲಕ ಕೋಟ್ಯಂತರ ಜನರ ಬದುಕನ್ನು ಕಟ್ಟಿಕೊಡುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಈ ಯೋಜನೆಗಳಿಂದಾಗಿ ಜನರ ಮನೆಯ ತಿಂಗಳ ಬಜೆಟ್‌ನಲ್ಲಿ ಉಳಿತಾಯ ಇನ್ನಷ್ಟು ಹೆಚ್ಚಾಗಿದೆ.

ಬೆಲೆಗಳನ್ನು ಬೇಕಾಬಿಟ್ಟಿಯಾಗಿ ಏರಿಸಿ, ಕರ್ನಾಟಕಕ್ಕೆ ನ್ಯಾಯದ ಪಾಲನ್ನು ನೀಡದೆ ಅನ್ಯಾಯ ಮಾಡುತ್ತಿರುವುದು ಬಿಜೆಪಿ ಮಾತ್ರ. ಬೆಲೆ ಏರಿಕೆಯ ವಿಚಾರದಲ್ಲಿ ಹಾಗೂ ತೆರಿಗೆ ಮರು ಹಂಚಿಕೆಯ ವಿಚಾರದಲ್ಲಿ ಕೇಳಬೇಕಾದ ಪ್ರಶ್ನೆಗಳನ್ನು ಮರೆಮಾಚಿ, ಹಾಲಿನ ದರ ಪರಿಷ್ಕರಣೆ ಬಗ್ಗೆ ಸುಖಾಸುಮ್ಮನೆ ರಾಜಕೀಯ ಟೀಕೆಗಳನ್ನು ಮಾಡುವುದರಿಂದ ಜನರ ಹಿತ ಕಾಯುವಂತಾಗುವುದಿಲ್ಲ. ರಾಜ್ಯಗಳಿಗೆ ನೀಡುವ ತೆರಿಗೆ ಪಾಲನ್ನು ಶೇ.41 ರಿಂದ ಶೇ.40 ಕ್ಕೆ ಇಳಿಸಲು ಕೇಂದ್ರ ಸರಕಾರ ಹಣಕಾಸು ಆಯೋಗಕ್ಕೆ ಸೂಚನೆ ನೀಡಿದೆ. 15 ನೇ ಹಣಕಾಸು ಆಯೋಗ ತೆರಿಗೆ ಹಂಚಿಕೆಯ ಪ್ರಮಾಣವನ್ನು ಶೇ.4.71 ರಿಂದ ಶೇ.3.64 ಕ್ಕೆ ಇಳಿಸಿದ್ದರಿಂದ ಕರ್ನಾಟಕಕ್ಕೆ ಕಳೆದ 5 ವರ್ಷಗಳಲ್ಲಿ 68,775 ಕೋಟಿ ರು. ನಷ್ಟವಾಗಿದೆ. ನಾವೆಲ್ಲರೂ ಒಂದಾಗಿ ಪ್ರಶ್ನಿಸಬೇಕಾಗಿರುವುದು ರಾಜ್ಯಕ್ಕೆ ಬರಬೇಕಿರುವ ತೆರಿಗೆ ಹಂಚಿಕೆಯ ಪಾಲು ಎಂಬುದನ್ನು ಸದಾ ನೆನಪಿಡೋಣ.

ವಿಶ್ವವಾಣಿ

ಸಂಪಾದಕೀಯ

ಭಿನ್ನ ಮಕ್ಕಳ ಬಗ್ಗೆ ಕಾಳಜಿ ಇರಲಿ

ಏಪ್ರಿಲ್ 2 ವಿಶ್ವ ಆಟಿಸಂ ಜಾಗೃತಿ ದಿನ. ಮೇಲ್ನೋಟಕ್ಕೆ ಅಂಗಾಂಗಗಳೆಲ್ಲವೂ ಸರಿ ಇದ್ದರೂ ಕೇಂದ್ರಿಯ ನರಮಂಡಲ ಮತ್ತು ಮೆದುಳಿಗೆ ಸಂಬಂಧಿಸಿದ ಸಮಸ್ಯೆಗಳಿಂದ ಬಳಲುವ ಆಟಿಸಂ ರೋಗಿಗಳಿಗೆ ಪೋಷಕರು ಮಾತ್ರವಲ್ಲ ಇಡೀ ಸಮಾಜದ ಕಾಳಜಿ, ಆರೈಕೆ ಅಗತ್ಯವಿದೆ. ಶಾರೀರಿಕ ಸಮಸ್ಯೆ ರೋಗಗಳಿಗೆ ಚಿಕಿತ್ಸೆ ಕೊಡಿಸಬಹುದು. ಆದರೆ ಆಟಿಸಂ ಇರುವ ರೋಗಿಗಳಿಗೆ ಜೀವನ ಪರ್ಯಂತ ಪ್ರೀತಿ ತುಂಬಿದ ಆರೈಕೆ ಅಗತ್ಯ. ಈ ಕಾರಣದಿಂದಲೇ 2007ರಲ್ಲಿ ವಿಶ್ವಸಂಸ್ಥೆ ಈ ರೋಗದ ಬಗ್ಗೆ ಇರುವ ತಪ್ಪು ಕಲ್ಪನೆಗಳು ಮತ್ತು ಮೂಢನಂಬಿಕೆಗಳನ್ನು ತೊಡೆದು ಹಾಕಿ ಜನರಲ್ಲಿ ಈ ರೋಗದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಆಟಿಸಂ ಜಾಗೃತಿ ದಿನವನ್ನು ಘೋಷಿಸಿತು. ಜಗತ್ತಿನಲ್ಲಿ ಸುಮಾರು 5 ಕೋಟಿ ಜನರು ವಾರ್ಷಿಕವಾಗಿ ಈ ರೋಗದಲ್ಲಿ ಬಳಲುತ್ತಿದ್ದಾರೆ. ಭಾರತವೊಂದರಲ್ಲಿಯೇ ಸುಮಾರು 50 ಲಕ್ಷ ಆಟಿಸಂ ರೋಗದಿಂದ ಬಳಲುತ್ತಾರೆ ಎಂದು ಅಂದಾಜಿಸಲಾಗಿದೆ. ಆಟಿಸಂ ಇರುವ ಮಕ್ಕಳು ಇತರ ಮಕ್ಕಳಿಗಿಂತ ವಿಭಿನ್ನರಾಗಿರುತ್ತಾರೆ. ತಮ್ಮದೇ ವಯಸ್ಸಿನ ಇತರ ಮಕ್ಕಳ ಜೊತೆಗೆ ವ್ಯವಹರಿಸಲು, ಮಾತನಾಡಲು, ಆಟೋಟ ಪಾಠಗಳಲ್ಲಿ ಪಾಲ್ಗೊಳ್ಳಲು ಹಿಂಜರಿಯುತ್ತಾರೆ. ಸಾಮಾನ್ಯವಾಗಿ ಮಕ್ಕಳಲ್ಲಿ ಈ ರೋಗ 12ರಿಂದ 18 ತಿಂಗಳಲ್ಲಿ ಗೋಚರಿಸಲು ಆರಂಭವಾಗುತ್ತದೆ. ಇಂತಹ ಮಕ್ಕಳನ್ನು ಹೆತ್ತವರು ಸಕಾಲದಲ್ಲಿ ಗುರುತಿಸಿ ಸೂಕ್ತ ಚಿಕಿತ್ಸೆಯನ್ನು ನೀಡಿದರೆ ಆಟಿಸಂನಿಂದ ಬಳಲುವ ಮಕ್ಕಳನ್ನು ಸಹಜ ಮಕ್ಕಳಂತೆ ಮಾಡಬಹುದು. ಆದರೆ ಈ ನಿಟ್ಟಿನಲ್ಲಿ ಹೆತ್ತವರು, ಸಂಬಂಧಿಕರು, ನೆರೆಹೊರೆಯವರು, ಶಿಕ್ಷಕರು ಮತ್ತು ಸಮಾಜ ಒಟ್ಟಾಗಿ ಕಾಳಜಿ ವಹಿಸುವುದು ಮುಖ್ಯ. ದುರದೃಷ್ಟವಶಾತ್ ಬುದ್ಧಿಮಾಂದ್ಯತೆ ಇರುವ ಮಕ್ಕಳನ್ನು ನಮ್ಮ ಸಮಾಜ ಪ್ರತ್ಯೇಕವಾಗಿಸಿ ನೋಡುತ್ತದೆ. ಹೆತ್ತವರೂ ಭಿನ್ನ ಚೇತನ ಮಕ್ಕಳ ಶಾಲೆಗೆ ಸೇರಿಸಿದರೆ ತಮ್ಮ ಹೊಣೆಗಾರಿಕೆ ಮುಗಿಯಿತು ಎಂದು ಭಾವಿಸುತ್ತಾರೆ. ಈ ಮಕ್ಕಳಿಗೆ ಹೆತ್ತವರು ಮತ್ತು ಸಮಾಜದ ಪ್ರೀತಿ, ವಿಶ್ವಾಸ, ಮಮತೆ ವಾತ್ಸಲ್ಯ ದೊರೆತರೆ ಸಮಾಜಕ್ಕೆ ಆಸ್ತಿಯಾಗಲೂಬಹುದು. ಇವರ ಪ್ರತಿಭೆಯನ್ನು ಹೊರಹಾಕಲು ಪೂರಕವಾದ ವಾತಾವರಣ ಕಲ್ಪಿಸಿಕೊಡಬೇಕು. ಸಂವಹನ ಕೊರತೆ ಇರುವಂತಹ ಮಕ್ಕಳಿಗೆ ವಿಶೇಷ ಶಿಕ್ಷಣ ಮತ್ತು ತರಬೇತಿ ನೀಡಿ ಅವರ ಆತ್ಮವಿಶ್ವಾಸ ವೃದ್ಧಿಸುವಂತೆ ಮಾಡಬೇಕು. ಯಾವ ಕಾರಣಕ್ಕೂ ಅಂತಹ ಮಕ್ಕಳನ್ನು ದೂಷಿಸಬಾರದು. ಇತರ ಮಕ್ಕಳ ಜೊತೆ ಹೋಲಿಸಬಾರದು. ನಿರಂತರವಾಗಿ ಮಾನಸಿಕ ಸ್ಥೈರ್ಯ ನೀಡಿ, ನೈತಿಕ ಬೆಂಬಲ ನೀಡಿದರೆ ಈ ರೀತಿಯ ಮಕ್ಕಳು ಸಮಾಜದ ಮುಖ್ಯವಾಹಿನಿಯ ಜೊತೆ ಬೆರೆತು ಬದುಕಬಹುದು. ಈ ನಿಟ್ಟಿನಲ್ಲಿ ಸಮಾಜವನ್ನು ಜಾಗೃತಿಗೊಳಿಸಬೇಕಾಗಿದೆ.

ಸೊಂಪಾದಕೀಯ

ಏರುತಿಹುದು, ಹಾರುತಿಹುದು

ಬೆಲೆ ಏರಿಕೆ ಅನ್ನೋದು ಮೊದಲೆಲ್ಲಾ ಹಾಟ್ ಟಾಪಿಕ್ ಆಗಿತ್ತು. ಯಾವುದಾದರೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಆದರೆ ಜನ ಹಾಹಾಕಾರ ಎಬ್ಬಿಸುತ್ತಿದ್ದರು. ಈಗ ಹಾಹಾಕಾರ ಇರಲಿ, ಚಕಾರ ಎತ್ತಲೂ ಆಸಕ್ತಿ ತೋರಿಸುತ್ತಿಲ್ಲ. ದಿನಾ ಸಾಯೋರಿಗೆ ಅಳೋರು ಯಾರು ಎನ್ನುವಂತೆ ದಿನಾ ಏರುವ ಬೆಲೆಗೆ ಮಾತಾಡೋರು ಯಾರು ಅಂತ ಎಲ್ಲದಕ್ಕೂ ಅಡ್ಜಸ್ಟ್ ಆಗಿ ಸುಮ್ಮನಾಗಿದ್ದಾರೆ. ಇಲ್ಲದೇ ಇದ್ದಿದ್ದರೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡ್ತಾ ಇರೋದು ನೋಡಿದ್ರೆ ಇಷ್ಟೊತ್ತಿಗೆ ಅದೆಷ್ಟು ಪ್ರತಿಭಟನೆಗಳು ಆಗಬೇಕಿತ್ತು. ಪ್ರತಿದಿನ ಬೆಳಗ್ಗೆ ಎದ್ದು ಹಲ್ಲುಜ್ಜಿ, ಸ್ನಾನ ಮಾಡುವ, ತಿಂಡಿ ತಿನ್ನುವ ಅಭ್ಯಾಸದಂತೆ ಇವುಗಳ ಜೊತೆಗೆ ಯಾವುದಾದರೂ ಒಂದು ವಸ್ತುವಿನ ಬೆಲೆಯನ್ನು ದಿನವೂ ಏರಿಸಬೇಕು ಎಂದು ಪಣ ತೊಟ್ಟಿರುವ ಕರ್ನಾಟಕ ಸರಕಾರ ಜನರಿಗೆ ಪ್ರತಿದಿನವೂ ಬೆಲೆ ಏರಿಕೆ ಬರೆ ಹಾಕುತ್ತಿದೆ. ಹಾಲು ಮೊಸರಿನ ರೇಟು ಜಾಸ್ತಿ ಆಯಿತು, ಅದಕ್ಕೂ ಮುನ್ನ ಕರೆಂಟ್ ರೇಟು ಜಾಸ್ತಿ ಆಯ್ತು, ಬಸ್ ದರ ಜಾಸ್ತಿ ಆಯ್ತು. ಅಷ್ಟೇ ಏಕೆ ನೀರಿನ ದರವೂ ಜಾಸ್ತಿ ಆಯ್ತು. ಇದನ್ನೆಲ್ಲಾ ನೋಡಿದ ಸಾಮಾನ್ಯ ಜನ ಆಯ್ತು ಬಿಡಿ ಅಂತ ಸುಮ್ಮನಾದನೇ ಹೊರತು ಜಾಸ್ತಿ ಮಾತಾಡಲಿಲ್ಲ. ಇದು ರಾಜ್ಯ ಸರಕಾರಕ್ಕೆ ಕುಮ್ಮಕ್ಕು ನೀಡಿದಂತಾಗಿರಬೇಕು. ಹಾಗಾಗಿ ಬೆಲೆ ಏರಿಕೆಯ ಕೆಲಸವನ್ನು ಅದು ರೆಗ್ಯುಲರ್ ಆಗಿ ಮಾಡುತ್ತಿದೆ. ಈಗ ಎಲ್ಲ ವಸ್ತುಗಳ ನಂತರ ಡೀಸೆಲ್ ಬೆಲೆಯನ್ನೂ ಲೀಟರ್ ಗೆ ಎರಡು ರೂಪಾಯಿ ಜಾಸ್ತಿ ಮಾಡಲಾಗಿದೆ. ಪೆಟ್ರೋಲ್ ಡೀಸೆಲ್ ಬೆಲೆ ಅಂದ್ರೆ ಅದನ್ನು ಬರೀ ಕೇಂದ್ರ ಸರಕಾರವೇ ಯಾಕೆ ಜಾಸ್ತಿ ಮಾಡಬೇಕು ನಾವೂ ಮಾಡುತ್ತೇವೆ ಅನ್ನೋ ವರಸೆ ರಾಜ್ಯ ಸರಕಾರದ್ದು. ಆದರೆ ಇದೇ ಬೆಲೆ ಏರಿಕೆಯ ಕೆಲಸವನ್ನು ಕೇಂದ್ರದ ಬಿಜೆಪಿ ಸರಕಾರ ಮಾಡಿದ್ದಿದ್ದರೆ ಇಷ್ಟೊತ್ತಿಗೆ ರಾಜ್ಯದಲ್ಲಿ ಕೈಗೊಂದು ಬಾಯಿಗೊಂದು ಮಾತಾಡೋ ಜನ ಕಾಣಸುತ್ತಿದ್ದರು. ಆದರೆ ನಾವೇ ಓಟು ಹಾಕಿ ಗೆಲ್ಲಿಸಿದ ರಾಜ್ಯದ ಕೈ ಸರಕಾರ ಬೆಲೆ ಏರಿಕೆ ಮಾಡಿರೋದ್ರಿಂದ ಎಲ್ಲರೂ ಕೈ ಕಟ್ಟಿ ಕೂತಿದ್ದಾರೆ. ಇನ್ನು ಕೈ ಸರಕಾರ ಕೂಡಾ ಎಲೆಕ್ಷನ್ ಇನ್ನೂ ದೂರ ಇದೆ. ಆಗ ಬೆಲೆಗಳನ್ನು ಕಮ್ಮಿ ಮಾಡಿ, ಒಂದೆರಡು ಗ್ಯಾರಂಟಿಗಳನ್ನು ಕೊಟ್ಟರಾಯಿತು ಅನ್ನೋ ಧೋರಣೆಯಲ್ಲಿ ಬೆಲೆ ಏರಿಕೆ ಅಭಿಯಾನ ಮುಂದುವರಿಸಿದೆ.

ಸಂಪಾದಕರ ಸದ್ಯಶೋಧನೆ

ಹಿರಿಯರ ಆರೈಕೆ ರೋಬೋಟ್

ಜಪಾನಿಯರು ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳುವುದರಲ್ಲಿ ನಿಸ್ಸೀಮರು. ದೈನಂದಿನ ಜೀವನದ ಎಲ್ಲ ಕ್ಷೇತ್ರಗಳಲ್ಲೂ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಬಗ್ಗೆ ಅವರ ಮನಸ್ಸು ಸದಾ ಹುಡುಕಾಟದಲ್ಲಿರುತ್ತದೆ. ಜನಸಂಖ್ಯೆಯಲ್ಲಿ ಹಿರಿಯರ ಪ್ರಮಾಣ ದಿನೇ ದಿನೆ ಹೆಚ್ಚುತ್ತಿರುವುದರಿಂದ, ಹಿರಿಯರ ಆರೈಕೆಯ ಸಮಸ್ಯೆಗೆ ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ಕಂಡುಕೊಳ್ಳುವುದು ಅವರಿಗೆ ಅನಿವಾರ್ಯವೂ ಹೌದು. ಈ ನಿಟ್ಟಿನಲ್ಲಿ, ಹಿರಿಯರ ಆರೈಕೆ ರೋಬೋಟ್‌ಗಳು (Elder Care Robots) ಒಂದು ಮಹತ್ವಪೂರ್ಣ ಹೆಜ್ಜೆ. ಇದು ವೃದ್ಧರ ದೈನಂದಿನ ಜೀವನ ಸುಲಭಗೊಳಿಸುವಲ್ಲಿ ಮತ್ತು ಆರೈಕೆ ನೀಡುವವರು ಅನುಭವಿಸುವ ಭಾರವನ್ನು ಕಡಿಮೆ ಮಾಡುವಲ್ಲಿ ನೆರವಾಗಿದೆ. ಜಪಾನ್ ವಿಶ್ವದ ಅತಿ ಹೆಚ್ಚು ವೃದ್ಧ ಜನಸಂಖ್ಯೆಯುಳ್ಳ ದೇಶಗಳಲ್ಲಿ ಒಂದು. 2020ರಲ್ಲಿ 65 ವರ್ಷ ಮೇಲ್ಪಟ್ಟ ಜನರು ಒಟ್ಟಾರೆ ಜನಸಂಖ್ಯೆಯ ಶೇ. 28 ಕ್ಕೂ ಅಧಿಕರಾಗಿದ್ದರು. ಈ ಪ್ರಮಾಣ 2050ರ ವೇಳೆಗೆ ಶೇ.35 ಆಗುವ ನಿರೀಕ್ಷೆಯಿದೆ. ಜನಸಂಖ್ಯೆಯ ವೃದ್ಧಿ ಮತ್ತು ಜನನ ಪ್ರಮಾಣದ ಕುಸಿತದ ಕಾರಣದಿಂದ, ಹಿರಿಯರ ಆರೈಕೆಗೆ ಅಗತ್ಯವಿರುವ ಆರೋಗ್ಯ ಸೇವಾ ಸಿಬ್ಬಂದಿ ಮತ್ತು ಕುಟುಂಬದ ಸದಸ್ಯರ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಕಾರಣಗಳಿಂದಾಗಿ, ತಂತ್ರಜ್ಞಾನವನ್ನು ಬಳಸಿಕೊಂಡು ಹೊಸ ಪರಿಹಾರಗಳನ್ನು ಹುಡುಕುವುದು ಅನಿವಾರ್ಯ. ಹಿರಿಯರ ಆರೈಕೆಗಾಗಿ ವಿನ್ಯಾಸಗೊಳಿಸಲಾದ ರೋಬೋಟ್‌ಗಳು ಶಾರೀರಿಕ ಮತ್ತು ಮಾನಸಿಕ ಆರೈಕೆಯಲ್ಲಿ ನೆರವಾಗುತ್ತಿದೆ. ಇವು ಹಲವಾರು ಕಾರ್ಯಗಳನ್ನು ನಿರ್ವಹಿಸ ಬಲ್ಲವು, ಉದಾಹರಣೆಗೆ, ಹಿರಿಯರು ಸುಲಭವಾಗಿ ನಡೆಯಲು, ಅವಶ್ಯಕ ಔಷಧಗಳನ್ನು ಸರಿಯಾದ ಸಮಯಕ್ಕೆ ಸೇವಿಸಲು, ಒಂಟಿತನವನ್ನು ಕಡಿಮೆ ಮಾಡಲು ಮತ್ತು ಕುಟುಂಬ ಸದಸ್ಯರೊಂದಿಗೆ ಸಂಪರ್ಕ ಸಾಧಿಸಲು, ಮಲಗಲು, ಕಾಲಕಾಲಕ್ಕೆ ಎಬ್ಬಿಸಲು, ಸ್ನಾನ ಮಾಡಲು ಈ ರೊಬೋಟುಗಳು ಸಹಾಯ ಮಾಡುತ್ತವೆ. ಕೆಲವು ರೋಬೋಟ್‌ಗಳು ಹಿರಿಯರೊಂದಿಗೆ ಮಾತಾಡುವುದಷ್ಟೇ ಅಲ್ಲ, ಅವರಿಗೆ ಕ್ವಿಜ್ ನಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತವೆ, ಅವರಿಗೆ ಜೋಕುಗಳನ್ನು ಹೇಳಿ ನಗಿಸುತ್ತವೆ. ಹಾಗಾದರೆ ಹಿರಿಯರ ಆರೈಕೆ ರೋಬೋಟ್‌ಗಳ ಪ್ರಯೋಜನಗಳೇನು? ಅವು ಹಿರಿಯರ ಸ್ವಾಯತ್ತೆಯನ್ನು ಹೆಚ್ಚಿಸುತ್ತವೆ, ಹಿರಿಯರು ತಾವು ತಮ್ಮ ಕೆಲಸಗಳನ್ನು ನಿರ್ವಹಿಸುವಂತಾಗಿದೆ, ಇದರಿಂದ ಆರೈಕೆಗಾರರ ಮೇಲಿನ ಶಾರೀರಿಕ ಮತ್ತು ಮಾನಸಿಕ ಒತ್ತಡ ಕಡಿಮೆ ಮಾಡಿದಂತಾಗಿದೆ, ಹಿರಿಯರು ಔಷಧಗಳನ್ನು ಸರಿಯಾದ ಸಮಯಕ್ಕೆ ಸೇವಿಸಲು ಅನುಕೂಲವಾಗಿದೆ ಮತ್ತು ಅವರ ಆರೋಗ್ಯ ಸ್ಥಿತಿಯನ್ನು ನಿರಂತರವಾಗಿ ಮೌಲ್ಯಮಾಪನ ಮಾಡಲು ಸಹಕಾರಿಯಾಗಿದೆ. ಈ ರೋಬೋಟ್‌ಗಳು ಎಲ್ಲರಿಗೂ ಲಭ್ಯವಿಲ್ಲ. ಕಾರಣ ಇವು ಬಹಳ ದುಬಾರಿಯಾಗಿದ್ದು, ಎಲ್ಲರೂ ಖರೀದಿಸಲು ಸಾಧ್ಯವಿಲ್ಲ. ಈ ರೋಬೋಟ್‌ಗಳು ಮನುಷ್ಯರ ಹಾಗೆ ಆರೈಕೆ ಮಾಡಲು ಸಾಧ್ಯವಿಲ್ಲ, ಏಕೆಂದರೆ, ಇವುಗಳಿಗೆ ಭಾವನಾತ್ಮಕ ಸಂಪರ್ಕವೇ ಇಲ್ಲ. ತಂತ್ರಜ್ಞಾನ ಸದಾ ಸರಿಯಾಗಿ ಕಾರ್ಯನಿರ್ವಹಿಸುತ್ತದೆಯೇ ಎಂಬ ಪ್ರಶ್ನೆ ಇವುಗಳ ಬಳಕೆ ಬಗ್ಗೆ ಕೆಲವು ಸಂದೇಹಗಳನ್ನು ಮೂಡಿಸುವಂತಾಗಿದೆ. ದೊಡ್ಡ ಮಟ್ಟದ ಡೇಟಾ ಸಂಗ್ರಹ ಮತ್ತು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮೌಲ್ಯಮಾಪನಗಳ ಪ್ರಶ್ನೆ ಆಗಾಗ ಎದುರಾಗುವುದುಂಟು. AI ಆಧಾರಿತ ಸಮರ್ಥ ರೋಬೋಟ್‌ಗಳನ್ನು ಸಹ ಜಪಾನಿನಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದರಿಂದ ಬರಲಿರುವ ದಿನಗಳಲ್ಲಿ ಬುದ್ಧಿವಂತ AI ಅನ್ವಯದ ಮೂಲಕ ವೃದ್ಧರ ಅಗತ್ಯಗಳನ್ನು ಇನ್ನಷ್ಟು ತಿಳಿದುಕೊಳ್ಳುವ ರೋಬೋಟ್‌ಗಳು ಅಭಿವೃದ್ಧಿಯಾಗಲಿವೆ. ಹೆಚ್ಚು ಜನರಿಗೆ ಈ ತಂತ್ರಜ್ಞಾನವನ್ನು ತಲುಪಿಸಲು, ಕಡಿಮೆ ದರದಲ್ಲಿ ಲಭ್ಯವಾಗುವ ರೋಬೋಟ್‌ಗಳನ್ನು ಅಭಿವೃದ್ಧಿಪಡಿಸಲಾ ಗುತ್ತಿದೆ. ಇಂಟರ್ನೆಟ್ ಆಫ್ ಥಿಂಗ್ಸ್ (IoT) ಸಹಾಯದಿಂದ, ಈ ರೋಬೋಟ್‌ಗಳು ಆರೋಗ್ಯ ಮಾಹಿತಿಯನ್ನು ನೇರವಾಗಿ ವೈದ್ಯರಿಗೆ ಕಳಿಸುವ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ. ಹಿರಿಯರ ಆರೈಕೆ ರೋಬೋಟ್‌ಗಳು ಜಪಾನಿನಲ್ಲಿ ದೊಡ್ಡ ಪರಿವರ್ತನೆಯನ್ನು ತರಲು ಪ್ರಾರಂಭಿಸಿರುವುದು ಸಮಾಧಾನಕರ ಸಂಗತಿಯೇ. ಇವು ಮನುಷ್ಯರಿಗೆ ಸಂವೇದಿಯಾಗುವ ಮಟ್ಟಕ್ಕೆ ಬೆಳೆಯುತ್ತಿದ್ದು, ಇತರ ರಾಷ್ಟ್ರಗಳಿಗೂ ಮಾದರಿಯಾಗಿದೆ. ಜಪಾನ್ ಸರ್ಕಾರ ಮತ್ತು ತಂತ್ರಜ್ಞಾನ ಸಂಸ್ಥೆಗಳು ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ನಡೆಸುತ್ತಿದ್ದು, ಭವಿಷ್ಯದಲ್ಲಿ ತಂತ್ರಜ್ಞಾನ-ಆಧರಿತ ಆರೈಕೆಯು ಇನ್ನಷ್ಟು ಮುಖ್ಯವಾಗಲಿದೆ.

ಒಂದು ಮರ ಉಳಿಸಲು ಯೋಜನೆ ಬದಲಿಸಿದ ಜಪಾನ್!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಜಪಾನಿನ ಟೋಕಿಯೋ ಮತ್ತು ನಗೋಯಾ ಮಧ್ಯೆ ಹೈಸ್ಪೀಡ್ ರೈಲು ಮಾರ್ಗ ನಿರ್ಮಿಸಲು ಅಲ್ಲಿನ ರೈಲ್ವೆ ಇಲಾಖೆ ಸರಕಾರಕ್ಕೆ ಒಂದು ಪ್ರಸ್ತಾವನೆ ಸಲ್ಲಿಸಿತು. ಜಪಾನಿನಲ್ಲಿ ಯಾವುದೇ ಅಭಿವೃದ್ಧಿ ಯೋಜನೆ ರೂಪಿಸುವಾಗ, ಗಮನದಲ್ಲಿರಿಸಿಕೊಳ್ಳಬೇಕಾದ ಒಂದು ಮುಖ್ಯ ಅಂಶ ಅಂದ್ರೆ, ಪರಿಸರಕ್ಕೆ ಧಕ್ಕೆಯಾಗುವ ಯಾವ ಅಂಶಗಳೂ ಇರಕೂಡದು. ಅದರಲ್ಲೂ ಕಾಡು, ಕೊಳ, ಕೆರೆ, ಜಲಾಶಯ, ನದಿ ಮುಖಜ ಭೂಮಿಗೆ ಸ್ವಲ್ಪವೂ ಹಾನಿಯಾಗಲೇಬಾರದು. ಪರಿಸರ ಹಿತ ಕಾಪಾಡುವ ದೃಷ್ಟಿಯಿಂದ ಆ ಸದರಿ ಯೋಜನೆಯಲ್ಲಿ ಯಾವ ಐಬು ಇದ್ದಿರಲಿಲ್ಲ. ಆದರೆ ಒಂದೇ ಒಂದು (ಸಣ್ಣ) ಕಾರಣಕ್ಕೆ ಆ ಯೋಜನೆಗೆ ಸರಕಾರ ಅನುಮತಿ ನೀಡಲು ನಿರಾಕರಿಸಿತು. ಜಪಾನಿನ ಒಬ್ಬ ರೈತನ ತೋಟದ ಮೂಲಕ ಆ ರೈಲು ಮಾರ್ಗ ಹಾದುಹೋಗುತ್ತಿತ್ತು. ಅಲ್ಲಿ ಸುಮಾರು ನೂರಾ ನಲವತ್ತು ವರ್ಷಗಳ ಒಂದು ಅಪರೂಪದ ತಳಿಯ ಮರವೊಂದು ಇತ್ತು. ಉದ್ದೇಶಿತ ನೂತನ ರೈಲು ಮಾರ್ಗ ಆ ಮರವನ್ನು ನೆಲ ಸಮಾಧಿ ಮಾಡಿ ಸಾಗುತ್ತಿತ್ತು.

ಆ ರೈಲು ಯೋಜನೆಗೆ ಅನುಮತಿ ನಿರಾಕರಿಸಲು ಜಪಾನ್ ಸರಕಾರಕ್ಕೆ ಅದೊಂದೇ ಕಾರಣ ಸಾಕಾಯಿತು!

ಅಷ್ಟು ಹಳೆಯ, ಅಪರೂಪದ ಮರವನ್ನು ಯಾವ ಕಾರಣಕ್ಕೂ ಕಡಿಯುವಂತಿಲ್ಲ. ಆ ಜಾತಿಯ ಮರಗಳ ಸಂಖ್ಯೆ ಹೆಚ್ಚಿಲ್ಲ. ಆ ತಳಿಯನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯ. ಅಲ್ಲದೇ ಆ ಮರವನ್ನು ಆಶ್ರಯಿಸಿ, ಅಸಂಖ್ಯ ಪಕ್ಷಿಗಳು, ಜೀವಿಗಳು ಬದುಕು ಕಟ್ಟಿಕೊಂಡಿರುತ್ತವೆ. ಅಂಥ ಮರವನ್ನು ಏಕಾಏಕಿ ಕಡಿದು ಹಾಕಿದರೆ, ಅದರಿಂದ ಆಗುವ ಹಾನಿಯನ್ನು ಊಹಿಸುವುದು ಕಷ್ಟ. ಹೀಗಾಗಿ ಆ ಮರವನ್ನು ಉಳಿಸಿಕೊಂಡು ಯೋಜನೆಯನ್ನು ಮಾರ್ಪಡಿಸಿ ಎಂದು ಸರಕಾರ ರೈಲ್ವೆ ಇಲಾಖೆಗೆ ಸೂಚಿಸಿ, ಕಡತವನ್ನು ವಾಪಸ್ ಕಳಿಸಿತು.

ಇದಕ್ಕೆ ರೈಲ್ವೆ ಇಲಾಖೆ ಪರಿಹಾರ ರೂಪಿಸಿ, ಯೋಜನೆಯನ್ನು ಪುನಃ ಮಂಡಿಸಿತು. ಆ ಪ್ರಕಾರ, ಆ ಮರವನ್ನು ಕಡಿಯುವುದಿಲ್ಲ, ಆದರೆ ಆ ಮರವನ್ನು ಅನಾಮತ್ತು ಎತ್ತಿ ಬೇರೆಡೆ ಸ್ಥಳಾಂತರಿಸಿ, ಸೂಕ್ತವಾದ ಜಾಗದಲ್ಲಿ ನೆಡುತ್ತೇವೆ. ಇದರಿಂದ ಯಾವ ವ್ಯತ್ಯಾಸವೂ ಆಗುವುದಿಲ್ಲ ಎಂದು ಹೇಳಿತು.

ಆದರೂ ಸರಕಾರ ಆ ಯೋಜನೆಯನ್ನು ಒಪ್ಪಿಕೊಳ್ಳಲಿಲ್ಲ. ಅದಕ್ಕೆ ಸರಕಾರ ನೀಡಿದ ಕಾರಣ - ನೂರಾ ನಲವತ್ತು ವರ್ಷಗಳ ಆ ಮರದ ಬೇರುಗಳು ಬಹುದೂರ ಹರಡಿಕೊಂಡಿರುತ್ತವೆ. ಆ ಮರವನ್ನು ಅನಾಮತ್ತು ಎತ್ತುವುದರಿಂದ ಅದರ ಬೇರುಗಳು ಘಾಸಿಯಾಗುವ ಸಂಭವಗಳೇ ಹೆಚ್ಚು. ಇದು ಆ ಮರದ ಅಸ್ತಿತ್ವಕ್ಕೇ ಧಕ್ಕೆ ತರಬಹುದು. ಅಂಥ ಮರವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಹೊಣೆಯಾಗಬೇಕು. ರೈಲ್ವೆ ಮಾರ್ಗವನ್ನು ಬದಲಿಸಬಹುದು. ಆದರೆ ಆ ತಳಿಯ ಇನ್ನೊಂದು ಮರವನ್ನು ಸೃಷ್ಟಿಸುವುದು ಅಸಾಧ್ಯ. ಆದ್ದರಿಂದ ಮರವನ್ನು ಸ್ಥಳಾಂತರಿಸುವ ಪ್ರಸ್ತಾವವನ್ನು ಒಪ್ಪಲು ಸಾಧ್ಯವಿಲ್ಲ.

ಆಗ ರೈಲ್ವೆ ಇಲಾಖೆ ಅಧಿಕಾರಿಗಳು ತಲೆ ಕೆಡಿಸಿಕೊಂಡರು. ಒಂದು ಮರ ಕಡಿಯುವುದಕ್ಕೆ ಪ್ರಾಯಶ್ಚಿತ್ತವಾಗಿ ಸಾವಿರ ಗಿಡಗಳನ್ನು ನೆಡುತ್ತೇವೆ, ಒಂದು ಸಣ್ಣ ನೆಡುತೋಪನ್ನು ನಿರ್ಮಿಸುತ್ತೇವೆ ಎಂಬ ಪರಿಹಾರದೊಂದಿಗೆ ಯೋಜನೆಯನ್ನು ಮರು ಮಂಡಿಸಿದರು. ಅದಕ್ಕೂ ಸರಕಾರ ಸೈ ಎನ್ನಲಿಲ್ಲ.

ಸರಕಾರದ ವಾದವೇ ಬೇರೆ ಇತ್ತು. 'ಸಾವಿರ ಗಿಡ ನೆಡುವುದು ನೂರಾ ನಲವತ್ತು ವರ್ಷಗಳ ಮರವನ್ನು ಸಾಯಿಸುವುದಕ್ಕೆ ಪರಿಹಾರವಾಗಲಾರದು. ಸಾವಿರ ಗಿಡಗಳು ಮರವಾಗಲು ಇಪ್ಪತ್ತು-ಮೂವತ್ತು ವರ್ಷಗಳಾದರೂ ಬೇಕು. ಅಲ್ಲಿಯ ತನಕ ಪರಿಸರಕ್ಕೆ ಆಗುವ ಹಾನಿಯನ್ನು ಲೆಕ್ಕ ಹಾಕಲೂ ಸಾಧ್ಯವಿಲ್ಲ. ಮರದ ಜಾಗದಲ್ಲಿ ಮನುಷ್ಯರನ್ನು ಕಲ್ಪಿಸಿಕೊಳ್ಳಿ, ಆಗ ನಮ್ಮ ಉತ್ತರ ಇದೇ ರೀತಿ ಇರುವುದಾ? ಸಾಧ್ಯವೇ ಇಲ್ಲ. ಹೊಸ ಮರಗಳನ್ನು ಬೆಳೆಸೋಣ, ಆದರೆ ಇರುವ ಮರವನ್ನು ಉಳಿಸಿಕೊಳ್ಳುವುದು ಅದಕ್ಕಿಂತ ಮುಖ್ಯ. ಇಲ್ಲಿ ಮರಗಳ ಸಂಖ್ಯೆ ಮುಖ್ಯವಲ್ಲ. ಮರವಷ್ಟೇ ಮುಖ್ಯ. ಒಂದು ಮರವನ್ನು ಸಂರಕ್ಷಿಸುವುದೂ ನಮ್ಮ ಧೋರಣೆಯಾಗಬೇಕು. ಆ ಚಿಂತನೆಯಲ್ಲಿ ಯೋಜನೆಯನ್ನು ನಿರ್ಮಿಸೋಣ.'

ಆ ಹಂತದಲ್ಲಿ ಅಕ್ಷರಶಃ ರೈಲ್ವೆ ಅಧಿಕಾರಿಗಳ ತಲೆ ಚಿಟ್ಟು ಹಿಡಿದು ಹೋಯಿತು. ಆಗ ಉಳಿದಿದ್ದು ರೈಲು ಮಾರ್ಗ ಬದಲಿಸುವ ಉಪಾಯವೊಂದೇ. ಅದು ಸುಲಭವಾಗಿರಲಿಲ್ಲ. ಕಾರಣ ರೈಲು ಮಾರ್ಗದ ಪುನರ್ ನಕ್ಷೆ ರೂಪಿಸಬೇಕು, ಬದಲಿ ಮಾರ್ಗವನ್ನು ಸೂಚಿಸಬೇಕು, ಆ ಮಾರ್ಗದಲ್ಲೂ ಯಾವ ಮರಗಳು ಇರಕೂಡದು, ಆಗ ಮಾರ್ಗ ನೇರವಾಗಿರದೇ ಸುತ್ತು ಬಳಸಿ ಹೋಗುತ್ತದೆ,

ಇದರಿಂದ ಯೋಜನೆ ವಿಳಂಬವಾಗುತ್ತದೆ, ಖರ್ಚು ಹೆಚ್ಚುತ್ತದೆ... ಇತ್ಯಾದಿ, ಇತ್ಯಾದಿ.

ಈ ಯಾವ ಕಾರಣವನ್ನೂ ಸರಕಾರ ಒಪ್ಪಿಕೊಳ್ಳಲಿಲ್ಲ. ರೈಲ್ವೆ ಇಲಾಖೆಯ ಆ ವಾದವನ್ನೇ ಸಾರಾಸಗಟು ತಿರಸ್ಕರಿಸಿಬಿಟ್ಟಿತು!

ಆಗ ರೈಲ್ವೆ ಅಧಿಕಾರಿಗಳು ತಲೆ ಮೇಲೆ ಕೈ ಹೊತ್ತು ಕುಳಿತುಬಿಟ್ಟರು. ಆ ಹೊತ್ತಿಗೆ ಎರಡು ತಿಂಗಳು ಕಳೆದು ಹೋಗಿತ್ತು. ಸರಕಾರದ ಆಲೋಚನೆ ಏನು ಎಂಬುದನ್ನು ತಿಳಿದುಕೊಳ್ಳದಷ್ಟು ಆ ಅಧಿಕಾರಿಗಳು ದಡ್ಡರಾಗಿರಲಿಲ್ಲ. ಆ ಮರವನ್ನು ಉಳಿಸುವ ಉದ್ದೇಶದಿಂದ ರೈಲು ಮಾರ್ಗವನ್ನು ಒಂದೂವರೆ ಕಿಮೀ ಸುತ್ತುಬಳಸಿ ಮಾರ್ಪಡಿಸಲು ನಿರ್ಧರಿಸಿದರು. ಅದಕ್ಕಾಗಿ ಹೆಚ್ಚುವರಿ ಇನ್ನೂರಾ ಹತ್ತು ಕೋಟಿ ಯೆನ್ ಖರ್ಚಾಗುತ್ತದೆ ಎಂದು ಅಂದಾಜು ಹಾಕಿದರು. ಮಾರ್ಗ ಬದಲಾವಣೆಯಿಂದ ಮೂರು ತಿಂಗಳು ಯೋಜನೆ ವಿಳಂಬವಾಗುತ್ತದೆ ಎಂದು ಲೆಕ್ಕ ಹಾಕಿದರು. ಈ ಎಲ್ಲ ಮಾರ್ಪಾಡುಗಳೊಂದಿಗೆ ಹೊಸ ಯೋಜನೆಯನ್ನು ಸರಕಾರದ ಅನುಮತಿಗಾಗಿ ಮತ್ತೊಮ್ಮೆ ಮಂಡಿಸಿದರು. ಸರಿ, ಕೇವಲ ಐದು ದಿನಗಳಲ್ಲಿ ಸರಕಾರ ಅದಕ್ಕೆ ಸಮ್ಮತಿ ಸೂಚಿಸಿತು.

ಒಂದೇ ಒಂದು ಮರ ಉಳಿಸಲು ಸರಕಾರ ಅಷ್ಟೊಂದು ಹಠ ಹಿಡಿಯಿತು. ರೈಲ್ವೆ ಅಧಿಕಾರಿಗಳು ಹೇಳುವ ಯಾವ ಕಾಗಕ್ಕ-ಗುಬ್ಬಕ್ಕನ ಕಥೆಯನ್ನೂ ಕೇಳಲಿಲ್ಲ. ಅದಕ್ಕಾಗಿ ಸಮಯ ಹಿಡಿಯಬಹುದು, ಇನ್ನೂರಾ ಹತ್ತು ಕೋಟಿ ಯೆನ್ ಖರ್ಚಾಗಬಹುದು, ಆಗಲಿ ಪರವಾಗಿಲ್ಲ, ಆದರೆ ಒಂದು ಮರಕ್ಕಾಗಿ ಇಂಥ ಕಠಿಣ ನಿರ್ಧಾರವನ್ನು ಜಪಾನ್ ಸರಕಾರ ತೆಗೆದುಕೊಂಡಿತು ಎಂಬುದು ಜಗತ್ತಿಗೂ ಗೊತ್ತಾಗಲಿ, ಅವರಲ್ಲೂ ಪರಿಸರ ಕಾಳಜಿ ಇನ್ನಷ್ಟು ಜಾಗೃತವಾಗಲಿ, ಪ್ರಗತಿ ಹೆಸರಿನಲ್ಲಿ ಪ್ರಕೃತಿಯನ್ನು ಧ್ವಂಸ ಮಾಡುವುದು ತಪ್ಪು ಎಂಬುದು ಎಲ್ಲರಿಗೂ ತಿಳಿಯಲಿ, ಅಭಿವೃದ್ಧಿಗೆ ಪರಿಸರವನ್ನು ಬಲಿ ಕೊಡಬಾರದು. ಹೆಚ್ಚು ದೇಶಗಳು, ನಗರಗಳು ಮತ್ತು ಸಂಸ್ಥೆಗಳು ಇಂಥ ಕ್ರಮಗಳನ್ನು ಅನುಸರಿಸಬೇಕು, ಭವಿಷ್ಯದ ತಲೆಮಾರುಗಳಿಗೆ ಆರೋಗ್ಯಕರ, ಹಸಿರು ಭೂಮಿಯನ್ನು ಉಳಿಸಿಕೊಡಬೇಕಾದ ಹೊಣೆ ನಮ್ಮೆಲ್ಲರ ಮೇಲಿದೆ ಎಂದು ಸರಕಾರ ಅಷ್ಟೊಂದು ಜಿಗುಟು ನಿಲುವು ತಾಳಿತು.

ಈ ನಿರ್ಧಾರದಿಂದಾಗಿ ಕೇವಲ ಒಂದು ಮರ ಉಳಿಯಲಿಲ್ಲ, ಬದಲಾಗಿ ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ ಮತ್ತು ಪರಿಸರ ಹಾನಿಯ ನಡುವಿನ ಸಮತೋಲನ ಸಾಧಿಸುವ ಬಗ್ಗೆ ದೊಡ್ಡ ಚರ್ಚೆ ಶುರುವಾಯಿತು. ಇದು ಮುಂದಿನ ಪೀಳಿಗೆಗೆ ಆ'ಮರ' ಪಾಠವಾಯಿತು. ಈ ರೀತಿ ಭಾವನಾತ್ಮಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವುದರ ಮೂಲಕ ಮಾತ್ರ ನಿಜವಾದ ಪ್ರಗತಿ ಸಾಧ್ಯ ಎಂಬುದನ್ನು ಜಪಾನ್ ತೋರಿಸಿಕೊಟ್ಟಿತು. ವಿಕಾಸ ಮತ್ತು ಪರಿಸರ ಒಂದೇ ಹಾದಿಯಲ್ಲಿ ಸಾಗಬೇಕು, ಆರ್ಥಿಕ ಲಾಭದ ಮೊದಲು, ಮಾನವ ಕುಲವು ಭೂಮಿಯ ಬಗ್ಗೆ ಭದ್ರತೆ ಮತ್ತು ಪ್ರೀತಿ ತೋರಿಸಬೇಕು, ಒಂದು ಮರವನ್ನು ಉಳಿಸುವುದು ಕೇವಲ ಪರಿಸರ ಸಂರಕ್ಷಣೆಯಲ್ಲ, ಅದು ಮುಂದಿನ ಪೀಳಿಗೆಗೆ ನಾವು ನೀಡುವ ಹಸಿರು ಭರವಸೆ, ಇದು ಹೆಚ್ಚುವರಿ ವೆಚ್ಚ ಉಂಟುಮಾಡಿದರೂ, ಅತಿ ದೊಡ್ಡ ಹಿತವೆಂದರೆ ಪರಿಸರಕ್ಕೆ ಕೊಡುವ ಗೌರವ ಎಂಬ ಸಂದೇಶವನ್ನು ಎತ್ತಿ ಹಿಡಿಯುವುದು ಮುಖ್ಯ, ಮರವನ್ನು ಕಡಿಯುವ ಪ್ರಸಂಗ ಬಂದಾಗ ಅದನ್ನು ಸ್ಥಳಾಂತರಿ ಸುವುದಕ್ಕಿಂತ ಅದರ ಐತಿಹಾಸಿಕ ಮಹತ್ವವನ್ನು ಉಳಿಸು ವುದು, ಅದನ್ನು ಅವಲಂಬಿಸಿರುವ ಜೀವಿಗಳ ಯೋಗಕ್ಷೇಮ ದ ಬಗ್ಗೆಯೂ ಯೋಚಿಸುವುದು ಮುಖ್ಯ. ಈ ಎಲ್ಲ ಕಾರಣಗಳಿಂದ, ಜಪಾನ್ ತನ್ನ ಸಂಸ್ಕೃತಿಯಲ್ಲಿರುವ ಪರಿಸರ ಪ್ರೇಮವನ್ನು ಮತ್ತೊಮ್ಮೆ ದೃಢಪಡಿಸಿತು.

ನಮ್ಮ ರಾಜ್ಯದ ಬಗ್ಗೆ ಮಾತಾಡದಿರುವುದೇ ಒಳ್ಳೆಯದು. ಯಾಕೆಂದರೆ ಒಂದು ರಸ್ತೆ ಅಗಲೀಕರಣದ ನೆಪವೊಡ್ಡಿ ನಾವು ಹಿಂದೆ ಮುಂದೆ ನೋಡದೇ ಸಾವಿರಾರು ಮರಗಳನ್ನು ನಿರ್ದಯವಾಗಿ ಕತ್ತರಿಸಿ ಹಾಕುತ್ತೇವೆ. ಆ ಬಗ್ಗೆ ಜನರೂ ಚಕಾರ ಎತ್ತುವುದಿಲ್ಲ. ಸರಕಾರಕ್ಕೆ ಅದು ಕಾಣುವುದೂ ಇಲ್ಲ. ಯಾರಾದರೂ ಬೊಬ್ಬೆ ಹೊಡೆದರೆ, ಯಾರೂ ಕೇಳಿಸಿಕೊಳ್ಳುವುದೂ ಇಲ್ಲ. ನಮಗೆ ಅದೊಂದು ಅತಿ ಮುಖ್ಯ ವಿಷಯ ಎಂದು ಅನಿಸುವುದೂ ಇಲ್ಲ. ಅಷ್ಟಕ್ಕೂ ಪರಿಸರವಾದಿಗಳಿಂದ ಪ್ರತಿರೋಧ ವ್ಯಕ್ತವಾಯಿತೆನ್ನಿ, ಕಂಟ್ರಾಕ್ಟರುಗಳು ಕಡಿದ ಮರಗಳಿಗೆ ಸಮ ಸಂಖ್ಯೆಯ ಗಿಡಗಳನ್ನು ನೆಡುತ್ತೇವೆ ಎಂಬ ವಚನ ನೀಡಿದರೆ, ಆ ಕಳ್ಳ ಕಂಟ್ರಾಕ್ಟರುಗಳು ತಮ್ಮ ಭರವಸೆಯಂತೆ ನಡೆದುಕೊಂಡರಾ ಎಂದು ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಹೀಗಿರುವಾಗ ಒಂದು ಮರವನ್ನು ಉಳಿಸಿಕೊಳ್ಳುವ ಮಾತನ್ನಾಡಿದರೆ ನಮ್ಮಲ್ಲಿ ಅದೊಂದು ಶುದ್ಧ ಜೋಕ್ ಆದೀತು, ಅಪಹಾಸ್ಯಕ್ಕೀಡಾಗಬೇಕಾದೀತು. ರಸ್ತೆ ಅಗಲೀಕರಣಕ್ಕೇ ಕೊಡಲಿಗೆ ನೆಲಸಮವಾಗುವ ಮರಗಳ ಬಗ್ಗೆ ತಲೆ ಕೆಡಿಸಿಕೊಳ್ಳದ ನಾವು, ಇನ್ನು ದೊಡ್ಡ ದೊಡ್ಡ ಯೋಜನೆಗಳ ಹೆಸರಿನಲ್ಲಿ ಮಾರಣಹೋಮಕ್ಕೆ ತುತ್ತಾಗುವ ಮರಗಳಿಗೆ ಮಮ್ಮಲ ಮರುಗಲು ನಮಗೆ ಸಮಯ, ಸಂಯಮ ಎಲ್ಲಿದೆ? 'ಒಂದು ಮರ ಉಳಿಸಲು ಯೋಜನೆ ಬದಲಿಸಿದ ಜಪಾನ್ ಸರಕಾರ' ಎಂಬ ಶೀರ್ಷಿಕೆಯನ್ನು ನಮ್ಮ ಅರಣ್ಯ ಸಚಿವರಾಗಲಿ, ರಾಜಕಾರಣಿಗಳೇನಾದರೂ ಓದಿದರೆ, ಇದ್ಯಾಕೋ ಅತಿಯಾಯ್ತು' ಎಂದೋ, sheer uninteresting ಎಂದೋ, boring ಎಂದೋ, ಒಣ ಆದರ್ಶ ಎಂದೋ ಮುಖ ಕಿವುಚಿ ಪುಟ ತಿರುವಿ ಹಾಕಬಹುದು.

ಈ ವರ್ಷದ ಫೆಬ್ರವರಿಯಲ್ಲಿ ಕರ್ನಾಟಕ ಹೈಕೋರ್ಟ್ ಬೆಂಗಳೂರಿನಲ್ಲೊಂದೇ 2,848 ಮರಗಳನ್ನು ಕಡಿಯಲು ಅನುಮತಿ ನೀಡಿತು. ಕಡಿಯುವ ಒಂದು ಮರಕ್ಕೆ ತಲಾ ಹತ್ತು ಗಿಡಗಳನ್ನು ನೆಡುವಂತೆ ಆದೇಶಿಸಿತು. (ಅಂದು ಇಂಡಿಯನ್ ಎಕ್ಸ್‌ಪ್ರೆಸ್ ನೀಡಿದ ಹೆಡ್ ಲೈನ್ - Karnataka High Court allows felling of 2,848 trees in Bengaluru: The Court noted that against each tree to be felled, ten saplings should be planted). ಆಯ್ತು.. ಅಂದರೆ ಕಡಿಯುವ ಒಂದು ಮರಕ್ಕೆ ತಲಾ ಹತ್ತು ಗಿಡ ನೆಡಬೇಕು, ಅವುಗಳಿಗೆ ಬೇಲಿ ಕಟ್ಟಬೇಕು, ನೀರೆರೆಯಬೇಕು, ಪಾಲಿಸಬೇಕು, ಪೋಷಿಸಬೇಕು, ನಂತರ ಮರವಾಗಿ ಬೆಳೆಸಬೇಕು... ಇವನ್ನೆಲ್ಲ ಯಾರು ನೋಡಬೇಕು? ನಿಗಾ ಇಡಬೇಕು? ಲಕ್ಷ್ಯವಹಿಸಬೇಕು? ಈ ತೀರ್ಪಿನ ಪ್ರಕಾರ, ಮರ ಕಡಿದಿದ್ದಕ್ಕಾಗಿ 28,480 ಗಿಡಗಳನ್ನು ನೆಡಬೇಕು. ಎಲ್ಲಿ ನೆಡಬೇಕು? ಅಷ್ಟು ಜಾಗ ಇದೆಯಾ? ಅಷ್ಟು ಬೇಲಿಗಳು ಇವೆಯಾ? ಅವುಗಳಿಗೆ ನೀರನ್ನು ಹಾಕುವವರಾರು? ಅಷ್ಟು ಸಸ್ಯಗಳು ನರ್ಸರಿಯಲ್ಲಿ ಇವೆಯಾ? ಯಾವ ಜಾತಿಯ ಗಿಡಗಳನ್ನು ನೆಡಬೇಕು? ಈ ಯಾವ ವಿಷಯಗಳ ಬಗ್ಗೆಯೂ ತೀರ್ಪಿನಲ್ಲಿ ಇರಲಿಲ್ಲ.

ಕೆಲ ತಿಂಗಳು, ವರ್ಷಗಳ ಬಳಿಕ ಈ ತೀರ್ಪು ನೀಡಿದ ನ್ಯಾಯಾಧೀಶರು ವರ್ಗವಾಗಿಯೋ, ನಿವೃತ್ತರಾಗಿಯೋ ಹೋಗಿರುತ್ತಾರೆ, ಈ ಆದೇಶವನ್ನು ಪಾಲಿಸಬೇಕಾದ ಕಂಟ್ರಾಕ್ಟರ್ ಇಂಥ ನಾಲ್ಕು ಯೋಜನೆ ಟೆಂಡರ್ ಗಿಟ್ಟಿಸಿಕೊಂಡು ಕೊಬ್ಬಿ ನೆಮ್ಮದಿಯಿಂದಿರುತ್ತಾನೆ, ಅದನ್ನು ನೋಡಬೇಕಾದ ಅಧಿಕಾರಿಗಳು ಆ ಹೊತ್ತಿಗೆ ನಿವೃತ್ತರಾಗಿರುತ್ತಾರೆ, ಇದನ್ನು ವರದಿ ಮಾಡಿದ ಪತ್ರಕರ್ತರು ಇಡೀ ವಿಷಯವನ್ನೇ ಮರೆತಿರುತ್ತಾರೆ. ಅರಣ್ಯ ಸಚಿವರ ಖಾತೆಯೂ ಬದಲಾಗಿರುತ್ತದೆ ಅಥವಾ ಆತ ಮುಂದಿನ ಚುನಾವಣೆಯಲ್ಲಿ ಸೋತಿರುತ್ತಾನೆ, ಸರಕಾರ ಬದಲಾಗಿರುತ್ತದೆ, ಅಷ್ಟಕ್ಕೂ ಇವನ್ನೆಲ್ಲ ಯಾರು ನೆನಪಿಟ್ಟುಕೊಂಡಿರುತ್ತಾರೆ? ತಪ್ಪಿತಸ್ಥರ ವಿರುದ್ಧ ಹೋರಾಡಲು ಯಾರಿಗೆ ವ್ಯವಧಾನವಿದೆ?

ಇದಕ್ಕೆಲ್ಲ ಯಾರನ್ನು ದೂರೋಣ?

ಭಾರತಕ್ಕೆ ಮಸಿ ಬಳಿದು ಅಮೆರಿಕಕ್ಕೆ ಏನಾಗಬೇಕಿದೆ?

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಅಮೆರಿಕ ಬಹಳ ಶ್ರೀಮಂತ ಮತ್ತು ಶಕ್ತಿಶಾಲಿ ದೇಶ. ನನಗೆ ಯಾವಾಗಲೂ ಅನ್ನಿಸುವು ದೇನೆಂದರೆ, ತನ್ನ ದೊಡ್ಡಣ್ಣನ ಸ್ಥಾನದಿಂದ ಆ ದೇಶ ಜಗತ್ತಿನ ಎಲ್ಲಾ ಸಮಸ್ಯೆಗಳನ್ನೂ ತಲೆಯ ಮೇಲೆ ಹೊತ್ತುಕೊಂಡು ಓಡಾಡುತ್ತಿ ರುತ್ತದೆ. ಅದೇ ವೇಳೆ, ನಾವು ಕೂಡ ಅನಗತ್ಯವಾಗಿ ಒಂದಷ್ಟು ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರುತ್ತೇವೆ. ಆದ್ದರಿಂದಲೇ ಹಿರಿಯರು ಒಂದು ಮಾತು ಹೇಳಿದ್ದಾರೆ: 'ಆತಂಕ ನಮ್ಮ ಬುದ್ಧಿಯನ್ನು ಕೊಲ್ಲುತ್ತದೆ, ದುಃಖ ದೇಹವನ್ನು ಕೊಲ್ಲುತ್ತದೆ'. ಆದರೆ ಅಮೆರಿಕ ಯಾವತ್ತಾದರೂ ದುರ್ಬಲವಾಗಿದ್ದನ್ನು ನೀವು ಕಂಡಿದ್ದೀರಾ? ಅದು ಯುದ್ಧದಲ್ಲಿ ತೊಡಗಿರುವಾಗಲೂ ಆ ದೇಶದ ಆರ್ಥಿಕ ಸಂಪತ್ತು ಬೆಳೆಯುತ್ತಲೇ ಇರುತ್ತದೆ. ಏಕೆಂದರೆ ಜಗತ್ತಿನ ಕುರಿತಾಗಿ ಅಮೆರಿಕದ ಆತಂಕ ಅಥವಾ ಕಳಕಳಿಗಳೆಲ್ಲ ಉದ್ದೇಶಪೂರ್ವಕವಾಗಿರುತ್ತವೆ. ಹೀಗಾಗಿ ಒಂದು ಸಮಸ್ಯೆ ಮುಗಿಯುತ್ತಲೇ ಇನ್ನೊಂದನ್ನು ಅದು ಕೈಗೆತ್ತಿಕೊಳ್ಳುತ್ತದೆ.

ಅಮೆರಿಕದ ಲೇಟೆಸ್ಟ್ ಚಿಂತೆ ಭಾರತದ ಗುಪ್ತಚರ ತನಿಖಾ ಏಜೆನ್ಸಿಯಾದ ರೀಸರ್ಚ್ ಅಂಡ್ ಅನಾಲಿಸಿಸ್ ವಿಂಗ್ (ರಾ) ಕುರಿತಾಗಿದೆ. ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ವಿಷಯ ದ ಬಗ್ಗೆ ಗಮನ ಹರಿಸಲು ಅಮೆರಿಕದಲ್ಲೊಂದು ಫೆಡರಲ್ ಆಯೋಗವಿದೆ. ಅದು 2025ನೇ ಸಾಲಿನ 'ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ವರದಿ' ಬಿಡುಗಡೆ ಮಾಡಿದೆ. ಅದರಲ್ಲಿ, ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಮಟ್ಟ ನಿರಂತರವಾಗಿ ಕುಸಿಯುತ್ತಿದೆ ಎಂದು ಅಭಿಪ್ರಾಯ ಪಟ್ಟಿದೆ. ವಿದೇಶಗಳಲ್ಲಿ ಭಾರ ತೀಯ ಮೂಲದ ಧಾರ್ಮಿಕ ಅಲ್ಪಸಂಖ್ಯಾತರನ್ನು ಟಾರ್ಗೆಟ್ ಮಾಡಲಾಗುತ್ತಿದೆ, ಅದಕ್ಕೆ ಭಾರತದ ರಾ ಹೊಣೆಯಾಗಿದೆ, ಹೀಗಾಗಿ ರಾ ಏಜೆನ್ಸಿಯ ಮೇಲೆ ನಿರ್ಬಂಧ ಹೇರಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಿದೆ. ಅದೇ ವರದಿಯಲ್ಲಿ, ಖಲಿಸ್ತಾನಿ ಪ್ರತ್ಯೇಕತಾವಾದಿ ಹೋರಾಟಗಾರ ಗುರ್‌ಪತ್ವಂತ್ ಸಿಂಗ್ ಪನ್ನು ಮೇಲೆ ನಡೆದಿತ್ತು ಎನ್ನಲಾದ ಹತ್ಯೆ ಯತ್ನದ ಪ್ರಸ್ತಾಪವೂ ಇದೆ. ಪನ್ನು ಭಾರತೀಯ ಮೂಲದ ಖಲಿಸ್ತಾನಿ ಪ್ರತ್ಯೇಕತಾವಾದಿ ಹೋರಾಟಗಾರನಾಗಿದ್ದು, ಅಮೆರಿಕದ ಪೌರತ್ವ ಹೊಂದಿದ್ದಾನೆ. ಅವನ ಮೇಲೆ ಅಮೆರಿಕದಲ್ಲಿ ಹತ್ಯೆಯ ಯತ್ನ ನಡೆದಿತ್ತು ಎಂದು ಈ ಹಿಂದೆ ದೊಡ್ಡ ಸುದ್ದಿಯಾಗಿತ್ತು. ಆ ಹತ್ಯೆ ಯತ್ನವನ್ನು ಭಾರತವೇ ನಡೆಸಿತ್ತು ಎಂದು ಕೆನಡಾ ಆರೋಪಿಸಿತ್ತು. ಅದನ್ನು ಸಾಕಷ್ಟು ಬಾರಿ ಭಾರತ ನಿರಾಕರಿಸಿದೆ. ಈಗ ಮತ್ತೆ ಅಮೆರಿಕ ಅದನ್ನು ಕೆದಕುವ ಯತ್ನ ಮಾಡಿದೆ. ಅಮೆರಿಕಕ್ಕೆ ಈ ವಿಷಯದಲ್ಲಿ ಸಮಜಾಯಿಷಿ ನೀಡುವವರು ಯಾರು? ಅದು ಹೋಗಲಿ, ಸ್ವತಃ ಅಮೆರಿಕವೇ ಕಪ್ಪು ವರ್ಣೀಯರು ಮತ್ತು ಬಿಳಿ ವರ್ಣೀಯರ ನಡುವೆ ಒಡೆದುಹೋಗಿದೆ ಎಂದು ಆ ದೇಶಕ್ಕೆ ಹೇಳುವವರು ಯಾರು? ಅಮೆರಿಕದ ಕ್ಯಾಥೋಲಿಕ್ಕರು ಮತ್ತು ಪ್ರೊಟೆಸ್ಟೆಂಟ್‌ಗಳ ನಡುವೆ ಆಳವಾದ ಕಂದಕವಿದೆ ಎಂಬುದನ್ನು ಶ್ವೇತಭವನಕ್ಕೆ ತಿಳಿಸಿಕೊಡುವವರು ಯಾರು? ಅಮೆರಿಕಕ್ಕೆ ತನ್ನ ಮೈಮೇಲಿನ ಗಾಯ ಕಾಣುವುದಿಲ್ಲ. ಆದರೂ ಬೇರೆಯವರ ವ್ಯವಹಾರದಲ್ಲಿ ಮೂಗು ತೂರಿಸುವ ಪ್ರವೃತ್ತಿಯನ್ನು ಮಾತ್ರ ಬಿಡುವುದಿಲ್ಲ! ಅಮೆರಿಕದ ಇಂತಹ ಕಿತಾಪತಿಗಳು ಕಣ್ಣಿಗೆ ಬಿದ್ದಾಗಲೆಲ್ಲ ನನಗೆ ಪದ್ಮಭೂಷಣ ರಘುಪತಿ ಸಹಾಯ್ ಅಲಿಯಾಸ್ ಫಿರಾಕ್ ಗೋರಖಪುರಿಯವರ 'ಡಾಲರ್ ದೇಶ್' ಎಂಬ ಕವಿತೆ ನೆನಪಾಗುತ್ತದೆ:

ಇಡೀ ಜಗತ್ತನ್ನೇ ಹಾಳು ಮಾಡು,
ಜಗತ್ತಿನ ನಿರ್ಮಾತಾ ನಾನೇ ಎಂದು ಹೇಳು.
ಇಡೀ ಜಗತ್ತನ್ನೇ ವಿರೋಧ ಮಾಡು,
ಜಗತ್ತಿನ ನಿಜವಾದ ಸ್ನೇಹಿತ ನಾನೇ ಎಂದು ಹೇಳು!
ಇಡೀ ಜಗತ್ತು ಬೇಕಾದರೆ ಉಪವಾಸ ಬೀಳಲಿ,
ನಾನೇ ಜಗತ್ತಿಗೆ ಅನ್ನ ನೀಡುತ್ತಿದ್ದೇನೆಂದು ಹೇಳು.
ಜಗತ್ತಿಗೆಲ್ಲ ಒಂದಷ್ಟು ಹಣ ತೆಗೆದು ಚೆನ್ನಾಗಿ ಹಂಚು,
ಬಳಿಕ ಎಲ್ಲೆಡೆಯಿಂದ ಹಣ ಬಾಚಿಕೊಳ್ಳಲು ಹೊಂಚು!
ಜಗತ್ತಿನ ವ್ಯಾಪಾರವನ್ನೆಲ್ಲ ಹಾಳುಗೆಡವಿ,
ಸ್ವತಃ ವ್ಯಾಪಾರಿಯಾಗಿ ಕುಳಿತುಬಿಡು.
ಒಳ್ಳೆಯ, ಕೆಟ್ಟ ಮುಹೂರ್ತ ನೋಡಿಕೊಂಡು,
ಜಗತ್ತಿನ ಪೂಜಾರಿಯಾಗಿ ಪವಡಿಸಿಬಿಡು!

ಫಿರಾಕ್ ಸಾಬ್ ಬಳಸಿದಷ್ಟು ಹರಿತವಾದ ಪದಗಳನ್ನು ನಾನು ಬಳಸಲು ಹೋಗುವುದಿಲ್ಲ. ಆದರೆ, ಭಾರತದ ಹೆಸರಿಗೆ ಮಸಿ ಬಳಿಯುವ ಈ ಎಲ್ಲಾ ಪ್ರಯತ್ನಗಳಲ್ಲೂ ಒಂದು ಉದ್ದೇಶವಂತೂ ಸ್ಪಷ್ಟವಾಗಿ ಕಾಣಿಸುತ್ತದೆ: ಭಾರತೀಯ ಸಮಾಜದಲ್ಲಿ ಒಡಕು ಉಂಟುಮಾಡಿ, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಆರ್ಥಿಕತೆ ಇನ್ನಷ್ಟು ಬೆಳೆಯುವುದನ್ನು ತಪ್ಪಿಸುವುದು. ಇಲ್ಲದಿದ್ದರೆ ನಮ್ಮ ದೇಶದ ಪ್ರಸಿದ್ಧ ಉದ್ಯಮಿಗಳಾದ ಅದಾನಿ ಮತ್ತು ಅಂಬಾನಿಯನ್ನು ಗುರಿಯಾಗಿಸಿ ನಿರಂತರವಾಗಿ ವಿವಾದಗಳನ್ನು ಹುಟ್ಟುಹಾಕುವುದೇಕೆ? ಒಂದು ಕಾಲದಲ್ಲಿ ಭಾರತವು ಜಗತ್ತಿನ ಜಿಡಿಪಿಗೆ ಶೇ.25ರಷ್ಟು ಕೊಡುಗೆ ನೀಡುತ್ತಿತ್ತು. ನಂತರ ಬ್ರಿಟಿಷರು ಬಂದು ನಮ್ಮನ್ನು ಚೆನ್ನಾಗಿ ಲೂಟಿ ಮಾಡಿದರು. ಅವರು ಬಿಟ್ಟುಹೋದಾಗ ಭಾರತ ಬಡವಾಗಿತ್ತು. ಇಲ್ಲಿನ ಸಂಪನ್ಮೂಲಗಳು ಬರಿದಾಗಿದ್ದವು. ಆದರೆ ನಾವು ಕೈಕಟ್ಟಿ ಕೂರಲಿಲ್ಲ. ದೇಶವನ್ನು ಮತ್ತೆ ಗಟ್ಟಿಯಾಗಿ ಕಟ್ಟಿದೆವು. ಬದ್ಧತೆ ಮತ್ತು ತಾಳ್ಮೆಯಿಂದ ಭಾರತದ ಮರುನಿರ್ಮಾಣದಲ್ಲಿ ತೊಡಗಿಕೊಂಡೆವು. ಅದರ ಪರಿಣಾಮ ಇಂದು ಭಾರತವು ಜಗತ್ತಿನ ಐದನೇ ಅತ್ಯಂತ ಪ್ರಬಲವಾದ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಮುಂಬರುವ ವರ್ಷಗಳಲ್ಲಿ ನಮ್ಮದು ಜಗತ್ತಿನಲ್ಲೇ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ.

ಬಹುಶಃ ಇದನ್ನೇ ಅಮೆರಿಕ ಅಥವಾ ಇತರ ದೇಶಗಳಿಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ. ಈ ಹಿಂದೆಯೂ ವಿದೇಶಿ ಶಕ್ತಿಗಳು ನಮ್ಮ ದೇಶದಲ್ಲಿ ಸಾಕಷ್ಟು ಮತೀಯ ಹಿಂಸಾಚಾರಗಳನ್ನು ಪ್ರಚೋದಿಸಿದ್ದವು. ಅದನ್ನೆಲ್ಲ ಹೇಗೆ ಮರೆಯೋಣ? ಅಂತಹ ಪ್ರಯತ್ನಗಳು ಈಗಲೂ ನಡೆಯುತ್ತಿವೆ. ಕಾಶ್ಮೀರದಲ್ಲಿ ಮತ್ತು ಜಗತ್ತಿನ ನಾನಾ ಕಡೆಗಳಲ್ಲಿ ಭಯೋತ್ಪಾದನೆ ನಡೆಸುತ್ತಿರುವ ಪಾಕಿಸ್ತಾನಕ್ಕೆ ಇಷ್ಟು ವರ್ಷಗಳ ಕಾಲ ಶ್ವೇತಭವನದಿಂದ ಆರ್ಥಿಕ ನೆರವು ನೀಡಿದ್ದೇಕೆ ಎಂದು ಅಮೆರಿಕ ಆತ್ಮಾವಲೋಕನ ಮಾಡಿಕೊಳ್ಳಬೇಕು. ಭಾರತದ ಹುಡುಗಿ ರಂಜನಿ ಶ್ರೀನಿವಾಸನ್ ಪ್ಯಾಲೆಸ್ತೀನ್ ದೇಶವನ್ನು ಬೆಂಬಲಿಸಿದಳು

ಭಾರತದ 'ರಾ ತನಿಖಾ ಸಂಸ್ಥೆಯನ್ನು ನಿಷೇಧಿಸುವಂತೆ ಅಮೆರಿಕದ ಧಾರ್ಮಿಕ ಸ್ವಾತಂತ್ರ್ಯಗಳ ಕುರಿತಾದ ಆಯೋಗ ವರದಿ ನೀಡಿರುವುದೊಂದು ದೊಡ್ಡ ಷಡ್ಯಂತ್ರ. ಅಮೆರಿಕದ ಸಿಐಎ ಸಂಸ್ಥೆಯ ರಹಸ್ಯಗಳನ್ನು ಬಟಾಬಯಲು ಮಾಡಲು ಜಗತ್ತು ನಿರ್ಧರಿಸಿದರೆ ನಿಮ್ಮ ಮುಖವನ್ನು ಎಲ್ಲಿ ಮುಚ್ಚಿಟ್ಟುಕೊಳ್ಳುತ್ತೀರಿ, ಅಂಕಲ್ ಸ್ಯಾಮ್?

ಎಂಬ ಕಾರಣಕ್ಕೆ ಅಮೆರಿಕದ ಸರ್ಕಾರ ಅವಳ ವೀಸಾ ರದ್ದುಪಡಿಸಿತು. ಆದರೆ, ಅದೇ ಅಮೆರಿಕದಲ್ಲಿ ಭಾರತ ವಿರೋಧಿ ಗುರ್‌ಪತ್ವಂತ್ ಸಿಂಗ್ ಪನ್ನು ಮುಕ್ತವಾಗಿ ಓಡಾಡುತ್ತಾ, ಅವಕಾಶ ಸಿಕ್ಕಾಗಲೆಲ್ಲ ಭಾರತದ ವಿರುದ್ಧ ವಿಷ ಕಾರುತ್ತಾ ಇರುತ್ತಾನೆ. ಅವನನ್ನು ಅಮೆರಿಕ ತನ್ನ ಪ್ರಜೆಯೆಂದು ಗೌರವಿಸುತ್ತದೆ. ಏಕೆ ಈ ತಾರತಮ್ಯ?

ನನಗೆ ಯಾವತ್ತಾದರೂ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರನ್ನು ಭೇಟಿಯಾಗುವ ಅವಕಾಶ ಸಿಕ್ಕರೆ ಖಂಡಿತ ಒಂದಷ್ಟು ಪ್ರಶ್ನೆಗಳನ್ನು ಕೇಳುತ್ತೇನೆ- ಮಿಸ್ಟರ್ ಪ್ರೆಸಿಡೆಂಟ್, ನಿಮ್ಮ ದೇಶ ಮಾನವ ಹಕ್ಕುಗಳ ಹರಿಕಾರನಂತೆ ಬಿಂಬಿಸಿಕೊಳ್ಳುತ್ತದೆ. ಆದರೂ ಏಕೆ ನಮ್ಮ ದೇಶದ ಜನರ ಕೈಗೆ ಕೋಳ ಹಾಕಿ ವಿಮಾನ ಹತ್ತಿಸಿದ್ದೀರಿ? ಏಕೆ ನಮ್ಮ ದೇಶದ ಪ್ರಸಿದ್ಧ ವಿಜ್ಞಾನಿ ಮತ್ತು ಮಾಜಿ ರಾಷ್ಟ್ರಪತಿಗಳಾಗಿದ್ದ ಎ.ಪಿ.ಜೆ. ಅಬ್ದುಲ್ ಕಲಾಂ, ನಮ್ಮ ದೇಶದ ಮಾಜಿ ವಾಣಿಜ್ಯ ಸಚಿವ ಕಮಲನಾಥ್, ಬಾಲಿವುಡ್‌ನ ಸೂಪರ್ ಸ್ಟಾರ್ ಶಾರುಖ್ ಖಾನ್‌ರನ್ನು ನಿಮ್ಮ ದೇಶದ ವಿಮಾನ ನಿಲ್ದಾಣಗಳಲ್ಲಿ ಬಟ್ಟೆ ಬಿಚ್ಚಿ ತಪಾಸಣೆ ಮಾಡಿ ಅವಮಾನಗೊಳಿಸಿ ದಿರಿ? ನಿಜಕ್ಕೂ ನೀವು ಏನನ್ನು ಸಾಬೀತುಪಡಿಸಲು ಹೊರಟಿದ್ದೀರಿ? ನೀವೇ ಇಡೀ ಜಗತ್ತಿಗೆ ಬಾಸ್ ಎಂದು ಮೆರೆಯಬೇಕೆ? ಜಗತ್ತಿನಲ್ಲಿ ನಿಮಗಿಂತ ಶಕ್ತಿಶಾಲಿ ಯಾರೂ ಇಲ್ಲ ಎಂದು ಎಲ್ಲರೂ ಬಹುಪರಾಕ್ ಹಾಕಬೇಕೆ? ಈಗಾಗಲೇ ಎಲ್ಲರೂ ಅದನ್ನು ಮಾಡುತ್ತಿದ್ದಾರೆ. ಹೇಗಿದ್ದರೂ ನೀವೇ ದೊಡ್ಡವರು. ನಿಮಗಿಂತ ಶಕ್ತಿಶಾಲಿ ಯಾರೂ ಇಲ್ಲ. ಆದರೆ ನಮ್ಮ ದೇಶದ ಸಂಸ್ಕೃತಿ ಏನು ಹೇಳುತ್ತದೆ ಗೊತ್ತಾ? ಹಣ್ಣುಗಳಿಂದ ತುಂಬಿದ ಮರ ವಿನಯದಿಂದ ಬಾಗಬೇಕು. ನೀವು ಶಕ್ತಿಶಾಲಿಯಾಗಿದ್ದರೆ, ಆ ಶಕ್ತಿಯನ್ನು ದುರ್ಬಲರಿಗೆ ಸಹಾಯ ಮಾಡಲು ಬಳಸುವುದು ನಿಮ್ಮ ಕರ್ತವ್ಯ. ನಿಮಗಿರುವ ಅನುಭವ ಹಾಗೂ ಸಂಪನ್ಮೂಲಗಳನ್ನು ಬಳಸಿಕೊಂಡು ಬಡ ದೇಶಗಳಿಗೆ ತಮ್ಮ ಕಾಲಿನ ಮೇಲೆ ತಾವು ನಿಂತುಕೊಳ್ಳಲು ಸಹಾಯ ಮಾಡಿ. ಆಗ ಎಲ್ಲರೂ ನಿಮ್ಮ ಹೆಸರು ಹೇಳಿ ಇನ್ನಷ್ಟು ಗೌರವಿಸುತ್ತಾರೆ !

ಭಾರತದ ರಾ ಏಜೆನ್ಸಿಯತ್ತ ಬೆರಳು ತೋರಿಸುವುದನ್ನು ನಾವು ಒಪ್ಪುವುದಿಲ್ಲ, ಮಿಸ್ಟರ್ ಪ್ರೆಸಿಡೆಂಟ್! ನಾವು ಶಾಂತಿಯನ್ನು ಬೆಂಬಲಿಸುವವರು. ಅಹಿಂಸೆಯ ತತ್ವವನ್ನು ಜಗತ್ತಿಗೆ ನೀಡಿದ ದೇಶ ನಮ್ಮದು. ನಮ್ಮ ದೇಶದ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ರಾ ಏಜೆನ್ಸಿಯನ್ನು ಇನ್ನಷ್ಟು ಬಲಶಾಲಿ ಮಾಡಿದ್ದಾರೆ ಎಂದು ಹೇಳಿಕೊಳ್ಳುವುದಕ್ಕೆ ನಮಗೆ ಹೆಮ್ಮೆಯೆನಿ ಸುತ್ತದೆ. ನಮ್ಮ ಸಾವಿರಾರು ವರ್ಷಗಳ ನಾಗರಿಕತೆಯ ಅವಧಿ ಯಲ್ಲಿ ಯಾವತ್ತೂ ನಾವು ಯಾರ ಮೇಲೂ ದಾಳಿ ನಡೆಸಿಲ್ಲ. ಮಿಲಿಟರಿ ದಾಳಿಯನ್ನು ಬಿಡಿ, ಸಾಂಸ್ಕೃತಿಕ ಅಥವಾ ಧಾರ್ಮಿಕ ದಾಳಿಯನ್ನೂ ನಡೆಸಿಲ್ಲ. ನದಿಗಳು, ಮರಗಳು, ಪ್ರಾಣಿಗಳು ಹೀಗೆ ನಮ್ಮ ಸುತ್ತಮುತ್ತ ಇರುವ ಎಲ್ಲಾ ಜೀವಜಂತುಗಳನ್ನೂ ದೇವರೆಂದು ಪೂಜಿಸುವ ನಾಡು ನಮ್ಮದು. ವಸುಧೈವ ಕುಟುಂ ಬಕಂ ಎಂಬುದು ನಮ್ಮ ಸಿದ್ಧಾಂತ. ಆದರೆ ಒಂದು ಮಾತನ್ನು ನೆನಪಿಡಿ. ನಮ್ಮ ಮೇಲೆ ಯಾರಾದರೂ ದಬ್ಬಾಳಿಕೆ ನಡೆಸಲು ಬಂದರೆ, ನಮಗೆ ಧಮಕಿ ಹಾಕಿದರೆ ಅಥವಾ ನಮ್ಮ ಮೇಲೆ ಹಿಂಸಾಚಾರ ಎಸಗಿದರೆ ನಾವು ಸುಮ್ಮನಿರುವುದಿಲ್ಲ. ಮಿಸ್ಟರ್ ಪ್ರೆಸಿಡೆಂಟ್, ಇದು ಹೊಸ ಯುಗದ ಭಾರತ!

ನನಗೊಂದು ಅನುಮಾನವಿದೆ. ಅಮೆರಿಕದ ಇಂತಹ ಎಲ್ಲಾ ಪ್ರಯತ್ನಗಳು ಸ್ವತಃ ಟ್ರಂಪ್ ವಿರುದ್ಧ ಅಲ್ಲಿನವರೇ ನಡೆಸುತ್ತಿರುವ ಷಡ್ಯಂತ್ರ ಇರಬಹುದೇ? ನಮ್ಮ ಪ್ರಧಾನಿ ನರೇಂದ್ರ ಮೋದಿ ಮತ್ತು ಟ್ರಂಪ್ ನಡುವೆ ಆಪ್ತವಾದ ಸ್ನೇಹವಿದೆ. ಟ್ರಂಪ್ ಯಾವ ತ್ತೂ ವೈಯಕ್ತಿಕವಾಗಿ ಭಾರತವನ್ನು ದೂಷಿಸುವುದಿಲ್ಲ. ಹೀಗಾಗಿ ಅಮೆರಿಕದ ಕೆಲ ಸ್ಥಾಪಿತ ಹಿತಾಸಕ್ತಿಗಳು (ಅಮೆರಿಕದಲ್ಲಿ ಇಂತಹ ಸಂಸ್ಥೆಗಳಿಗೆ ಯಾವುದೇ ಕೊರತೆಯಿಲ್ಲ) ಟ್ರಂಪ್‌ರನ್ನು ದುರ್ಬಲಗೊಳಿಸಲು ಈ ರೀತಿಯ ಸಂಚು ರೂಪಿಸಿರುವ ಸಾಧ್ಯತೆಗಳೂ ಇವೆ. ಆದರೆ ನಿಮಗೊಂದು ಮಾತು ಹೇಳುತ್ತೇನೆ. ಈ ರೀತಿಯ ಯಾವುದೇ ಪ್ರಯತ್ನಗಳಿಂದ ಭಾರತವನ್ನು ಲವಲೇಶವೂ ಅಲುಗಾಡಿಸಲು ಸಾಧ್ಯವಿಲ್ಲ. ಏಕೆಂದರೆ ಇದು ಹೊಸ ಭಾರತ!

ಭಟ್ಟರ್ ಸ್ಕಾಚ್

- **ಕಿಟ್ಟಿ, ಸಂಜಯನಗರ**
ಭಟ್ಟರು ತಮ್ಮ ಲೇಖನಗಳಲ್ಲಿ ಇನ್ನೂ ಜಪಾನ್‌ಗೆ ಕಚ್ಚಿಕೊಂಡಿರುವುದನ್ನು ನೋಡಿ ಅವರ ವಿರೋಧಿಗಳು ಏನನ್ನುತ್ತಿದ್ದಾರೆ?
- ಪಾನ್ ಥರಾ ಜಪಾನನ್ನು ಅಗಿಯುತ್ತಿದ್ದಾರೆ!

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ಟರು ಮುಂದಿನ ಐಪಿಎಲ್ ಹೊತ್ತಿಗೆ ಒಂದು ತಂಡದ ಮಾಲೀಕರಾಗಿರುತ್ತಾರೆ ಅಂತ ಬೆಳಗ್ಗೆ ಕಂಡ ಕನಸಿನ ಅರ್ಥವೇನು?
- ಬೆಳಗ್ಗೆ ಕಂಡ ಕನಸು ನಿಜ ಆಗುತ್ತಂತೆ!

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಸುಖ ನಿದ್ದೆ ಮುಂದೆ ಕೋಟಿನೂ ವ್ಯರ್ಥ ಅಂತ ನನ್ನವಳು ಕನವರಿಸ್ತಾಳಲ್ಲ!
- ನಿದ್ದೆಯಿಂದ ಎದ್ದ ಬಳಿಕ ಕೋಟಿಯದೇ ಕನವರಿಕೆ!

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಭಟ್ರೇ, ದೇವರು ದೊಡ್ಡವನಾ, ದುಡ್ಡು ದೊಡ್ಡದಾ?
- ಎರಡನ್ನೂ ನನ್ನ ಮುಂದೆ ಇಟ್ಟು ಈ ಪ್ರಶ್ನೆ ಕೇಳು, ಹೇಳ್ತೀನಿ!

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಕೆಲವು ಪ್ರಯತ್ನಗಳು ಫಲ ನೀಡದೇ ಹೋಗೊಲ್ಲ ಅಂತಾರಲ್ಲ?
- ನಿಜ, ಉಚ್ಚಾಟಿತರಾಗಬೇಕು ಅಂತ ಯತ್ನಾಳ್ ಎಷ್ಟೆಲ್ಲ ಪ್ರಯತ್ನ ಪಟ್ಟರು, ಈಗ ಫಲ ಸಿಕ್ಕಿತಲ್ಲ!

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಗಂಡು ಸೌಂದರ್ಯಕ್ಕೆ ಮರುಳಾಗಬಾರದು, ಹೆಣ್ಣು ಐಶ್ವರ್ಯಕ್ಕೆ ಮರುಳಾಗಬಾರದು ಅಂತಾರಲ್ಲ?
- ಬರೀ ಹೇಳ್ತಾರೆ, ಯಾರೂ ಹಾಗೆ ನಡೆದುಕೊಳ್ಳುವುದಿಲ್ಲ!

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ನಿಮ್ಮ ಬತ್ತಳಿಕೆಯಲ್ಲಿ ಇನ್ನು ಎಷ್ಟು ಉತ್ತರಗಳಿವೆ?
- ಓದುಗರ ಬತ್ತಳಿಕೆಯಲ್ಲಿ ಎಷ್ಟು ಪ್ರಶ್ನೆಗಳಿವೆ ಎಂಬುದನ್ನು ಮೊದಲು ಹೇಳು!

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ರಾಜಕಾರಣಿಗಳು ಏನೇ ಮಾಡಿದರೂ ಅದು ಸುದ್ದಿ ಆಗಲೇಬೇಕಾ?
- ಸುದ್ದಿ ಆಗೋದು ಬೇಡ ಅಂತಾನೆ ರಾಜಣ್ಣ ಶುರು ಹಚ್ಕೊಂಡ್ರು, ಆದ್ರೆ ದೊಡ್ಡ ಸುದ್ದಿ ಆಗಿಬಿಡ್ತು!

ಅನಾಮಧೇಯನ ಆಗಮನ ಮತ್ತು ನಿರ್ಗಮನ

ಕಾಡುದಾರಿ
ಹರೀಶ್ ಕೇರ
vveditoped@gmail.com

2009ರ ಜೂನ್ ಮಾಹೆಯ ಒಂದು ಮಧ್ಯಾಹ್ನ, ಕಪ್ಪು ಬಟ್ಟೆ ಧರಿಸಿದ ತೆಳ್ಳಗಿನ ವ್ಯಕ್ತಿಯೊಬ್ಬ ಐರ್ಲೆಂಡ್‌ನ ಡೆರಿ ಎಂಬ ಪಟ್ಟಣದಿಂದ ಐರಿಶ್ ಗಡಿಯಿಂದ ದೂರದಲ್ಲಿರುವ ಸಣ್ಣ ಕರಾವಳಿ ಪಟ್ಟಣವಾದ ಸ್ಲಿಗೊಗೆ ಹೋಗುವ ಬಸ್ ಹತ್ತಿದ. ಸ್ಲಿಗೊದಲ್ಲಿ ಇಳಿದು ಒಂದು ಹೋಟೆಲ್‌ನಲ್ಲಿ ಮೂರು ದಿನ ಉಳಿದುಕೊಂಡ. ಮೂರನೇ ದಿನ ಅವನ ಶವ ಅಲ್ಲಿನ ಬೀಚ್‌ನಲ್ಲಿ ದೊರೆಯಿತು. ಡೆರಿಯಿಂದ ಬಸ್ ಹತ್ತುವ ಮೊದಲು ಅವನನ್ನು ನೋಡಿದವರು ಯಾರೂ ಇರಲಿಲ್ಲ. ಅವನ ಪರಿಚಯ ಐರ್ಲೆಂಡ್‌ನಲ್ಲಂತೂ ಯಾರಿಗೂ ಇರಲಿಲ್ಲ. ಇದಾಗಿ ಹದಿನೈದು ವರ್ಷಗಳಾದ ಬಳಿಕವೂ, ಇವನು ಯಾರು ಎಂಬುದನ್ನು ಪತ್ತೆಹಚ್ಚಲು ಪೊಲೀಸರು, ಪತ್ರಕರ್ತರು ಹೆಣಗಾಡುತ್ತಲೇ ಇದ್ದಾರೆ. ಅನಾಥ ಶವವಾಗಿ ಇವನ ಕೇಸ್ ಮುಗಿದುಹೋಗಬೇಕಿತ್ತು. ಆದರೆ ಇವನು ತನ್ನ ಅಸ್ತಿತ್ವ ಮತ್ತು ಸಾವನ್ನು ಯೋಜಿಸಿಕೊಂಡ ರೀತಿ ಈ ಪ್ರಕರಣವನ್ನೂ ಬಗೆಹರಿಯದ ನಿಗೂಢವಾಗಿ ಮಾಡಿಬಿಟ್ಟಿತು.

ಪುಟ್ಟ ನಗರ ಸ್ಲಿಗೊಗೆ ಶುಕ್ರವಾರ ಸಂಜೆ ಬಸ್ಸಿನಲ್ಲಿ ಬಂದಿಳಿದ ಇವನು ಕ್ವೇ ಸ್ಟ್ರೀಟ್‌ನಲ್ಲಿದ್ದ ಸ್ಲಿಗೊ ಸಿಟಿ ಹೋಟೆಲ್‌ಗೆ ಹೋದ. ಮುಂದಿನ ಮೂರು ದಿನಗಳಿಗೆ ಒಂದು ರೂಮನ್ನು ಬುಕ್ ಮಾಡಿದ. ತನ್ನ ಹೆಸರನ್ನು ಪೀಟರ್ ಬರ್ಗ್‌ಮನ್ ಎಂದು ಬರೆದ. ವಿಳಾಸದ ಜಾಗದಲ್ಲಿ ಆಸ್ಟ್ರಿಯಾದ ನಗರವೊಂದರ ವಿಳಾಸ ನಮೂದಿಸಿದ. ಯಾರೂ ಅವನನ್ನು ಐಡಿ ಪ್ರೂಫ್ ಕೇಳಲಿಲ್ಲ. ನೀಟಾಗಿ ಡ್ರೆಸ್ ಮಾಡಿಕೊಂಡು ಸಭ್ಯನಂತೆ ಕಾಣುತ್ತಿದ್ದ ಅವನನ್ನು ಸಂಶಯಿಸಲು ಯಾರಿಗೂ ಯಾವುದೇ ಕಾರಣ ಇರಲಿಲ್ಲ. ಮರುದಿನ ಬೆಳಗ್ಗೆ ರೂಮಿನಿಂದ ಹೊರಟ ಅವನು ಸ್ಥಳೀಯ ಪೋಸ್ಟ್ ಆಫೀಸಿಗೆ ಹೋಗಿ ಕೆಲವು ಸ್ಟಾಂಪ್, ಏರ್‌ಮೇಲ್ ಸ್ಟಿಕರ್ ಕೊಂಡ. ನಗರದಲ್ಲಿ ಅಲ್ಲಿ ಇಲ್ಲಿ ಸುತ್ತಾಡಿದ. ಮರಳಿ ಹೋಟೆಲ್‌ಗೆ ಬಂದ.

ಭಾನುವಾರ ನಗರದಲ್ಲಿದ್ದ ಒಂದೇ ಒಂದು ಟ್ಯಾಕ್ಸಿ ಸ್ಟಾಂಡ್‌ಗೆ ಹೋಗಿ ಅಲ್ಲಿಂದ ಟ್ಯಾಕ್ಸಿ ಹಿಡಿದು, ಅಲ್ಲಿಗೆ ಸಮೀಪದ ಯಾವುದಾದರೂ ಪ್ರಶಾಂತ ಬೀಚ್‌ಗೆ ಕರೆದೊಯ್ಯಲು ಹೇಳಿದ. ಟ್ಯಾಕ್ಸಿಯವನು ಅವನನ್ನು ರೋಸೆಸ್ ಪಾಯಿಂಟ್‌ಗೆ ಕರೆದೊಯ್ದ. ಈತ ಕೆಲವೇ ನಿಮಿಷ ಅಲ್ಲಿದ್ದು ಹಿಂತಿರುಗಿದ. ಹೋಟೆಲ್‌ಗೆ ಬಂದು ಸಿಗರೇಟ್ ಸೇದಿದ. ಈ ನಡುನಡುವೆ ನೇರಳೆ ಬಣ್ಣದ ಪುಟ್ಟ ಬ್ಯಾಗ್‌ಗಳನ್ನು ಹಿಡಿದು ಹೊರಗೆ ಹೋಗಿ ಬರುತ್ತಿದ್ದ. ಮರಳುವಾಗ ಆ ಬ್ಯಾಗ್‌ಗಳು ಅವನ ಬಳಿ ಇರುತ್ತಿರಲಿಲ್ಲ. ಸೋಮವಾರ ಮಧ್ಯಾಹ್ನ ಹೋಟೆಲ್ ರೂಮಿನಿಂದ ಚೆಕ್‌ಔಟ್ ಮಾಡಿದ. ಸ್ಥಳೀಯ ಬಸ್ ನಿಲ್ದಾಣಕ್ಕೆ ಹೋದ. ಜೇಬಿನಲ್ಲಿದ್ದ ತಾನೇ ಬರೆದುಕೊಂಡ ಪುಟ್ಟ ಚೀಟಿಗಳನ್ನು ಹೊರತೆಗೆದು ಓದಿಕೊಂಡು ಅವುಗಳನ್ನು ಚೂರುಚೂರಾಗಿ ಹರಿದು ಡಸ್ಟ್‌ಬಿನ್‌ಗೆ ಚೆಲ್ಲಿದ. ರೋಸೆಸ್ ಪಾಯಿಂಟ್‌ಗೆ ಹೋಗುವ ಬಸ್ ಹಿಡಿದ. ಅಂದು ಸಂಜೆಯಿಡೀ ಹತ್ತಾರು ಮಂದಿ ಆತ ರೋಸೆಸ್ ಪಾಯಿಂಟ್ ಬೀಚ್‌ನಲ್ಲಿ ಪ್ರಶಾಂತವಾಗಿ ನಿಂತಿದ್ದುದು, ಓಡಾಡುತ್ತಿದ್ದುದನ್ನು ನೋಡಿದರು.

ಮರುದಿನ ಬೆಳಗ್ಗೆ ಜಾಗಿಂಗ್ ಮಾಡುತ್ತಿದ್ದವರು ಅವನ ಹೆಣವನ್ನು ಕಂಡರು. ಅದು ನೀರಿನಿಂದ ತೇಲಿಬಂದು ದಡದಲ್ಲಿ ಬಿದ್ದುಕೊಂಡಿತ್ತು. ಪೊಲೀಸರು ಬಂದರು. ವಿಚಿತ್ರ ಅನ್ನಿಸಿದ್ದು, ಈ ಮನುಷ್ಯ ತನ್ನ ಬಗ್ಗೆ ಯಾವುದೇ ಸುಳಿವನ್ನೂ ಬಿಟ್ಟುಕೊಟ್ಟಿರಲಿಲ್ಲ. ತನ್ನ ಗುರುತು ಹಿಡಿಯಲು ನೆರವಾಗಬಹುದಾದ ಎಲ್ಲ ಗುರುತುಗಳನ್ನೂ ಅಳಿಸಿ ಹಾಕಿದ್ದ. ತಾನು ಧರಿಸಿದ್ದ ಬಟ್ಟೆಗಳ ಲೇಬಲ್‌ಗಳನ್ನು ಕೂಡ ಕತ್ತರಿಸಿ ತೆಗೆದಿದ್ದ. ಅವರು ಹೋಟೆಲ್‌ನಲ್ಲಿ ಕೊಟ್ಟಿದ್ದ ಹೆಸರು ನಕಲಿಯಾಗಿತ್ತು; ಕೊಟ್ಟ ವಿಳಾಸ ಇರಲೇ ಇಲ್ಲ. ಪಟ್ಟಣದಲ್ಲಿ ಓಡಾಡುವಾಗ ಹೆಚ್ಚಾಗಿ ಸಿಸಿ ಕ್ಯಾಮೆರಾಗಳು ಇಲ್ಲದ ಕಡೆ ಓಡಾಡಿದ್ದ. ನೇರಳೆ ಬ್ಯಾಗ್‌ನಲ್ಲಿ ಆತ ತನ್ನಲ್ಲಿದ್ದ ಏನನ್ನೋ ಪ್ರತಿದಿನ ಒಯ್ದು ವಿಲೇವಾರಿ ಮಾಡುತ್ತಿದ್ದ ಎಂಬುದಂತೂ ಖಚಿತವಾಗಿತ್ತು. ಆದರೆ ಅದು ನಗರದಲ್ಲಿ ಎಲ್ಲೂ ಪತ್ತೆಯಾಗಲಿಲ್ಲ.

ಅವನ ದೇಹದ ಪೋಸ್ಟ್ ಮಾರ್ಟಮ್ ಮಾಡಿದಾಗ ಒಂದು ಅಂಶ ಗೊತ್ತಾಯಿತು– ಅವನಲ್ಲಿ ಪ್ರಾಸ್ಟೇಟ್ ಕ್ಯಾನ್ಸರ್ ಬೆಳೆದಿತ್ತು; ಮೂಳೆಯಲ್ಲಿ ಟ್ಯೂಮರ್ ಇತ್ತು. ಈ ಹಿಂದೆ

ಹಾರ್ಟ್ ಅಟ್ಯಾಕ್‌ಗಳು ಆಗಿದ್ದವು ಅಂದರೆ ಹೃದಯ ಸಮಸ್ಯೆಯಿತ್ತು. ಒಂದು ಕಿಡ್ನಿ ಇರಲಿಲ್ಲ. ಈತನ ಫೋಟೊಗಳನ್ನು ಯುರೋಪ್‌ನ ಎಲ್ಲೆಡೆ ಪಸರಿಸಿ ಯಾರಾದರೂ ಗುರುತು ಹಚ್ಚುತ್ತಾರೋ ಎಂದು ನೋಡಲಾಯಿತು. 15 ವರ್ಷಗಳಾದರೂ ಇನ್ನೂ ಯಾರೂ ಇವನು ನಮ್ಮವನು ಎಂದು ಬಂದಿಲ್ಲ. ಇಂಟರ್‌ಪೋಲ್‌ನಂಥ ಸಂಸ್ಥೆಗಳೇ ಇವನ ಗುರುತು ಹಿಡಿಯಲಾಗದೆ ಕೈಚೆಲ್ಲಿವೆ. ಅವನ ಡಿಎನ್‌ಎಗಳನ್ನೂ ಹಲ್ಲುಗಳನ್ನೂ ಕೇಶವನ್ನೂ ಐರಿಶ್ ಪೊಲೀಸರು ಸಂಗ್ರಹಿಸಿ ಇಟ್ಟಿದ್ದಾರೆ– ಮುಂದೆ ಎಂದಾದರೂ ಇವನ ಗುರುತು ಪತ್ತೆ ಹಚ್ಚಬಹುದು ಎಂಬ ಭರವಸೆಯಲ್ಲಿ.

ಡಿಎನ್‌ಎ ಮೂಲಕ ಪತ್ತೆ ಹಚ್ಚುವುದು ಅಷ್ಟು ಸುಲಭವಲ್ಲ. ಅದಕ್ಕೆ ಮ್ಯಾಚಿಂಗ್ ಆಗುವ ಮಾದರಿಗಳು ಸಿಕ್ಕಿದರೆ ಮಾತ್ರ ರಹಸ್ಯ ಭೇದಿಸಲು ಸಾಧ್ಯ. ಹೀಗೂ ಆಗಿವೆ. ಆಸ್ಟ್ರೇಲಿಯಾದ ಬೀಚ್ ಒಂದರಲ್ಲಿ 1948ರಷ್ಟು ಹಿಂದೆಯೇ ದೊರೆತ, ಸಾಮರ್ಟನ್ ಮ್ಯಾನ್ ಎಂದು ಕರೆಯಲಾಗುವ ವ್ಯಕ್ತಿ ಯಾರೆಂಬುದನ್ನು 70 ವರ್ಷಗಳ ನಂತರ ಇದೀಗ ಭೇದಿಸಲಾಗಿದೆ ಎಂದು ತಜ್ಞರು ಹೇಳಿದ್ದಾರೆ. 2001ರಲ್ಲಿ ಇದೇ ರೀತಿ ವಾಷಿಂಗ್ಟನ್‌ನ ಹೋಟೆಲೊಂದಕ್ಕೆ ಬಂದು ಆತ್ಮಹತ್ಯೆ ಮಾಡಿಕೊಂಡ ನಿಗೂಢ ವ್ಯಕ್ತಿಯ ಗುರುತನ್ನು 2018ರಲ್ಲಿ ಪತ್ತೆ ಹಚ್ಚಲಾಗಿದೆ. ಪೀಟರ್ ಬರ್ಗ್‌ಮನ್‌ನ ರಹಸ್ಯವೂ ಮುಂದೊಂದು ದಿನ ಬಯಲಾಗಬಹುದು. ಆದರೆ ಅವನು ಕೊನೆಯ ಕ್ಷಣದಲ್ಲಿ ಹೊತ್ತು ನಡೆದ ಭಾವಗಳ ಅಂದಾಜು ನಮಗೆ ಸಿಗದು.

ಇವನು ಯಾರಿರಬಹುದು ಎಂಬುದರ ಬಗ್ಗೆ ಹತ್ತಾರು ಊಹೆಗಳನ್ನು ತೇಲಿಬಿಡಲಾಗಿದೆ. ತನ್ನೆಲ್ಲ ಸುಳಿವುಗಳನ್ನೂ ಯಶಸ್ವಿಯಾಗಿ ನಾಶ ಮಾಡಿದ ರೀತಿ ನೋಡಿದರೆ, ಇವನ್ಯಾರೋ ಬೇಹುಗಾರಿಕೆಯಲ್ಲಿ ಪಳಗಿದ ವ್ಯಕ್ತಿಯೇ ಇರಬಹುದು. ಅಥವಾ ವೈರಿಗಳಿಂದ ಪಾರಾಗಲು ಬಯಸಿ ಬಂದ ಗ್ಯಾಂಗ್‌ಸ್ಟರ್ ಇರಬಹುದು. ಎರಡನೇ ಮಹಾಯುದ್ಧದಲ್ಲಿ ಮಹಾಪಾತಕಗಳನ್ನು ಎಸಗಿದ ನಾಜಿ ಕ್ರಿಮಿನಲ್‌ನ ಮಗ ಇರಬಹುದು. ಮಿಲಿಟರಿ ಅಥವಾ ತನಿಖಾ ಹಿನ್ನೆಲೆಯವನಿರಬಹುದು. ಇನ್ನೂ ಯಾರೆಂದು ಪತ್ತೆಹಚ್ಚಲಿಕ್ಕಾಗದ, ಬಿಟ್‌ಕಾಯಿನ್‌ನ ಫೌಂಡರ್, ಸತೋಷಿ ನಕಮೋಟೊ ಇರಬಹುದು. ಕೆಲವರ ಊಹೆ ಇನ್ನಷ್ಟು ವೈಲ್ಡ್ ಆಗಿತ್ತು– ಅನ್ಯ ಗ್ರಹಜೀವಿಯೇ ಆಗಿರಬಹುದು. ಅಥವಾ ರುದ್ರಮನೋಹರ ತಾಣದಲ್ಲಿ ತನ್ನ ಪಾಡಿಗೆ ತಾನು ಅನಾಮಧೇಯನಾಗಿ ಸಾಯಲು ಬಂದ ಒಬ್ಬ ಸಾಮಾನ್ಯನಿರಬಹುದು; ಆದರೆ ಹಾಗೆ ಸಾಯುವಾಗ ತನ್ನ ಗುರುತು ಯಾರಿಗೂ ಆಗದಿರಲಿ ಅಂದುಕೊಂಡಿರಬಹುದು. ಆದರೆ ಯಾವುದೂ ಸಮಂಜಸ ಊಹೆಯಾಗಿ ಕಾಣಿಸುವುದಿಲ್ಲ. ಇದ್ಯಾವುದನ್ನೂ ಸಮರ್ಥಿಸುವ ಅಂಶಗಳೂ ಇಲ್ಲ.

ಪೀಟರ್ ಬರ್ಗ್‌ಮನ್‌ನ ಕೊನೆಯ ದಿನಗಳನ್ನು ಸ್ಲಿಗೋದ ಸಿಸಿಟಿವಿ ನೆಟ್‌ವರ್ಕ್ ಮೂಲಕ ಒಟ್ಟುಗೂಡಿಸಲಾಯಿತು. ಆ ವ್ಯಕ್ತಿ ಪ್ರತಿದಿನ ಹೋಟೆಲ್‌ನಿಂದ ತನ್ನ ನೇರಳೆ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತುಂಬಿಕೊಂಡು ಹೊರಟು ಖಾಲಿ ಕೈಯಲ್ಲಿ ಹಿಂತಿರುಗುತ್ತಿದ್ದ. ನಡುವಿನ ಸಮಯದಲ್ಲಿ ಆತ ನಿಗೂಢವಾಗಿ ಕಣ್ಮರೆಯಾಗುತ್ತಿದ್ದ. ಕಣ್ಗಾವಲು ಕ್ಯಾಮೆರಾಗಳಿಂದ ಸೆರೆಹಿಡಿಯಲ್ಪಡದಂತೆ ಪಟ್ಟಣದ ವಿವಿಧ ಕಸದ ಬುಟ್ಟಿಗಳಲ್ಲಿ ತನ್ನ ವಸ್ತುಗಳನ್ನು ಚೆಲ್ಲಿರಬಹುದು. ಆದರೆ ಅವು ಸಿಗಲಿಲ್ಲ. ಅವನು ಪೋಸ್ಟ್ ಆಫೀಸ್‌ನಿಂದ ಕಳಿಸಿರಬಹುದಾದ ಲೆಟರ್‌ಗಳೂ ಯಾರಿಗೆ ಹೋದವು ಎಂದು ಗೊತ್ತಾಗಲಿಲ್ಲ. ಜೀವಂತ ಜಗತ್ತಿನಲ್ಲಿ ಒಂದು ನೆರಳು ಚಲಿಸಿದಂತೆ ಆತ ಚಲಿಸುತ್ತಿದ್ದ. ಆದರೆ ಅವನ ಪ್ರತಿಯೊಂದು ಕ್ರಿಯೆಯಲ್ಲೂ ಒಂದು ನಿಗೂಢ ಉದ್ದೇಶವಿತ್ತು.

ನಮ್ಮ ನಡುವೆ ಎಷ್ಟೋ ಜನ ತುಂಬಾ ಒಂಟಿಯಾಗಿರುತ್ತಾರೆ. ಅವರನ್ನು ನಾವು ಗಮನಿಸಿಯೂ ಗಮನಿಸದಂತೆ ಮುಂದೆ ಹೋಗುತ್ತೇವೆ. ಕೆಲವೊಮ್ಮೆ ಜನರ ನಡುವೆ ತುಂಬಾ ಬೆರೆಯುವ ಮನುಷ್ಯ ಕೂಡ ಇದು ಸಾಕಿನ್ನು ಎಂಬಂತೆ ಎದ್ದು ನಡೆದುಬಿಡುತ್ತಾನೆ. ಹಾಗಿರುವವನು ಕೂಡ ಡೆತ್ ನೋಟ್ ಬರೆದಿಡಲು ಯತ್ನಿಸುತ್ತಾನೆ. 'ತಾನೊಬ್ಬ ಬದುಕಿದ್ದೆ' ಎಂದು ಇತರರಿಗೆ ಗೊತ್ತು ಮಾಡಿಸಲು ಮುಂದಾಗುತ್ತಾನೆ. ಆದರೆ ತಾನೆಂಬ ತಾನು ಎಂದೂ ಎಲ್ಲೂ ಇರಲೇ ಇಲ್ಲ ಎಂಬಂತೆ ಎಲ್ಲ ಸಾಕ್ಷಿಗಳನ್ನೂ ಅಳಿಸಿಹಾಕಿ ಮರೆಗೆ ಸರಿಯುವುದು ಬಲು ವಿಚಿತ್ರ. ಮನುಷ್ಯನ ಮನಸ್ಸು ಮೆದುಳುಗಳು ಎಷ್ಟು ಜಟಿಲವಾಗಿ ಕಾರ್ಯಾಚರಿಸುತ್ತವೆ ಎಂಬುದರ ನಿದರ್ಶನ ಇದು.

ಆತನ ಬಗ್ಗೆ ನಮಗೆ ತಿಳಿದಿರುವ ಒಂದೇ ಅಂಶವೆಂದರೆ ಆತನ ಮಾರಕ ಕಾಯಿಲೆಗಳು. ಅವನು ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಸಾಯಬಹುದಿತ್ತು. ಆದರೆ ತನ್ನ ಸಾವಿನ ದಿನ–ಕ್ಷಣವನ್ನು ಅವನೇ ವಿವರವಾಗಿ ಯೋಜಿಸಿ ಆಯ್ಕೆ ಮಾಡಿಕೊಂಡಿದ್ದ. ಎಲ್ಲಿಯೂ ತಪ್ಪಿರಲಿಲ್ಲ. ಅದೊಂದು ಅವನ ದಾರುಣ ಬಾಳಿನ ನಡುವೆಯೂ ಅತ್ಯಂತ ಧೀರ ನಿಲುವು ಆಗಿತ್ತು; ಅವನನ್ನು ಕಾಡಿರಬಹುದಾದ ಕಟ್ಟೇಕಾಂತದ ನಡುವೆಯೂ ಅವನು ಮಾನಸಿಕ ಸ್ಥಿರತೆ ಕಾಪಾಡಿಕೊಂಡಿದ್ದ ಎನ್ನುವುದಕ್ಕೆ ಅವನು ತನ್ನ ನಿರ್ಗಮನಕ್ಕೆ ತಯಾರಿ ಮಾಡಿಕೊಂಡಿದ್ದ ರೀತಿಯೇ ಸಾಕ್ಷಿ. ಇದು ಆ ಕಾಯಿಲೆಗಳ ಮೇಲೆ ಅವನು ಸಮರ ಸಾರಿದ, ಅವುಗಳ ಮೇಲೆ ಗೆಲುವು ಸಾಧಿಸಿದ ರೀತಿಯೂ ಇರಬಹುದು. ನಮ್ಮಿಂದ ಗೆಲ್ಲಲಾಗದ ಸಂಗತಿಗಳ ಮುಂದೆ ಸೋಲದಿರಲು ನಾವು ಹೇಗೆ ಹೇಗೋ ಪ್ರಯತ್ನಿಸುತ್ತೇವಲ್ಲವೇ?

ಹೀಗೆ ತನ್ನನ್ನು ತಾನೇ ಒಂದು ರಹಸ್ಯವಾಗಿ ಪರಿವರ್ತಿಸಿಕೊಂಡು ಪೀಟರ್ ಬರ್ಗ್‌ಮನ್ ತಾನು ಪ್ರೀತಿಸುವ ಅಥವಾ ತನ್ನನ್ನು ಪ್ರೀತಿಸುವ ಜನರಿಂದ ಕಣ್ಮರೆಯಾಗಲು ಬಯಸಿದ್ದು ಯಾಕೋ? ಹಾಗೆ ಪ್ರೀತಿಸುವವರಾದರೂ ಅವನಿಗೆ ಇದ್ದರೋ ಇಲ್ಲವೋ. ಆತ್ಮಹತ್ಯೆ ಮಾಡಿಕೊಳ್ಳುವವರು ಕೊನೆಯ ಕ್ಷಣದಲ್ಲಿ ತಮ್ಮನ್ನು ಯಾರಾದರೂ ಬದುಕಿಸಲಿ ಎಂದು ಅಪ್ರಜ್ಞಾಪೂರ್ವಕವಾಗಿ ಬಯಸುತ್ತಾರೆ. ಯಾರಿಗಾದರೂ ಕರೆ ಮಾಡುತ್ತಾರೆ. ಆದರೆ ಇವನು ಅದನ್ನೇನೂ ಮಾಡಲಿಲ್ಲ. ಅವನು ಜನರಿಂದ ದೂರವಿದ್ದ. ತನ್ನ ವರ್ತನೆಯನ್ನು ಒಬ್ಬ ಪರ್‌ಫೆಕ್ಟ್ ಜಂಟಲ್‌ಮ್ಯಾನ್‌ನಂತೆ ಇಟ್ಟುಕೊಂಡಿದ್ದ. ಯಾರಾದರೂ ಎದುರಿಗೆ ಸಿಕ್ಕರೆ ಮುಗುಳ್ನಕ್ಕು ಮುಂದೆ ಹೋಗುತ್ತಿದ್ದ ಬಿಟ್ಟರೆ ಮಾತನಾಡುತ್ತಿರಲಿಲ್ಲ. ಅವನ ಕೊನೆಯ ದಿನಗಳಂತೆ ಅವನ ಬದುಕೂ ಅಷ್ಟೇ ಒಂಟಿಯಾಗಿದ್ದಿರಬಹುದೇ? ಅದು ಸಾಧ್ಯವಿದೆ. ಯಾಕೆಂದರೆ ಬದುಕಿಡೀ ಒಂದು ರೀತಿಯ ವರ್ತನೆಯಲ್ಲಿದ್ದು, ಕೊನೆಯ ಮೂರು ದಿನಗಳು ಇನ್ನೊಂದು ರೀತಿ ಇರಲು ಸಾಧ್ಯವಿಲ್ಲ.

ಇದೇ ಮೇ ತಿಂಗಳಲ್ಲಿ ನಡೆಯುತ್ತಿರುವ ಗಾಲ್‌ವೇ ಥಿಯೇಟರ್ ಫೆಸ್ಟಿವಲ್‌ನಲ್ಲಿ ಇವನ 'ಬದುಕು' ಅಥವಾ ಕೊನೆಯ ದಿನಗಳನ್ನು ಆಧರಿಸಿದ 'ಮಿ. ಬರ್ಗ್‌ಮನ್ ಆಫ್ ಡೆಡ್‌ಮ್ಯಾನ್ಸ್ ಪಾಯಿಂಟ್' ಎಂಬ ನಾಟಕ ಪ್ರದರ್ಶಿತವಾಗಲಿದೆ. ನಾಟಕಕ್ಕೆ ತೆರೆ ಬೀಳಬಹುದು; ಇವನ ನಿಗೂಢಕ್ಕೆ ತೆರೆ ಬೀಳಬಹುದೇ ಎಂಬುದಷ್ಟೆ ಕುತೂಹಲ.0

ಆಯುಷ್ಮಾನ್: ಆರ್ಥಿಕ ಕಾಳಜಿಯೋ, ಆರೋಗ್ಯ ಕಾಳಜಿಯೋ?

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

'ಅತಿ ಶಂಕಸ್ಯ ನಿವಾರಣಂ ರೋಗಸ್ಯ ಉಪಚಾರಸ್ಯ ಶ್ರೇಯಃ' ಎಂದು ಸಂಸ್ಕೃತದಲ್ಲಿ ಮತ್ತು ಇಂಗ್ಲಿಷಿನ 'ಪ್ರಿವೆನ್ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್' ಎಂದು ಗಾದೆಮಾತುಗಳು ಬಳಕೆಯಲ್ಲಿವೆ. ಇದು ವೈದ್ಯಲೋಕದಲ್ಲಿ ಅತಿಹೆಚ್ಚು ಬಳಸಲ್ಪಡುವ ಹೇಳಿಕೆಯೂ ಹೌದು!

ಪ್ರಾರಂಭಿಕ ಹಂತದಲ್ಲಿ ಮನುಷ್ಯನ ಜೀವಿತಾವಧಿ ಸರಾಸರಿ 80–90ರ ಆಚೀಚೆ ಇತ್ತು. ಇಂದು ನವಯುವಕರೇ ಹೆಚ್ಚಾಗಿ ಸಾವಿಗೀಡಾಗುತ್ತಿರುವುದು ಆಹಾರ ಸೇವನಾ ಪದ್ಧತಿಯ ಜತೆಗೆ, ಬದಲಾದ ಜೀವನಶೈಲಿಯಿಂದಾಗಿ ಕಾಯಿಲೆ, ಬದುಕಿನೊತ್ತಡ, ಅಲ್ಪಾಯುಷ್ಯದ ಕಡೆಗೆ ಸಾಗುತ್ತಿರುವ ಲಕ್ಷಣಗಳು ಗೋಚರವಾಗುತ್ತಿವೆ. ಬಿಪಿ ಎಂಬುದು ಕೇವಲ ಒಂದು ಊಹಾತ್ಮಕ ದೋಷವಾಗಿದ್ದು, ಮುಂದೆ ಇದು ಮಾರಕ ಕಾಯಿಲೆ ಪಟ್ಟಿಗೆ ಸೇರಲಿದೆ. ನಾಲ್ಕರಿಂದ ಆರು ವಯಸ್ಸಿನ ಮಕ್ಕಳಿಗೆ ಶುಗರ್, ಫ್ಯಾಟಿ ಲೀವರ್ ಸಮಸ್ಯೆಗಳು ಬರುತ್ತಿವೆ.

ನಮ್ಮ ಪೂರ್ವಜರ ವೈದ್ಯಪದ್ಧತಿ ಮತ್ತು ಆಯುರ್ವೇದ ವಿಜ್ಞಾನವು ಇಂದಿನ ಎಲ್ಲ ಆರೋಗ್ಯ ಸಮಸ್ಯೆಗಳಿಗೆ ಸರ್ವವಿಧದಲ್ಲೂ ಪರಿಹಾರ ಕೊಡಬಲ್ಲದು. ಯೂರೋಪಿಯನ್ನರಿಂದ ಬಂದ ಅಲೋಪತಿ ಪದ್ಧತಿಯತ್ತ ನಾವು ದಾಪುಗಾಲು ಹಾಕುತ್ತಿದ್ದರೆ, ಪಾಶ್ಚಾತ್ಯರು ನಮ್ಮ ಆಯುರ್ವೇದ ಪದ್ಧತಿಯನ್ನು ಗಂಭೀರವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತ ಸಾಗುತ್ತಿದ್ದಾರೆ. ಇಂತಹ ಆಯುರ್ವೇದವನ್ನು ಸಾಮಾನ್ಯ ಜನರು ತಮ್ಮ ನಿತ್ಯ ಬದುಕಿನಲ್ಲಿ ಅಳವಡಿಸಿಕೊಳ್ಳುವತ್ತ ಇದಕ್ಕೆ ಸಂಬಂಧಿಸಿದ ರಾಜ್ಯ ಸರಕಾರದ ಇಲಾಖೆಗಳು, ಅಧಿಕಾರಿಗಳು ಜಾಗೃತಿ ಮೂಡಿಸಲು ಕಾರ್ಯ ಪ್ರವೃತ್ತರಾಗಬೇಕಿತ್ತು. ಬದಲಾಗಿ, ದೇಹ ಜರ್ಜರಿತವಾಗಿ, ಹಿರಿಯಣ್ಣ ದೊಡ್ಡಣ್ಣನಂತಹ ಕಾಯಿಲೆಗಳು ಬಂದಾಗ, ಜನರು ರೋಗಿಗಳಾಗಿ ಆಸ್ಪತ್ರೆಗೆ ಎಡತಾಕುತ್ತಾರೆ. ಆಗ, ದೊಡ್ಡ ದೊಡ್ಡ ಕಾಯಿಲೆಗಳಿಗೆ ದೊಡ್ಡ ದೊಡ್ಡ ಚಿಕಿತ್ಸೆ ಎಂಬಂತೆ, ಲಕ್ಷಾಂತರ ಹಣವನ್ನು ಕೇವಲ ದೈಹಿಕ ಆರೋಗ್ಯ ಸುಧಾರಣೆಗೆ ಸುರಿಯಬೇಕಾಗುತ್ತದೆ.

ಒಂದೊತ್ತಿನ ಊಟಕ್ಕೆ ಅಂತ ದುಡಿಮೆಯ ನಂಬಿ ಬದುಕು ಕಟ್ಟಿಕೊಳ್ಳುವ ಜನಸಾಮಾನ್ಯರಿಗೆ ಗಂಭೀರ ಕಾಯಿಲೆಗಳು ಬಂದರೆ, ವಿಧಿಯಿಲ್ಲದೇ ಸಾಲ ಮಾಡಿಯಾದರೂ, ಹತ್ತಿರದ ಸುಸಜ್ಜಿತ ಆಸ್ಪತ್ರೆಗಳಿಗೆ ಸೇರಬೇಕಾಗುತ್ತಿದೆ. ಕಿಡ್ನಿ ಸಮಸ್ಯೆ, ಡಯಾಲಿಸಿಸ್, ಹೃದಯ ಶಸ್ತ್ರಚಿಕಿತ್ಸೆ, ಕ್ಯಾನ್ಸರ್‌ನಂತಹ ಗಂಭೀರ ಸಮಸ್ಯೆಗಳು ಜನರ ಬದುಕನ್ನೇ ಕಸಿದುಕೊಂಡು ಬಿಡುತ್ತಿವೆ. ಇನ್ನು ಇವುಗಳಿಂದ ಮುಕ್ತಿ ಪಡೆಯುವ ದಾರಿಯಂತೂ ಆಧುನಿಕ ವೈದ್ಯಕೀಯ ಎಷ್ಟೇ ಮುಂದುವರೆದಿದ್ದರೂ ಸಮರ್ಪಕ ಮತ್ತು ಶಾಶ್ವತ ಪರಿಹಾರ ಅಷ್ಟು ಸರಳವಾದುದಲ್ಲ.

ಲಕ್ಷಗಟ್ಟಲೆ ಹಣಕಟ್ಟಿ ಚಿಕಿತ್ಸೆ ಪಡೆದ ಬಳಿಕ, ಸಾಲದ ಹಣವನ್ನು ತೀರಿಸಲು ಸಾಯುವವರೆಗೆ ಮತ್ತೆ ದುಡಿದು ಸಾಲ ಕಟ್ಟುವಷ್ಟರಲ್ಲೇ ಆಯುಷ್ಯವೇ ಮುಗಿದು ಹೋಗಿರುತ್ತದೆ. ಇನ್ನು ಕೆಲವರು, ಇನ್ನೇನಾದರೂ ಮಾಡುವಂತೆ ಸ್ಥಳೀಯ ಶಾಸಕರ ಮನೆ ತಾಕುವುದು, ಶಾಸಕರು ಜನರ ಸಮಸ್ಯೆ ಕೇಳುತ್ತ, ಅವರು ಚಿಕಿತ್ಸೆ ಪಡೆದ ದಾಖಲೆ ಪಡೆದುಕೊಂಡು ಯಾವ ಮೂಲದಿಂದಾದರೂ ಅವರ ಮನವಿಯನ್ನು ಸರಿಮಾಡಬೇಕಾದ ಸ್ಥಿತಿ. ಈಗಲೂ ಈ ದೃಶ್ಯ ಸರ್ವೇ ಸಾಮಾನ್ಯ.

ಆಯುಷ್ಮಾನ್‌ನಂತಹ ಕೇಂದ್ರದ ಆರೋಗ್ಯ ವಿಮಾ ಯೋಜನೆಗಳು ಬರುವ ಮೊದಲಿನ ಪರಿಸ್ಥಿತಿ. ಆಯುಷ್ಮಾನ್ ಆರೋಗ್ಯ ವಿಮೆ, ಕಡುಬಡವನಿಗೂ ನಗದುರಹಿತ ಚಿಕಿತ್ಸೆ ದೊಡ್ಡ ಆಸ್ಪತ್ರೆಗಳಲ್ಲಿ ಸಿಗುವಂತೆ ಮಾಡಿದ್ದು ಸಾಮಾನ್ಯ ಕೆಲಸವೇನಲ್ಲ! ದುಡಿಮೆಯ ನಂಬಿ ಬದುಕುವ ಜನರಿಗೆ ಮಾತ್ರವೇ ಇದರ ಬೆಲೆ ಅರಿವಾದೀತು. ಇಂತಹ ಸಂದರ್ಭಗಳಲ್ಲಿ ವಿವಿಧ ರಾಜ್ಯಗಳಲ್ಲಿನ ಆಳುವ ಸರಕಾರಗಳು ಕಾಯಿಲೆಯ ಮೂಲಗಳನ್ನು ಮೊದಲು ಅರಿಯಬೇಕಿತ್ತು. ಇವುಗಳಿಗಾಗಿ, ಸಂಶೋಧನಾ ಕೇಂದ್ರಗಳನ್ನು ಯುವ ವಿಜ್ಞಾನಿಗಳಿಗೆ, ವೈದ್ಯರಿಗೋಸ್ಕರ ತೆರೆದು ಶಾಶ್ವತ ಪರಿಹಾರ ಕಂಡುಕೊಳ್ಳಬಹುದಿತ್ತು. ಬದಲಾಗಿ, ಇಡೀ ಇಲಾಖೆಗಳೇ ಮುಂದೆ ನಿಂತು ಫಾರ್ಮಾ ಕಂಪನಿಗಳ ಔಷಧ ವಿತರಣೆಯಲ್ಲಿ ತೊಡಗಿದೆಯೋ ಎಂಬ ಭಾವನೆ ಜನಸಾಮಾನ್ಯರಲ್ಲಿ ಬರುತ್ತಿದೆ.

ಕಾಯಿಲೆ ಬರದಂತೆ ತಡೆಯುವ ಮತ್ತು ಸ್ಥಳೀಯ ಪಾರಂಪರಿಕ ವಿಜ್ಞಾನವನ್ನು ಹೆಚ್ಚು ಬಳಸುವಂತೆ ಮಾರ್ಗದರ್ಶನ ಮಾಡಬೇಕಾದ ಆರೋಗ್ಯ ಇಲಾಖೆ, ಅಧಿಕಾರಿ ವರ್ಗ ಮತ್ತು ಆಡಳಿತದಲ್ಲಿರುವ ಸರಕಾರಗಳು ಕೇವಲ ಇಂಗ್ಲಿಷ್ ಮೆಡಿಸಿನ್ ವಿತರಣೆಯಲ್ಲಿ, ಸಬ್ಸಿಡಿ ಕೊಡುವಲ್ಲಿ, ಆರೋಗ್ಯ ವಿಮೆ ಜಾರಿಗೊಳಿಸುವಲ್ಲಿ ನಿರತವಾಗಿವೆ. ಆಶ್ಚರ್ಯವೆಂದರೆ, ಆರೋಗ್ಯ ಇಲಾಖೆಯ ಕಾರ್ಯವೇ ಇದು ಎಂಬಂತಹ ಮಾನಸಿಕತೆಯನ್ನು ತುಂಬಿಕೊಂಡುಬಿಟ್ಟಿವೆ. ದೇಶದಲ್ಲಿನ ಬಹುತೇಕ ರಾಜ್ಯಗಳು ಇದನ್ನೇ ಅನುಸರಿಸುತ್ತ, ಸರಕಾರಿ ನೌಕರರಿಗೆ ಹೊಂದುವ ವಿಮಾ ಪಾಲಿಸಿಗಳು, ಸಾರ್ವಜನಿಕರಿಗೆ ಹೊಂದುವ ವಿಮಾ ಪಾಲಿಸಿಗಳು ವಿವಿಧ ಹೆಸರಿನಲ್ಲಿ ಜಾರಿಯಲ್ಲಿವೆ. ಇನ್ನು ಖಾಸಗಿ ಕಂಪನಿಗಳು ಆರೋಗ್ಯ ವಿಮೆಗಳ ಸಂಖ್ಯೆಯೋ ಅಗಣಿತ!

ದೇಶದ ಜನರೆಲ್ಲ ಒಂದೇಯಾಗಿರುವುದರಿಂದ, ಹೇಗೂ ಕೇಂದ್ರ ಜಾರಿಗೆ ತಂದಿರುವ ಆಯುಷ್ಮಾನ್ ಆರೋಗ್ಯ ಯೋಜನೆಯನ್ನು ಆಮೂಲಾಗ್ರವಾಗಿ ಎಲ್ಲ ರಾಜ್ಯಗಳು ಸೇರಿ, ಇದೇ ಯೋಜನೆಯನ್ನು ಇನ್ನೂ ಬಲಪಡಿಸಿ, ಏಕರೂಪ ಆರೋಗ್ಯ ವಿಮಾ ಯೋಜನೆಯಾಗಿ ಜಾರಿಗೆ ತರಬಹುದಿತ್ತು. ಯಾವುದೇ ಯೋಜನೆಯಲ್ಲಿ ಚಿಕ್ಕಪುಟ್ಟ ದೋಷಗಳಿರುವುದು ಸಹಜ. ಅದನ್ನು ಸರಿಪಡಿಸಿ ಜನರಿಗೆ ರಾಜ್ಯ ಸರಕಾರಗಳು ತಲುಪಿಸಲು ಯತ್ನಿಸಿದ್ದಲ್ಲಿ ಯೋಜನೆ ಭಾರೀ ಮಟ್ಟದಲ್ಲಿ ದೇಶದ ಎಲ್ಲ ಆಸ್ಪತ್ರೆಗಳಲ್ಲಿ ಏಕರೂಪದಲ್ಲಿ ಸಮವಾಗಿ ಸಿಗುವಂತಾಗುತ್ತಿತ್ತು. ಜೊತೆಗೆ, ಆರ್ಥಿಕ ಲಾಭಗಳನ್ನು ರಾಜ್ಯಮಟ್ಟದಲ್ಲಿ ಪಡೆಯಬಹುದಾಗಿತ್ತು. ಇದನ್ನು ಬಿಟ್ಟು, ಹಲವು ರಾಜ್ಯಗಳು ತಮಗೆ ತಿಳಿದಂತೆ ಹಲವು ಯೋಜನೆಗಳನ್ನು ರಾಜ್ಯವ್ಯಾಪಿ ಜಾರಿಗೆ ತಂದಿವೆ. ಇವುಗಳನ್ನು ಜಾರಿಗೆ ತರುವಲ್ಲಿ ಹಲವು ಅಡೆತಡೆಗಳು, ನಿಯಮ ನೂರಾರು. ಇನ್ನು, ಜನರಲ್ಲಿ ಕೇಂದ್ರ ಯೋಜನೆ ಮತ್ತು ರಾಜ್ಯ ಯೋಜನೆ ಬಗ್ಗೆ ಯಾವಾಗಲೂ ಗೊಂದಲ, ಯಾವುದನ್ನು ಹೇಗೆ ಪಡೆಯಬೇಕೆಂದು ಅರಿಯದಂತಾಗಿದೆ.

ಇಡೀ ದೇಶದಲ್ಲಿ ಆಯಾ ರಾಜ್ಯ ಸರಕಾರಿ ಪ್ರಯೋಜಿತ ಆರೋಗ್ಯ ವಿಮಾ ಯೋಜನೆಗಳನ್ನು ಗಮನಿಸುವುದಾದರೆ, ಸುಮಾರು 17ಕ್ಕೂ ಹೆಚ್ಚು ವಿವಿಧ ಹೆಸರಿನಲ್ಲಿ ಆರೋಗ್ಯ ವಿಮಾ ಯೋಜನೆಗಳನ್ನು ಹಲವು ರಾಜ್ಯಗಳು ಜಾರಿಗೊಳಿಸಿದ್ದು, ಅವುಗಳಲ್ಲಿ ಆಯುಷ್ಮಾನ್ ಭಾರತ್ ಜತೆಗೆ ಅವಾಜ್ ಹೆಲ್ತ್ ವಿಮಾ, ಆಮ್ ಆದ್ಮಿ ಬಿಮಾ ಯೋಜನಾ, ಭಾಮಾಶಾಹಾ ಸ್ವಾಸ್ಥ್ಯ ಬಿಮಾ, ಕೇಂದ್ರ ಸರಕಾರ ಆರೋಗ್ಯ ಯೋಜನೆ, ಮುಖ್ಯಮಂತ್ರಿ ಸಮಗ್ರ ವಿಮಾ, ಎಂಪ್ಲಾಯಿಸ್ ಸ್ಟೇಟ್ ಬಿಮಾ, ಕಾರುಣ್ಯ ಆರೋಗ್ಯ ವಿಮಾ, ಮಹಾತ್ಮ ಜ್ಯೋತಿಬಾ ಪುಲೆ ಜನ್ ಆರೋಗ್ಯ ಯೋಜನಾ, ಮುಖ್ಯಮಂತ್ರಿ ಅಮೃತ ಯೋಜನಾ, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನಾ, ಡಾ.ವೈ.ಎಸ್. ಆರ್. ಆರೋಗ್ಯಶ್ರೀ ಆಂಧ್ರ ಹೆಲ್ತ್ ಕೇರ್, ತೆಲಂಗಾಣ ಸರಕಾರದ ನೌಕರರು ಮತ್ತು ಪತ್ರಕರ್ತರ ಆರೋಗ್ಯ ಯೋಜನಾ, ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನಾ, ಯಶಸ್ವಿನಿ ಹೆಲ್ತ್ ವಿಮಾ, ಪಶ್ಚಿಮ ಬಂಗಾಳ ಆರೋಗ್ಯ ಬಿಮಾ ಸೇರಿದಂತೆ 17ಕ್ಕೂ ವಿಮಾ ಯೋಜನೆಗಳನ್ನು ಜಾರಿಗೆ ತಂದಿವೆ.

ಆರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವುದು, ಮೂಲಸೌಕರ್ಯ ಖಚಿತಪಡಿಸಿಕೊಳ್ಳುವುದು ಮತ್ತು ಆರೋಗ್ಯ ವಿಮೆಯನ್ನು ಉತ್ತೇಜಿಸುವುದು ಕೂಡ ಒಂದು ಬಗೆಯ ಜನರ ಕಲ್ಯಾಣಕ್ಕಾಗಿ ಅಧಿಕಾರಿಗಳು ನಡೆಸುವ ಉತ್ಪಾದಕ ಚಟುವಟಿಕೆಗಳ ಭಾಗವಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಇಂತಹ ಕ್ರಮಗಳನ್ನು ಕೈಗೊಳ್ಳುತ್ತವೆ. ಪ್ರಧಾನಮಂತ್ರಿ ಆರೋಗ್ಯ ವಿಮಾ ಯೋಜನೆ 2018 (ಮೋದಿ ಆರೋಗ್ಯ ವಿಮಾ–18 ಎಂದೇ ಪ್ರಚಲಿತ) ದೇಶಾದ್ಯಂತ ಜಾರಿಯಲ್ಲಿದ್ದರೆ, ರಾಜ್ಯಗಳ ಸ್ಥಳೀಯ ಯೋಜನೆಗಳಲ್ಲಿ ದೊಡ್ಡ ಮೊತ್ತದ ವಿಮೆಯೊಂದಿಗೆ ಕಡಿಮೆ ಬೆಲೆಯ ವಿಮಾ ಪಾಲಿಸಿಗಳನ್ನು ನೀಡುವಂತವುಗಳಾಗಿವೆ.

ಕೇಂದ್ರದ ಆಯುಷ್ಮಾನ್ ಯೋಜನೆಯನ್ನೇ ಗಮನಿಸುವುದಾದರೆ, ರಾಷ್ಟ್ರೀಯ ಆರೋಗ್ಯ ನೀತಿಯ ಶಿಫಾರಸುಗಳಿಂದಾಗಿ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಆಯುಷ್ಮಾನ್ ಭಾರತ್ ಯೋಜನೆಯನ್ನು ಸಾರ್ವತ್ರಿಕ ಆರೋಗ್ಯ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ.

ಆಯುಷ್ಮಾನ್ ಭಾರತ್‌ಗೆ ಸಂಬಂಧಿಸಿದ ಎರಡು ಪ್ರಮುಖ ಅಂಶಗಳಿದ್ದು, ಆರೋಗ್ಯ ಹಾಗೂ ಸ್ವಾಸ್ಥ್ಯ ಕೇಂದ್ರ ಮತ್ತು ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ. ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ಖಚಿತಪಡಿಸಿಕೊಳ್ಳಲು ಒಂದು ಲಕ್ಷದ ಐವತ್ತು ಸಾವಿರ ಆರೋಗ್ಯ ಹಾಗೂ ಸ್ವಾಸ್ಥ್ಯ ಕೇಂದ್ರಗಳನ್ನು ರಚಿಸಲಾಗಿದ್ದು, ಇವುಗಳ ಮೂಲಕ ಬಡವರಿಗೆ ಆರೋಗ್ಯ ವಿಮಾ ಯೋಜನೆಯನ್ನು ಪ್ರತಿ ಕುಟುಂಬಕ್ಕೆ ವರ್ಷಕ್ಕೆ 5 ಲಕ್ಷ ರು.ಗಳ ಆರೋಗ್ಯ ರಕ್ಷಣೆಯನ್ನು ನೀಡುತ್ತದೆ.

ಕೇಂದ್ರ ಸರಕಾರ ಆರಂಭಿಸಿರುವ ಆರೋಗ್ಯ ಯೋಜನೆಗೆ ಕೇಂದ್ರ ಸರಕಾರಿ ನೌಕರರು ಅರ್ಹರು. ಉದಾಹರಣೆಗೆ, ಸುಪ್ರೀಂಕೋರ್ಟ್ ನ್ಯಾಯಾಧೀಶರು, ರೈಲ್ವೆ ಮಂಡಳಿಯ ನೌಕರರು, ಇತ್ಯಾದಿ. 50ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳು ಮತ್ತು ಪಿಂಚಣಿದಾರರನ್ನು ಒಳಗೊಂಡಿದೆ. ಅಲೋಪತಿ ಮತ್ತು ಹೋಮಿಯೋಪತಿಯನ್ನು ಸಹ ಒಳಗೊಂಡಿದ್ದು, ಸುಮಾರು 90ಕ್ಕೂ ಹೆಚ್ಚು ನಗರಗಳಲ್ಲಿ ಲಭ್ಯವಿದೆ. ಆಸ್ಪತ್ರೆಗೆ ದಾಖಲು ಮತ್ತು ಮನೆ ಆರೈಕೆಯನ್ನು ನಿಯಮ ಮತ್ತು ಷರತ್ತುಗಳ ಪ್ರಕಾರ ಈ ಯೋಜನೆ ಒಳಗೊಂಡಿದೆ. ಜೊತೆಗೆ, ಆಮ್ ಆದ್ಮಿ ಬಿಮಾ ಯೋಜನೆ ಭಾರತ ಸರಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಪ್ರಾರಂಭಿಸಿದ ಮತ್ತು ಎಲ್‌ಐಸಿ ಮೂಲಕ ಜಾರಿಗೊಳಿಸಲಾದ ಸಾಮಾಜಿಕ ಭದ್ರತಾ ಯೋಜನೆಯಾಗಿದೆ. ಕೇರಳ ರಾಜ್ಯವು ಅವಾಜ್ ಆರೋಗ್ಯ ವಿಮಾ ಯೋಜನೆಯನ್ನು 2017ರಲ್ಲಿ ಜಾರಿಗೆ ತಂದಿದ್ದು, ವಿಶೇಷವಾಗಿ ಕೇರಳದಲ್ಲಿ ಕೆಲಸ ಮಾಡುವ 5 ಲಕ್ಷಕ್ಕೂ ಅಧಿಕ ಅಂತಾರಾಜ್ಯ ವಲಸೆ ಕಾರ್ಮಿಕರಿಗೆ ಸಂಬಂಧಿಸಿದ್ದಾಗಿದೆ.

ಇನ್ನು, ಕರ್ನಾಟಕದಲ್ಲಿ ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯನ್ನು ಸಹಕಾರಿ ಸಂಘಕ್ಕೆ ಸಂಬಂಧಿಸಿದ ರೈತರು ಮತ್ತು ರೈತರಿಗಾಗಿ ರಾಜ್ಯ ಸರಕಾರವು ಪ್ರಾರಂಭಿಸಿದ್ದು, 800ಕ್ಕೂ ಹೆಚ್ಚು ಚಿಕಿತ್ಸೆಗಳನ್ನು (ಮೂಳೆಚಿಕಿತ್ಸೆ, ನರವಿಜ್ಞಾನ, ಆಂಜಿಯೋಪ್ಲ್ಯಾಸ್ಟಿ, ಇತ್ಯಾದಿ) ಒಳಗೊಳ್ಳುತ್ತದೆ. ಈ ಯೋಜನೆಯು ಮುಖ್ಯ ಫಲಾನುಭವಿಯ ಜತೆಗೆ ಕುಟುಂಬ ಸದಸ್ಯರೂ ಇದರ ಪ್ರಯೋಜನ ಪಡೆಯಬಹುದಾಗಿದೆ. ಇಷ್ಟೆಲ್ಲದರ ನಡುವೆ, ಕರ್ನಾಟಕ ಸರಕಾರವು 2025ರ ಬಜೆಟ್ ಅಧಿವೇಶನದಲ್ಲಿ ರಾಜ್ಯ ಸರಕಾರಿ ನೌಕರರಿಗೆ ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ನೂತನ ಭಿಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸಿತು. ಈ ಯೋಜನೆಯ ಕಾರ್ಯನೀತಿ ನಡೆದದ್ದು, 2020ರ ಆಸುಪಾಸಿನಲ್ಲಿ ಎನ್ನಬಹುದು.

ಕರ್ನಾಟಕ ಸರಕಾರಿ ನೌಕರರ(ವೈದ್ಯಕೀಯ ಹಾಜರಾತಿ)ನಿಯಮಗಳು 1963 The Karnataka Govt Servants(Medical Attendance)Rules 1963ರ ಅನ್ವಯ 1963ರ ನಿಯಮಗಳಂತೆ ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸರಕಾರಿ ನೌಕರರು ಮಾನ್ಯತೆ ಹೊಂದಿರುವ ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ಪಡೆದ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ದರಪಟ್ಟಿಯನ್ವಯ ಆಯಾ ಇಲಾಖಾ ಹಂತದ ನಿಯಂತ್ರಣಾಧಿಕಾರಿಗೆ (ನೋಂದಾಯಿತವಲ್ಲದ ಖಾಸಗಿ ಆಸ್ಪತ್ರೆಯಲ್ಲೂ ತುರ್ತುಚಿಕಿತ್ಸೆ ಪಡೆಯಲು ಅನುವಾಗುವಂತೆ ನಿಯಮ ಸಡಿಲಿಸಿ) ಮಂಜೂರು ಮಾಡಲು ಇದರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸರಕಾರಿ ನೌಕರರು ಮತ್ತು ಅವರ ಅವಲಂಬಿತರು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಏಳು ಗಂಭೀರ ಕಾಯಿಲೆಗಳಿಗೆ ನಗದುರಹಿತ ಚಿಕಿತ್ಸೆ ನೀಡುವ ಜ್ಯೋತಿ ಸಂಜೀವಿನಿ ಯೋಜನೆ ಮತ್ತು ನಗದು ರಹಿತ ಆರೋಗ್ಯ ಸೇವೆಗಳನ್ನು ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಇದರಲ್ಲಿ ಜ್ಯೋತಿ ಸಂಜೀವಿನಿ ಯೋಜನೆ, ರಾಜ್ಯ ಸರಕಾರಿ ನೌಕರರು ಮತ್ತು ಅವರ ಕುಟುಂಬಗಳಿಗೆ ನಗದು ರಹಿತ ಆರೋಗ್ಯ ಸೇವೆಗಳನ್ನು ಒದಗಿಸುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಜಾರಿಗೆ ತಂದಿದ್ದು, ಸರಕಾರಿ ನೌಕರರು ಮತ್ತು ಅವರ ಕುಟುಂಬಗಳು ಆರ್ಥಿಕ ಹೊರೆಯಿಲ್ಲದೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಈ ಯೋಜನೆ ಹೊಂದಿದೆ.

ಇಷ್ಟೆಲ್ಲ ಯೋಜನೆಗಳಿದ್ದೂ, ಮತ್ತಷ್ಟು ಯೋಜನೆಗಳನ್ನು ಜಾರಿಗೆ ತರುವ ಉದ್ದೇಶಗಳನ್ನು ನೋಡಿದರೆ, ಜನರ ಆರೋಗ್ಯ ಕಾಳಜಿಯ ಬದಲು, ಆರ್ಥಿಕ ಕಾಳಜಿಯನ್ನಿಟ್ಟುಕೊಂಡು ರೂಪಿಸುತ್ತಿರುವಂತೆ ಕಂಡು ಬರುತ್ತಿದೆ. ಆರೋಗ್ಯ ಕಾಪಾಡಿಕೊಳ್ಳಲು ಇಲ್ಲಿಯವರೆಗೆ ಒಂದೇ ಒಂದು ಇಲಾಖೆಯಿಲ್ಲದಿರುವುದು ಆಶ್ಚರ್ಯಕರ.

'ಆರೋಗ್ಯ ಮತ್ತು ಜೀವನ ಪದ್ಧತಿ ಇಲಾಖೆ' ಎಂಬ ಸರಕಾರಿ ಇಲಾಖೆಯನ್ನು ಇದಕ್ಕಾಗಿ ಪ್ರಾರಂಭಿಸಿ, ಅನಾರೋಗ್ಯ ಬರದಂತೆ ಸ್ವಸ್ಥ ಜೀವನ ಕಾಯ್ದುಕೊಳ್ಳಲು ಹಣ್ಣುಗಳ ಬಳಕೆ, ಆಹಾರಗಳ ಸೇವನಾ ತರಬೇತಿ, ದಿನದ ಆರೋಗ್ಯಯುಕ್ತ ವೇಳಾಪಟ್ಟಿ, ಇತರೆ ಮಾರ್ಗದರ್ಶನ ನೀಡುವಂತಹ ವಿಶೇಷ ಮತ್ತು ಹೊಸತು ಜನಜೀವನಕ್ಕೆ ಬೇಕಿದೆ. ದೂರದೃಷ್ಟಿ ಇರುವ ನಾಯಕರು, ಸರ್ಕಾರಗಳು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬೆಲೆ ಏರಿಕೆ ಮರುಪರಿಶೀಲಿಸಿ

ಹಾಲು, ಕಾಫಿ, ಟೀ ವಿದ್ಯುತ್ ಇವುಗಳ ಬೆಲೆ ಏರಿಕೆಯಾದಾಗ ಅವುಗಳ ಬಳಕೆ ನಿಯಂತ್ರಣ ಮಾಡಿಕೊಳ್ಳಬಹುದೆಂದೆವು. ಆದರೆ ಡೀಸೆಲ್ ಬೆಲೆ ಏರಿಕೆಯಿಂದ ದಿನ ಬಳಕೆಯ ಪ್ರತೀ ವಸ್ತುವಿನ ಬೆಲೆ ಖಂಡಿತ ಹೆಚ್ಚಾಗುತ್ತದೆ. ಇದು ಜನಸಾಮಾನ್ಯರಿಗೆ ಬರೆ ಎಳೆಯಲಿದೆ. ಅಮೆರಿಕ ಸರಕಾರ ಆಮದು ವಸ್ತುಗಳ ಮೇಲೆ ಪ್ರತಿಸುಂಕ ಹೇರುವ ಮೂಲಕ ಆ ದೇಶದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದೆ. ನಮ್ಮ ಸರಕಾರ ಟೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮೂಲಕ ನಮ್ಮ ಕೈಗಾರಿಕೆಗಳಿಗೆ ಹೆಚ್ಚಿನ ಹೊರೆ ನೀಡಿ ಆ ಹೊರೆಯನ್ನು ಸಹ ನಮ್ಮ ಮೇಲೆ ಹೊರಿಸುತ್ತಿವೆ. ಸರಕಾರವು ಬೆಲೆ ಏರಿಸುವ ಮುನ್ನ ಒಮ್ಮೆ ಸಾಮಾನ್ಯನ ದಿನ ಕೆಲಸದ ಸಮಯ, ಅದಕ್ಕೆ ಸಿಗುತ್ತಿರುವ ಕೂಲಿ, ಕುಟುಂಬ ನಿರ್ವಹಣೆ, ಮಕ್ಕಳ ಶಾಲಾ ಶುಲ್ಕ, ಆಸ್ಪತ್ರೆ ಖರ್ಚು ಮತ್ತು ಹೊಸ ಕರ ಭಾರದಿಂದ ಮಣ್ಣು ಪಾಲಾಗುತ್ತಿರುವ ಅವರು ಕನಸುಗಳು ಮತ್ತು ಸಂತೋಷ ಈ ಕುರಿತು ಒಮ್ಮೆ ಯೋಚಿಸಬೇಕು. ದಯವಿಟ್ಟು ಡೀಸೆಲ್ ದರ ಏರಿಕೆಯ ನಿಮ್ಮ ನಿರ್ಣಯವನ್ನು ಮರು ಪರಿಶೀಲಿಸಿ

ಎಸ್ ನಾಗರಾಜ ನಾಗೂರ, ಬಾಗಲಕೋಟೆ

ಸರಕಾರಿ ಶಾಲೆ ನಮ್ಮ ಹೊಣೆ

ಇತ್ತೀಚೆಗೆ ಸರಕಾರಿ ಶಾಲೆಗೆ ಸ್ವಂತ ಖರ್ಚಿನಲ್ಲಿ ಬೋರ್‌ವೆಲ್ ಕೊರೆಯಿಸಿದ ಶಿಕ್ಷಕಿಯರು ಎಂಬ ಸುದ್ದಿ ಓದಿ ತುಂಬಾನೇ ಖುಷಿ ಆಯಿತು. ಸರಕಾರಿ ಶಾಲೆ ಎಂದರೆ ಎಲ್ಲದಕ್ಕೂ ಸರಕಾರವೇ ಹೊಣೆ ಹೊರಲಿ ಎಂದು ಉದಾಸೀನ ತೋರುವವರೇ ಹೆಚ್ಚು, ಅಂಥದ್ದರಲ್ಲಿ ಸರಕಾರಿ ಶಾಲೆಯ ಮಕ್ಕಳಿಗೆ ನೀರಿನ ಅಭಾವ ಉಂಟಾದಾಗ ಸರಕಾರದ ನೆರವಿಗೆ ಕಾಯದೆ ತಮ್ಮ ಸ್ವಂತ ಹಣದಲ್ಲಿ 2.50 ಲಕ್ಷ ರು. ವ್ಯಯಿಸಿ ಬೋರ್‌ವೆಲ್ ಕೊರೆಯಿಸಿದ ಚಿಕ್ಕಮಗಳೂರು ಜಿಲ್ಲೆ ಮಾಚಗೊಂಡನಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬರು ಶಿಕ್ಷಕಿಯರ ಕಾರ್ಯ ಸಾಧನೆ ನಿಜಕ್ಕೂ ಪ್ರಸಂಶನಾರ್ಹ. ಮಕ್ಕಳ ಭವಿಷ್ಯಕ್ಕಾಗಿ ಚಿಂತಿಸುವ ಇಂತಹ ಶಿಕ್ಷಕರು ಸಿಗುವುದು ಬಹಳ ಅಪರೂಪ. ಇವರಿಬ್ಬರ ನಡೆ ಎಲ್ಲರಿಗೂ ಮಾದರಿ. ರಾಜ್ಯದ ಬಹುತೇಕ ಸರಕಾರಿ ಶಾಲೆಗಳು ಹಲವು ಮೂಲಭೂತ ಸೌಲಭ್ಯಗಳ ಕೊರತೆಯನ್ನು ಅನುಭವಿಸುತ್ತಿವೆ. ಕುಡಿಯುವ ನೀರು ಸೇರಿದಂತೆ ಶೌಚಾಲಯ, ಆಸನ ವ್ಯವಸ್ಥೆ, ಆಟದ ಮೈದಾನ, ಉತ್ತಮ ಕಟ್ಟಡ, ಶೈಕ್ಷಣಿಕ ಉಪಕರಣಗಳು ಮತ್ತು ಶಿಕ್ಷಕರ ಕೊರತೆ ಮುಂತಾದವುಗಳು ಶಾಲೆಯಲ್ಲಿನ ಶಿಕ್ಷಣದ ಮಟ್ಟವನ್ನು ಕುಗ್ಗಿಸುತ್ತಿವೆ. ಈ ಕಾರಣಗಳಿಂದಲೇ ನಮ್ಮ ಸರಕಾರಿ ಶಾಲೆಗಳು, ವಿದ್ಯಾರ್ಥಿಗಳು ಹಾಗೂ ಪಾಲಕರನ್ನು ಸೆಳೆಯುವಲ್ಲಿ ವಿಫಲವಾಗುತ್ತಿವೆ. ಸರಕಾರಿ ಶಾಲಾ ಸಮಸ್ಯೆಗಳನ್ನು ಸರಕಾರವೇ ನಿವಾರಣೆ ಮಾಡಲಿ ಎಂಬ ಧೋರಣೆ ತಪ್ಪಬೇಕಿದೆ. ನಮ್ಮ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸಮಾಜದ ಪ್ರತಿಯೊಬ್ಬರು ಕೈಜೋಡಿಸುವುದು ಅಗತ್ಯವಾಗಿದೆ.

ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ಒಳ ಮೀಸಲು ಜಾರಿಯಾಗಲಿ

ಪರಿಶಿಷ್ಟ ಜಾತಿಗಳಲ್ಲಿ 101 ವಿವಿಧ ಉಪ ಜಾತಿಗಳು ನಮೂದಾಗಿದ್ದು ಈ ಸಮುದಾಯಗಳಿಗೆ ಒಳ ಮೀಸಲಾತಿ ಕಲ್ಪಿಸುವ ಸಂಬಂಧ ರಾಜ್ಯ ಸರಕಾರ ನೇಮಿಸಿದ್ದ ನಾಗಮೋಹನ್ ದಾಸ್ ಆಯೋಗದ ಮಧ್ಯಂತರ ವರದಿ ರಾಜ್ಯ ಸರಕಾರದ ಕೈ ತಲುಪಿದ್ದು, ಸದ್ಯ ಆಯೋಗದ ವರದಿಯನ್ನು ಸಚಿವ ಸಂಪುಟ ಅಂಗೀಕರಿಸಿದೆ. ಈಗ ಮತ್ತೊಮ್ಮೆ ಒಳಮೀಸಲಾತಿಯ ಅನುಷ್ಠಾನದ ಬಗ್ಗೆ ಹೊಸ ಸಮೀಕ್ಷೆ ನಡೆಸಲು ನಾಗಮೋಹನ್ ದಾಸ್ ಸಮಿತಿಗೆ ಸೂಚಿಸಲಾಗಿದೆ. ಈ ಸಮೀಕ್ಷೆಯನ್ನು 60 ದಿನದೊಳಗೆ ಪೂರ್ಣಗೊಳಿಸಿ ಸರಕಾರಕ್ಕೆ ವರದಿ ಸಲ್ಲಿಸಲು ಸೂಚಿಸಲಾಗಿದೆ. ಇನ್ನು ಕೆಲವೇ ತಿಂಗಳಲ್ಲಿ ಹಂತ ಹಂತವಾಗಿ ತಾಲೂಕು,ಜಿಲ್ಲಾ ಪಂಚಾಯತ್ ಚುನಾವಣೆ, ತದನಂತರ, ಪಟ್ಟಣ ಪಂಚಾಯಿತಿ, ಪುರಸಭೆ,ನಗರಸಭೆ, ಪಾಲಿಕೆ ಚುನಾವಣೆಗಳು ನಡೆಯಲಿವೆ. ಸರಕಾರವು ಒಳ ಮೀಸಲಾತಿ ಜಾರಿ ಅನುಷ್ಠಾನಕ್ಕೆ ತರುವಲ್ಲಿ ಮೀನಮೇಷ ಎಣಿಸುತ್ತಾ ಇನ್ನಷ್ಟು ವಿಳಂಬ ನೀತಿ ಅನುಸರಿಸುತ್ತಾ ಹೋದರೆ ಕಳೆದ ಕೆಲವು ವರ್ಷಗಳಿಂದ ನೇಮಕಾತಿ ಪ್ರಕ್ರಿಯೆ ನಡೆಯದೆ ವಯಸ್ಸಿನ ಮಿತಿ ಮೀರಿ ಅರ್ಹತೆ ಕಳೆದುಕೊಳ್ಳುವ ಭೀತಿಯಲ್ಲಿರುವ ಲಕ್ಷಾಂತರ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ. ಒಳ ಮೀಸಲಾತಿ ಜಾರಿ ಅನುಷ್ಠಾನದಲ್ಲಿ ದಿಟ್ಟ ಹೆಜ್ಜೆ ಇಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇದರ ಅನುಷ್ಠಾನದಲ್ಲೂ ಹೆಚ್ಚಿನ ಮತುವರ್ಜಿ ವಹಿಸಬೇಕಿದೆ.

ಅನಿಲ್ ಕುಮಾರ್, ನಂಜನಗೂಡು

ಭಾರತ ರತ್ನ ಸಿಗಲಿ

ತುಮಕೂರು ಸೇರಿದಂತೆ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಸಿದ್ಧಗಂಗಾ ಮಠದ ಡಾ. ಶಿವಕುಮಾರ ಸ್ವಾಮೀಜಿಯವರ 118ನೇ ಜಯಂತಿ ಹಾಗೂ ಗುರುವಂದನ ಮಹೋತ್ಸವವನ್ನು ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ಅರ್ಥಪೂರ್ಣವಾಗಿ ಆಚರಿಸುತ್ತಿರುವುದು ಭಕ್ತರಲ್ಲಿ, ಕನ್ನಡಿಗರಲ್ಲಿ ಸಂತಸ ಮೂಡಿಸಿದೆ. ಕರ್ನಾಟಕ ರತ್ನ, ತ್ರಿವಿಧ ದಾಸೋಹಿ ಡಾ. ಶಿವಕುಮಾರ ಸ್ವಾಮೀಜಿಯವರ ಸಾಧನೆಗೆ, ಪ್ರತಿಭೆಗೆ ನೊಬೆಲ್ ಗೌರವ ಸಿಗಬೇಕಾಗಿತ್ತು. ಆದರೆ ಕೇಂದ್ರ ಸರಕಾರ ಇಷ್ಟು ವರ್ಷಗಳಾದರೂ ಡಾ. ಶಿವಕುಮಾರ ಸ್ವಾಮೀಜಿಯವರಿಗೆ 'ಭಾರತರತ್ನ' ಗೌರವ ಏಕೆ ಪ್ರಕಟಿಸಲಿಲ್ಲ ಎನ್ನುವ ಭಕ್ತರ, ಕನ್ನಡಿಗರ ಅಸಮಾಧಾನಕ್ಕೆ ಕೇಂದ್ರದ ಉತ್ತರಿಸಬೇಕಾಗಿದೆ. ಈ 118ನೇ ಜಯಂತಿಯ ಸವಿ ಸಂಭ್ರಮದಲ್ಲಿಯಾದರೂ ಕೇಂದ್ರ ಸರಕಾರ ಭಾರತರತ್ನ ನೀಡುವ ನಿರ್ಧಾರ ಪ್ರಕಟಿಸಲಿ. ಯಡಿಯೂರಪ್ಪ, ವಿ.ಸೋಮಣ್ಣ ಹಾಗೂ ರಾಜ್ಯದ ಇನ್ನಿತರ ಬಿಜೆಪಿ ಜನಪ್ರತಿನಿಧಿಗಳು, ಸಂಸದರು, ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕಿ ಈ ವರ್ಷವೇ ಸಿದ್ಧಗಂಗಾ ಶ್ರೀಯವರಿಗೆ 'ಭಾರತರತ್ನ ಗೌರವ ಸಿಗುವಂತೆ ಮಾಡಿ ಭಕ್ತರ ಕನ್ನಡಿಗರ ಕನಸು ನನಸು ಮಾಡಲಿ. ಹಾಗೆಯೇ ತುಮಕೂರಿನ ರೈಲು ನಿಲ್ದಾಣಕ್ಕೆ ಡಾ. ಶಿವಕುಮಾರ ಸ್ವಾಮೀಜಿಯವರ ಹೆಸರನ್ನು ನಾಮಕರಣ ಮಾಡುವುದಾಗಿ ಕೇಂದ್ರ ಸರಕಾರ ಒಪ್ಪಿಗೆ ನೀಡಿ 6 ತಿಂಗಳಾದರೂ ಈ ಆದೇಶಕ್ಕೆ ರಾಜ್ಯ ಸರ್ಕಾರ ಸಹಿ ಹಾಕದೇ ಮೌನವಾಗಿರುವುದು ಬೇಸರದ ಸಂಗತಿ. ರಾಜ್ಯ ಸರಕಾರ ಡಾ. ಶಿವಕುಮಾರ ಸ್ವಾಮೀಜಿಯವರ 118ನೇ ಜಯಂತಿಯ ಸವಿನೆನಪಿನ ಹಿನ್ನೆಲೆಯಲ್ಲಿ ಸ್ವಾಮೀಜಿಯವರ ಹೆಸರಿನಲ್ಲಿ ಸಮಾಜಕ್ಕೆ ಉಪಯೋಗವಾಗುವ ಅರ್ಥಪೂರ್ಣ ಹೊಸ ಯೋಜನೆಗಳನ್ನು ಆರಂಭಿಸಲಿ. ಸ್ವಾಮೀಜಿಯವರ ತ್ರಿವಿಧ ದಾಸೋಹ ರಾಜ್ಯದ ಜನಪ್ರತಿನಿಧಿ ಗಳಿಗೆ, ಅಧಿಕಾರಿಗಳಿಗೆ, ಜನತೆಗೆ ಮಾದರಿ ಪಾಠವಾಗಲಿ.

ಮಂಜುಳಾ ರಾಮಶೇಷ, ಹುಲಿಮಂಗಲ

ಕೋವಿಡ್‌ನಿಂದ ಪಾಠ ಕಲಿತೆವಾ?

ಕಾಂಗ್ರೆಸ್ ಸಂಸದರಾದ ಶಶಿ ತರೂರ್ ಅವರ ಕೋವಿಡ್ ಕುರಿತಾದ ಲೇಖನ ಓದಿ ಆಶ್ಚರ್ಯ ಮತ್ತು ಸಂತೋಷ ಎರಡೂ ಆಯಿತು. ಕಾಂಗ್ರೆಸ್ ಸದಸ್ಯರೊಬ್ಬರು ಎನ್‌ಡಿಎ ಸರಕಾರವನ್ನು ಹೊಗಳಿದ್ದು ನೋಡಿ ಆಶ್ಚರ್ಯವಾಯಿತು. ಕೋವಿಡ್ ಸಮಯದಲ್ಲಿ ಸರಕಾರಗಳು ನಡೆದುಕೊಂಡ ರೀತಿಯ ಬಗ್ಗೆ ಟೀಕೆಗಳಿರಬಹುದು. ಕೆಲವರು ಯದ್ವಾತದ್ವಾ ದುಡ್ಡು ಮಾಡಿರಬಹುದು. ಆದರೆ ಜನರ ಆರೋಗ್ಯದ ಬಗ್ಗೆ ತೋರಿದ ಕಾಳಜಿ ಮತ್ತು ಅದನ್ನು ನಿರ್ವಹಿಸಿದ ರೀತಿ ಶ್ಲಾಘನೀಯ. ಆದರೆ ಕೋವಿಡ್ ನಂತರದ ದಿನಗಳಲ್ಲಿ ಸರಕಾರಗಳು, ಆಸ್ಪತ್ರೆಗಳು, ವೈದ್ಯರು, ರಾಜಕಾರಣಿಗಳು ಮತ್ತು ನಾಗರಿಕರೆನಿಸಿಕೊಂಡವರು ನಡೆದುಕೊಳ್ಳುತ್ತಿರುವ ರೀತಿ ನೋಡಿದರೆ ಸಂಕಟ ಮತ್ತು ಅಸಹ್ಯ ಎರಡೂ ಒಟ್ಟೊಟ್ಟಿಗೇ ಆಗುತ್ತದೆ. ಭಾರತವನ್ನು ಸಿಂಗಾಪುರ ಮತ್ತು ಪಾಶ್ಚಾತ್ಯ ದೇಶಗಳಂತೆ ಕಸ ಮುಕ್ತ ದೇಶವನ್ನಾಗಿ ಮಾಡುವ ಸುವರ್ಣಾವಕಾಶವಿತ್ತು. ಕೋವಿಡ್ ಬಳಿಕ ಜನರು ರಸ್ತೆ ಮೇಲೆ ಉಗಿಯುವುದು, ಸಿಂಬಳ ಸೀದುವುದು, ಎಂಜಲು–ಮುಸುರೆ ಚೀಲವನ್ನು ಎಲ್ಲೆಂದರಲ್ಲಿ ಎಸೆಯುವುದು, ನೋಟನ್ನು ಎಣಿಸುವಾಗ ಎಂಜಲು ಹಚ್ಚುವುದು, ತರಕಾರಿ ಅಂಗಡಿಯವನು ಕವರನ್ನು ಓಪನ್ ಮಾಡುವಾಗ ಎಂಜಲನ್ನು ಉಪಯೋಗಿಸುವುದು ಮುಂತಾದ ಕಾರ್ಯಗಳಿಗೆ ಕಾಯಂ ಆಗಿ ಆಗಿ ಬ್ರೇಕ್ ಹಾಕಬಹುದಿತ್ತು. ಕೋವಿಡ್ ಮಾರಿಯ ವೇಳೆ ಅನುಸರಿಸಿದ ಎಚ್ಚರಿಕೆ ಮತ್ತು ಶಿಸ್ತನ್ನು ಮುಂದುವರಿಸಿ ಸರಕಾರವು ನೈರ್ಮಲ್ಯದ ಕಡೆ ಹೆಚ್ಚು ಒತ್ತು ಕೊಡಬೇಕಿತ್ತು. ಈ ನಿಯಮಗಳನ್ನು ಉಲ್ಲಂಘಿಸಿದವರಿಗೆ ಕಠಿಣ ಶಿಕ್ಷೆ ವಿಧಿಸಿದ್ದರೆ ಇಷ್ಟೊತ್ತಿಗೆ ನಮ್ಮ ದೇಶವೂ ಸ್ವಚ್ಛ ಮತ್ತು ಕಸ ಮುಕ್ತ ದೇಶವಾಗಿರುತ್ತಿತ್ತು. ಈ ವಿಚಾರದಲ್ಲಿ ಸದ್ಯಕ್ಕಂತೂ ನಮ್ಮ ದೇಶ ಸುಧಾರಣೆ ಕಾಣುವ ಲಕ್ಷಣಗಳಿಲ್ಲ

ರಘುಪತಿ ಬಿ.ಜೆ, ಬೆಂಗಳೂರು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 79

ಸಮಾಚಾರ ಸಣ್ಣದಲ್ಲ

ಹೈದರಾಬಾದ್ ವಿವಿ ವಿದ್ಯಾರ್ಥಿಗಳಿಗೆ ಲಾಠಿ

ಹೈದರಾಬಾದ್: ಬಹು–ಮೂಲಸೌಕರ್ಯ ಮತ್ತು ಐಟಿ ಪಾರ್ಕ್ ಅಭಿವೃದ್ಧಿ ಉದ್ದೇಶಕ್ಕಾಗಿ ತೆಲಂಗಾಣದ ಕಾಂಗ್ರೆಸ್ ಸರಕಾರ ಹರಾಜು ಹಾಕಲು ಯೋಜಿಸಿರುವ 400 ಎಕರೆ ಕಾಂಚ ಗಚಿಬೌಲಿ ಪ್ರದೇಶದ ಅರಣ್ಯ ಭೂಮಿ ತೆರವು ವಿರೋಧಿಸಿ ಹೈದರಾಬಾದ್ ವಿಶ್ವವಿದ್ಯಾಲಯದ ನೂರಾರು ವಿದ್ಯಾರ್ಥಿಗಳು 2 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದು, ಅವರ ಮೇಲೆ ಬುಧವಾರ ಬೆಳಗ್ಗೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ. ಈ ಮಧ್ಯೆ, ವಿದ್ಯಾರ್ಥಿಗಳ ಹೋರಾಟ ಬೆಂಬಲಿಸಿ ಬುಧವಾರ ಮಾತನಾಡಿದ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಶಾಸಕಿ ಕೆ.ಕವಿತಾ, ಮೂಲ ಸೌಕರ್ಯ ಅಭಿವೃದ್ಧಿಗೆ ಜಾಗದ ಅಗತ್ಯವಿದ್ದರೆ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಈ ಹಿಂದೆ ಹಂಚಿಕೆ ಮಾಡಲಾಗಿರುವ 397 ಎಕರೆ ಜಾಗವನ್ನು ಬಳಸಿಕೊಳ್ಳಬಹುದಾಗಿದೆ. ಆದರೆ, ಕಾಂಗ್ರೆಸ್ ಸರಕಾರ ಹೈದರಾಬಾದ್ ವಿವಿ ವ್ಯಾಪ್ತಿಯ 2,500 ಎಕರೆಯನ್ನು ಗುರಿಯಾಗಿಸಿಕೊಂಡಿದೆ. ಇದರಿಂದ ಕಾಂಚ ಗಚಿಬೌಲಿ ಪ್ರದೇಶದಲ್ಲಿನ ಜೀವವೈವಿಧ್ಯಕ್ಕೆ ಹಾನಿಯಾಗುತ್ತದೆ. ಶೈಕ್ಷಣಿಕ ವಾತಾವರಣಕ್ಕೆ ತೊಡಕುಂಟು ಮಾಡುತ್ತದೆ ಎಂದು ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಆರೆಸ್ಸೆಸ್‌ನ ಶ್ರೀನಿವಾಸ್ ಹತ್ಯೆ: ಸಿಪಿಐ ಸದಸ್ಯರಿಗೆ ಜಾಮೀನು

ಪಾಲಕ್ಕಾಡ್: ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿ 2022ರಲ್ಲಿ ನಡೆದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ(ಆರ್‌ಎಸ್‌ಎಸ್) ಮುಖಂಡ ಶ್ರೀನಿವಾಸನ್ ಹತ್ಯೆ ಪ್ರಕರಣದ ಆರೋಪಿಗಳಾದ ಸಿಪಿಐನ 10 ಸದಸ್ಯರಿಗೆ ಕೇರಳ ಹೈಕೋರ್ಟ್‌ನ ನ್ಯಾ.ರಾಜಾ ವಿಜಯರಾಘವನ್ ಮತ್ತು ನ್ಯಾ.ಪಿ.ವಿ.ಬಾಲಕೃಷ್ಣನ್ ಅವರ ಪೀಠ ಬುಧವಾರ ಜಾಮೀನು ಮಂಜೂರು ಮಾಡಿದೆ.

ಶ್ರೀನಿವಾಸನ್ ಹತ್ಯೆ ಪ್ರಕರಣದ ವಿಚಾರಣೆ ನಡೆಸಿರುವ 'ಎನ್‌ಐಎ ವಿಶೇಷ ನ್ಯಾಯಾಲಯ' ಈ ಮೊದಲು ಜಾಮೀನು ನಿರಾಕರಿಸಿತ್ತು. ಹಾಗಾಗಿ 11 ಆರೋಪಿಗಳು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. 2022ರ ಏ.15ರಂದು ಪಿಎಫ್‌ಐ ಮುಖಂಡ ಸುಬೈರ್ ಕೊಲೆಯಾದ ನಂತರದಲ್ಲಿ 24 ಗಂಟೆ ಯೊಳಗೇ ಆರ್‌ಎಸ್‌ಎಸ್ ಮಾಜಿ ಜಿಲ್ಲಾ ಮುಖಂಡ ಎಸ್.ಕೆ.ಶ್ರೀನಿವಾಸ್ ಮೇಲೆ ಪಾಲಕ್ಕಾಡ್‌ನ ಮೇಲ ಮುರಿಯಲ್ಲಿನ ಅವರ ಮೋಟಾರ್‌ಬೈಕ್ ಅಂಗಡಿ ಯಲ್ಲಿ 6 ಜನರ ತಂಡ ದಾಳಿ ನಡೆಸಿ ಕೊಲೆ ಮಾಡಿತ್ತು. ಈ ಪ್ರಕರಣದ ಆರೋಪಿಗಳ ಪಟ್ಟಿಯಲ್ಲಿ 51 ಜನರ ಹೆಸರಿದೆ. ಅವರಲ್ಲೊಬ್ಬರು ಸಾವನ್ನಪ್ಪಿದ್ದಾರೆ. 7 ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಉಳಿದ 43 ಜನರ ವಿರುದ್ಧ 2022ರ ಜುಲೈ ಮತ್ತು ಡಿಸೆಂಬರ್‌ನಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ದೋಷಾರೋಪ ಪಟ್ಟಿ ಸಲ್ಲಿಸಿದೆ.

ವಿರಾಮ
ಪ್ರತಿ ಭಾನುವಾರ

ಕೃಷ್ಣಾಘಾಟಿಯಲ್ಲಿ ಬಾಂಬ್ ಸ್ಫೋಟ, ಗುಂಡಿನ ಚಕಮಕಿ | ಭಾರತ ಪ್ರಬಲ ಪ್ರತಿದಾಳಿ–ಪಾಕ್ ಕಡೆ 4–5 ಸಾವು ಶಂಕೆ
ಎಲ್‌ಒಸಿಯಲ್ಲಿ ಪಾಕ್‌ನಿಂದ ಕದನ ವಿರಾಮ ಉಲ್ಲಂಘನೆ | ಭಾರತವನ್ನು ವಿನಾಕಾರಣ ಪ್ರಚೋದಿಸಲು ಪಾಕ್ ಯತ್ನ

ಪೂಂಚ್ ಗಡಿರೇಖೆ ದಾಟಿದ ಪಾಕ್: ಭಾರತ ತಕ್ಕ ಪ್ರತ್ಯುತ್ತರ

ದೆಹಲಿ: ಜಮ್ಮು–ಕಾಶ್ಮೀರದ ಪೂಂಚ್‌ನಲ್ಲಿ ಗಡಿ ನಿಯಂತ್ರಣ ರೇಖೆ(ಎಲ್‌ಒಸಿ) ದಾಟಿ ಒಳನುಸುಳಿರುವ ಪಾಕಿಸ್ತಾನ, ಕೃಷ್ಣಾಘಾಟಿಯಲ್ಲಿ ಬಾಂಬ್ ಸ್ಫೋಟಿಸಿ, ಗುಂಡಿನ ದಾಳಿ ನಡೆಸಿದೆ. ದಶಕಗಳ ಹಿಂದಿನ ಕದನ ವಿರಾಮ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದೆ. ಭಾರತದ ಸೇನೆಯೂ ಪ್ರತಿದಾಳಿ ನಡೆಸಿ ತಕ್ಕ ಪ್ರತ್ಯುತ್ತರ ನೀಡಿದೆ.

ಪೂಂಚ್ ಭಾಗದಲ್ಲಿ ಅಪ್ರಚೋದಿತವಾಗಿ ಗುಂಡಿನ ದಾಳಿ ನಡೆಸಿರುವ ಪಾಕ್ ಸೇನೆ, ಅತಿಕ್ರಮಣಕ್ಕೆ ಯತ್ನಿಸಿ ಭಾರತದ ನೆಲದಲ್ಲಿ ಕಾಲಿರಿಸಿದೆ. ಕೆಲವು ಒಳ ನುಸುಳುಕೋರರನ್ನು ಭಾರತದೊಳಕ್ಕೆ ರವಾನಿಸಲು ಯತ್ನಿಸಿದೆ. ಪಾಕ್ ಸೇನೆಯ ಈ ಕಿಡಿಗೇಡಿತನಕ್ಕೆ ಭಾರತದ ಸೇನಾಪಡೆ ತಕ್ಕ ಪ್ರತ್ಯುತ್ತರ ನೀಡಿದೆ. ಬಲವಾದ ಪ್ರತ್ಯುತ್ತರ ನೀಡಿದ್ದರಿಂದ ಪಾಕ್ ಕಡೆಯಿಂದ ಗಡಿ ದಾಟಿ ಭಾರತದೊಳಕ್ಕೆ ನುಸುಳಲು ಯತ್ನಿಸಿದವರಲ್ಲಿ 4–5 ಮಂದಿ ಸಾವಿಗೀಡಾಗಿದ್ದಾರೆ ಎಂದು ಭಾರತೀಯ ಸೇನೆ ಬುಧವಾರ ಹೇಳಿದೆ. ಪರಿಣಾಮ ಪೂಂಚ್ ಭಾಗದಲ್ಲಿ ಗಡಿ ನಿಯಂತ್ರಣ ರೇಖೆ(ಎಲ್‌ಒಸಿ)ಯಲ್ಲಿ ಉದ್ವಿಗ್ನತೆ ಉಂಟಾಗಿದೆ.

ನಡೆದಿದ್ದೇನು?: ಪೂಂಚ್ ಜಿಲ್ಲೆಯ ಮೆಂಧಾರ್ ತಹಸಿಲ್‌ನಿಂದ 30 ಕಿಮೀ ದೂರದಲ್ಲಿ ಕೃಷ್ಣಾಘಾಟಿ ಪ್ರದೇಶವಿದೆ. ಏ.1ರಂದು ಮಧ್ಯಾಹ್ನ 1.35ರ ವೇಳೆ ಪಾಕ್ ಸೇನೆಯ 'ಎಲ್‌ಒಸಿ' ದಾಟಿ ಭಾರತದೊಳಗೆ ನುಸುಳಿ ಕೃಷ್ಣ ಘಾಟಿ ವಲಯದ ನ್ಯಾಂಗ್ಗಿ ಟೆಕ್ರಿ ಪ್ರದೇಶದಲ್ಲಿ ಬಾಂಬ್ ಸ್ಫೋಟಿಸಿದೆ. ಬಳಿಕ, ಪ್ರಚೋದನೆಯೇ ಇಲ್ಲದಿದ್ದರೂ ಗುಂಡಿನ ದಾಳಿ ನಡೆಸಿದೆ. ಆ ಮೂಲಕ ಕದನ ವಿರಾಮ ಒಪ್ಪಂದದ ಉಲ್ಲಂಘನೆ ಮಾಡಿದೆ ಎಂದು ಭಾರತೀಯ ಸೇನಾಪಡೆಯ ಲೆಫ್ಟಿನೆಂಟ್ ಕರ್ನಲ್ ಸುನೀಲ್ ಬರತ್ವಾಲ್ ಹೇಳಿದ್ದಾರೆ. ಭಾರತದ ಕಡೆಯಲ್ಲಿ ಯಾವುದೇ ಸಾವು ನೋವು ಸಂಭವಿಸಿಲ್ಲ ಎಂದು ಸೇನಾಧಿಕಾರಿ ತಿಳಿಸಿದ್ದಾರೆ.

ಭಾರತ–ಪಾಕ್ ನಡುವೆ 3,323 ಕಿಮೀ ಗಡಿ ಇದ್ದು, 3 ಭಾಗಗಳಾಗಿ ವಿಂಗಡಿಸಲಾಗಿದೆ. ಈ ಗಡಿಗಳಲ್ಲಿ ಕದನ ವಿರಾಮ ಒಪ್ಪಂದವನ್ನು 2003ರಲ್ಲಿ ಮಾಡಿಕೊಳ್ಳಲಾಗಿದೆ. ಈ ಒಪ್ಪಂದಕ್ಕೆ ಭಾರತ–ಪಾಕ್ ಸೇನಾ ಕಾರ್ಯಾಚರಣೆ ಮಹಾನಿರ್ದೇಶಕರು 2021ರ ಫೆಬ್ರವರಿಯಲ್ಲಿಯೂ ಬದ್ಧತೆ ಪುನರುಚ್ಚರಿಸಿದ್ದರು. ಆದರೆ, ಪಾಕ್ ಆಗಾಗ್ಗೆ ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸುತ್ತಲೇ ಇದೆ.

ಕೃಷ್ಣಾಘಾಟಿಗೆ ಸೇನಾಪಡೆ ನಿಯೋಜನೆ

ಪಾಕ್‌ನಿಂದ ಏ.1ರಂದು ಕದನ ವಿರಾಮ ಉಲ್ಲಂಘನೆ ಆಗಿರುವುದನ್ನು ಭಾರತೀಯ ಸೇನೆ ದೃಢಪಡಿಸಿದೆ. ಇಡೀ ದಿನ ಎರಡೂ ಕಡೆಯಿಂದ ಹಲವು ಬಾರಿ ಗುಂಡಿನ ಚಕಮಕಿಯಾಗಿದೆ. ಬಳಿಕ ಕೃಷ್ಣ ಘಾಟಿ ಪ್ರದೇಶದಲ್ಲಿ ಭಾರತೀಯ ಸೇನೆಯನ್ನು ದೊಡ್ಡ ಸಂಖ್ಯೆಯಲ್ಲಿ ನಿಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಯಾವುದೇ ರೀತಿಯ ಪರಿಸ್ಥಿತಿಯನ್ನು ಎದುರಿಸಲು ಭಾರತೀಯ ಸೇನೆ ಸಂಪೂರ್ಣವಾಗಿ ಸಿದ್ಧವಿದೆ. ಈ ಕದನ ವಿರಾಮ ಉಲ್ಲಂಘನೆ ಮಂಗಳವಾರ ಪ್ರಾರಂಭವಾಗಿ ತಡರಾತ್ರಿವರೆಗೂ ಮುಂದುವರೆದಿದೆ. ಪಾಕ್ ಕಡೆಯಿಂದ ಸ್ನೈಪರ್ ಗನ್ ಬಳಕೆಯಾಗಿದೆ. ಬಾರ್ಡರ್ ಆಕ್ಷನ್ ಟೀಮ್(ಬಿಎಟಿ) ದಾಳಿ ನಡೆಸಿದೆ. ಆದರೆ ಈಗ ಪರಿಸ್ಥಿತಿ ಪೂರ್ಣ ನಿಯಂತ್ರಣದಲ್ಲಿದ್ದು, ನಿರಂತರ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.



ಈ ಮೊದಲು ಫೆಬ್ರವರಿಯಲ್ಲಿಯೂ ಕೃಷ್ಣ ಘಾಟಿ ವಲಯದಲ್ಲಿ ಪಾಕ್ ಇದೇ ರೀತಿ ಗುಂಡಿನ ದಾಳಿ ನಡೆಸಿತ್ತು. ಕಳೆದೆರಡು ತಿಂಗಳಲ್ಲಿ ನಿಯಂತ್ರಣ ರೇಖೆಯ(ಎಲ್‌ಒಸಿ) ದಕ್ಷಿಣ ಪಿರ್ ಪಂಜಾಲ್ ವಲಯದಲ್ಲಿ ಗಡಿಯಾಚೆಗಿನ ಗುಂಡಿನ ದಾಳಿ ಘಟನೆಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ.



ಡಿಎಂಕೆ ಸಂಸದರ ಹೊಸ ವಿವಾದ

ಹಿಂದೂ ಸಂಕೇತಗಳ ಧರಿಸದಿರಿ: ಎ.ರಾಜಾ

ಚೆನ್ನೈ: 'ಹಿಂದೂ ಧರ್ಮದ ಸಂಕೇತಗಳು, ಚಿಹ್ನೆಗಳನ್ನು ಧರಿಸಬೇಡಿ' ಎಂದು ತಮಿಳುನಾಡಿನ ಆಡಳಿತಾರೂಢ ಪಕ್ಷವಾದ ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷದ ಕಾರ್ಯಕರ್ತರಿಗೆ ಪಕ್ಷದ ಪ್ರಧಾನ ಕಾರ್ಯದರ್ಶಿ, ಮಾಜಿ ಕೇಂದ್ರ ಸಚಿವ ಎ.ರಾಜಾ ಬುಧವಾರ ಕರೆ ನೀಡಿದ್ದಾರೆ.

ಪಕ್ಷದ ಕಾರ್ಯಕ್ರಮದಲ್ಲಿ ಮಾತನಾಡಿದ ನೀಲಗಿರಿ ಲೋಕಸಭಾ ಕ್ಷೇತ್ರದ ಸಂಸದರೂ ಆಗಿರುವ ರಾಜಾ, ಪಕ್ಷದ ಧೋತಿ ಧರಿಸುವಾಗ ಅದಕ್ಕೆ ಅಂಟಿಕೊಂಡಿರುವ ಧಾರ್ಮಿಕ ಚಿಹ್ನೆಗಳನ್ನು ಮೊದಲು ತೆಗೆದುಹಾಕಿ. ಕಾರ್ಯಕರ್ತರು ಸಂಘಿಗಳಂತೆ ವೇಷಭೂಷಣ ಧರಿಸಬಾರದು. ತಿಲಕ, ಕೇಸರಿ ಧೋತಿಗಳನ್ನು ತ್ಯಜಿಸಿ ಸಂಘಿಗಳಿಗಿಂತ ಭಿನ್ನವಾಗಿರಿ ಎಂದು ಕಾರ್ಯಕರ್ತರಿಗೆ ಸೂಚನೆ ನೀಡಿದರು.

ಪಕ್ಷದ ನಾಯಕರು ಪಾಲ್ಗೊಳ್ಳುವ ಯಾವುದೇ ಕಾರ್ಯಕ್ರಮದಲ್ಲಾದರೂ ಡಿಎಂಕೆ ಕಾರ್ಯಕರ್ತರು ಇದೇ ಸೂಚನೆ ಪಾಲಿಸಬೇಕು. ಏಕೆಂದರೆ ಸಭೆಯಲ್ಲಿ ಯಾರೆಲ್ಲಾ ಇದ್ದಾರೆಂದು ನಮಗೆ ತಿಳಿಯಬೇಕಿದೆ ಎಂದರು.

ದೇವರನ್ನು ಪ್ರಾರ್ಥಿಸಬೇಡಿ ಎಂದು ಹೇಳುತ್ತಿಲ್ಲ. ನೀವು ನಂಬಿಕೆ ಇರಿಸಿದ ದೇವರನ್ನು ಪ್ರಾರ್ಥಿಸಿ. ಪೋಷಕರು ನಿಮ್ಮ ಹಣೆಗೆ ಭಸ್ಮ ಧರಿಸಿದರೆ ಇರಲಿ. ಆದರೆ ಡಿಎಂಕೆ ಧೋತಿ ಧರಿಸಿದಾಗ, ಪಕ್ಷದ ಕಾರ್ಯಕ್ರಮಕ್ಕೆ ಬಂದಾಗ ಅದೆಲ್ಲವನ್ನೂ ತೆಗೆದುಹಾಕಬೇಕು ಎಂದು ರಾಜಾ ಹೇಳಿದ್ದಾರೆ.

ಭಾರತದ ಸೌರಶಕ್ತಿ ಬಳಕೆ 100 ಗಿಗಾವಾಟ್ ಸಾಧನೆ

ದೆಹಲಿ: ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತ ಅಭೂತಪೂರ್ವ ಸಾಧನೆ ಮಾಡಿದೆ. 2024–25ನೇ ಹಣಕಾಸು ವರ್ಷದಲ್ಲಿ ಸೌರಶಕ್ತಿ ಬಳಕೆ ಸಾಮರ್ಥ್ಯ 100 ಗಿಗಾವಾಟ್‌ಗೂ ಅಧಿಕವಾ ಗಿದೆ ಎಂದು ನವೀಕರಿಸಬಹುದಾದ ಇಂಧನ ಖಾತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಬುಧವಾರ ಹೇಳಿದ್ದಾರೆ.

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಹಣಕಾಸು ವರ್ಷದ ಆರಂಭದಲ್ಲೇ ಗರಿಷ್ಠ ಸ್ಥಾಪನಾ ಸಾಮರ್ಥ್ಯವನ್ನು ಭಾರತ ಸಾಧಿಸಿದೆ. ವರ್ಷದಲ್ಲಿ 25 ಗಿಗಾವಾಟ್ ಸೌರಶಕ್ತಿ ಘಟಕಗಳ ಸ್ಥಾಪನೆ ಮಾಡಲಾಗಿದೆ. 2023–24ನೇ ಹಣಕಾಸು ವರ್ಷದಲ್ಲಿ 18.57 ಗಿಗಾವಾಟ್ ಸೌರಶಕ್ತಿ ಘಟಕಗಳನ್ನು ಸ್ಥಾಪಿಸಲಾಗಿತ್ತು. ಅದಕ್ಕೆ ಹೋಲಿಸಿದರೆ 2024–25ರ ಹಣಕಾಸು ವರ್ಷದಲ್ಲಿ ಶೇ.35ರಷ್ಟು ಪ್ರಗತಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಆತ್ಮನಿರ್ಭರ ಭಾರತ ಪರಿಕಲ್ಪನೆಯಡಿ ದೇಶದ ಸೌರ ಶಕ್ತಿ ಉತ್ಪಾದನಾ ಸಾಮರ್ಥ್ಯ ಈ ವರ್ಷದಲ್ಲಿ 38 ಗಿಗಾವಾಟ್‌ನಿಂದ 74 ಗಿಗಾವಾಟ್‌ಗೆ ಏರಿಕೆ ಕಾಣಲಿದೆ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

'ಪಿಎಂ ಸೂರ್ಯ ಗರ್' ಯೋಜನೆ ಆರಂಭದ ವರ್ಷದಲ್ಲೇ 11.01 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ತಲುಪಿದೆ. ಈಗಾಗಲೇ 6.98 ಲಕ್ಷ ಜನರಿಗೆ 5,437.20 ಕೋಟಿ ರು. ಸಬ್ಸಿಡಿ ವಿತರಿಸಲಾಗಿದೆ. ಇದೇ ವೇಳೆ 10 ಲಕ್ಷಗಳಷ್ಟು ಕೃಷಿ ಪಂಪ್‌ಸೆಟ್‌ಗಳಿಗೆ 'ಪಿಎಂ ಕುಸುಮ್ ಯೋಜನೆ'ಯಡಿ ಪ್ರಯೋಜನವಾಗಿದ್ದು, ಅವೆಲ್ಲವೂ ಸೌರಶಕ್ತಿ ಬಳಸಿಕೊಂಡೇ ಕೃಷಿಗೆ ನೀರು ಒದಗಿಸುತ್ತಿವೆ ಎಂದು ವಿವರಿಸಿದರು.

ಗಾಂಧಿ ಮರಿಮೊಮ್ಮಗಳು ನೀಲಾಂಬೆನ್ ನಿಧನ

ನವಸಾರಿ: ಮೋಹನದಾಸ್ ಕರಮಚಂದ್ ಗಾಂಧಿ ಅವರ ಮರಿ ಮೊಮ್ಮಗಳು, ಸಮಾಜಸೇವಕಿ ನೀಲಾಂ ಬೆನ್ ಪಾರೆಖ್(92) ಅವರು ಗುಜರಾತ್ ರಾಜ್ಯದ ನವಸಾರಿಯಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾ ದರು. ವಯೋಸಹಜವಾಗಿ ಕೃಶರಾಗಿದ್ದ ಪಾರೆಖ್, ಸೋಮವಾರ ಕೊನೆಯುಸಿರೆಳೆದರು ಎಂದು ವರದಿಯಾಗಿದೆ. ಗಾಂಧೀಜಿ ಕಿರಿಯ ಪುತ್ರ ಹರಿಲಾಲ್ ಗಾಂಧಿ ಅವರ ಕಿರಿಯ ಪುತ್ರಿ ರಾಮಿಬೆನ್. ಅವರ

ಹಿರಿಯ ಪುತ್ರಿಯೇ ನೀಲಾಂಬೆನ್ ಪಾರೆಖ್. ನೀಲಾಂಬೆನ್ 'ದಕ್ಷಿಣಾ ಪಥ' ಎಂಬ ಸರಕಾರೇತರ ಸಂಘಟನೆ ನಡೆಸುತ್ತಿದ್ದರು. ಬುಡಕಟ್ಟು ಸಮುದಾಯದ ಬಾಲಕಿಯರ ಶಿಕ್ಷಣ, ಮಹಿಳೆಯರ ಆರ್ಥಿಕ ಸ್ವಾತಂತ್ರ್ಯಕ್ಕೆ ನೆರವಾಗಲು ಸೇವೆ ಸಲ್ಲಿಸುತ್ತಿದ್ದರು. '**ಗಾಂಧೀಜೀಸ್ ಲಾಸ್ಟ್ ಜ್ಯುವೆಲ್: ಹೀರಾಲಾಲ್ ಗಾಂಧಿ**' ಕೃತಿ ರಚಿಸಿದ್ದರು.

ತಲಾ 14 ಲಕ್ಷ ರು. ಇನಾಮಿದ್ದ ನಕ್ಸಲರು

ಮಧ್ಯಪ್ರದೇಶ: ಇಬ್ಬರು ಮಹಿಳಾ ನಕ್ಸಲರ ಅಂತ್ಯ

ಭೋಪಾಲ್: ಮಧ್ಯಪ್ರದೇಶದ ಮಾಂಡ್ಲಾ ಜಿಲ್ಲೆಯ ಅರಣ್ಯದಲ್ಲಿ ಬುಧವಾರ ಬೆಳಗ್ಗೆ ನಕ್ಸಲ್ ನಿಗ್ರಹ ಪಡೆ ನಡೆಸಿದ ಕಾರ್ಯಾಚರಣೆಯಲ್ಲಿ ಇಬ್ಬರು ಶಸ್ತ್ರಸಜ್ಜಿತ ಮಹಿಳಾ ನಕ್ಸಲ್ ನಾಯಕಿಯರನ್ನು ಗುಂಡಿಕ್ಕಿ ಕೊಲ್ಲಲಾಗಿದೆ.

ಹತರಾದ ನಕ್ಸಲ್ ನಾಯಕಿಯರನ್ನು ಛತ್ತೀಸ್‌ಗಢ ಮೂಲದ ಮಮತಾ ಮತ್ತು ಪ್ರಮೀಳಾ ಎಂದು ಗುರುತಿಸಲಾಗಿದೆ. ಇಬ್ಬರೂ ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದ ಬಾಲಘಾಟ್, ಮಾಂಡ್ಲಾ ಮತ್ತು ಕವರ್‌ಧಾ ಜಿಲ್ಲೆಗಳಲ್ಲಿ ಸಕ್ರಿಯವಾಗಿರುವ ಎಡಪಂಥೀಯ ನಕ್ಸಲ್ ತಂಡ ಕನ್ಹಾ–ಭೋರಾಮ್‌ದೇವ್ ವಿಭಾಗದವರಾಗಿದ್ದರು. ನಕ್ಸಲರಿಬ್ಬರ ತಲೆಗೆ ತಲಾ 14 ಲಕ್ಷ ರು. ಇನಾಮು ಘೋಷಣೆಯಾಗಿತ್ತು. ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ಇಬ್ಬರು ಮಹಿಳಾ ನಕ್ಸಲರು ಹತರಾಗಿರುವುದನ್ನು ದೃಢಪಡಿಸಿದ ಮಧ್ಯಪ್ರದೇಶ ವಿಶೇಷ ಡಿಜಿಪಿ(ನಕ್ಸಲ್ ನಿಗ್ರಹ) ಪಂಕಜ್ ಶ್ರೀವಾಸ್ತವ, ಇವರಿಬ್ಬರ ಬಂಧನಕ್ಕೆ ನೆರವಾದವರಿಗೆ ರಾಜ್ಯ ಪೊಲೀಸ್ ಇಲಾಖೆ ಒಟ್ಟು 28 ಲಕ್ಷ ರು. ಬಹುಮಾನ ಹಣ ಘೋಷಿಸಿತ್ತು. ಕಾರ್ಯಾಚರಣೆ ಸ್ಥಳದಲ್ಲಿ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ವೈರ್‌ಲೆಸ್ ಸೆಟ್ ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

ವಕ್ಫ್ ಕಾಯಿದೆ ತಿದ್ದುಪಡಿಗೆ ಬಡ ಮುಸ್ಲಿಮರು, ಸ್ತ್ರೀಯರ ಬೆಂಬಲ

ಮೋದೀಜಿಗೆ ಧನ್ಯವಾದ ಎಂದ ಮುಸ್ಲಿಂ ಮಹಿಳೆ

ದೆಹಲಿ: ವಕ್ಫ್ ತಿದ್ದುಪಡಿ ವಿಧೇಯಕಕ್ಕೆ ದೇಶದ ವಿವಿಧೆಡೆ ಮುಸ್ಲಿಂ ಮಹಿಳೆಯರು ಬೆಂಬಲ ವ್ಯಕ್ತಪಡಿಸಿದ್ದು, ಫಲಕ ಹಿಡಿದು ಬೀದಿಗಿಳಿದು ಬುಧವಾರ ಮತ ಪ್ರದರ್ಶನ ನಡೆಸಿದ್ದಾರೆ.

ವಕ್ಫ್ ತಿದ್ದುಪಡಿ ವಿಧೇಯಕವನ್ನು ಕೇಂದ್ರ ಸಚಿವ ಕಿರಣ್ ರಿಜಿಜು ಅವರು ಬುಧವಾರ ಲೋಕಸಭೆಯಲ್ಲಿ ಮಂಡನೆ ಮಾಡಿದ್ದರೆ, ಇನ್ನೊಂದೆಡೆ ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನೂರಾರು ಮುಸ್ಲಿಂ ಮಹಿಳೆಯರು, 'ಪ್ರಧಾನಿ ಮೋದಿ ಜೀಗೆ ಧನ್ಯವಾದ' ಎಂಬ ಫಲಕಗಳನ್ನು ಹಿಡಿದು ರಸ್ತೆಗಿಳಿದು ಪ್ರದರ್ಶನ ನಡೆಸಿದರು. ಗುಲಾಬಿ ಹೂಗಳನ್ನು ಹಿಡಿದು ವಕ್ಫ್ ತಿದ್ದುಪಡಿ ಮಸೂದೆ ಬೆಂಬಲಿಸಿ ಜಾಥಾ ನಡೆಸಿದರು.

ಮಹಿಳೆಯರ ಜೊತೆಗೆ ಪುರುಷರೂ ಹೆಚ್ಚಿನ ಸಂಖ್ಯೆಯಲ್ಲಿದ್ದು ವಕ್ಫ್ ತಿದ್ದುಪಡಿ ವಿಧೇಯಕಕ್ಕೆ ಬೆಂಬಲ ಸೂಚಿಸಿದರು. 'ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜೈ' ಎಂದು ಕೂಗಿದರು.

ಬಡವರಿಗೆ–ಮಹಿಳೆಗೆ ಅನುಕೂಲ:

ವಕ್ಫ್ ತಿದ್ದುಪಡಿ ವಿಧೇಯಕದ ಕರಡು ಅಧ್ಯಯನ ಮತ್ತು ಪ್ರತಿಕ್ರಿಯೆ ಸಂಗ್ರಹ ನಡೆಸಿದ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷರಾಗಿದ್ದ ಬಿಜೆಪಿ ಸಂಸದ ಜಗದಾಂಬಿಕಾ ಪಾಲ್ ಅವರು ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ್ದು, ಈ ತಿದ್ದುಪಡಿ ವಿಧೇಯಕ ಮುಸ್ಲಿಂ ಸಮುದಾಯದಲ್ಲಿನ ಬಡವರು, ಮಹಿಳೆಯರು, ಸೌಲಭ್ಯವಂಚಿತರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುತ್ತದೆ ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಭೋಪಾಲ್‌ನಲ್ಲಿ ಮುಸ್ಲಿಂ ಮಹಿಳೆಯರು ವಿಧೇಯಕಕ್ಕೆ ಬೆಂಬಲ ವ್ಯಕ್ತಪಡಿಸಿ ಪ್ರದರ್ಶನ ನಡೆಸಿದ್ದಾರೆ ಎನ್ನಲಾಗಿದೆ.

ವಕ್ಫ್ ವಿಧೇಯಕ ವಿರುದ್ಧ ಹೋರಾಟ

ದೆಹಲಿ: ಬಹು ಚರ್ಚಿತ 'ವಕ್ಫ್ ತಿದ್ದುಪಡಿ ವಿಧೇಯಕ'ದ ಜಾರಿ ಪ್ರಶ್ನಿಸಿ 'ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ' (ಎಐಎಂಪಿಎಲ್‌ಬಿ) ನ್ಯಾಯಾಲಯದ ಮೊರೆ ಹೋಗುವುದಾಗಿ ಬುಧವಾರ ಹೇಳಿದೆ. ವಕ್ಫ್ ತಿದ್ದುಪಡಿ ವಿಧೇಯಕ ಮುಸ್ಲಿಮರ ಹಕ್ಕುಗಳನ್ನು ನಿರಾಕರಿಸುವ ಕರಾಳ ಮಸೂದೆಯಾಗಲಿದೆ. ಇದರ ಮೂಲಕ ಮುಸ್ಲಿಂ ಸಮುದಾಯದವರ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಸಂಚು ನಡೆದಿದೆ. ಇಂಥ ಕರಾಳ ಮಸೂದೆಯ ವಿರುದ್ಧ ಕೋರ್ಟ್ ಮೆಟ್ಟಿಲೇರಲಾಗುವುದು. ದೇಶಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು 'ಎಐಎಂಪಿಎಲ್‌ಬಿ' ಸದಸ್ಯ ಮೊಹಮ್ಮದ್ ಅದೀಬ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ದೇಶದ ನಾಗರಿಕರು ಮನಃಸಾಕ್ಷಿಗೆ ಅನುಗುಣವಾಗಿ ಈ ವಿಧೇಯಕವನ್ನು ಪೂರ್ಣ ವಿರೋಧಿಸಬೇಕು ಎಂದೂ ಮನವಿ ಮಾಡಿದರು.

Norican Group
Shaping Industry

ಡೀಸಾ ಇಂಡಿಯಾ ಲಿಮಿಟೆಡ್
ನೋಂದಾಯಿತ ಕಛೇರಿ: ವರ್ಲ್ಡ್ ಟ್ರೇಡ್ ಸೆಂಟರ್ (ಡಬ್ಲ್ಯೂಟಿಸಿ), 6ನೇ ಮಹಡಿ,
ಯೂನಿಟ್ ಸಂ. ಎಸ್–604, ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್, 26/1, ಡಾ. ರಾಜ್‌ಕುಮಾರ್ ರಸ್ತೆ,
ಮಲ್ಲೇಶ್ವರಂ–ರಾಜಾಜಿನಗರ, ಬೆಂಗಳೂರು–560055. ಫೋನ್: +91 80 22496700.
ಇ–ಮೇಲ್: investor.relations@noricangroup.com www.disagroup.com
CIN: L85110KA1984PLC006116

ಅಂಚೆ ಮತದಾನ ಸೂಚನೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ ಕಂಪನಿಗಳ ಕಾಯ್ದೆ– 2013 (ಕಾಯ್ದೆ) ರ ಸೆಕ್ಷನ್ 108 ಮತ್ತು ಸೆಕ್ಷನ್ 110 ಮತ್ತು ಸಂಸ್ಥೆಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು– 2014 (ನಿಯಮಗಳು) ರ ನಿಯಮ 20 ಮತ್ತು ನಿಯಮ 22 (ಯಾವುದೇ ಶಾಸನಬದ್ಧ ಮಾರ್ಪಾಡು ಅಥವಾ ಮರು–ಜಾರಿಗೊಳಿಸುವಿಕೆಯನ್ನು ಒಳಗೊಂಡಂತೆ) ಮತ್ತು ಕಾರ್ಪೊರೇಟ್ ಸಚಿವಾಲಯಗಳ ಸಚಿವಾಲಯ (ಎಂಸಿಎ) ಹೊರಡಿಸಿದ ದಿನಾಂಕ ಏಪ್ರಿಲ್ 8, 2020 ರ ಸುತ್ತೋಲೆ ಸಂಖ್ಯೆ 14/2020, ಏಪ್ರಿಲ್ 13, 2020 ರ ಸುತ್ತೋಲೆ ಸಂಖ್ಯೆ 17/2020, ಸೆಪ್ಟೆಂಬರ್ 19, 2024 ರ ಸುತ್ತೋಲೆ ಸಂಖ್ಯೆ 09/2024 (ಇನ್ನು ಮುಂದೆ ಒಟ್ಟಾರೆಯಾಗಿ ಎಂಸಿಎ ಸುತ್ತೋಲೆಗಳು ಎಂದು ಉಲ್ಲೇಖಿಸಲಾಗುತ್ತದೆ), ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್, ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳನ್ನು ಪಟ್ಟಿ ಮಾಡುವುದು) ನಿಯಮಾವಳಿಗಳು, 2015ರ ನಿಯಮ 44, (ಪಟ್ಟಿ ಮಾಡುವ ನಿಯಮಗಳು) ಮತ್ತು ಯಾವುದೇ ಇತರ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳು (ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಮರು–ಜಾರಿಗೊಳಿಸುವಿಕೆ) ಸೇರಿದಂತೆ ದಿನಾಂಕ 28ನೇ ಮಾರ್ಚ್ 2025ರಂದು ನೀಡಿರುವ ಅಂಚೆ ಮತದಾನ ಸೂಚನೆಯಲ್ಲಿ ಪಟ್ಟಿ ಮಾಡಿದ ವಿಷಯಗಳಿಗೆ ಸಂಬಂಧಿಸಿದಂತೆ ಡೀಸಾ ಇಂಡಿಯಾ ಲಿಮಿಟೆಡ್ (''ಕಂಪನಿ'')ಯ ಸದಸ್ಯರ ಅನುಮೋದನೆಯನ್ನು ರಿಮೋಟ್ ಎಲೆಕ್ಟ್ರಾನಿಕ್ ವೋಟಿಂಗ್ (ಇ–ಮತದಾನ) ಪ್ರಕ್ರಿಯೆ ಮೂಲಕ ಕೋರಲಾಗಿದೆ.

ಕ್ರಮ ಸಂಖ್ಯೆ	ವಿವರಣೆಗಳು	ನಿರ್ಣಯ ವಿಧ
1.	ಶ್ರೀಮತಿ ಮಾಳವಿಕಾ ಜೋಶಿ (ಡಿಐಎನ್: 03393195) ಅವರನ್ನು ಕಂಪನಿ ನಾನ್–ಎಕ್ಸಿಕ್ಯೂಟಿವ್ ಸ್ವತಂತ್ರ ನಿರ್ದೇಶಕರನ್ನಾಗಿ ನೇಮಕ ಮಾಡಿಕೊಳ್ಳುವುದು	ವಿಶೇಷ
2.	ಶ್ರೀ ರಂಜನ್ ಸೇನ್ (ಡಿಐಎನ್: 06872411) ಅವರನ್ನು ಕಂಪನಿ ನಾನ್–ಎಕ್ಸಿಕ್ಯೂಟಿವ್ ಸ್ವತಂತ್ರ ನಿರ್ದೇಶಕರನ್ನಾಗಿ ನೇಮಕ ಮಾಡಿಕೊಳ್ಳುವುದು	ವಿಶೇಷ
3.	ಶ್ರೀಮತಿ ವಿದ್ಯಾ ವಿಶ್ವನಾಥನ್ (ಡಿಐಎನ್: 06978067) ಅವರನ್ನು ಕಂಪನಿ ನಾನ್–ಎಕ್ಸಿಕ್ಯೂಟಿವ್ ಸ್ವತಂತ್ರ ನಿರ್ದೇಶಕರನ್ನಾಗಿ ನೇಮಕ ಮಾಡಿಕೊಳ್ಳುವುದು	ವಿಶೇಷ
4.	ಶ್ರೀಮತಿ ದೀಪಾ ಅಗರ್ ಹಿಂಗೊರಾನಿ (ಡಿಐಎನ್: 00206310) ಅವರನ್ನು ಕಂಪನಿ ನಾನ್–ಎಕ್ಸಿಕ್ಯೂಟಿವ್ ಸ್ವತಂತ್ರ ನಿರ್ದೇಶಕರನ್ನಾಗಿ ನೇಮಕ ಮಾಡಿಕೊಳ್ಳುವುದು	ಸಾಮಾನ್ಯ

ಎಂಸಿಎ ಸುತ್ತೋಲೆಗಳಿಗೆ ಅನುಸಾರವಾಗಿ, ಸಂಸ್ಥೆಯು ಮಾರ್ಚ್ 28, 2025 (ಕಟ್–ಆಫ್ ದಿನಾಂಕ) ರವರೆಗೆ ಷೇರುಗಳನ್ನು ಹೊಂದಿರುವ ಸಂಸ್ಥೆಯ ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ಸಂಸ್ಥೆಯ ಠೇವಣಿದಾರರು/ಡೆಪಾಸಿಟರಿ ಪಾರ್ಟಿಸಿಪೆಂಟ್ (ಡಿಪಿಗಳು) ಮತ್ತು ಷೇರು ವರ್ಗಾವಣೆ ಏಜೆಂಟ್, ಅಂದರೆ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ನೋಂದಾಯಿಸಿಕೊಂಡಿದ್ದಲ್ಲಿ ಅಂಥ ಎಲ್ಲ ಸದಸ್ಯರಿಗೆ ಬುಧವಾರ, ಏಪ್ರಿಲ್ 2, 2025 ರಂದು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಅಂಚೆ ಮತಪತ್ರ ನೋಟಿಸನ್ನು ರವಾನಿಸಿದೆ.

ಅಂಚೆ ಮತಪತ್ರ ಸೂಚನೆ ಸಂಸ್ಥೆಯ ವೆಬ್‌ಸೈಟ್ ಅಂದರೆ www.disagroup.com/en-in ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ ಅಂದರೆ ಬಿಎಸ್‌ಇ ಲಿಮಿಟೆಡ್ ವೆಬ್‌ಸೈಟ್: www.bseindia.com ನಲ್ಲಿ ಮತ್ತು ಸಿಡಿಎಸ್‌ಎಲ್ ವೆಬ್‌ಸೈಟ್ ಅಂದರೆ www.evotingindia.com ನಲ್ಲಿ ಲಭ್ಯದೆ.

ಕಟ್–ಆಫ್ ದಿನಾಂಕದಂದು ಸದಸ್ಯರು/ ಫಲಾನುಭವಿ ಮಾಲೀಕರ ಹೆಸರಿನಲ್ಲಿ ನೋಂದಾಯಿಸಲಾದ ಈಕ್ವಿಟಿ ಷೇರುಗಳ ಪಾವತಿಸಿದ ಮೌಲ್ಯದ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು. ಸದಸ್ಯರ ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯದ ಸಂವಹನವು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಗಳ ಮೂಲಕ ಮಾತ್ರ ನಡೆಯುತ್ತದೆ.

ತನ್ನ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ಸಂಸ್ಥೆಯು ಸಿಡಿಎಸ್‌ಎಲ್ ನ ಸೇವೆಗಳನ್ನು ಪಡೆದುಕೊಂಡಿದೆ. ರಿಮೋಟ್ ಇ–ವೋಟಿಂಗ್ ಅವಧಿಯು ಗುರುವಾರ, ಏಪ್ರಿಲ್ 3, 2025 (ಬೆಳಿಗ್ಗೆ 9:00 ಗಂಟೆ ಐಎಸ್‌ಟಿ) ರಂದು ಪ್ರಾರಂಭವಾಗುತ್ತದೆ ಮತ್ತು ಶುಕ್ರವಾರ, ಮೇ 2, 2025 (ಸಂಜೆ 5:00 ಗಂಟೆ ಐಎಸ್‌ಟಿ) ರಂದು ಕೊನೆಗೊಳ್ಳುತ್ತದೆ. ನಂತರ ಸಿಡಿಎಸ್‌ಎಲ್ ಆ ಬಳಿಕ ರಿಮೋಟ್ ಇ–ವೋಟಿಂಗ್ ಮಾಡ್ಯೂಲ್ ಅನ್ನು ಮತದಾನಕ್ಕೆ ನಿಷ್ಕ್ರಿಯಗೊಳಿಸುತ್ತದೆ. ಸದಸ್ಯರು ನಿರ್ಣಯದ ಮೇಲೆ ಒಂದು ಬಾರಿ ಮತ ಚಲಾಯಿಸಿದ ನಂತರ, ಅದನ್ನು ಮತ್ತೆ ಬದಲಾಯಿಸಲು ಅನುಮತಿಸಲಾಗುವುದಿಲ್ಲ.

ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು, ಸಂದರ್ಭಾನುಸಾರ ಕಂಪನಿ/ಡಿಪಿಗಳ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ರಿಜಿಸ್ಟ್ರಾರ್ ಟ್ರಾನ್ಸ್‌ಫರ್ ಏಜೆಂಟ್ (ಆಆರ್‌ಟಿಎ) ನಲ್ಲಿ ನೋಂದಾಯಿಸಿಕೊಳ್ಳಬಹುದು. ಇ–ಮೇಲ್ ವಿಳಾಸವನ್ನು ನೋಂದಾಯಿಸುವ ವಿಧಾನ ಮತ್ತು ರಿಮೋಟ್ ಇ–ವೋಟಿಂಗ್ ಕಾರ್ಯವಿಧಾನವನ್ನು ನೋಟಿಸ್‌ನಲ್ಲಿ ನೀಡಲಾಗಿದೆ.

ಸಂಸ್ಥೆಯ ಆಡಳಿತ ಮಂಡಳಿಯು, ರಿಮೋಟ್ ಇ–ವೋಟಿಂಗ್ ಕಾರ್ಯವಿಧಾನದ ಮೂಲಕ ಅಂಚೆ ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಸಂಸ್ಥೆ ಕಾರ್ಯದರ್ಶಿ (ಸದಸ್ಯತ್ವ ಸಂಖ್ಯೆ ಎಫ್‌ಸಿಎಸ್ 1788) ಶ್ರೀ ವಿಜಯಕೃಷ್ಣ ಕೆ ಟಿ ಅವರನ್ನು ಪರಿಶೀಲನಾಕಾರರನ್ನಾಗಿ ನೇಮಿಸಿದೆ.

ಅಂಚೆ ಮತಪತ್ರದ ಫಲಿತಾಂಶಗಳನ್ನು ಮಂಗಳವಾರ, ಮೇ 6, 2025 ರಂದು ಅಥವಾ ಅದಕ್ಕೂ ಮೊದಲು ಪ್ರಕಟಿಸಲಾಗುವುದು. ಘೋಷಿತ ಫಲಿತಾಂಶಗಳನ್ನು ಪರಿಶೀಲಕರ ವರದಿಯೊಂದಿಗೆ ಬಿಎಸ್‌ಇಗೆ ಕಳುಹಿಸಲಾಗುವುದು ಮತ್ತು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಅಂದರೆ www.disagroup.com/en-in ಮತ್ತು ಸಿಡಿಎಸ್‌ಎಲ್ ವೆಬ್‌ಸೈಟ್‌ನಲ್ಲಿ ಅಂದರೆ www.evotingindia.com ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ.

ಯಾವುದೇ ವಿಚಾರಣೆಗಳಿದ್ದಲ್ಲಿ, ನೀವು helpdesk.evoting@cdslindia.com ಗೆ ಇ–ಮೇಲ್ ಮಾಡಬಹುದು ಅಥವಾ 022– 23058738 ಮತ್ತು 022–23058542/43 ಅನ್ನು ಸಂಪರ್ಕಿಸಬಹುದು ಅಥವಾ helpdesk.evoting@cdslindia.com ನಲ್ಲಿ ಶ್ರೀ ರಾಕೇಶ್ ದಳವಿ, ಹಿರಿಯ ವ್ಯವಸ್ಥಾಪಕರು, (ಸಿಡಿಎಸ್‌ಎಲ್) ಅವರಿಗೆ ವಿನಂತಿಯನ್ನು ಕಳುಹಿಸಬಹುದು ಅಥವಾ 022–23058542/43 ಗೆ ಕರೆ ಮಾಡಬಹುದು.

ಡೀಸಾ ಇಂಡಿಯಾ ಲಿಮಿಟೆಡ್ ಪರವಾಗಿ
ಶ್ರೀತಿ ಎಂ ಎಸ್
ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ: ಏಪ್ರಿಲ್ 2, 2025

ಅತ್ಯಧಿಕ ಶತಕೋಟ್ಯಾಧೀಶರು ಇರುವ ಮೊದಲ ಹತ್ತು ದೇಶಗಳು | ವಿಶ್ವಾದ್ಯಂತದ ಶತಕೋಟ್ಯಾಧಿಪತಿಗಳ 2025ರ ಫೋರ್ಬ್ಸ್ ಪಟ್ಟಿ | ವಿಶ್ವದ ನೂರಾರು ದೇಶಗಳ ಸಂಪತ್ತು

ಭಾರತದಲ್ಲಿ 205 ಮಂದಿ ಶತಕೋಟ್ಯಾಧಿಪತಿಗಳು!

2025ರಲ್ಲಿ ವಿಶ್ವಾದ್ಯಂತ 3 ಸಾವಿರಕ್ಕೂ ಅಧಿಕ ಮಂದಿ ಶತಕೋಟ್ಯಾಧೀಶರಿದ್ದು, ಅವರೆಲ್ಲರ ಒಟ್ಟಾರೆ ಸಂಪತ್ತು 16.10 ಲಕ್ಷ ಕೋಟಿ ಅಮೆರಿಕನ್ ಡಾಲರ್‌ಗಳಷ್ಟಿದೆ ಎಂದು 'ಫೋರ್ಬ್ಸ್' ಪಟ್ಟಿ ಮಾಡಿದೆ. ಭಾರತದ ರುಪಾಯಿ ಲೆಕ್ಕದಲ್ಲಿ, ಇಂದಿನ ವಿನಿಮಯ ದರದಲ್ಲಿ 1377.35 ಲಕ್ಷ ಕೋಟಿ ರು.

ಭಾರತದಲ್ಲಿ ನಂ.1–2 ಮುಕೇಶ್, ಅದಾನಿ!



ಭಾರತದಲ್ಲಿನ 205 ಶತಕೋಟ್ಯಾಧೀಶರಲ್ಲಿ ರಿಲಯನ್ಸ್ ಸಮೂಹದ ಮಾಲೀಕ ಮುಕೇಶ್ ಅಂಬಾನಿ ನಂ.1 ಸ್ಥಾನದಲ್ಲಿದ್ದಾರೆ. ಅವರಲ್ಲಿ ಸದ್ಯ 9250 ಕೋಟಿ ಡಾಲರ್ (7,91,337 ಕೋಟಿ ರು.) ಗಳಷ್ಟು ಸಂಪತ್ತಿದೆ ಎಂದು ಫೋರ್ಬ್ಸ್ ಮಾಹಿತಿ ನೀಡಿದೆ. ಅದಾನಿ ಸಮೂಹ ಕಂಪನಿಗಳ ಒಡೆಯ ಗೌತಮ್ ಅದಾನಿ 5630 ಕೋಟಿ ಡಾಲರ್ (4,81,646 ಕೋಟಿ ರು.) ಸಂಪತ್ತಿನೊಂದಿಗೆ 2ನೇ ಸ್ಥಾನದಲ್ಲಿದ್ದಾರೆ.

ಸಿರಿವಂತರ ಸಂಖ್ಯೆಯನ್ನು ಲೆಕ್ಕ ಹಾಕಿ ನೋಡಿದಾಗ ಬಹುತೇಕ ಸಂಪತ್ತು ಕೇವಲ 3 ದೇಶಗಳಲ್ಲೇ ಕ್ರೋಢೀಕರಣವಾಗಿದೆ. ಅಮೆರಿಕ, ಚೀನಾ ಮತ್ತು ಭಾರತವೇ ಆ ಮೂರು ದೇಶಗಳಾಗಿವೆ! ಈ 3 ದೇಶಗಳಲ್ಲಿನ ಶತಕೋಟ್ಯಾಧಿಪತಿಗಳ ಒಟ್ಟು ಸಂಖ್ಯೆಯೇ 1557. ಇವರೆಲ್ಲರ ಒಟ್ಟಾರೆ ಸಂಪತ್ತಿನ ಮೌಲ್ಯವೇ 9.44 ಲಕ್ಷ ಕೋಟಿ ಡಾಲರ್ ಅಂದರೆ, ಇಡೀ ವಿಶ್ವದ ಎಲ್ಲಾ ಶತಕೋಟ್ಯಾಧೀಶರ ಒಟ್ಟು ಸಂಪತ್ತಿನಲ್ಲಿ ಶೇ.58.60ರಷ್ಟು ಪ್ರಮಾಣದ ಸಿರಿವಂತರ ಸಂಪತ್ತು ಈ ಮೂರು ದೇಶಗಳಲ್ಲೇ ಮಡುಗಟ್ಟಿದೆ.

ಮಸ್ಕ್, ಮಾರ್ಕ್, ಜೆಫ್!

ವಿಶ್ವದಲ್ಲಿನ ಸಿರಿವಂತರಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಎಲಾನ್ ಮಸ್ಕ್(34,200 ಕೋಟಿ ಡಾಲರ್), ಮಾರ್ಕ್ ಝುಕರ್‌ಬರ್ಗ್(21,600 ಕೋಟಿ ಡಾಲರ್), ಜೆಫ್ ಬೆಜೋಸ್(21,500 ಕೋಟಿ ಡಾಲರ್) ಇದ್ದಾರೆ. ಈ ಮೂವರೂ ಅಮೆರಿಕ ದೇಶವಾಸಿಗಳಾಗಿದ್ದಾರೆ. ಮೂವರೂ ತಾಂತ್ರಿಕತೆ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಸೇರಿದವರೇ ಆಗಿದ್ದಾರೆ.

ಜೆಫ್ ಬೆಜೋಸ್



ಝುಕರ್‌ಬರ್ಗ್

ಅಮೆರಿಕ: ಸಿರಿವಂತರ ಈ ನಾಡಿನಲ್ಲಿ ಪ್ರಸ್ತುತ 902 ಮಂದಿ ಶತಕೋಟ್ಯಾಧೀಶರಿದ್ದಾರೆ. 2024ರಲ್ಲಿ 813 ಮಂದಿ ಶತಕೋಟ್ಯಾಧಿಪತಿಗಳಿದ್ದರು. ತಂತ್ರಜ್ಞಾನ, ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳು ಹಾಗೂ ಮನರಂಜನಾ ಸೇವೆಗಳ ಉದ್ಯಮದವರೇ ಶತಕೋಟ್ಯಾಧಿಪತಿಗಳ ಪಟ್ಟಿಯಲ್ಲಿದ್ದಾರೆ.

ಚೀನಾ: ಶತಕೋಟ್ಯಾಧಿಪತಿಗಳ ಲೆಕ್ಕದಲ್ಲಿ ಈ ಕಮ್ಯುನಿಸ್ಟ್ ದೇಶ 2ನೇ ಸ್ಥಾನದಲ್ಲಿದೆ. ಇಲ್ಲಿ 450 ಮಂದಿ ಶತಕೋಟ್ಯಾಧೀಶರಿದ್ದಾರೆ. ಇವರೆಲ್ಲರ ಒಟ್ಟಾರೆ ಸಂಪತ್ತು 1.70 ಲಕ್ಷ ಕೋಟಿ ಡಾಲರ್‌ಗಳಷ್ಟಿದೆ. ಬೈಟ್ ಡ್ಯಾನ್ಸ್ ಕಂಪನಿಯ ಝುಂಗ್ ಯಿಮಿಂಗ್ 6550 ಕೋಟಿ ಅಮೆರಿಕನ್ ಡಾಲರ್‌ಗಳಷ್ಟು ಮೌಲ್ಯದ ಸಂಪತ್ತು ಹೊಂದಿದ್ದು, ಚೀನಾದಲ್ಲೇ ನಂ.1 ಶ್ರೀಮಂತರಾಗಿದ್ದಾರೆ.

ಭಾರತ: 2024ರಲ್ಲಿ ಶತಕೋಟ್ಯಾಧೀಶರ ಸಂಖ್ಯೆ 200ರಷ್ಟಿತ್ತು. ಈಗ 205ಕ್ಕೆ ಏರಿಕೆಯಾಗಿದೆ. 2025ರಲ್ಲಿ ಐವರು ಹೊಸದಾಗಿ ಶತಕೋಟ್ಯಾಧಿ ಪತಿಗಳ ಪಟ್ಟಿಗೆ ಸೇರಿದ್ದಾರೆ. ಶತಕೋಟ್ಯಾಧಿ ಪತಿಗಳ ಪಟ್ಟಿಯಲ್ಲಿ ಭಾರತ 3ನೇ ಸ್ಥಾನದಲ್ಲಿ ಮುಂದುವರಿದಿದೆ. 205 ಮಂದಿಯ ಖಜಾನೆಯಲ್ಲಿ ಒಟ್ಟು 94,100 ಕೋಟಿ ಡಾಲರ್ (90,50,255 ಕೋಟಿ ರು.) ಸಂಪತ್ತಿದೆ.

ಜರ್ಮನಿ: 171 ಶತಕೋಟ್ಯಾಧೀಶರಿರುವ ಜರ್ಮನಿ, 4ನೇ ಸ್ಥಾನದಲ್ಲಿದೆ. ಇವರ ಒಟ್ಟಾರೆ ಸಂಪತ್ತು 79,300 ಕೋಟಿ ಡಾಲರ್‌ಗಳಷ್ಟಿದೆ. ಪ್ರಮುಖ ಕೈಗಾರಿಕೆಗಳ ಈ ದೇಶದಲ್ಲಿ 2024ರಲ್ಲಿ 132 ಶತಕೋಟ್ಯಾಧೀಶರಿದ್ದರು.

ರಷ್ಯಾ: ಕಮ್ಯುನಿಸ್ಟ್ ಸಿದ್ಧಾಂತದ ಈ ಕೆಂಪು ದೇಶದಲ್ಲಿ 140 ಶತಕೋಟ್ಯಾಧೀಶರಿದ್ದು, 58,000 ಕೋಟಿ ಡಾಲರ್ ಸಂಪತ್ತು ಹೊಂದಿದ್ದಾರೆ.

ಕೆನಡಾ: ಒಟ್ಟು ಶತಕೋಟ್ಯಾಧೀಶರ ಸಂಖ್ಯೆ 76(ಕಳೆದ ವರ್ಷ 67). ಇವರೆಲ್ಲರ ಒಟ್ಟಾರೆ ಸಂಪತ್ತು 35,900 ಕೋಟಿ ಡಾಲರ್.

ಇಟಲಿ: 74 ಮಂದಿ ಶತಕೋಟ್ಯಾಧೀಶರು. ಇವರ ಒಟ್ಟು ಸಂಪತ್ತು 33,900 ಕೋಟಿ ಡಾಲರ್.

ಹಾಂಕಾಂಗ್: ಶತಕೋಟ್ಯಾಧಿಪತಿ ಸಂಖ್ಯೆ 67ರಿಂದ 66ಕ್ಕೆ ತಗ್ಗಿದೆ. ಇವರೆಲ್ಲರ ಸಂಪತ್ತಿನ ಒಟ್ಟು ಮೌಲ್ಯ 33,500 ಕೋಟಿ ಡಾಲರ್‌ಗಳಾಗಿದೆ.

ಬ್ರೆಜಿಲ್: ದೇಶದಲ್ಲಿನ ಶತಕೋಟ್ಯಾಧೀಶರ ಸಂಖ್ಯೆ 69ರಿಂದ 56ಕ್ಕೆ ಇಳಿಕೆಯಾಗಿದ್ದು, ಇವರ ಒಟ್ಟು ಸಂಪತ್ತು 21,200 ಕೋಟಿ ಡಾಲರ್‌ಗಳಷ್ಟಿದೆ.

ಯುನೈಟೆಡ್ ಕಿಂಗ್ಡಂ: 55 ಶತಕೋಟ್ಯಾಧೀಶರಿದ್ದು, ಇವರ ಆಸ್ತಿ ಮೌಲ್ಯ 23,800 ಕೋಟಿ ಡಾಲರ್‌ಗಳಾಗಿದೆ.

ಸಮಾಚಾರ ಸಣ್ಣದಲ್ಲ

ರಾಜ್ಯ ಕೋರ್ ಕಮಿಟಿಗೆ ಸದಸ್ಯರ ನೇಮಕ

ಮಡಿಕೇರಿ: ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ರಾಜ್ಯ ಕೋರ್ ಕಮಿಟಿಯಲ್ಲಿ ಕೊಡಗು ಜಿಲ್ಲಾ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ಜಿಲ್ಲಾಧ್ಯಕ್ಷ ಹಾಗೂ ಜಿಲ್ಲಾ ಕಾಂಗ್ರೆಸ್ ವಕ್ತಾರ ತೆನ್ನಿರಾ ಮೈನಾ ಸ್ಥಾನ ಪಡೆದಿದ್ದಾರೆ. ಕಳೆದ ಎರಡು ದಶಕಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ವಿವಿಧ ಜವಾಬ್ದಾರಿ ನಿಭಾಯಿಸಿದ ತೆನ್ನಿರ ಮೈನಾರನ್ನು ಕೋರ್ ಕಮಿಟಿ ನೇಮಕಕ್ಕೆ ಸಂಘಟನೆಯ ರಾಜ್ಯಾಧ್ಯಕ್ಷ ವಿಜಯ್ ಸಿಂಗ್ ಎಐಸಿಸಿಗೆ ಶಿಫಾರಸ್ಸು ಮಾಡಿದ್ದರು. ತೆನ್ನಿರಾ ಮೈನಾ ಸೇರಿದಂತೆ ರಾಜ್ಯದ 15 ಮುಖಂಡರನ್ನು ಕೋರ್ ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಹೃದಯಾಘಾತ ತಂದ ಆಪತ್ತಿಗೆ ಇಬ್ಬರ ಸಾವು

ಮೈಸೂರು: ಬಸ್ ಚಾಲನೆಯಲ್ಲಿ ಇದ್ದಾಗಲೇ ಚಾಲಕನಿಗೆ ಹಠಾತ್ ಎದೆ ನೋವು ಕಾಣಿಸಿಕೊಂಡು ಕುಸಿದು ಬಿದ್ದ ನಂತರ ಸಂಭವಿಸಿದ ಅಪಘಾತದಲ್ಲಿ ಒಬ್ಬ ಮಹಿಳೆ ಮೃತಪಟ್ಟ ಘಟನೆ ಬುಧವಾರ ನಡೆದಿದೆ. ಮಾತ್ರವಲ್ಲ, ತೀವ್ರ ಹೃದಯಾಘಾತಕ್ಕೊಳಗಾದ ಚಾಲಕ ಕೂಡ ಸ್ಟೇರಿಂಗ್ ಮೇಲೆ ಕುಸಿದು ಅಸುನೀಗಿದ್ದಾರೆ. ಈ ಘಟನೆ ಮೈಸೂರು ಜಿಲ್ಲೆ ಎಚ್‌ಡಿ ಕೋಟೆ ತಾಲೂಕಿನ ದಮ್ಮನಕಟ್ಟೆ ಗ್ರಾಮದ ಬಳಿ ನಡೆದಿದ್ದು, ಪಾದಚಾರಿ ಮಹಿಳೆ ಲಕ್ಷ್ಮಮ್ಮ ಹಾಗೂ ಬಸ್ ಚಾಲಕ ಸುನೀಲ್ ಕುಮಾರ್ ಮೃತಪಟ್ಟಿದ್ದಾರೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಚಾಲಕರಾಗಿರುವ ಸುನೀಲ್ ಕುಮಾರ್ ಕೇರಳದ ಮಾನಂದವಾಡಿಯಿಂದ ಎಚ್‌ಡಿಕೋಟೆಗೆ ಬಸ್ ಚಾಲನೆ ಮಾಡಿಕೊಂಡು ಬರುತ್ತಿದ್ದಾಗ ತಾಲೂಕಿನ ದಮ್ಮನಕಟ್ಟೆ ಬಳಿ ಎದೆ ನೋವು ಕಾಣಿಸಿಕೊಂಡಿದೆ. ನಿಯಂತ್ರಣ ಕಳೆದುಕೊಂಡ ಬಸ್ ರಸ್ತೆ ಪಕ್ಕ ತೆರಳುತ್ತಿದ್ದ ಮಹಿಳೆಗೆ ಡಿಕ್ಕಿ ಹೊಡೆದಿದೆ. ಬಳಿಕ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಗದ್ದೆಯಲ್ಲಿ ನಿಂತಿದೆ. ತೀವ್ರ ಗಾಯಗೊಂಡ ಮಹಿಳೆ ಸ್ಥಳದಲ್ಲೇ ಮೃತಪಟ್ಟರೆ, ಚಾಲಕ ಸ್ಟೇರಿಂಗ್ ಮೇಲೆ ಬಿದ್ದಿದ್ದನ್ನು ಗಮನಿಸಿದ ಪ್ರಯಾಣಿಕರು ಎಬ್ಬಿಸಲು ಬಂದಾಗ ಅವರೂ ಮೃತಪಟ್ಟಿದ್ದರು. ಅಪಘಾ ತದಲ್ಲಿ ಪ್ರಾಣಾಪಾಯದಿಂದ ಪಾರಾದ ಪ್ರಯಾಣಿಕರು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು, ಇಬ್ಬರ ಮೃತ ದೇಹಗಳನ್ನು ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದ್ದಾರೆ. ಬಸ್ ಡಿಪೋ ಅಧಿಕಾರಿಗಳು ಆಗಮಿಸಿ, ಪ್ರಯಾಣಿಕರಿಗೆ ಬದಲಿ ಬಸ್ ವ್ಯವಸ್ಥೆ ಮಾಡಿ ಮುಂದಿನ ಪಯಣಕ್ಕೆ ಅವಕಾಶ ಕಲ್ಪಿಸಿದರು. ಮೃತ ಚಾಲಕ ಸುನೀಲ್ ಕುಮಾರ್ ಮೈಸೂರು ಮೂಲದ ವರಾಗಿದ್ದು, ಕಳೆದ ಹಲವು ವರ್ಷಗಳಿಂದ ಹೊರ ಗುತ್ತಿಗೆ ಆಧಾರದ ಮೇರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದರು.

ಬೈಕ್ ಡಿಕ್ಕಿ ತಪ್ಪಿಸಲು ಹೋಗಿ ಕಾರು ಪಲ್ಟಿ

ಚಾಮರಾಜನಗರ: ಬೈಕ್ ಡಿಕ್ಕಿಯಾಗುವುದನ್ನು ತಪ್ಪಿಸಲು ಹೋಗಿ ಹಳ್ಳಕ್ಕೆ ಕಾರು ಪಲ್ಟಿಯಾದ ಘಟನೆ ಗುಂಡ್ಲುಪೇಟೆ ತಾಲೂಕಿನ ತಗ್ಗಲೂರು ಗೇಟ್ ಬಳಿ ಬುಧವಾರ ನಡೆದಿದೆ. ಬೆಂಗಳೂರಿನಿಂದ ಊಟಿಗೆ ಕುಟುಂಬ ಸಮೇತವಾಗಿ ಪ್ರವಾಸಕ್ಕೆ ಹೋಗುತ್ತಿದ್ದಾಗ ತಗ್ಗಲೂರು ಗೇಟ್ ಬಳಿ ಎದುರಾದ ಬೈಕ್ ಡಿಕ್ಕಿಯಾಗಲು ತಪ್ಪಿಸುವಾಗ ಹಳ್ಳಕ್ಕೆ ಕಾರು ಪಲ್ಟಿಯಾಗಿದೆ. ಕಾರಿನಲ್ಲಿದ್ದ ರಿಯಾಜ್,ಸುಲ್ತಾನ, ಕೌಶಿಕ್, ಮಹಮ್ಮದ್ ರಯಾಜ್, ಹನೀಫ್, ಪಾತಿಮಾ ಹಾಗೂ ಬೈಕ್ ಸವಾರ ಸುರೇಶ್ ಅವರಿಗೆ ಸಣ್ಣ ಪುಟ್ಟ ಗಾಯವಾಗಿವೆ.

ಕ್ಷುಲ್ಲಕ ಕಾರಣಕ್ಕೆ ಗುಂಪು ಘರ್ಷಣೆ

ಮದ್ದೂರು: ಕ್ಷುಲ್ಲಕ ಕಾರಣಕ್ಕೆ ಯುವಕರ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆ ವೇಳೆ ಇಬ್ಬರು ಯುವಕರು ಗಾಯಗೊಂಡು ಚಿಕಿತ್ಸೆಗಾಗಿ ಮದ್ದೂರು ಸರಕಾರಿ ಆಸ್ಪತ್ರೆಗೆ ದಾಖಲಾಗಿರುವ ಘಟನೆ ಮಂಗಳವಾರ ತಡರಾತ್ರಿ ವರದಿಯಾಗಿದೆ. ಮದ್ದೂರು ಪಟ್ಟಣದ ಸಿದ್ದಾರ್ಥನಗರ ನಿವಾಸಿಗಳಾದ ಜೋಗಿ ಮತ್ತು ರಘು ಎಂಬ ಇಬ್ಬರು ಯುವಕರಿಗೆ ಪೆಟ್ಟಾಗಿದ್ದು ಸದರಿ ಯುವಕರಿಬ್ಬರೂ ಮದ್ದೂರು ಕೆ.ಗುರುಶಾಂತಪ್ಪ ಸ್ಮಾರಕ ಸರಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆಗೊಳಪಟ್ಟಿದ್ದಾರೆ. ಹಳೆ ವೈಷಮ್ಯದ ಕಾರಣಕ್ಕೆ ಘಟನೆ ನಡೆದಿದ್ದು ಎರಡು ಗುಂಪುಗಳ ಯುವಕರು ಪರಸ್ಪರ ಮಾರಕಾಸ್ತ್ರಗಳಿಂದ ಹಲ್ಲೆಗೆ ಮುಂದಾಗಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಬುಧವಾರ ದಿನವಿಡೀ ಹರಿದಾಡಿವೆ. ಸ್ಥಳಕ್ಕಾಗಮಿಸಿದ ಮದ್ದೂರು ಪೊಲೀಸರು ಆರೋಪಿಗಳ ಪತ್ತೆಗೆ ಕ್ರಮ ವಹಿಸಿದ್ದು ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಡಿವ ನೀರಿಗೆ ನಿಗಾ ವಹಿಸಿ

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ | ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಸೂಚನೆ

ಚಾಮರಾಜನಗರ: ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳುವುದು ಅಧಿಕಾರಿಗಳ ಜವಾಬ್ದಾರಿ. ಕುಡಿಯುವ ನೀರಿನ ತೊಂದರೆ ಕಂಡುಬಂದಲ್ಲಿ ತಕ್ಷಣ ಪರಿಹರಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಪಂ ಕೆಡಿಪಿ ಸಭಾಂಗಣದಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಎಲ್ಲಿಯೇ ಆಗಲಿ, ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗಬೇಕು. ನೀರಿನ ಸಮಸ್ಯೆ ಕಂಡು ಬರಬಹುದಾದ ಗ್ರಾಮಗಳಲ್ಲಿ ಪರ್ಯಾಯ ವ್ಯವಸ್ಥೆ ಮೂಲಕ ನೀರು ಕೊಡಬೇಕು. ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲೇ ಇದ್ದು ನೀರಿಗೆ ಕೊರತೆಯಾಗದಂತೆ ನೋಡಿಕೊಳ್ಳಬೇಕು. ತಾಪಂ ಇಒ ಅಧಿಕಾರಿಗಳು ಕುಡಿವ ನೀರಿನ ಸಮಸ್ಯೆ ಬಗ್ಗೆ ನಿಗಾ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಲಭ್ಯವಿರುವ ಅನುದಾನದಲ್ಲಿ ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ ನೀಡಿ. ಮುಂದಿನ ದಿನಗಳಲ್ಲಿ ಗ್ರಾಮೀಣ/ನಗರ ಪ್ರದೇಶದ ಜನರಿಗೆ ಸಮಸ್ಯೆಯಾಗದಂತೆ ನೀರು ಪೂರೈಸುವುದು ಅಧಿಕಾರಿಗಳ ಹೊಣೆ. ನೀರು ಸರಬರಾಜು ಕೇಂದ್ರಗಳಲ್ಲಿ ಯಾವುದೇ ಸೋರಿಕೆ ಆಗದಂತೆ ಎಚ್ಚರವಹಿಸಿ ಎಂದು ಉಸ್ತುವಾರಿ ಸಚಿವರು ತಿಳಿಸಿದರು.

ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಕೆ. ವೆಂಕಟೇಶ್ ಮಾತನಾಡಿದರು.

ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿ ಯಾವುದೇ ಲೋಪವಿಲ್ಲದಂತೆ ನಡೆಯಬೇಕು. ಗ್ರಾಮ ಪಂಚಾಯಿತಿಗಳು ಯೋಜನೆ ಹಸ್ತಾಂತರಿಸಿಕೊಳ್ಳುವ ಮೊದಲು ಎಲ್ಲವೂ ಸರಿಯಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಿಕೊಳ್ಳಬೇಕು. ಪಿಡಿಒಗಳಿಗೆ ಈ ಸಂಬಂಧ ಸೂಕ್ತ ಸೂಚನೆ ನೀಡಬೇಕೆಂದು ಸಚಿವರು ಸೂಚಿಸಿದರು.

ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಮಾತನಾಡಿ, ಜೆಜೆಎಂ ಕಾಮಗಾರಿಯ ಪೈಪ್‌ಗಳು ಒಡೆದು ಹೋಗಿ ತೊಂದರೆಯಾಗಿದೆ. ಮಾರ್ಗಸೂಚಿ ಪ್ರಕಾರ ಕಾಮಗಾರಿ ನಡೆಯಬೇಕಿದೆ. ಗುಂಬಳ್ಳಿಯಂತಹ ಪ್ರಕರಣಗಳು ಮರುಕಳಿಸದಂತೆ ನಿಗಾವಹಿಸಬೇಕು ಎಂದರು.

ಕೃಷಿ ಇಲಾಖೆ ಪ್ರಗತಿ ಪರಿಶೀಲಿಸಿ ಮಾತನಾಡಿದ ಸಚಿವರು ಮುಂಬರುವ ಮಳೆಗಾಲದಲ್ಲಿ ಕೃಷಿ ಚಟುವಟಿಕೆಗಳಿಗೆ ಅಗತ್ಯ ಬಿತ್ತನೆ ಬೀಜ, ರಸಗೊಬ್ಬರಗಳನ್ನು ಜಿಲ್ಲೆಗೆ ಅಗತ್ಯಕ್ಕನುಗುಣವಾಗಿ ದಾಸ್ತಾನು ಮಾಡಬೇಕು ಎಂದು ತಿಳಿಸಿದರು.

ಲೋಕಸಭಾ ಸದಸ್ಯ ಸುನೀಲ್ ಬೋಸ್, ಶಾಸಕರಾದ ಗಣೇಶ್ ಪ್ರಸಾದ್, ಡಾ. ಡಿ. ತಿಮ್ಮಯ್ಯ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್, ಜಿಲ್ಲಾ ಅಧ್ಯಕ್ಷ ಹೆಚ್.ವಿ. ಚಂದ್ರು, ಕೆಡಿಪಿ ಸದಸ್ಯರಾದ ಮಹದೇವಣ್ಣ, ಸಯ್ಯದ್ ಮುಸ್ಸೈಯೀಬ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಇತರೆ ಅಧಿಕಾರಿಗಳು ಸಭೆಯಲ್ಲಿದ್ದರು.

ಕೊಡವ ಕುಟುಂಬಗಳ ಚೆಕ್ಕೇರ ಕ್ರಿಕೆಟ್ ಪಂದ್ಯ

ಮಡಿಕೇರಿ: ಕೊಡವ ಕುಟುಂಬಗಳ ನಡುವೆ 23ನೇ 'ಚೆಕ್ಕೇರ ಕ್ರಿಕೆಟ್ ಪಂದ್ಯಾವಳಿ' ಏ.6ರಿಂದ ಹುದಿಕೇರಿಯಲ್ಲಿ ಆರಂಭಗೊಳ್ಳಲಿದ್ದು, ಪ್ರಶಸ್ತಿಗಾಗಿ 281 ತಂಡಗಳ ನಡುವೆ ಸ್ಪರ್ಧೆ ನಡೆಯಲಿದೆಯೆಂದು ಪಂದ್ಯಾವಳಿ ಆಯೋಜನಾ ಸಮಿತಿಯ ಅಧ್ಯಕ್ಷರಾದ ಚೆಕ್ಕೇರ ಚಂದ್ರ ಪ್ರಕಾಶ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಕೊಡವ ಕ್ರಿಕೆಟ್ ಅಕಾಡೆಮಿ ಸಹಯೋಗದಲ್ಲಿ ಆಯೋಜಿತ ಕೊಡವ ಕ್ರಿಕೆಟ್ ಪಂದ್ಯಾವಳಿ ಹುದಿಕೇರಿಯ ಜನತಾ ಪ್ರೌಢಶಾಲಾ ಮೈದಾನ ಮತ್ತು ಕಿರಿಯ ಪ್ರಾಥಮಿಕ ಶಾಲಾ ಮೈದಾನಗಳಲ್ಲಿ 41 ದಿನಗಳ ಕಾಲ ನಡೆಯಲಿದೆಯೆಂದು ಮಾಹಿತಿಯನ್ನಿತ್ತರು. ಪುರುಷರ ಹಾಗೂ ಮಹಿಳಾ ಕ್ರಿಕೆಟ್ ಆಯೋಜಿಸಿದ್ದು, ಇದರಲ್ಲಿ 64 ಕುಟುಂಬ ತಂಡಗಳು ನೋಂದಾಯಿಸಿಕೊಂಡಿವೆ. ಈ ಪಂದ್ಯಾವಳಿ ಏ.28ರಿಂದ ಆರಂಭಗೊಳ್ಳಲಿದೆಯೆಂದರು. ಚೆಕ್ಕೇರ ಕ್ರಿಕೆಟ್ ಪಂದ್ಯಾವಳಿ ಯ ಫೈನಲ್ ಮೇ19 ರಂದು ನಡೆಯಲಿದೆ. ಪುರುಷರ ಕ್ರಿಕೆಟ್ ಪಂದ್ಯಾವಳಿ ವಿಜೇತರಿಗೆ 1 ಲಕ್ಷ ನಗದು ಮತ್ತು ಟ್ರೋಫಿ, ದ್ವಿತೀಯ 75 ಸಾವಿರ ರೂ. ಮತ್ತು ಟ್ರೋಫಿ ಹಾಗೂ ಸೆಮಿಫೈನಲ್‌ನಲ್ಲಿ ಪರಾಜಿತ ಎರಡು ತಂಡಗಳಿಗೆ ತಲಾ 25 ಸಾವಿರ ರೂ.ಗಳ ನಗದು ಬಹುಮಾನವನ್ನು ನೀಡಲಾಗುತ್ತದೆ. ಚೆಕ್ಕೇರ ಕಪ್ ಕ್ರಿಕೆಟ್ ಪಂದ್ಯಾವಳಿ ಏ.6 ರಂದು ಆರಂಭಗೊಳ್ಳಲಿದೆ. 10 ಗಂಟೆಗೆ ವೇದಿಕೆ ಕಾರ್ಯಕ್ರಮಗಳು ನಡೆಯಲಿದೆ. ಎಂದರು.

ಸುದ್ದಿಗೋಷ್ಠಿಯಲ್ಲಿ ಚೆಕ್ಕೇರ ಕ್ರಿಕೆಟ್ ಪಂದ್ಯಾವಳಿ ಆಯೋಜನಾ ಸಮಿತಿ ಕಾರ್ಯದರ್ಶಿ ಚೆಕ್ಕೇರ ದಿಲೀಪ್ ಬೋಪಣ್ಣ, ಸಮಿತಿ ಸದಸ್ಯ ಚೆಕ್ಕೇರ ಕಿರಣ್ ಉಪಸ್ಥಿತರಿದ್ದರು.

ಸಮಿತಿಯ ಅಧ್ಯಕ್ಷರಾದ ಚೆಕ್ಕೇರ ಚಂದ್ರ ಪ್ರಕಾಶ್ ಮಾತನಾಡಿದರು.

ಸೈಬರ್ ಅಪರಾಧ ತಡೆಗೆ ಆದ್ಯತೆ ಕೊಡಿ

ಮೈಸೂರು: ಇತ್ತೀಚೆಗೆ ಸೈಬರ್ ಅಪರಾಧಗಳು ಹೆಚ್ಚಾಗುತ್ತಿದ್ದು, ಪತ್ತೆಹಚ್ಚಿ ನಿಭಾಯಿಸುವ ಶಕ್ತಿಯುವ ಅಧಿಕಾರಿಗಳಲ್ಲಿ ಇರಬೇಕು ಎಂದು ನಿವೃತ್ತ ಪೊಲೀಸ್ ಅಧಿಕಾರಿ ಪುಟ್ಟಮಾದಯ್ಯ ತಿಳಿಸಿದರು.

ನಗರ ಶಸ್ತ್ರ ಮೀಸಲು ಪಡೆ ಮೈದಾನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಏಕೀಕರಣದ ನಂತರ ಮೈಸೂರು ರಾಜ್ಯದಲ್ಲಿ ಪೊಲೀಸ್ ಧ್ವಜ ವಿಭಿನ್ನವಾಗಿದ್ದವು. ಅದನ್ನು ಮಾರ್ಪಡಿಸಿ 1960ರಲ್ಲಿ ರಾಜ್ಯ ಪೊಲೀಸ್ ಕಾಯ್ದೆ ಜಾರಿಗೊಳಿಸಿ ನಿವೃತ್ತ ಪೊಲೀಸರ ಕಲ್ಯಾಣ ನಿಧಿ ಜಾರಿಗೊಳಿಸಲಾಯಿತು ಎಂದರು. ಬೇರೆ ಇಲಾಖೆಗಳಿಗಿಂತ ಪೊಲೀಸ್ ಇಲಾಖೆ ಭಿನ್ನ. ಇಲ್ಲಿ ಕೆಲಸಕ್ಕೆ ನಿರ್ದಿಷ್ಟ ಸಮಯ ಇರುವುದಿಲ್ಲ. ಆರೋಗ್ಯ ಸಮಸ್ಯೆಗಳೂ ಬೇಗ ಬರುತ್ತವೆ. ಹೀಗಾಗಿ ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಸಾರ್ವಜನಿಕ ಜೀವನದಲ್ಲಿ ನಡೆದುಕೊಳ್ಳುವ ರೀತಿ ಮುಖ್ಯ. ಈ ದಿನಗಳಲ್ಲಿ ಸೈಬರ್ ಅಪರಾಧಗಳನ್ನು ನಿಭಾಯಿಸುವ ಶಕ್ತಿ ಮುಖ್ಯ. ನಿವೃತ್ತ ಅಧಿಕಾರಿಗಳ ಪಟ್ಟಿ ಠಾಣಾ ಮಟ್ಟದಲ್ಲಿರಬೇಕು. ನಿವೃತ್ತರನ್ನು ಗೌರವಿಸಬೇಕು ಎಂದು ತಿಳಿಸಿದರು. ಪ್ರಧಾನ ದಳಪತಿ ಸಹಾಯಕ ಕಮಾಂಡರ್ ರಾಜು ತುಕಡಿಗಳ ಪರಿವೀಕ್ಷಣೆಗೆ ಕರೆದೊಯ್ದರು. ತೆರೆದ ವಾಹನದಲ್ಲಿ ಪರಿವೀಕ್ಷಣೆ ಮಾಡಲಾಯಿತು. ಮೀಸಲು ಪಡೆ, ನಗರ ನಾಗರಿಕ ಪೊಲೀಸ್, ಸಂಚಾರ ವಿಭಾಗ, ಅಶ್ವರೋಹಿ ದಳದಿಂದ ಪಥಸಂಚಲನ ನಡೆಯಿತು.

ಮೀಸಲು ಪಡೆ ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ದಕ್ಷಿಣ ವಲಯ ಐ.ಜಿ.ಪಿ ಬೋರಲಿಂಗಯ್ಯ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ್, ಡಿ ಸಿ ಪಿ ಮುತ್ತುರಾಜ್, ಎಸ್. ಜಾಹ್ನವಿ, ಎಡಿಎಸ್ಪಿ ನಾಗೇಶ್, ಕಮಾಂಡೆಂಟ್ ಶೈಲೇಂದ್ರ, ಕೆಪಿಎ ನಿರ್ದೇಶಕ ಚನ್ನಬಸವಣ್ಣ, ಸೆಸ್ಕ್ ಎ ಎಸ್ಪಿ ಸವಿತಾ ಹೂಗಾರ್ ಉಪಸ್ಥಿತರಿದ್ದರು.

ಗ್ಯಾರಂಟಿಗೆ ಆರ್ಥಿಕತೆ ಅಧೋಗತಿ

ಮೈಸೂರು: ಗ್ಯಾರಂಟಿ ಯೋಜನೆಗಳಿಂದ ಸರಕಾರದ ಆರ್ಥಿಕತೆ ಅಧೋಗತಿಗೆ ತಲುಪಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ವಾಗ್ದಾಳಿ ನಡೆಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ದಾಖಲೆಯ 16 ಬಾರಿ ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರ ಉಚಿತ ಗ್ಯಾರಂಟಿಗಳಿಂದ ಕುಟುಂಬಗಳಲ್ಲಿ ಒಡಕು ಉಂಟಾಗಿದೆ.

ಬೇಕಾದರೆ ಒಂದು ಸರ್ವೆ ಮಾಡಿಸಿ, ಇದಕೊಂದು ಮಾನ ದಂಡ ಬೇಡವಾ? ವೃದ್ಧಾಪ್ಯ ವೇತನಕ್ಕೂ ಒಂದು ಮಾನ ದಂಡ ಇದೆ. ಸಾಲ ಮಾಡಿ ಉಚಿತ ಕೊಡುವ ಅಗತ್ಯ ಇದೆಯಾ? ಒಂದು ಮಾನದಂಡದಡಿ ಕೊಡಿ. ಇದೊಂದು ಹುಚ್ಚು ಸರಕಾರ.



ಇಲ್ಲಿವರೆಗೆ 76 ಸಾವಿರ ಕೋಟಿ ಕೊಟ್ಟಿದ್ದೇವೆ ಎಂದರೆ ಆ ಹಣದಲ್ಲಿ ಎಷ್ಟು ಯೋಜನೆಗಳನ್ನು ಮಾಡಬಹುದಿತ್ತು. 76 ಸಾವಿರ ಕೋಟಿ ಖರ್ಚು ಮಾಡಿದ್ದರ ಫಲ ಏನು? ಆರ್ಥಿಕ ಶಿಸ್ತು ಇಲ್ಲದ ಸರಕಾರವಿದು ಎಂದು ಕಿಡಿಕಾರಿದರು.

2013ರಲ್ಲಿ ಜನಪರ ಕಾರ್ಯಕ್ರಮಗಳ ಅಂಶಗಳ ಪಟ್ಟಿ ತಯಾರಿಸಿದ್ದೆ ನಾವು. ಆರು ಪ್ರೋಗ್ರಾಂ ನಾವು ಕೊಟ್ಟಿದ್ದು. ನಾನು, ರಮೇಶ್ ಕುಮಾರ್, ಇಬ್ರಾಹಿಂ. ಅನ್ನಭಾಗ್ಯ ಕಲ್ಪನೆ ನಾವು ಕೊಟ್ಟಿದ್ದು, ಸಿದ್ದರಾಮಯ್ಯನ ತಲೆಯಲ್ಲಿ ಇರಲಿಲ್ಲ. ಆಗ ಉತ್ತಮ ಜನಪರ ಆಡಳಿತ ಕೊಟ್ಟರು. ಈಗ ಸಿಎಂ ಸಿದ್ದರಾಮಯ್ಯ ಸರಿಯಾಗಿ ಆಡಳಿತ ನಡೆಸುತ್ತಿಲ್ಲ. ದುಡಿಯುವ ಕೈಗೆ ಕೆಲಸ ಕೊಡಿ ಎಂದು ಆಗ್ರಹಿಸಿದರು.

ಸದನದಲ್ಲಿ ಸಿಎಂ ಸಿದ್ದರಾಮಯ್ಯಗೆ ಬೆಲೆ ಇಲ್ಲದಂತಾಗಿದೆ. ವ್ಹೀಲ್ ಚೇರನಲ್ಲಿ ಕೂತು ಆಡಳಿತ ನಡೆಸಲಿಕ್ಕೆ ಆಗಲ್ಲ. ಸದನದಲ್ಲಿ ನಡೆದ ಘಟನೆ ನಾಚಿಕೆಗೇಡು. ಮಧುಬಲೆಯಲ್ಲಿ 48 ಜನ ಇದ್ದಾರೆ ಎಂದು ಕಾಂಗ್ರೆಸ್‌ನವರೇ ಹೇಳಿದ್ದಾರೆ. ಅದನ್ನು ಯಾರು ಅಂತ ಹೊರ ತೆಗೆಯುವ ಕೆಲಸ ವಿಪಕ್ಷದವರೂ ಮಾಡಲಿಲ್ಲ. ಎರಡೂ ಪಕ್ಷಗಳೂ ದಿವಾಳಿಯಾಗಿವೆ ಎಂದು ಟೀಕಿಸಿದರು.

ಹೊಂದಾಣಿಕೆ ರಾಜಕೀಯ

ಬಿಜೆಪಿಗೆ ಆಡಳಿತವೂ ಗೊತ್ತಿಲ್ಲ. ವಿರೋಧ ಪಕ್ಷ ಸ್ಥಾನ ನಿಭಾಯಿಸೋದು ಗೊತ್ತಿಲ್ಲ. ಕೇಳೊ ತಾಕತ್ತೇ ಇಲ್ಲ ಇವರಿಗೆ. ಬಿಜೆಪಿ – ಕಾಂಗ್ರೆಸ್ ನಡುವಿನ ಹೊಂದಾಣಿಕೆ ಹೆಚ್ಚಾಗಿದೆ, ಅದರಿಂದ ತಾನೇ ವಿಜಯೇಂದ್ರ ಗೆದ್ದಿದ್ದು ಎಂದು ಮಾರ್ಮಿಕವಾಗಿ ನುಡಿದರು.

ವೃತ್ತಿಯಲ್ಲಿ ದೇವರ ಕಾಣುತ್ತಿದ್ದ ದಾಸಿಮಯ್ಯ

ಮೈಸೂರು: ವಚನಗಳಲ್ಲಿ ಗುರುಗಳಿಗೆ ಪ್ರಾಮುಖ್ಯತೆ ನೀಡಿ ಗುರುಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡವರು ದೇವರ ದಾಸಿಮಯ್ಯ ಎಂದು ಬೆಂಗಳೂರಿನ ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜು ಪ್ರಾಧ್ಯಾಪಕ ಡಾ.ಕೆ.ಎಸ್. ಲಕ್ಷ್ಮಿನಾರಾಯಣ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಯೋಜಿಸಲಾಗಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದಾಸಿಮಯ್ಯನ 176 ವಚನಗಳು ನಮಗೆ ಲಭ್ಯವಿದೆ. ಆ ವಚನಗಳು ಒಳ್ಳೆಯ ಸಂದೇಶದಿಂದ ಕೂಡಿದ್ದು ಇವರು ಬಸವಣ್ಣನಿಗಿಂತ ಹಿರಿಯವರಾಗಿದ್ದರು. ದೇವರ ದಾಸಿಮಯ್ಯ ಅವರು ದೇವರಲ್ಲಿ ನಂಬಿಕೆ ಹೊಂದಿದ್ದರು. ವೃತ್ತಿಯಲ್ಲಿ ದೇವರನ್ನು ಕಾಣುತ್ತಿದ್ದರು. ಭಗವಂತನೇ ನಮಗೆ ಎಲ್ಲವನ್ನೂ ಕೊಡುವಾಗ ಚಿಂತೆ ಮಾಡುವುದೇಕೆ ಎಂದು ನಮಗೆ ಹೇಳಿದ್ದಾರೆ, ಅದನ್ನು ನಾವು ಅರಿಯಬೇಕು. ನಿಜವಾಗಿಯೂ ನಮಗೆ ಭಗವಂತನ ಮೇಲೆ ಭಕ್ತಿ ಇದ್ದರೆ ನಾವು ಕಾಡಲ್ಲಿ ಇದ್ದರೂ ನಾಡಿನಲ್ಲಿದ್ದೇವೆ ಅನ್ನಿಸುತ್ತದೆ ಎಂದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ನಡೆಯಿತು.

ರಾಮಕೃಷ್ಣ ಆಶ್ರಮದ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಸ್ವಾಮಿ ಆಘಹರನಂದಾಜೀ ಮಹರಾಜ್ ಮಾತನಾಡಿ, ಪ್ರತಿಯೊಬ್ಬರು ನಿಷ್ಠೆಯಿಂದ ಕಾಯಕ ಮಾಡಿ ಅದರಲ್ಲಿ ದೇವರನ್ನು ಕಾಣಬೇಕು ಎಂದು ಹೇಳಿದರು.

ದೇವರ ದಾಸಿಮಯ್ಯ ಮಹಾನ್ ಶಿವ ಭಕ್ತರಾಗಿದ್ದರು. ಭಕ್ತಿ ಎಂದರೆ ದೇವರಲ್ಲಿ ಅದನ್ನು ಕೊಡು ಇದನ್ನು ಕೊಡು ಎಂದು ಬೇಡುವುದಲ್ಲ, ಭಗವಂತನಲ್ಲಿ ತನ್ನನ್ನು ತಾನು ಕಾಣುವುದು. ನಿಸ್ವಾರ್ಥದಿಂದ ಕೆಲಸ ಮಾಡುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿನಿರ್ದೇಶಕ ವಿ. ಎನ್ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಮುಡಾ ಮಾಜಿ ಅಧ್ಯಕ್ಷ ರಾಜೀವ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಸದಸ್ಯ ಸಿ.ಆರ್.ಮೂರ್ತಿ, ಪಾಲಿಕೆಯ ಮಾಜಿ ಸದಸ್ಯ ಆರ್.ಸುನೀಲ್, ಶೋಭ ಸುನೀಲ್, ನೇಕಾರ ಒಕ್ಕೂಟದ ಅಧ್ಯಕ್ಷ ದಿನೇಶ್, ಸಮುದಾಯ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ನರಸಿಂಹ ಮೂರ್ತಿ ಉಪಸಿತರಿದ್ದರು.

ಪೊಲೀಸ್ ಇಲಾಖೆ ಜನಸ್ನೇಹಿ ಆಗಬೇಕಿದೆ

ಮಂಡ್ಯ: ಸಮಾಜದ ಶಾಂತಿ ಸುವ್ಯವಸ್ಥೆ ಕಾಪಾಡುವ ಮೂಲಕ ಪೊಲೀಸ್ ಇಲಾಖೆ ಜನಸ್ನೇಹಿ ಎಂದು ಸಾರ್ವಜನಿಕರಿಗೆ ಮನದಟ್ಟು ಮಾಡಬೇಕಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯಾತು ಮೈದಾನದಲ್ಲಿ ನಡೆದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

1963 ರಲ್ಲಿ ಕರ್ನಾಟಕ ಪೊಲೀಸ್ ಧ್ವಜವನ್ನು ಅಧಿಕೃತವಾಗಿ ಜಾರಿಗೆ ತರಲಾಯಿತು, ಅಂದಿನಿಂದ ಏ.2ರಂದು ಪೊಲೀಸ್ ಧ್ವಜ ದಿನ ಆಚರಿಸಿಕೊಂಡು ಬರಲಾಗುತ್ತಿದೆ. 2024 ರಲ್ಲಿ ಪೊಲೀಸ್ ಧ್ವಜವನ್ನು ಜಿಲ್ಲೆಯಲ್ಲಿ ಮಾರಾಟ ಮಾಡಿ 22.50 ಲಕ್ಷ ರು. ಸಂಗ್ರಹಿಸಲಾಗಿದೆ. ಜಿಲ್ಲಾ ಪೊಲೀಸ್ ಉಳಿತಾಯ ಖಾತೆ ಠೇವಣಿ ಮೊತ್ತ 30.25 ಲಕ್ಷ ರು.ಉಳಿದುಕೊಂಡಿದೆ, ಸದರಿ ಮೊತ್ತವನ್ನು ನಿವೃತ್ತ ಪೊಲೀಸ್ ಹಾಗೂ ಸೇವಾನಿರತ ಪೊಲೀಸ್ ಸಿಬ್ಬಂದಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕಾಗಿ ಬಳಸಲಾಗುತ್ತದೆ ಎಂದು ತಿಳಿಸಿದರು.

ಧ್ವಜ ದಿನಾಚರಣೆಗೆ ಬಂದ ಹಣದಿಂದ ಶಿಕ್ಷಣದಲ್ಲಿ ಉತ್ತಮ ಅಂಕ ಪಡೆದ ಪೊಲೀಸ್ ಸಿಬ್ಬಂದಿಯ ಮಕ್ಕಳಿಗೆ ಪ್ರೋತ್ಸಾಹ ಧನವಾಗಿ ನೀಡಲಾಗುವುದು ಎಂದರು. ದೇಹದ ತೂಕ ಕಡಿಮೆ ಮಾಡಿಕೊಳ್ಳುವ ಪೊಲೀಸ್ ಸಿಬ್ಬಂದಿಗೆ ಬಹುಮಾನ ಕೊಡಲಾಗುವುದು. ಪ್ರತಿ ವರ್ಷ ಪೊಲೀಸ್ ಸಿಬ್ಬಂದಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಿ ಆರೋಗ್ಯ ಕುರಿತು ಗಮನ ಹರಿಸಲಾಗುತ್ತಿದೆ. ಚಿಕಿತ್ಸೆ ವೆಚ್ಚ ಭರಿಸಲಾಗುತ್ತದೆ. ಸಮಾಜಕ್ಕೆ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸೋಣ ಎಂದು ಹೇಳಿದರು. ನಿವೃತ ಆರಕ್ಷಕ ಉಪ ಅಧೀಕ್ಷಕರಾದ ಎಲ್.ಕೆ.ರಮೇಶ್ ಮಾತನಾಡಿ, ಪೊಲೀಸ್ ಧ್ವಜಕ್ಕೆ ತನ್ನದೇ ಆದ ಮಹತ್ವವಿದೆ. ಪೊಲೀಸ್ ಅಧಿಕಾರಿಗಳು ಕರ್ತವ್ಯದಲ್ಲಿ ಲೋಪ ಎಸಗಿದರೆ ಅದು ಧ್ವಜಕ್ಕೆ ಮಾಡುವ ಅವಮಾನ, ಇಲಾಖೆಗೆ ಕಳಂಕ ತರದಂತೆ ಪೊಲೀಸ್ ಸಿಬ್ಬಂದಿ ಕಾರ್ಯ ನಿರ್ವಹಿಸಿ ಎಂದು ಸಲಹೆ ನೀಡಿದರು. ಸಭೆಯಲ್ಲಿ ಎಎಸ್ಪಿಗಳಾದ ಸಿ.ಈ.ತಿಮ್ಮಯ್ಯ, ಎಸ್.ಈ.ಗಂಗಾಧರ ಸ್ವಾಮಿ, ಇತರೆ ಅಧಿಕಾರಿಗಳು ಇದ್ದರು.

ನಗರದಲ್ಲಿ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಪುನೀತ್ ಜನ್ಮದಿನ: ವಾಲಿಬಾಲ್ ಪಂದ್ಯಾವಳಿ

ಪಿರಿಯಾಪಟ್ಟಣ: ತಾಲೂಕಿನ ಭೋಗನಹಳ್ಳಿ ಗ್ರಾಮದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಪುನೀತ್ ರಾಜಕುಮಾರ್ ಸವಿ ನೆನಪಿಗಾಗಿ ಐದನೇ ವರ್ಷದ ಬೊಗನಹಳ್ಳಿ ಪ್ರೀಮಿಯಂ ಲೀಗ್ ವಾಲಿಬಾಲ್ ಪಂದ್ಯಾವಳಿ ನಡೆಯಿತು. ಈ ಕ್ರೀಡಾಕೂಟದಲ್ಲಿ 8 ತಂಡಗಳು ಭಾಗವಹಿಸಿದವು

ಕ್ರೀಡಾಪಟುಕ್ಕೆ ಚಾಲನೆ ನೀಡಿದ ವಿ.ಎಸ್. ಎನ್ ರಾವಂದೂರು ಸಹಕಾರ ಸಂಘದ ಅಧ್ಯಕ್ಷ ಮಹೇಶ್ ಮಾತನಾಡಿ, ಆರೋಗ್ಯಕರ ದೇಹ ಮತ್ತು ಮನಸ್ಥಿತಿ ರೂಪಿಸುವಲ್ಲಿ ಕ್ರೀಡೆ ಪ್ರಮುಖ ಪಾತ್ರ ವಹಿಸುತ್ತದೆ. ವಿವಿಧ ವಿಷಯ ಅಧ್ಯಯನ ಮಾಡುವಂತೆ ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಶಿಕ್ಷಣದ ಪ್ರಮುಖ ಭಾಗ ಎಂದರು. ಪ್ರಥಮ ಬಹುಮಾನ ಪಾವನಿ ಬ್ರದರ್ಸ್ ತಂಡ, ದ್ವಿತೀಯ ಬಹುಮಾನ ನಿಖಿಲ್ ಫೈಟರ್ಸ್ ತಂಡ ಹಾಗೂ ತೃತೀಯ ಬಹುಮಾನ ಮಾರಿಗುಡಿ ಬಾಯ್ಸ್ ತಂಡ ಪಡೆದುಕೊಂಡವು. ಈ ವೇಳೆ ಶಿವರಾಜ್, ರವಿ, ಅಭಿಲಾಷ್, ಲೋಕೇಶ್, ಮಾದೇವ್, ಸೈನಿಕ ಹೇಮೇಶ್, ಲಕ್ಷ್ಮಣ, ಕ್ರೀಡಾಕೂಟದ ಆಯೋಜಕರಾದ ಕಿಶೋರ್. ಕಾರ್ತಿಕ್. ಯೋಗೇಶ್ ಇರ್ಫಾನ್ ಇದ್ದರು.

{ದಿನೇಶ್ ಗುಂಡೂರಾವ್} ಆರೋಗ್ಯ ಸಚಿವ

ಹಿಂದೂ ಧರ್ಮದ ಸಂಸ್ಥೆಗಳಿರಲಿ, ಕ್ರೈಸ್ತ ಧರ್ಮ ಇರಲಿ, ಮುಸ್ಲಿಂ ಇರಲಿ. ರಾಜ್ಯ ಸರಕಾರದ ಅಧಿಕಾರವನ್ನು ಕಿತ್ತುಕೊಳ್ಳುವ ಕೆಲಸವನ್ನು ಕೇಂದ್ರ ಸರಕಾರ ಮಾಡುತ್ತಿದೆ. ಇದು ಸಂವಿಧಾನಕ್ಕೆ ವಿರೋಧವಾದ ನಡೆ. ಪಾರ್ಲಿಮೆಂಟ್‌ನಲ್ಲಿ ದಬ್ಬಾಳಿಕೆ ಮಾಡಿ ವಕ್ಫ್ ಬಿಲ್ ಪಾಸ್ ಮಾಡಿದ್ದಾರೆ.

ನಾಳೆ ನಿವೃತ್ತ ನೌಕರರ ಸಂಘದ ಸಮಾವೇಶ

ಮಂಡ್ಯ: ಸರಕಾರಿ ನಿವೃತ್ತ ನೌಕರರ ಸಂಘದ ವತಿಯಿಂದ ಏಪ್ರಿಲ್ 4ರಂದು ರಾಜ್ಯ ಮಟ್ಟದ ಕಾರ್ಯಾಗಾರ ಮತ್ತು ಸಮಾ ವೇಶವನ್ನು ಬೆಂಗಳೂರಿನ ಪ್ರಿನ್ಸ್ ಶೈನ್ ಅರಮನೆ ಮೈದಾನದ ಆವರಣದಲ್ಲಿ ಆಯೋಜಿಸಲಾಗಿದ್ದು, ಜಿಲ್ಲೆಯ ನಿವೃತ್ತ ನೌಕ ರರು ಭಾಗವಹಿಸುವಂತೆ ಜಿಲ್ಲಾ ಸಂಘದ ಅಧ್ಯಕ್ಷ ಕೆ.ಬಿ. ಶಿವಲಿಂಗಯ್ಯ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಾ ತನಾಡಿದ ಅವರು, ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದ ರಾಮಯ್ಯ ಉದ್ಘಾಟಿಸಲಿದ್ದು, ಸಚಿವ ಸಂಪುಟದ ಇತರೆ ಸಚಿವರು ಭಾಗವಹಿಸಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ನಿವೃತ್ತ ನೌಕರರ ಬೇಡಿಕೆಗಳಾದ ನಗದು ರಹಿತ ಆರೋಗ್ಯ ಭಾಗ್ಯದ ಸಂಧ್ಯಾ ಕಿರಣ ಯೋಜನೆ ಜಾರಿ, 70ರಿಂದ 80 ವರ್ಷ ದೊಳಗಿನ ನಿವೃತ್ತ ನೌಕರರು ಅವರ ಕುಟುಂಬದವರಿಗೆ ಶೇ.10 ರಷ್ಟು ಪಿಂಚಣಿ ಸೌಲಭ್ಯ, 2022ರಿಂದ 2024ರವರೆಗೆ ನಿವೃತ್ತ ರಾದವರಿಗೆ ಪಿಂಚಣಿ ಸೌಲಭ್ಯ ಒದಗಿಸುವುದು, ಜಿಲ್ಲಾ ಹಾಗೂ ತಾಲೂಕು ಸಂಘಗಳಿಗೆ ಉಚಿತ ನಿವೇಶನ ಒದಗಿಸುವುದು, 7ನೇ ವೇತನ ಆಯೋಗದ ಶಿಫಾರಸ್ಸಿನ ಅಂಶ ಜಾರಿಗೊಳಿಸುವ ಬೇಡಿಕೆ ಈಡೇರಿಸುವಂತೆ ಮನವಿ ಮಾಡಲಾಗುವುದು ಎಂದು ಹೇಳಿದರು. ಮಂಡ್ಯ ಜಿಲ್ಲೆಯಿಂದ 8 ಬಸ್‌ಗಳಲ್ಲಿ 400ರಿಂದ 500 ಮಂದಿ ನಿವೃತ್ತ ನೌಕರರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘಟನಾ ಕಾರ್ಯದರ್ಶಿ ವೆಂಕಟೇಶ್ ಗೌಡ, ಅಂಕೇಗೌಡ, ಬಿ.ಶಿವಲಿಂಗು ಇದ್ದರು.

ಆದಿವಾಸಿಗಳಿಂದ ಪ್ರತಿಭಟನೆ ನಾಳೆ

ಮಡಿಕೇರಿ: ನಕಲಿ ಜಾತಿ ಪ್ರಮಾಣ ಪತ್ರಗಳ ಮೂಲಕ ಸರಕಾರದ ಸೌಲಭ್ಯಗಳಿಂದ ನೈಜ ಆದಿವಾಸಿಗಳನ್ನು ವಂಚಿಸುತ್ತಿದ್ದು ಈ ಬಗ್ಗೆ ಸೂಕ್ತ ಕ್ರಮಕ್ಕೆ ಆಗ್ರಹಿಸಿ ಏ.4ರಂದು ನಗರದಲ್ಲಿ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಆದಿವಾಸಿ ಸಂಘಟನೆಗಳ ಒಕ್ಕೂಟ ತಿಳಿಸಿದೆ. ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ರಾಜ್ಯ ಜೇನುಕುರುಬರ ಅಭಿವೃದ್ಧಿ ಸಮಿತಿ ಸಂಚಾಲಕರಾದ ಜೆ.ಟಿ.ಕಾಳಿಂಗ ಮಾತನಾಡಿ, ವಿವಿಧ ಆದಿವಾಸಿ ಸಂಘಟನೆಗಳು, ದಲಿತ ಪರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳನ್ನು ಒಳಗೊಂಡಂತೆ ಏ.4ರಂದು ಬೆಳಗ್ಗೆ ನಗರದ ಸುದರ್ಶನ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದೆಂದು ತಿಳಿಸಿದರು. ನಕಲಿ ಜಾತಿ ಪ್ರಮಾಣ ಪತ್ರಗ ಳನ್ನು ಬಳಸಿಕೊಂಡು ಆದಿವಾಸಿಗಳಿಗೆ ಮೀಸಲಾದ ಸೌಲಭ್ಯ ದುರು ಪಯೋಗ ಪಡಿಸಿಕೊಳ್ಳುತ್ತಿರುವ ಘಟನೆಗಳು ಹೆಚ್ಚುತ್ತಿವೆ. ಇದರಿಂದ ಆದಿವಾಸಿಗಳ ಸರಕಾರಿಯೋಜನೆಗಳು ನೈಜ ಆದಿವಾಸಿಗಳಿಗೆ ತಲುಪುತ್ತಿಲ್ಲವೆಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸೋಲಿಗ ಅಭಿವೃದ್ಧಿ ಸಮಿತಿ ಜಿಲ್ಲಾಧ್ಯಕ್ಷ ಬಿ.ಬಿ.ಮಹೇಶ್ ಮಾತನಾಡಿ, ಈ ಹಿಂದೆ ಜಿಲ್ಲಾಧಿಕಾರಿಗೆ ನಕಲಿ ಜಾತಿ ಪ್ರಮಾಣ ಪತ್ರದಿಂದ ಆದಿವಾಸಿಗಳಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಮನವಿ ನೀಡಲಾಗಿದೆ.ಈ ಬಗ್ಗೆ ಸೂಕ್ತ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಂಗಸಮುದ್ರದ ಮಾವಿನಹಳ್ಳ ಅರಣ್ಯ ಹಕ್ಕು ಸಮಿತಿಯ ಕಾರ್ಯದರ್ಶಿ ಜೆ.ಎಸ್.ಪಾಪಣ್ಣ, ಜಿಲ್ಲಾ ಸಂಚಾಲಕ ಬಿ.ಎಸ್.ರಮೇಶ್, ರಾಜ್ಯ ಸೋಲಿಗ ಅಭಿವೃದ್ಧಿ ಸಮಿತಿ ಸಂಚಾಲಕ ಬಿ.ಹೆಚ್.ಸಿದ್ಧಲಿಂಗ ಉಪಸ್ಥಿತರಿದ್ದರು.

ಬಿಸಿಲ ಬೇಗೆಗೆ ನೀರಿಗಿಳಿದ ಗಜಪಡೆ

ಚಾಮರಾಜನಗರ: ಬಿಸಿಲ ಬೇಗೆಗೆ ಕಾಡಾನೆ ಹಿಂಡು ರಸ್ತೆಬದಿಯ ಹಳ್ಳದಲ್ಲೇ ರಿಲ್ಯಾಕ್ಸ್ ಗೆ ಜಾರಿ ಕೂಲ್ ಕೂಲ್ ಎಂದ ಘಟನೆ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುವ ಹನೂರು ತಾಲೂಕಿನ ವಡಕೆಹಳ್ಳ ರಸ್ತೆಯಲ್ಲಿ ಬುಧವಾರ ನಡೆದಿದೆ. ಬಿಸಿಲ ಬೇಗೆಗೆ ತತ್ತರಿಸಿದ ಆನೆಗಳ ಹಿಂಡು ರಸ್ತೆಬದಿಯ ಹಳ್ಳದಲ್ಲೇ ಮಿಂದು, ದಣಿವಾರಿ ಸಿಕೊಂಡು ರಿಲ್ಯಾಕ್ಸ್ ಗೆ ಜಾರಿದ್ದವು. ರಸ್ತೆಬದಿಯೇ ಆನೆಗಳ ಹಿಂಡು ಕಂಡ ವಾಹನ ಸವಾರರು ಹೌಹಾರಿ ದರು. ರಿಲ್ಯಾಕ್ಸ್ ಬಳಿಕ ಗಜಪಡೆ ರಸ್ತೆ ದಾಟಿದ್ದರಿಂದ ಕೆಲ ಕ್ಷಣ ವಾಹನ ಸವಾರರಿಗೆ ಆತಂಕ ಸೃಷ್ಟಿಸಿತ್ತು.

ಉಪ ಜಾತಿ ಕಾಲಂಗೆ ಮಾದಿಗ ನಮೂದಿಸಿ

ತಿ.ನರಸೀಪುರ: ರಾಜ್ಯಾದ್ಯಂತ ನ್ಯಾ. ನಾಗಮೋಹನ್ ದಾಸ್ ಆಯೋಗದ ಶಿಫಾರಸ್ಸಿನಂತೆ ಪರಿಶಿಷ್ಟ ಜಾತಿಯ ಒಳ ಮೀಸಲಿಗಾಗಿ ಏ.5ರಿಂದ ಪರಿಶಿಷ್ಟ ಜಾತಿ ಜನರ ಗಣತಿ ನಡೆಯಲಿದ್ದು, ಮಾದಿಗರು ಉಪ ಜಾತಿ ಕಾಲಂನಲ್ಲಿ 'ಮಾದಿಗ' ಎಂದು ನಮೂದಿಸಬೇಕು ಎಂದು ತಾಲೂಕು ಬಾಬು ಜಗಜೀವನ್ ರಾಂಜನ ಕಲ್ಯಾಣ ಸಂಘದ ಅಧ್ಯಕ್ಷ ಮಲಿ ಯೂರು ಶಂಕರ್ ಮನವಿ ಮಾಡಿದರು. ಈ ಕುರಿತು ಮಾಧ್ಯ ಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ಸಮಾಜದ ನಾಯಕರ ಹೋರಾಟದ ಫಲವಾಗಿ ಇತ್ತೀಚಿಗೆ ಪರಿಶಿಷ್ಟ ಜಾತಿಯಲ್ಲಿ ಮೀಸಲಾತಿ ವರ್ಗೀಕರಣಕ್ಕಾಗಿ ನ್ಯಾ. ನಾಗ ಮೋಹನ್ ದಾಸ್ ಅವರು ಮಧ್ಯಂತರ ವರದಿ ಸಲ್ಲಿಸಿದ್ದು, ಆಯೋಗದ ಶಿಫಾರಸ್ಸಿನಂತೆ ಏ.5ರಿಂದ ರಾಜ್ಯಾದ್ಯಂತ ಪರಿಶಿಷ್ಟ ಸಮುದಾಯದ 101 ಜಾತಿಗಳ ಸಂಗ್ರಹಣೆಗೆ ಚಾಲನೆ ದೊರೆಯಲಿದೆ. ಸ್ಥಳೀಯ ಅಧಿಕಾರಿಗಳು ಜಾತಿಗಳ ಸಮೀಕ್ಷೆ ವರದಿ ಕ್ರೋಢಿಕರಣ ಮಾಡಲಿದ್ದು, ಆದಿಆಂಧ್ರ, ಆದಿಕರ್ನಾಟಕ, ಆದಿದ್ರಾವಿಡ, ಚಮ್ಮಾರ, ಆದಿ ಜಾಂಬವ ಎಂದು ಈಗಾಗಲೇ ಧೃಡೀಕರಣ ಪಡೆದಿರುವ ಮಾದಿಗರು ಉಪಜಾತಿಯ ಕಾಲಂನಲ್ಲಿ 'ಮಾದಿಗ' ಎಂದು ನಮೂದಿಸಬೇಕು ಎಂದು ಮನವಿ ಮಾಡಿದರು.

ಏನಿದು ಉಮೀದ್ ವಿಧೇಯಕ?
ವಕ್ಫ್ ತಿದ್ದುಪಡಿ ವಿಧೇಯಕದ ಹಿಂದೆ-ಮುಂದೆ

ಏಕೀ ವಿಧೇಯಕ?

ವಕ್ಫ್ ಆಸ್ತಿಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿನ ಸವಾಲು ಸಮಸ್ಯೆಗಳನ್ನು ಪರಿಹರಿಸಲು ವಕ್ಫ್ ಕಾಯ್ದೆ- 1995 ಅನ್ನು ಮಾರ್ಪಡಿಸುವ ಗುರಿಯನ್ನು ಇದು ಹೊಂದಿದೆ. ಈಗಾಗಲೇ ದೇಶಾದ್ಯಂತ ಎದ್ದಿರುವ ತಗಾದೆಗಳಿಗೆ ಪರಿಹಾರ ಸೃಷ್ಟಿಸುವಂತೆ ಬದಲಾವಣೆಗಳನ್ನು ಇದರಲ್ಲಿ ತರಲಾಗಿದೆ.

ತಿದ್ದುಪಡಿಗಳೇನು? ಏಕೆ? ಹೇಗೆ?

ಪ್ರತಿಪಕ್ಷಗಳ ತೀವ್ರ ವಿರೋಧದ ನಡುವೆಯೂ ಕೇಂದ್ರ ಸರ್ಕಾರವು ಬುಧವಾರ ಸಂಸತ್ತಿನಲ್ಲಿ ವಕ್ಫ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಿದೆ. ಇದರ ಕುರಿತು ತೀವ್ರ ವಾಗ್ಯುದ್ಧ ಉಭಯ ಸದನಗಳಲ್ಲಿ ನಡೆಯುತ್ತಿದೆ. ಬಿಜೆಪಿ ನೇತೃತ್ವದ ಸರ್ಕಾರವು ಈ ವಿಧೇಯಕವು ದೇಶದಲ್ಲಿ ವಕ್ಫ್ ಆಸ್ತಿಗಳ ಆಡಳಿತ ಮತ್ತು ನಿರ್ವಹಣೆಯನ್ನು ಸುಧಾರಿಸುತ್ತದೆ ಎಂದು ಹೇಳಿಕೊಂಡಿದೆ. ಬಿಜೆಪಿಯ ಮಿತ್ರಪಕ್ಷಗಳಾದ ಟಿಡಿಪಿ ಮತ್ತು ಜೆಡಿಯು ಮಸೂದೆಗೆ ಬೆಂಬಲ ನೀಡಿವೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಶಾಸನದ ಅನುಷ್ಠಾನವನ್ನು ಹಿಂದಕ್ಕೆ ತೆಗೆದುಕೊಳ್ಳಬಾರದು ಎಂದು ಒತ್ತಾಯಿಸಿದೆ. ವಿರೋಧ ಪಕ್ಷಗಳು ಇದನ್ನು 'ಮುಸ್ಲಿಮರ ವಿರುದ್ಧ ಬಿಜೆಪಿಯ ಒಳಸಂಚು' ಎಂದು ಆಪಾದಿಸಿವೆ. 'ಇದು ಸಂವಿಧಾನ ವಿರೋಧಿ' ಎಂದು ಕರೆದಿವೆ. ಹಾಗಾದರೆ ಏನಿದರ ಉದ್ದೇಶ, ಮೂಲ ವಿಧೇಯಕ ಏನಿತ್ತು, ತಿದ್ದುಪಡಿ ಏನು, ಏನು ಪ್ರಯೋಜನ? ಇದನ್ನೆಲ್ಲ ನೋಡೋಣ.

ವಿಧೇಯಕಗಳ ಹೆಸರು

ಈಗ ಮಂಡಿಸಲಾಗಿರುವ ಮೂಲ ವಿಧೇಯಕದ ಹೆಸರು - ವಕ್ಫ್ (ತಿದ್ದುಪಡಿ) ಮಸೂದೆ- 2024 ಮತ್ತು ಮುಸಲ್ಮಾನ್ ವಕ್ಫ್ (ರದ್ದತಿ) ಮಸೂದೆ- 2024. ಇದನ್ನು ಆಗಸ್ಟ್ 8, 2024 ರಂದು ಲೋಕಸಭೆಯಲ್ಲಿ ಪರಿಚಯಿಸಲಾಯಿತು. ಲೋಕಸಭೆಯಲ್ಲಿ ಏಪ್ರಿಲ್ ಎರಡರಂದು ಮಂಡಿಸಿದ ವಿಧೇಯಕವನ್ನು 'ಉಮೀದ್' (ಏಕೀಕೃತ ವಕ್ಫ್ ನಿರ್ವಹಣಾ ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ-UMEED) ಮಸೂದೆ ಎಂದು ಮರುನಾಮಕರಣ ಮಾಡಲಾಗಿದೆ.

ವಕ್ಫ್ ವಿಶ್ವದಲ್ಲೇ ಅತಿ ಹೆಚ್ಚು ಆಸ್ತಿಗೆ ಒಡೆಯ

ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ 123 ಪ್ರಮುಖ ಕಟ್ಟಡಗಳನ್ನು ವಕ್ಫ್‌ಗೆ ನೀಡಲಾಗಿತ್ತು. ಸಂಸತ್ತನ್ನೂ ವಕ್ಫ್‌ಗೆ ನೀಡಲು ಸಿದ್ಧವಾಗಿತು ಎನ್ನುವುದು ಎನ್‌ಡಿಎ ಸರಕಾರದ ಆರೋಪ.

ದೇಶಾದ್ಯಂತ ದೂರುಗಳ ಸರಮಾಲೆ

ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವು ಭಾರತದಾದ್ಯಂತ ವಕ್ಫ್ ಆಸ್ತಿಗಳ ಅತಿಕ್ರಮಣಕ್ಕೆ ಸಂಬಂಧಿಸಿದಂತೆ ಹಲವಾರು ದೂರುಗಳು ಮತ್ತು ಪ್ರಾತಿನಿಧ್ಯಗಳನ್ನು ಸ್ವೀಕರಿಸಿದೆ. ಭೋಪಾಲ್‌ನಲ್ಲಿ, ಸರಕಾರಿ ಭೂಮಿಯಲ್ಲಿ ಅಕ್ರಮವಾಗಿ ವಕ್ಫ್ ಸಂಕೀರ್ಣವನ್ನು ನಿರ್ಮಿಸಲಾಗಿದೆ ಮತ್ತು 125 ನೋಂದಾಯಿತ ಸ್ಮಶಾನಗಳಲ್ಲಿ 101 ನಿಗೂಢವಾಗಿ ಕಣ್ಮರೆಯಾಗಿವೆ. ಹೈದರಾಬಾದ್‌ನಲ್ಲಿ, 2021ರಲ್ಲಿ ಮಾತ್ರ 765 ಅತಿಕ್ರಮಣದಾರರಿಗೆ ನೋಟಿಸ್ ನೀಡಲಾಗಿದೆ, ಆದರೆ ಭಾರತದ ಅತಿ ಶ್ರೀಮಂತ ವಕ್ಫ್ ಮಂಡಳಿಗಳಲ್ಲಿ ಒಂದಾದ ತೆಲಂಗಾಣದ ವಕ್ಫ್ ಮಂಡಳಿ 5 ಲಕ್ಷ ಕೋಟಿ ಮೌಲ್ಯದ ಆಸ್ತಿಯನ್ನು ಹೊಂದಿದೆ, ಈ ಪೈಕಿ ಶೇ. 75 ರಷ್ಟು ಭೂಮಿಯನ್ನು ಅತಿಕ್ರಮಿಸಲಾಗಿದೆ. ಮುಂಬೈನಲ್ಲಿ, ಮಹಾರಾಷ್ಟ್ರದ ಶೇ.60ಕ್ಕೂ ಹೆಚ್ಚು ವಕ್ಫ್ ಭೂಮಿಯನ್ನು ಅಕ್ರಮವಾಗಿ ಆಕ್ರಮಿಸಲಾಗಿದೆ. ಪರೇಲ್ ನಲ್ಲಿರುವ ಲಾಲ್ ಷಾ ಬಾಬಾ ದರ್ಗಾ ಮೂಲತಃ 72 ಎಕರೆಗಳಷ್ಟು ವ್ಯಾಪಿಸಿದೆ. ಲಖನೌನಲ್ಲಿ ವಕ್ಫ್ ಮಂಡಳಿಯು ಹಕ್ಕು ಸಾಧಿಸಿದ ಶೇ.78 ರಷ್ಟು ಭೂಮಿ ವಾಸ್ತವವಾಗಿ ಸರ್ಕಾರಿ ಸ್ವಾಮ್ಯದ್ದಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರ ವರದಿ ಮಾಡಿದೆ. ಪಾಟ್ನಾದಲ್ಲಿ, ಬಿಹಾರ ಸುನ್ನಿ ವಕ್ಫ್ ಮಂಡಳಿಯು ಹಿಂದೂ ಬಹುಸಂಖ್ಯಾತ ಗ್ರಾಮವಾದ ಫತುಹಾದಲ್ಲಿನ ಭೂಮಿಯ ಮಾಲೀಕತ್ವವನ್ನು ಕೋರಿ ನೋಟಿಸ್ ನೀಡಿದ್ದು, ಇದು 700 ಹಿಂದೂ ಕುಟುಂಬಗಳ ಮೇಲೆ ಪರಿಣಾಮ ಬೀರಿದೆ. ಎರ್ನಾಕುಲಂ ಜಿಲ್ಲೆಯ ಮುನಂಬಮ್‌ನಲ್ಲಿ ತಲೆಮಾರುಗಳಿಂದ ಕ್ರೈಸ್ತರ ವಶದಲ್ಲಿರುವ ಸುಮಾರು 400 ಎಕರೆ ಭೂಮಿಯ ಮೇಲೂ ವಕ್ಫ್ ಮಂಡಳಿಯ ಹಕ್ಕು ಸಾಧಿಸಿದೆ.

ಇದರ ಉದ್ದೇಶವೇನು?

ವಕ್ಫ್ ಆಸ್ತಿಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿನ ಸವಾಲು ಸಮಸ್ಯೆಗಳನ್ನು ಪರಿಹರಿಸಲು ವಕ್ಫ್ ಕಾಯ್ದೆ- 1995 ಅನ್ನು ಮಾರ್ಪಡಿಸುವ ಗುರಿಯನ್ನು ಇದು ಹೊಂದಿದೆ. ಪ್ರಸ್ತಾವಿತ ತಿದ್ದುಪಡಿಗಳು ಈ ಮಸೂದೆಯು ವಕ್ಫ್ ಆಸ್ತಿಗಳ ಆಡಳಿತವನ್ನು ಸುಧಾರಿಸಲು, ತಂತ್ರಜ್ಞಾನ ಆಧಾರಿತ ನಿರ್ವಹಣೆಯನ್ನು ಪರಿಚಯಿಸಲು, ಸಂಕೀರ್ಣತೆಗಳನ್ನು ಪರಿಹರಿಸಲು ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ನಡೆಸಿದ ಸಮಾಲೋಚನಾ ಪ್ರಕ್ರಿಯೆಯು ದೇಶದ ಪ್ರಜಾ ಪ್ರಭುತ್ವ ಇತಿಹಾಸದಲ್ಲಿಯೇ ಅತಿದೊಡ್ಡ ಪ್ರಕ್ರಿಯೆಯಾಗಿದೆ.

ವಿಧೇಯಕದ ಪ್ರಮುಖ ತಿದ್ದುಪಡಿಗಳು

1 **ಕೇಂದ್ರ ವಕ್ಫ್ ಕೌನ್ಸಿಲ್‌ನಲ್ಲಿ ಎಷ್ಟು ಮುಸ್ಲಿಮೇತರ ಪಾಲುದಾರರು ಇರುತ್ತಾರೆ?**
ಕೇಂದ್ರ ವಕ್ಫ್ ಕೌನ್ಸಿಲ್‌ನಲ್ಲಿ, 22 ಸದಸ್ಯರಲ್ಲಿ ಇಬ್ಬರು (ಎಕ್ಸ್-ಆಫಿಸಿಯೊ ಹೊರತುಪಡಿಸಿ) ಮುಸ್ಲಿಮೇತರರಾಗಿರಬಹುದು.

2 **ರಾಜ್ಯ ವಕ್ಫ್ ಕೌನ್ಸಿಲ್‌ನಲ್ಲಿ ಎಷ್ಟು ಮುಸ್ಲಿಮೇತರ ಪಾಲುದಾರರು ಇರುತ್ತಾರೆ?**
ರಾಜ್ಯ ವಕ್ಫ್ ಮಂಡಳಿಗಳಲ್ಲಿ, 11 ಸದಸ್ಯರಲ್ಲಿ 2 (ಎಕ್ಸ್-ಆಫಿಸಿಯೊ ಹೊರತುಪಡಿಸಿ) ಮುಸ್ಲಿಮೇತರರಾಗಿರಬಹುದು.

3 **ವಕ್ಫ್‌ನಿಂದ ಟ್ರಸ್ಟ್‌ಗಳನ್ನು ಬೇರ್ಪಡಿಸುವುದರಿಂದ ಉಂಟಾಗುವ ಪರಿಣಾಮವೇನು?**
ಮುಸ್ಲಿಂ ಟ್ರಸ್ಟ್‌ಗಳನ್ನು ಇನ್ನು ಮುಂದೆ ವಕ್ಫ್ ಎಂದು ಪರಿಗಣಿಸಲಾಗುವುದಿಲ್ಲ. ಟ್ರಸ್ಟ್‌ಗಳ ಮೇಲೆ ಸರಕಾರದ ಸಂಪೂರ್ಣ ನಿಯಂತ್ರಣವನ್ನು ಖಚಿತಪಡಿಸುತ್ತದೆ.

4 **ತಂತ್ರಜ್ಞಾನವು ವಕ್ಫ್ ನಿರ್ವಹಣೆಯನ್ನು ಹೇಗೆ ಸುಧಾರಿಸುತ್ತದೆ?**
ಕೇಂದ್ರೀಕೃತ ಪೋರ್ಟಲ್ ವಕ್ಫ್ ಆಸ್ತಿ ನಿರ್ವಹಣೆಯನ್ನು ಸ್ವಯಂಚಾಲಿತಗೊಳಿಸುತ್ತದೆ. ದಕ್ಷತೆ ಮತ್ತು ಪಾರದರ್ಶಕತೆಯನ್ನು ಸುಧಾರಿಸುತ್ತದೆ.

5 **ವಕ್ಫ್‌ಗೆ ಆಸ್ತಿಯನ್ನು ಅರ್ಪಿಸಲು ಯಾರು ಅರ್ಹರು?**
ಕನಿಷ್ಠ ಐದು ವರ್ಷಗಳ ಕಾಲದಿಂದ ಮುಸ್ಲಿಮರಾಗಿರುವವರು ಮಾತ್ರ ತಮ್ಮ ಆಸ್ತಿಯನ್ನು ವಕ್ಫ್‌ಗೆ ನೀಡಬಹುದು. ಇದು 2013ರ ಹಿಂದಿನ ನಿಯಮಗಳನ್ನು ಪುನಃಸ್ಥಾಪಿಸುತ್ತದೆ.

6 **'ಬಳಕೆದಾರರಿಂದ ವಕ್ಫ್' ಆಸ್ತಿಗಳಿಗೆ ಏನಾಗುತ್ತದೆ?**
ವಿವಾದಿತ ಅಥವಾ ಸರ್ಕಾರಿ ಭೂಮಿ ಎಂದು ಗುರುತಿಸದ ಹೊರತು ನೋಂದಾಯಿತ ಆಸ್ತಿಗಳು ವಕ್ಫ್ ಆಗಿಯೇ ಉಳಿಯುತ್ತವೆ.

7 **ಕುಟುಂಬ ವಕ್ಫ್‌ನಲ್ಲಿ ಮಹಿಳೆಯರ ಹಕ್ಕುಗಳೇನು?**
ವಿಧವೆಯರು, ವಿಚ್ಛೇದಿತ ಮಹಿಳೆಯರು ಮತ್ತು ಅನಾಥರಿಗೆ ವಿಶೇಷ ನಿಬಂಧನೆಗಳೊಂದಿಗೆ, ವಕ್ಫ್ ಸಮರ್ಪಣೆಗೆ ಮೊದಲು ಮಹಿಳೆಯರು ತಮ್ಮ ಉತ್ತರಾಧಿಕಾರವನ್ನು ಪಡೆಯಬೇಕು.

8 **ವಕ್ಫ್ ನಿರ್ವಹಣೆಯನ್ನು ಹೆಚ್ಚು ಪಾರದರ್ಶಕವಾಗಿ ಹೇಗೆ ಮಾಡಲಾಗುತ್ತದೆ?**
ಮುತವಾಲಿಗಳು ಆರು ತಿಂಗಳೊಳಗೆ ಕೇಂದ್ರ ಪೋರ್ಟಲ್‌ನಲ್ಲಿ ಆಸ್ತಿ ವಿವರಗಳನ್ನು ನೋಂದಾಯಿಸಬೇಕು.

9 **ಸರ್ಕಾರಿ ಭೂಮಿಗೆ ಸಂಬಂಧಿಸಿದ ವಕ್ಫ್ ವಿವಾದಗಳನ್ನು ಹೇಗೆ ನಿರ್ವಹಿಸಲಾಗುತ್ತದೆ?**
ಕಲೆಕ್ಟರ್ ಶ್ರೇಣಿಗಿಂತ ಮೇಲಿನ ಅಧಿಕಾರಿಯೊಬ್ಬರು ವಕ್ಫ್ ಎಂದು ಹೇಳಲಾದ ಸರಕಾರಿ ಆಸ್ತಿಗಳನ್ನು ತನಿಖೆ ಮಾಡುತ್ತಾರೆ.

10 **ವಕ್ಫ್ ನ್ಯಾಯಮಂಡಳಿಗಳನ್ನು ಹೇಗೆ ಬಲಪಡಿಸಲಾಗುತ್ತದೆ?**
ರಚನಾತ್ಮಕ ಆಯ್ಕೆ ಪ್ರಕ್ರಿಯೆ ಮತ್ತು ಸ್ಥಿರ ಅಧಿಕಾರಾವಧಿಯು ಪರಿಣಾಮಕಾರಿ ವಿವಾದ ಪರಿಹಾರವನ್ನು ಖಚಿತಪಡಿಸುತ್ತದೆ.

11 **ಮಿತಿ ಕಾಯ್ದೆಯು ವಕ್ಫ್ ಆಸ್ತಿ ಹಕ್ಕುಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ?**
ಮಿತಿ ಕಾಯ್ದೆ- 1963, ಈಗ ವಕ್ಫ್ ಆಸ್ತಿ ಹಕ್ಕುಗಳಿಗೆ ಅನ್ವಯಿಸುತ್ತದೆ, ಇದು ದೀರ್ಘಾವಧಿಯ ಮೊಕದ್ದಮೆಗಳನ್ನು ಕಡಿಮೆ ಮಾಡುತ್ತದೆ.

12 **ವಕ್ಫ್ ಸಂಸ್ಥೆಗಳಿಗೆ ಹೊಸ ಲೆಕ್ಕಪರಿಶೋಧನಾ ಸುಧಾರಣೆಗಳು ಯಾವುವು?**
1 ಲಕ್ಷ ರೂ.ಗಿಂತ ಹೆಚ್ಚು ಆದಾಯ ಗಳಿಸುವ ವಕ್ಫ್ ಸಂಸ್ಥೆಗಳು ರಾಜ್ಯ ನೇಮಕಗೊಂಡ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆಗೆ ಒಳಗಾಗಬೇಕು.

13 **ಆಸ್ತಿ ಹಕ್ಕುಗಳಿಗೆ ಸೆಕ್ಷನ್ 40 ರ ತೆಗೆದುಹಾಕುವಿಕೆಯ ಅರ್ಥವೇನು?**
ಸೆಕ್ಷನ್ 40 ಅನ್ನು ತೆಗೆದುಹಾಕಲಾಗಿದೆ. ಇದು ವಕ್ಫ್ ಮಂಡಳಿಗಳು ಆಸ್ತಿಗಳನ್ನು ವಕ್ಫ್ ಎಂದು ನಿರಂಕುಶವಾಗಿ ಘೋಷಿಸುವುದನ್ನು ತಡೆಯುತ್ತದೆ.

ಸರಕಾರದ ವಾದ ಏನು?

ಯಾವುದೇ ಧರ್ಮಕ್ಕೆ ಸಂಬಂಧಿಸಿದ್ದಲ್ಲ, ಇದು ವಕ್ಫ್ ಆಸ್ತಿಗಳೊಂದಿಗೆ ಮಾತ್ರ ವ್ಯವಹರಿಸುತ್ತದೆ. ವಿಧೇಯಕದ ಪ್ರಕಾರ, ಯಾವುದೇ ಕಾನೂನಿನ ಅಡಿಯಲ್ಲಿ ಮುಸ್ಲಿಮರು ರಚಿಸಿದ ಟ್ರಸ್ಟ್‌ಗಳನ್ನು ಇನ್ನು ಮುಂದೆ ವಕ್ಫ್ ಎಂದು ಪರಿಗಣಿಸಲಾಗುವುದಿಲ್ಲ, ಇದು ಟ್ರಸ್ಟ್‌ಗಳ ಮೇಲೆ ಸಂಪೂರ್ಣ ನಿಯಂತ್ರಣವನ್ನು ಖಚಿತಪಡಿಸುತ್ತದೆ. ಮುಸ್ಲಿಮರು (ಕನಿಷ್ಠ ಐದು ವರ್ಷಗಳ ಕಾಲ) ಮಾತ್ರ ತಮ್ಮ ಆಸ್ತಿಯನ್ನು ವಕ್ಫ್‌ಗೆ ಅರ್ಪಿಸಬಹುದು. 2013ರ ಪೂರ್ವದ ನಿಯಮಗಳನ್ನು ಮರುಸ್ಥಾಪಿಸಬಹುದು. ಆಸ್ತಿ ವಕ್ಫ್ ಎಂದು ಘೋಷಣೆಯಾಗುವುದಕ್ಕೂ ಮುನ್ನ ವಿಧವೆಯರು, ವಿಚ್ಛೇದಿತ ಮಹಿಳೆಯರು ಹಾಗೂ ಅನಾಥರು ಉತ್ತರಾಧಿಕಾರ ಪಡೆಯಬೇಕು. ವಕ್ಫ್ ಎಂದು ಹೇಳಲಾದ ಸರಕಾರಿ ಆಸ್ತಿಗಳನ್ನು ಕಲೆಕ್ಟರ್ ಹುದ್ದೆಗಿಂತ ಮೇಲಿನ ಅಧಿಕಾರಿ ಯೊಬ್ಬರು ತನಿಖೆ ನಡೆಸಬೇಕು. ವಿವಾದಗಳಿದ್ದಲ್ಲಿ, ಆಸ್ತಿ ವಕ್ಫ್‌ಗೆ ಸೇರಿದೆಯೇ ಅಥವಾ ಸರಕಾರಕ್ಕೆ ಸೇರಿದೆಯೇ ಎಂಬುದರ ಕುರಿತು ಹಿರಿಯ ಸರಕಾರಿ ಅಧಿಕಾರಿ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಾರೆ.

ವಕ್ಫ್ ಕಾಯಿದೆ ಇತಿಹಾಸ

1923ರಲ್ಲಿ ಮೊದಲ ಬಾರಿಗೆ ವಕ್ಫ್ ಮಂಡಳಿ ಕಾಯಿದೆ ಜಾರಿಗೆ ಬಂತು. ಇದಕ್ಕೆ 1995ರಲ್ಲಿ ತಿದ್ದುಪಡಿ ತರಲಾಯಿತು. ಇದರ ಅನ್ವಯ ಯಾವುದೇ ವ್ಯಕ್ತಿ ಧಾರ್ಮಿಕ ಕಾರಣಕ್ಕೆ ದಾನ ಮಾಡಿದ ಆಸ್ತಿ ವಕ್ಫ್ ಆಸ್ತಿ ಎನಿಸಿಕೊಳ್ಳುತ್ತದೆ. 2013ರಲ್ಲಿ ಯುಪಿಎ ಸರಕಾರ ಇದಕ್ಕೆ ಕೊಂಚ ಬದಲಾವಣೆ ತಂದು, ಆಸ್ತಿಯನ್ನು ಭಾರತೀಯ ಪುರಾತತ್ವ ಇಲಾಖೆ ಮತ್ತು ವಕ್ಫ್ ಬೋರ್ಡ್ ನಡುವೆ ಹಂಚಿಕೆ ಮಾಡಲು ಯತ್ನಿಸಿತ್ತು. ಈಗ ಕೇಂದ್ರ ಸರಕಾರ ವಕ್ಫ್ ಆಸ್ತಿಯಲ್ಲಿ ಆಗುತ್ತಿರುವ ಅಕ್ರಮವನ್ನು ತಡೆಗಟ್ಟಲು ಇದರ ಪರಿಶೀಲನೆಗೆ ಮುಂದಾಗಿದೆ. 40 ತಿದ್ದುಪಡಿ ಗಳೊಂದಿಗೆ ಹೊಸ ಮಸೂದೆಯನ್ನು ಕೇಂದ್ರ ಮಂಡಿಸುತ್ತಿದೆ.

ವಿರೋಧವೇಕೆ?

ವಕ್ಫ್ ತಿದ್ದುಪಡಿ ಮಸೂದೆಗೆ ಮುಸ್ಲಿಂ ಸಂಘಟನೆಗಳ ಸಹಿತ ವಿಪಕ್ಷಗಳು ವಿರೋಧ ವ್ಯಕ್ತಪಡಿಸುತ್ತಿವೆ. ವಕ್ಫ್ ಮಂಡಳಿಗಳಲ್ಲಿ ಮುಸ್ಲಿಮೇತರ ಸದಸ್ಯರಿಗೂ ಅವಕಾಶ ಒದಗಿಸುತ್ತಿರುವುದರಿಂದ ಈ ಆಸ್ತಿಗಳನ್ನು ಕಬಳಿಸಿಕೊಳ್ಳಲು ಸರಕಾರ ಮುಂದಾಗಿದೆ ಎಂಬ ಆರೋಪಗಳು ಕೇಳಿಬಂದಿವೆ. ಅಲ್ಲದೆ ಮಸೂದೆ ಅಂಗೀಕಾರವಾದರೆ ಮುಸ್ಲಿಂ ಸಮುದಾಯಕ್ಕೆ ಅನ್ಯಾಯವಾಗಲಿದೆ ಎನ್ನುವುದು ವಿಪಕ್ಷಗಳ ಆರೋಪ.

ಗಂಧದ ಗುಡಿ ಬದುಕಲು ಬಿಡಿ

ಜಿಲ್ಲಾ ನೋಟ

ದೇವನೂರು ಶ್ರೀನಿವಾಸ್, ಚಾಮರಾಜನಗರ

ಬಂಡೀಪುರ ಎಂದರೆ ಸಾಕು, ವನ್ಯ ಜೀವಿಗಳ ಸ್ವರ್ಗ ಲೋಕವೇ ಧರೆಗಿಳಿದ ಹಾಗೆ ಭಾಸವಾಗುತ್ತದೆ. ಬರೀ ಕರ್ನಾಟಕ ಅಥವಾ ಹೊರ ರಾಜ್ಯ ಮಾತ್ರವಲ್ಲ, ದೇಶ ವಿದೇಶದ ಪರಿಸರ ಪ್ರೇಮಿಗಳು ಒಂದು ಸುತ್ತು ಬಂಡೀಪುರ ಕಾಡು ಸುತ್ತಿ ಬಿಡಬೇಕೆನಿಸುವಷ್ಟು ನಯನ ಮನೋಹರವಾದ ಪ್ರವಾಸಿ ತಾಣ ಈ ಬಂಡೀಪುರ.

ತ್ರಿರಾಜ್ಯಗಳ ಸಂಪರ್ಕ

ಇದು ಮೂರು ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿರುವ ಕಾಡು. ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಈ ಬಂಡೀಪುರ ಎರಡು ರಾಜ್ಯಗಳ ಸಂಪರ್ಕ ಕೊಂಡಿ. ಅರಣ್ಯ ಪ್ರದೇಶದ ಮೂಲಕವೇ ನೆರೆಯ ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಗಡಿ ಬೆಸೆಯುತ್ತದೆ.

ಹುಲಿ ಸಂರಕ್ಷಿತ ಅರಣ್ಯ

ಅದೇ ರೀತಿ ದೇಶದಲ್ಲೇ ಉತ್ಕೃಷ್ಟತಮ ಹುಲಿ ಸಂರಕ್ಷಿತ ಅರಣ್ಯ ಪ್ರದೇಶವೆಂದರೆ ಅದು ಬಂಡೀಪುರವೇ ಸರಿ. ಏಕೆಂದರೆ ಸಣ್ಣ ಪ್ರಾಣಿ ಪಕ್ಷಿಗಳಿಂದ ಆನೆ - ಹುಲಿಗಳ ವರೆಗೂ ಎಲ್ಲಾ ಪ್ರಾಣಿ-ಪಕ್ಷಿಗಳ ಸಂರಕ್ಷಿತ, ಸುರಕ್ಷಿತ ವಾಸಸ್ಥಾನ. ಇಲ್ಲಿ ದಿನೇ ದಿನೆ ಪ್ರಾಣಿಗಳ ಸಂಕುಲ ಹೆಚ್ಚುತ್ತಲೇ ಇದೆ. ಈ ಪ್ರದೇಶ ಇಷ್ಟಪಡಲು ಇಲ್ಲಿನ ಪ್ರಾಣಿ ಪ್ರಪಂಚ ಹಾಗೂ ದಟ್ಟ ಕಾನನ ಕಾರಣ.

ವನ್ಯಜೀವಿಗಳ ತಾಣ

ಬಂಡೀಪುರದಲ್ಲಿ ಆನೆ, ಹುಲಿ, ಚಿರತೆ, ಕಾಡಾಮ್ಮೆ, ಜಿಂಕೆ, ಕಡವೆ,ನವಿಲು, ಸೀಳುನಾಯಿಗಳು ಸೇರಿದಂತೆ ಸಾಕಷ್ಟು ವನ್ಯಪ್ರಾಣಿಗಳು ಇಲ್ಲಿ ನೆಲೆಸಿವೆ. ಅದಕ್ಕೆ ತಕ್ಕಂತೆ ದಟ್ಟ ಅಭಯಾರಣ್ಯ ಸಹ ಇಲ್ಲಿ ಹಚ್ಚಹಸಿರಿನಿಂದ ಸದಾ ಕಂಗೊಳಿಸುತ್ತಿದೆ. ಇದನ್ನ ಸವಿಯಲು ಸಾಕಷ್ಟು ಪ್ರಮಾಣದ ಪ್ರವಾಸಿಗರು ದಿನನಿತ್ಯ ಆಗಮಿಸುತ್ತಾರೆ. ಅದರಲ್ಲೂ ರಜಾ ದಿನಗಳಂತೂ ಇಲ್ಲಿ ಪ್ರವಾಸಿಗರ ದಂಡೇ ಹರಿದು ಬರುತ್ತದೆ. ಇನ್ನು ಇದಕ್ಕಾಗಿ ಪ್ರವಾಸಿಗರು ಹಾಗೂ ಪರಿಸರ ಪ್ರೇಮಿಗಳಿಗಾಗಿ ಸಫಾರಿ ಸಹ ಇದ್ದು, ಬೆಳಗ್ಗೆ ಹಾಗೂ ಸಂಜೆ ಅರಣ್ಯ ವಾಹನದಲ್ಲಿ ಸುತ್ತಿ ಅರಣ್ಯ ಹಾಗೂ ವನ್ಯ ಪ್ರಾಣಿಗಳ ದರ್ಶನ ಪಡೆದು ಖುಷಿ ಪಡುತ್ತಾರೆ.

ಬಂಡೀಪುರದ ಕಿರೀಟ

ಇಲ್ಲಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಬಂಡೀಪುರ ಅರಣ್ಯ ಪ್ರದೇಶಕ್ಕೆ ಕಿರೀಟದಂತಿದೆ. ಏಕೆಂದರೆ ವರ್ಷವಿಡೀ ಹಿಮದಿಂದಲೇ ಆವರಿಸಿರುವ ಬೆಟ್ಟ ಇದು. ಬೆಳಗ್ಗೆ ಹತ್ತದರೂ ಸಹ ಬೆಳ್ಳಿ ಪರದೆಯಿಂದ ಮುಚ್ಚಿದ ಬೆಟ್ಟದಂತೆ ಕಾಣುತ್ತದೆ. ಇಲ್ಲಿಗೆ ಬಂದವರಿಗೆ ಡಬಲ್ ಧಮಾಕ ಅಂತನೇ ಹೇಳಬಹುದು. ಏಕೆಂದರೆ ಹಿಮದ ಬೆಟ್ಟದ ಸೌಂದರ್ಯ ಹಾಗೂ ದಾರಿಯುದ್ದಕ್ಕೂ ಕಾಡುಪ್ರಾಣಿಗಳ ದರ್ಶನ ಅಷ್ಟೇ ಅಲ್ಲದೇ ಬೆಟ್ಟಕ್ಕೆ ಬರುವ ಬೆಟ್ಟದಾನೆ ಎಂದು ಕರೆಸಿಕೊಳ್ಳುವ ಗಜರಾಜನ ದರ್ಶನ. ಹಾಗೆ ವಿಷ್ಣು ಅವತಾರದ ಗೋಪಾಲಸ್ವಾಮಿ ದೇವರ ದರ್ಶನವೂ ಸಹ ಪ್ರಾಪ್ತಿಯಾಗುತ್ತದೆ.

- ವನ್ಯಜೀವಿಗಳಿಗೆ ಬೀದಿಗಿಳಿದ ಅರಣ್ಯಪ್ರೇಮಿಗಳು
- 'ಬಂಡೀಪುರ ಉಳಿಸಿ ಅಭಿಯಾನ' ಮತ್ತೆ ಪ್ರಾರಂಭ
- ರಾತ್ರಿ ವಾಹನ ಸಂಚಾರ ಬೇಡ - ಬೇಕು ಗೊಂದಲ
- ಉಭಯ ರಾಜ್ಯಗಳ ನಡುವೆ ಸಂಘರ್ಷ-ತಿಕ್ಕಾಟ

ವಾಹನ ಸಂಚಾರ ಕಂಟಕ

ಬಂಡೀಪುರದಿಂದ ಕೇರಳ ಹಾಗೂ ತಮಿಳುನಾಡಿಗೆ ಅರಣ್ಯದ ಮೂಲಕವೇ 50 ಕಿಲೋ ಮೀಟರ್‌ಗಿಂತ ಹೆಚ್ಚು ದೂರ ಸಾಗಬೇಕು. ಇಲ್ಲಿ ಹಗಲು ವೇಳೆ ಸಾಕಷ್ಟು ಪ್ರಾಣಿಗಳು ರಸ್ತೆ ದಾಟುವುದು ಸರ್ವೆ ಸಾಮಾನ್ಯ. ಇನ್ನು ರಾತ್ರಿ ವೇಳೆಯಂತೂ ಸಣ್ಣಪುಟ್ಟ ಪ್ರಾಣಿಗಳಿಂದ ಹಿಡಿದು ಆನೆ, ಹುಲಿಗಳ ಸಮೇತ ಇತರೆ ಪ್ರಾಣಿಗಳು ಓಡಾಡುತ್ತವೆ. ಹಾಗಾಗಿ ರಾತ್ರಿ 9ರಿಂದ ಬೆಳಗ್ಗೆ 6ರವರೆಗೆ ಎರಡು ರಸ್ತೆಗಳಲ್ಲಿ ಎಲ್ಲಾ ಬಗೆಯ ವಾಹನಗಳನ್ನು ಸಂಪೂರ್ಣ ನಿಷೇಧ ಮಾಡಲಾಗಿದೆ. ಸರಕಾರಿ ನಾಲ್ಕು ಬಸ್ ಹಾಗೂ ಆ್ಯಂಬುಲೆನ್ಸ್‌ಗಳಿಗೆ ಮಾತ್ರ ಅವಕಾಶವಿದೆ.

ಅಪಘಾತಕ್ಕೆ ಪ್ರಾಣಿ ಬಲಿ

ಈ ಹಿಂದೆ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅವಕಾಶವಿದ್ದಾಗ ಪ್ರತಿನಿತ್ಯ ವನ್ಯಪ್ರಾಣಿಗಳು ರಸ್ತೆ ಅಪಘಾತದಲ್ಲಿ ಸಾವಿಗೀಡಾಗುತ್ತಿದ್ದವು. ಇದನ್ನ ಅರಿತ ಪರಿಸರವಾದಿಗಳು ರಾತ್ರಿ ವಾಹನ ಸಂಚಾರ ನಿಷೇಧ ಹೇರುವಂತೆ ಸರಕಾರಕ್ಕೆ ಒತ್ತಾಯಿಸಿದರು. ಕಳೆದ ಇಪ್ಪತ್ತು ವರ್ಷದಿಂದ ರಾತ್ರಿ ಸಂಚಾರ ಸಂಪೂರ್ಣ ಸ್ಥಗಿತವಾಗಿ ವನ್ಯಜೀವಿಗಳಿಗೆ ರಾತ್ರಿ ವೇಳೆ ನಿರಾಳವಾದ ಸ್ವಾತಂತ್ರ್ಯ ಸಿಕ್ಕಿತ್ತು. ಅದು ವನ್ಯಮೃಗಗಳ ಪ್ರಾಣ ರಕ್ಷಣೆ ಕೂಡ ಆಗಿತ್ತು.

ಕೇರಳದ ತಕರಾರು

ಕಳೆದ ಇಪ್ಪತ್ತು ವರ್ಷದಿಂದ ಪಕ್ಕದ ಕೇರಳ ರಾಜ್ಯ ತಕರಾರು ಮಾಡುತ್ತಲೇ ಬಂದಿದೆ. ರಾತ್ರಿಯ ವೇಳೆ ವಾಹನ ಸಂಚಾರ ನಿಷೇಧವನ್ನು ರದ್ದು ಮಾಡಬೇಕೆಂದು ರಾಜ್ಯ ಹಾಗೂ ಕೇಂದ್ರದ ಮೇಲೆ ಒತ್ತಡ ಹಾಕುತ್ತಲೇ ಬಂದಿದೆ. ಇದಕ್ಕೆ ಈವರವಿಗೂ ನಮ್ಮ ರಾಜ್ಯ ಸರಕಾರ ಒಪ್ಪಿಗೆ ನಿರಾಕರಿಸುತ್ತಾ ಬಂದಿದೆ. ಕೊನೆಗೆ ಕೇರಳ ರಾಜ್ಯ ಈ ಕುರಿತು ನ್ಯಾಯಾಲಯದ ಮೆಟ್ಟಿಲು ಕೂಡ ಹತ್ತಿದೆ.

ಕಾಂಗ್ರೆಸ್ ಭರವಸೆ

ಕಳೆದ ಲೋಕಸಭಾ ಚುನಾವಣೆ ವೇಳೆ ವಯನಾಡು ಲೋಕಸಭಾ ಚುನಾವಣೆ ವೇಳೆ ಪ್ರಿಯಾಂಕ ಗಾಂಧಿ ಪರ ಕಾಂಗ್ರೆಸ್ ನಾಯಕರು ಪ್ರಚಾರ ವೇಳೆ ಬಂಡೀಪುರ ರಸ್ತೆ ಸಂಚಾರ ತೆರವಿನ ಬಗ್ಗೆ ಭರವಸೆ ನೀಡಿದ್ದರು. ಇದು ಪರಿಸರ ವಾದಿಗಳನ್ನ ಕೆರಳಿಸಿತ್ತು. ಇನ್ನು ಇತ್ತೀಚೆಗೆ ಸರಕಾರದ ಮೇಲೆ ಕಾಂಗ್ರೆಸ್ ಹೈಕಮಾಂಡ್ ಪ್ರಭಾವ ಬೀರಿ ತೆರವು ಮಾಡುತ್ತಾರೆಂದು ಹೇಳಿದೆ. ಈ ಹಿನ್ನೆಲೆ ಇದೀಗ ಪರಿಸರ ವಾದಿಗಳು ಬಂಡೀಪುರದಲ್ಲಿ 'ಬಂಡೀಪುರ ಉಳಿಸಿ ಅಭಿಯಾನ' ಮತ್ತೆ ಪ್ರಾರಂಭ ಮಾಡುವ ಮೂಲಕ ವನ್ಯಜೀವಿಗಳ ಉಳಿವಿಗೆ ಶ್ರಮಿಸುತ್ತಿದ್ದಾರೆ.

ಅಡ್ಡ ಗೋಡೆ ಮೇಲೆ ದೀಪ

ಇನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ಕೂಡ ಎರಡು ರಾಜ್ಯಕ್ಕೂ ಅನುಕೂಲವಾಗುವಂತೆ ಕ್ರಮ ಕೈಗೊಳ್ಳುತ್ತೇವೆ ಎನ್ನುವ ಮೂಲಕ ಅಡ್ಡ ಗೋಡೆ ಮೇಲೆ ದೀಪ ಇಟ್ಟ ಹೇಳಿಕೆ ನೀಡಿದ್ದಾರೆ. ಇದು ಮತ್ತಷ್ಟು ಗೊಂದಲ ಸೃಷ್ಟಿಸಿ ಪರಿಸರ ಪ್ರೇಮಿಗಳನ್ನ ಕೆರಳಿಸಿದೆ. ಒಟ್ಟಿನಲ್ಲಿ ಏನೇ ಆದರೂ ಬಂಡೀಪುರ ಅಭಯಾರಣ್ಯ ಹಾಗೂ ವನ್ಯಜೀವಿಗಳ ಉಳಿವಿಗೆ ಪರಿಸರ ಪ್ರೇಮಿಗಳು ಪಣತೊಡಬೇಕಾದ ದಿನಗಳು ಬಂದಿವೆ.

ಕುಸಿದ ಆಲೂಗಡ್ಡೆ ದರ, ಶೈತ್ಯಾಗಾರಗಳಿಗೆ ಬರ

ಜಿಲ್ಲಾ ನೋಟ

ಮುನಿರಾಜು ಎಂ.ಅರಿಕೆರೆ, ಚಿಕ್ಕಬಳ್ಳಾಪುರ

ಇದು ಹೂವು ಹಣ್ಣು ತರಕಾರಿ ಬೆಳೆಯುವ ಜಿಲ್ಲೆ. ಇಲ್ಲಿ ಆಲೂಗಡ್ಡೆ, ದ್ರಾಕ್ಷಿ, ಟೊಮೇಟೊ, ಹೂವು, ಇತ್ಯಾದಿ ಬೆಳೆಗಳು ಯಥೇಚ್ಛ ಬೆಳೆಯಲಾಗುತ್ತದೆ. ಈ ಉತ್ಪನ್ನಗಳ ಬೆಲೆ ಪಾತಾಳ ಮುಟ್ಟಿದ್ದಾಗ ಶೈತ್ಯಾಗಾರದ ದಾಸ್ತಾನು ಅನಿವಾರ್ಯ. ಮತ್ತೆ ಬೆಲೆ ಏರಿಕೆಯಾದಾಗ ಮಾರಾಟ ಮಾಡಲು ರೈತರಿಗೆ ಅನುಕೂಲವಾಗುತ್ತದೆ. ಆದರೆ ಇಲ್ಲಿ ಒಂದೇ ಒಂದು ಸರಕಾರಿ ಉಸ್ತುವಾರಿಯ ಶೈತ್ಯಾಗಾರವಿಲ್ಲದಿರುವುದು ರೈತರನ್ನು ಕಂಗಾಲಾನ್ನಾಗಿಸಿದೆ.

ಆಲೂಗಡ್ಡೆಗಿಲ್ಲ ಬೇಡಿಕೆ

ಹೌದು. ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ಆಲೂಗಡ್ಡೆಯನ್ನು ಸುಮಾರು ನಾಲ್ಕು ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯಲಾಗಿದೆ. ಜಿಲ್ಲೆಯಲ್ಲಿ ಬೆಳೆಯುವ ಗುಣಮಟ್ಟದ ಆಲೂಗಡ್ಡೆಗೆ ರಾಜಧಾನಿ ಬೆಂಗಳೂರು, ಆಂಧ್ರ, ಮಹಾರಾಷ್ಟ್ರ, ದೂರದ ದೆಹಲಿ, ಉತ್ತರ ಭಾರತದ ಇತರೆ ರಾಜ್ಯಗಳಲ್ಲಿ ಭಾರೀ ಬೇಡಿಕೆಯಿದೆ. ಆದರೆ ಈ ಬಾರಿ ಎಲ್ಲೆಡೆ ಉತ್ತಮ ಬೆಳೆಯಾಗಿರುವ ಕಾರಣ ನಮ್ಮ ರಾಜ್ಯದ ಆಲೂಗಡ್ಡೆಗೆ ಬೇಡಿಕೆ ಇಲ್ಲವಾಗಿರುವುದು ರೈತರು ಕಂಗಾಲಾಗುವಂತೆ ಮಾಡಿದೆ.

ದೇವೇಗೌಡರಿಗೆ ಬಿತ್ತನೆ ಬೀಜ ನೀಡಿದ ಜಿಲ್ಲೆ

ಒಂದು ಕಾಲದಲ್ಲಿ ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡರು ಚಿಕ್ಕಬಳ್ಳಾಪುರ ತಾಲೂಕಿನ ಮಂಚನಬಲೆಯಿಂದ ಬಿತ್ತನೆ ಆಲೂಗಡ್ಡೆ ಖರೀದಿ ಮಾಡಿ ಹಾಸನದಲ್ಲಿ ಆಲೂಗಡ್ಡೆ ಬೆಳೆಯುತ್ತಿದ್ದರು. ಅಂತಹ ಹಿರಿಮೆಯಿರುವ ಜಿಲ್ಲೆಯಲ್ಲಿ ಬೆಲೆ ಮಾತ್ರ ಪಾತಾಳಕ್ಕೆ ಕುಸಿದಿದೆ. ಒಂದೆರೆಡು ತಿಂಗಳ ಮಟ್ಟಿಗೆ ಕೋಲ್ಡ್ ಸ್ಟೋರೇಜ್‌ನಲ್ಲಿ ಆಲೂಗಡ್ಡೆ ದಾಸ್ತಾನು ಮಾಡಲು ವಾರಗಟ್ಟಲೇ ಕಾಯುವಂತಾಗಿದೆ.

ಆಲೋ ದರ ಕುಸಿತ

ಸದ್ಯ 50 ಕೆ.ಜಿ ಆಲೂಗಡ್ಡೆ ಚೀಲಕ್ಕೆ 400 ರಿಂದ 600 ರೂ. ಬೆಲೆಯಿದ್ದು ಹಾಕಿದ ಬಂಡವಾಳವೂ ಕೈಗೆ ಬರದಂತಾಗಿದೆ. ಖಾಸಗಿ ಶೈತ್ಯಾಗಾರದತ್ತ ರೈತರು ಮುಖ ಮಾಡಿದ್ದಾರೆ. ದುಬಾರಿ ಬೆಲೆ ತೆತ್ತಾದರೂ ಬೆಳೆ ಉಳಿಸಿಕೊಳ್ಳಲು ಮುಂದಾಗಿದೆ. ಬೇಸಿಗೆಯ ಬಿಸಿಲಿಗೆ ಆಲೂಗಡ್ಡೆ ಹಾಳಾಗುತ್ತದೆ. ಆದರೂ ವಿಧಿಯಿಲ್ಲದೆ ಖಾಸಗಿ ಶೈತ್ಯಾಗಾರದಲ್ಲಾದರೂ ಜಾಗ ಸಿಗಬಹುದೆಂಬ ಆಸೆಯಿಂದ ವಾರಗಟ್ಟಲೆ ಆಲೂಗಡ್ಡೆ ಲೋಡ್ ತಂದು ಶೈತ್ಯಾಗಾರದ ಮುಂದೆ ನಿಲ್ಲಿಸಿಕೊಂಡು ಕಾಯುತ್ತಿದ್ದಾರೆ. ಇದರಿಂದ ವಾಹನದಲ್ಲಿಯೇ ಕೊಳೆಯುವಂತಾಗಿ ರೈತರನ್ನು ಕಂಗಾಲು ಮಾಡಿದೆ.

ಬೆಳೆಗಾರನ ಸಂಕಟ

ಪ್ರಗತಿಪರ ರೈತ ಬಸವರಾಜು ಮಾತನಾಡಿ, ಒಂದು ಎಕರೆಯಲ್ಲಿ ಆಲೂಗಡ್ಡೆ ಬೆಳೆಯಬೇಕಾದರೆ ಬಿತ್ತನೆ ಬೀಜ ಗೊಬ್ಬರ, ಔಷಧ ಸೇರಿ ಕನಿಷ್ಠ 80 ರಿಂದ 1 ಲಕ್ಷ ಖರ್ಚಾಗಲಿದೆ. ಉತ್ತಮ ಇಳುವರಿ ಬಂದರೆ 150 ರಿಂದ 200 ತುಂಡು ಆಗಲಿದೆ. ಅಂದರೆ 100 ಕ್ವಿಂಟಾಲ್ ಬೆಳೆ ಬರಲಿದೆ. ಒಂದು ತಿಂಗಳ ಹಿಂದೆ 50 ಕೆ.ಜಿಗೆ 2ಸಾವಿರ ಸಮೀಪದವರೆಗೆ ಇದ್ದ ಬೆಲೆ ಸದ್ಯ ಮಾರುಕಟ್ಟೆಯಲ್ಲಿ ಕೆ.ಜಿ.ಗೆ 10 ರು. ಇದೆ. ರೈತ ಲಾಭ ನೋಡಬೇಕಾದರೆ 50 ಕೆ.ಜಿ.ಮೂಟೆಗೆ ಕನಿಷ್ಠ 1800 ರು.ಗಳಿಗೆ ಮಾರಾಟವಾಗಬೇಕಿದೆ. ಸದ್ಯಕ್ಕೆ ಜಿಲ್ಲೆಯ ಮಾರುಕಟ್ಟೆ ಬಿಡಿ, ಬೆಂಗಳೂರಲ್ಲಿ ಕೂಡ ಆಲೂಗಡ್ಡೆ ಕೇಳುವವರೇ ಇಲ್ಲ. ಉತ್ತಮ ಇಳುವರಿ ಬಂದಿರುವ ಹೊತ್ತಿನಲ್ಲಿ ಬೆಲೆಯಿಲ್ಲದೇ ರೈತರ ಬದುಕು ಅತ್ತ ದರಿ ಇತ್ತ ಪುಲಿ ಎಂಬಂತಾಗಿದೆ. ಬೆಲೆ ಬರುವವರೆಗೆ ಕಾಪಾಡಿಕೊಳ್ಳೋಣ ಎಂದರೆ ಶೈತ್ಯಾಗಾರಗಳ ಕೊರತೆ ಸಮಸ್ಯೆ ಭೂತದಂತೆ ಕಾಡಿದೆ ಎನ್ನುತ್ತಾರೆ.

ನಂದಿ ಕೋಲ್ಡ್ ಸ್ಟೋರೇಜ್ ಸಮೀಪ ಆಲೂಗಡ್ಡೆ ಹೊತ್ತ ಲಾರಿಗಳು ನಿಂತಿರುವುದು.

ಶೈತ್ಯಾಗಾರಗಳೇ ಇಲ್ಲ

ಜಿಲ್ಲೆಯಲ್ಲಿ ಆಲೂಗಡ್ಡೆಯನ್ನು ಬೆಳೆಯುವ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದು ಒಳ್ಳೆ ಬೆಲೆಯಿದ್ದಾಗ ತೋಟದಲ್ಲಿಯೇ ಮಾರುತ್ತಾರೆ. ದರ ಕುಸಿದಾಗ ಅವರೇ ತಂಪಾದ ವಾತಾವರಣದಲ್ಲಿ ದಾಸ್ತಾನಿಟ್ಟು ಬೆಲೆ ಏರಿಕೆಯಾದಾಗ ಮಾರಾಟ ಮಾಡುವುದು ವಾಡಿಕೆ. ಆದರೆ ಜಿಲ್ಲೆಯಲ್ಲಿ ಸರಕಾರಿ ಶೈತ್ಯಾಗಾರಗಳೇ ಇಲ್ಲ.

ಖಾಸಗಿ ಕೋಲ್ಡ್ ಸ್ಟೋರೇಜ್

ಸದ್ಯಕ್ಕೆ ರೈತರು ಚಿಕ್ಕಬಳ್ಳಾಪುರದ ಖಾಸಗಿ ನಂದಿ ಕೋಲ್ಡ್ ಸ್ಟೋರೇಜ್‌ನಲ್ಲಿ ದಾಸ್ತಾನು ಮಾಡುತ್ತಾರೆ. ಈ ಬಾರಿ ರೋಗ ಬಾಧೆಯಿಲ್ಲದೆ ಉತ್ತಮವಾಗಿ ಇಳುವರಿ ಬಂದಿರುವ ಕಾರಣ ಬೆಲೆ ಇಳಿಕೆಯಾಗಿದೆ. ಇದು ಒಂದೆರಡು ತಿಂಗಳ ಸಮಸ್ಯೆಯಷ್ಟೇ.ಏಪ್ರಿಲ್ ಮೇ ತಿಂಗಳಲ್ಲಿ ಬೆಲೆಯೇರಿದಾಗ ಮಾರುತ್ತಾರೆ. ಅಲ್ಲಿಯವರೆಗೆ ಶೈತ್ಯಾಗಾರಗಳಲ್ಲಿ ಕಾಪಾಡಿಕೊಳ್ಳುವುದು ಅನಿವಾರ್ಯ ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ಗಾಯಿತ್ರಿ.

ದುಬಾರಿ ಬಾಡಿಗೆ

ಹೊರವಲಯದ ಖಾಸಗಿ ನಂದಿ ಕೋಲ್ಡ್ ಸ್ಟೋರೇಜ್ ಇದ್ದು ಅದರಲ್ಲಿ ಮೂರು ತಿಂಗಳ ದಾಸ್ತಾನು ಮಡಲು ಒಂದು ಮೂಟೆಗೆ 110 ರು.ಬಾಡಿಗೆ ನಿಗದಿ ಮಾಡಿದ್ದಾರೆ. ದುಬಾರಿ ಬೆಲೆ ತೆರಲು ರೈತರು ಸಿದ್ಧವಿದ್ದರೂ ಅಲ್ಲೂ ಜಾಗವಿಲ್ಲದೆ ಸುಡು ಬಿಸಿಲಿನಲ್ಲಿ ರೈತರು ಆಲೂಗಡ್ಡೆ ಮೂಟೆ ತುಂಬಿಸಿ ತಂದಿದ್ದಾರೆ. ಸುಮಾರು ಹದಿನೈದು ಇಪ್ಪತ್ತು ದಿನ ಕಾದರೂ ಜಾಗ ಸಿಕ್ಕಿಲ್ಲ, ಬಿಸಿಲಿನ ತಾಪಕ್ಕೆ ಮೂಟೆಯಲ್ಲೇ ಆಲೂಗಡ್ಡೆ ಕೊಳೆಯುವ ಸ್ಥಿತಿಗೆ ತಂದಿದ್ದು ರೈತನ ಬೆವರಿಗೆ ಬೆಲೆಯಿಲ್ಲದಂತಾಗಿದೆ.

ಈ ಹಿಂದೆ ನಗರದ ಎಪಿಎಂಸಿಯಲ್ಲಿ ಸರಕಾರ ಕೋಲ್ಡ್ ಸ್ಟೋರೇಜ್ ನಿರ್ಮಿಸಿತ್ತು. ಅದು ಬಳಕೆಯಾಗದೇ ಮತ್ತು ನಿರ್ವಹಣೆ ಇಲ್ಲದೆ ಕಳೆದ 15 ವರ್ಷಗಳ ಹಿಂದೆ ಹಾಳು ಬಿತ್ತು. ಈಗಲಾದರೂ ಸರಕಾರ ಎಚ್ಚೆತ್ತು ಕೋಲ್ಡ್ ಸ್ಟೋರೇಜ್ ನಿರ್ಮಿಸಬೇಕಿದೆ.

- ಜಿಲ್ಲೆಯಲ್ಲಿ ಇಲ್ಲ ವಾಣಿಜ್ಯ ಬೆಳೆಗಳಿಗೆ ಶೈತ್ಯಾಗಾರ
- ಬೆಲೆ ಇಳಿಕೆಯಿಂದ ಪಾರಾಗಲು ರೈತರ ಪರದಾಟ
- ದುಬಾರಿ ಬೆಲೆ ತೆತ್ತರೂ ಸಿಗದ ಕೋಲ್ಡ್ ಸ್ಟೋರೇಜ್
- ರಸ್ತೆಯಲ್ಲೇ ನಿಲ್ಲುತ್ತಿವೆ ಆಲೂಗಡ್ಡೆ ಹೊತ್ತ ವಾಹನ

ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

ವಿಶ್ವವಾಣಿ
ಬೆಂಗಳೂರು
03-04-2025
ಗುರುವಾರ
@vishwavaninews

ಪರೀಕ್ಷೆಗಳು ಮುಗಿದಿವೆ; ರಾಜ್ಯದ ಬಹುಪಾಲು ಮಕ್ಕಳಿಗೆ ಬೇಸಗೆ ರಜಾ ದೊರಕುವ ಕಾಲ ಇದು. ಎಲ್ಲಾ ಮಕ್ಕಳು ಕುಣಿದಾಡುತ್ತಾ, ಓಡಾಡುತ್ತಾ, ದೈಹಿಕ ಚಟುವಟಿಕೆ ಮತ್ತು ಇತರ ಮಕ್ಕಳೊಂದಿಗೆ ಬೆರೆಯುತ್ತಾ ಮಾನಸಿಕ ಬೆಳವಣಿಗೆಗೆ ಇದು ಸಕಾಲ. ಪುಸ್ತಕ ಓದುವುದು ಇನ್ನೊಂದು ಉತ್ತಮ ಹವ್ಯಾಸ. ಈ ರಜಾದಲ್ಲಿ ನಿಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ? ಮೊಬೈಲ್ ನೋಡಿ ಕಾಲ ಕಳೆಯುತ್ತಿದ್ದಾರಾ? ಯೋಚಿಸಿ.

ಈ ಬೇಸಿಗೆ ರಜಾದಲ್ಲಿ

ಮಕ್ಕಳು ಏನು ಮಾಡುತ್ತಿದ್ದಾರೆ?

● ವಿದ್ಯಾಶ್ರೀ ಹೊಸಮನಿ

ಶೈಕ್ಷಣಿಕ ವರ್ಷ ಮುಕ್ತಾಯವಾಯಿತು; ಪರೀಕ್ಷೆಗಳು ಮುಗಿದವು; ಮಕ್ಕಳಿಗೆ ಬೇಸಿಗೆ ರಜೆ ಪ್ರಾರಂಭವಾಯಿತು. ಕ್ಲಾಸ್ ರೂಮ್, ಸಿಲಬಸ್, ಹೋಮ್ ವರ್ಕ್, ಅಸೈನಮೆಂಟ್, ಟೆಸ್ಟ್, ಪರೀಕ್ಷೆಗಳೆಂಬ ಪಠ್ಯಕ್ರಮದ ಜೀವನಕ್ಕೆ ಎರಡು ತಿಂಗಳ ವಿರಾಮ ಹೇಳಿ, ಕುಟುಂಬ, ಸ್ನೇಹಿತ ಹಾಗೂ ಪರಿಸರದೊಂದಿಗೆ ಹತ್ತಿರವಾಗುವುದಕ್ಕೆ ಸಕಾಲ ಈ ಬೇಸಿಗೆ ರಜೆ.

ಈ ರಜೆಗಳು ಮಕ್ಕಳ ಸರ್ವತೋಮುಖ ವಿಕಸನಕ್ಕೆ ದೊರಕಿರುವ ಅಮೂಲ್ಯ ಸಮಯ. ಈ ದಿನಗಳಲ್ಲಿ ಚಿಣ್ಣರ ಆಟೋಟಗಳು ಇಮ್ಮಡಿಗೊಂಡು, ಬೌದ್ಧಿಕ, ಶಾರೀರಿಕ ಬಲ ವೃದ್ಧಿಸಿ, ಮಾನಸಿಕ ಚಿಂತನಾ ಕ್ರಮ, ಪರಸ್ಪರ ಇತರ ಮಕ್ಕಳೊಂದಿಗೆ ವ್ಯವಹರಿಸುವ ಕೌಶಲ ಎಲ್ಲವೂ ವೃದ್ಧಿಸುತ್ತದೆ. ಇದೇ ಸಮಯದಲ್ಲಿ, ರಜೆಯಲ್ಲಿರುವ ಮಕ್ಕಳ ಕಿತಾಪತಿಗಳಿಂದ ಸುಸ್ತಾಗುವ ಪಾಲಕರಿಗೆ, ಸಣ್ಣ ಮಟ್ಟದ ರಗಳೆಯೂ ಆಗಬಹುದು! ಅದರಲ್ಲೂ, ಇಂದಿನ ಸಮಾಜದಲ್ಲಿ ತಂದೆ ಮತ್ತು ತಾಯಿಯರಿಬ್ಬರೂ ದುಡಿಯುವುದು ಸಾಮಾನ್ಯ ಎನಿಸಿದ್ದು, ರಜಾ ದಿನಗಳಲ್ಲಿ ಮಕ್ಕಳನ್ನು ನೋಡಿಕೊಳ್ಳುವುದು, ಹೊಸದೊಂದು ಜವಾಬ್ದಾರಿ ಇದ್ದಂತೆ!

ಶಾಲಾ ದಿನಗಳಲ್ಲಿ ಕೇವಲ ಒಂದೆರಡು ಗಂಟೆಗಳಷ್ಟು ಆಟಕ್ಕೆ ಸೀಮಿತವಾದ ಅವಧಿ; ಈ ಎರಡು ತಿಂಗಳ ರಜಾ ಅವಧಿಯಲ್ಲಿ ದಿನವೆಲ್ಲ ಆಟ ಮೋಜು-ಮಸ್ತಿ ಎಂದು ಬೀದಿಯಲ್ಲಿ ತಮ್ಮ ಬಿಡಾರವನ್ನು ಹೂಡಿ ಸ್ನೇಹಿತರೊಂದಿಗೆ ಆಟವಾಡುವುದರಲ್ಲಿ ಮಕ್ಕಳು ಮಗ್ನರಾಗಿರುವರು. ಕುಣಿದು ಕುಪ್ಪಳಿಸಿ, ಅತ್ತಿತ್ತ ಓಡಾಡಿ, ಉತ್ತಮ ದೈಹಿಕ ವ್ಯಾಯಾಮ ಪಡೆಯುವರು; ಮನೆಯಲ್ಲಿ ಓದುವ ಅಭ್ಯಾಸವಿದ್ದರೆ, ವೈವಿಧ್ಯಮಯ ಪುಸ್ತಕಗಳನ್ನು ಓದಿ, ಜ್ಞಾನವನ್ನೂ ವೃದ್ಧಿಸಿಕೊಳ್ಳುವರು. ಹೊಸ ಮತ್ತು ಅರ್ಥಪೂರ್ಣ ವಿಚಾರಗಳನ್ನು ಕಲಿಯಲು, ಮಕ್ಕಳಿಗೆ ಈ ಎರಡು ತಿಂಗಳುಗಳ ಕಾಲ ಒಂದು ಸುವರ್ಣಾವಕಾಶ!

ಆದರೆ, ಇಂದಿನ ಆಧುನಿಕ ಮನೋಭಾವದ ವಾತಾವರಣದಲ್ಲಿ ಕೇವಲ ಶಾಲಾ ಶಿಕ್ಷಣ ಹಾಗೂ ತಂತ್ರಜ್ಞಾನದ ಕಲಿಕೆಯ ಮೇಲೆ ಭವಿಷ್ಯದ ಸುರಕ್ಷತೆ ಎಂಬ ನಂಬಿಕೆಯಲ್ಲಿ ಪಾಲಕರು, ಅಂಕ ಗಳಿಕೆಯೇ ಪ್ರಧಾನ ಎನಿಸಿದ ಶಿಕ್ಷಣ ವ್ಯವಸ್ಥೆಯ ಬೆನ್ನುಹತ್ತಿರುವುದನ್ನು ಅಲ್ಲಲ್ಲಿ ನೋಡಬಹುದು. ತಮ್ಮ ಮಕ್ಕಳು ಉತ್ತಮ ಅಂಕ ಗಳಿಸಲು, ಇಂಗ್ಲಿಷ್ ಮೊದಲಾ ಭಾಷೆಯನ್ನು ಇನ್ನಷ್ಟು ಆಕರ್ಷಕವಾಗಿ ಮಾತನಾಡುವಂತಾಗಲು, ಮಾಡರ್ನ್ ಎಂದುಕೊಂಡದ್ದರ ಸಿದ್ದಿಗಾಗಿ, ಅದೇ ಹಪಹಪಿಯಲ್ಲಿ ಕಲಿಕೆಯ ಒತ್ತಡವನ್ನು ಮಕ್ಕಳ ಮೇಲೆ ಹೇರುವುದುಂಟು; ಜ್ಞಾನಾರ್ಜನೆಗೆ, ದೈಹಿಕ ಚಟುವಟಿಕೆ ಮತ್ತು ಆಟಗಳಿಗೆ ಮೀಸಲಿರಬೇಕಾದ ಬೇಸಿಕೆ ರಜೆಯಲ್ಲೂ ಸಹ ಮನೆಯಲ್ಲಿಯೇ ಓದು-ಬರಹ ಎಂದು ಮಕ್ಕಳ ದಿನಚರಿಯ ಮೇಲೆ ಒತ್ತಡ ಹೇರಿ, ಅವರ ರಜೆಯ ಮೋಜಿಗೆ ಕತ್ತರಿ ಹಾಕುವರು. ಎಲ್ಲಾ ಪೋಷಕರು ಎಂದಲ್ಲ, ಕೆಲವರಾದರೂ ಇಂತಹ ಹಪಹಪಿಯಲ್ಲಿ ಮುಳುಗಿರುವುದನ್ನು ನಮ್ಮ ನಡುವೆಯೇ ಕಾಣಬಹುದು!

ಈ ನಡುವೆ ಈಚಿನ ನಾಲ್ಕೆಂಟು ವರ್ಷಗಳಲ್ಲಿ ಇನ್ನೊಂದು ಹೊಸ ಮತ್ತು ಬಹಳ ಪ್ರಮುಖ ಎನಿಸಿರುವ ವಿದ್ಯಮಾನವನ್ನು ನಮ್ಮ ನಡುವೆ ಬಹಳ ಕಡೆ ನೋಡಬಹುದು; ಮಕ್ಕಳು ತಂಟೆ ಮಾಡುತ್ತಾ, ಅತ್ತಿತ್ತ ಓಡಾಡಿ ಬಿದ್ದು ನೋವು ಮಾಡಿಕೊಳ್ಳುತ್ತಾರೆಂದೋ, ಬೀದಿಯಲ್ಲಿ ಅನವಶ್ಯಕ ಸುತ್ತಾಡುವುದನ್ನು ತಪ್ಪಿಸುವುದಕ್ಕೆಂದೋ, ಇಂದಿನ ದಿನಮಾನಗಳಲ್ಲಿ ಪ್ರಖ್ಯಾತಿ ಪಡೆದಿರುವ ಮೊಬೈಲ್ ಎಂಬ ಸಾಧನವನ್ನು ಮಕ್ಕಳ ಕೈಗಿಟ್ಟು ಕಾರ್ಟೂನ್ ವಿಡಿಯೋಗಳನ್ನು ನೋಡಿಯೋ, ಗೇಮ್ಸ್‌ಗಳನ್ನು ಆಡಿಯೋ ಮನೋರಂಜನೆ ಪಡಲಿ ಎಂದು ಬಿಡುತ್ತಾರೆ. ಜತೆಗೆ, ಮೊಬೈಲ್‌ನಲ್ಲಿ ನಾನಾ ದೃಶ್ಯಗಳನ್ನು ನೋಡುತ್ತಾ ಕೂರುವ ಮಗು, ಹೊರಗೆಲ್ಲೂ ಹೋಗದೇ ಇರುವುದರಿಂದ, ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ತಮಗೆ ಅನುಕೂಲ ಎಂದು ಹಲವು ಪೋಷಕರು ತಿಳಿದಿದ್ದಾರೆ! ಮೊಬೈಲ್ ನೀಡುವ ಮನರಂಜನೆಯು, ಮಕ್ಕಳ ಮಾನಸಿಕ ಬೆಳವಣಿಗೆಗೆ ಕಂಟಕ ಎಂದು ಹಲವು ತಜ್ಞರು ಈಗಾಗಲೇ ಎಚ್ಚರಿಸಿದ್ದರೂ, ಚಿಕ್ಕ ಮಕ್ಕಳ ಕೈಗೆ ಮೊಬೈಲ್ ಕೊಟ್ಟು ಕೂರಿಸುವುದು ಇಂದು ಸಾರ್ವತ್ರಿಕ ಎನ್ನುವ ಹಂತ ತಲುಪಿದೆ!

ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಹೊರಾಂಗಣ-ಒಳಾಂಗಣ ಆಟೋಟದ ಮನೋರಂಜನೆ ಬಹುಮುಖ್ಯ. ಕೇವಲ ಓದು- ಬರಹ, ಬಿಟ್ಟರೆ ಮೊಬೈಲ್ ಎಂದರೆ ಮಕ್ಕಳ ಅಭಿವೃದ್ಧಿ ಕ್ಷೀಣಿಸುವಿಕೆಗೆ ಎಡೆ ಮಾಡಿಕೊಟ್ಟಂತಾಗುತ್ತದೆ.

20 ವರ್ಷಗಳ ಹಿಂದೆ ತಿರುಗಿ ನೋಡಿದರೆ, ರಜಾ ದಿನಗಳಲ್ಲಿ ಮಕ್ಕಳೆಲ್ಲ ಕುಂಟೆಬಿಲ್ಲೆ, ಮರ ಕೋತಿ ಆಟ, ಚೌಕಾಬಾರ, ನದಿ ದಡ, ಲಗೋರಿ, ಚಿನ್ನಿದಾಂಡು, ಬುಗರಿ, ಗೋಲಿ, ಹಾವು ಏಣಿ, ರಾಜ ಮಂತ್ರಿ ಕಳ್ಳ ಪೊಲೀಸ್, ಕೆರಂ ಹೀಗೆ ಹತ್ತು ಹಲವು ಆಟಗಳೊಂದಿಗೆ, ಅಜ್ಜಿ ತಾತಂದಿರ ಮನೆಯಲ್ಲಿ ಕಾಲ ಕಳೆಯುವ ಪ್ರತೀತಿ ಇತ್ತು.

ಈಗ ಕೇವಲ ಶಾಲಾ ಶಿಕ್ಷಣ ಮತ್ತು ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಕೆಯೇ ಮುಖ್ಯವಾಗಿದ್ದು, ಅದರ ಜತೆ ಮೊಬೈಲ್‌ನಲ್ಲಿ ದೊರೆಯುವ ಮನರಂಜನೆಯೇ ಸರ್ವಸ್ವ ಎಂದು ಯಾವುದೇ ಅಂತಸ್ತಿನ ಬೇಧವಿಲ್ಲದೇ ಜನ ತಿಳಿದಿದ್ದಾರೆ; ದೊಡ್ಡವರು ರೀಲ್ಸ್ ಎಂಬ ಮಾಯಾಜಾಲದಲ್ಲಿ ಮುಳುಗಿದ್ದರೆ, ಮಕ್ಕಳು ಸಹ ಪೋಷಕರನ್ನು ಅನುಕರಿಸಿ, ಮೊಬೈಲ್ ಗೀಳಿಗೆ ಅಂಟಿಕೊಂಡಿದ್ದಾರೆ.

ಸೂಕ್ತವಾಗಿ, ಸಮಯಮಿತಿಯಲ್ಲಿ ಬಳಸಿಕೊಂಡರೆ, ನಮ್ಮೆಲ್ಲರ ಭವಿಷ್ಯದ ಬುನಾದಿ ಶಿಕ್ಷಣ, ಮಾಹಿತಿಯ ಸಾಗರ ಮೊಬೈಲ್ ಎಂಬುದು ನಿಜ. ಆದರೆ, ಶಿಕ್ಷಣ ಹಾಗೂ ಮೊಬೈಲ್‌ಗಳನ್ನು ಬಳಸಿಕೊಂಡು ಆಟ-ಪಾಠಗಳಲ್ಲಿ ತೊಡಗಿಸಿ ಕ್ರಿಯಾತ್ಮಕ ಗುಣ ಅಳವಡಿಸಿಕೊಂಡಾಗ ಸುಂದರ ಭವಿಷ್ಯ ನಿರ್ಮಾಣವಾಗುತ್ತದೆ ಎಂಬುದು ಅಷ್ಟೇ ಸತ್ಯ.

ಮಕ್ಕಳಿಗೆ ಮೊಬೈಲ್ ಬ್ಯಾನ್?

ಹದಿನಾರು ವರ್ಷವಾಗುವ ತನಕ ಮಕ್ಕಳು ಮೊಬೈಲ್‌ಗೆ ಅಂಟಿಕೊಂಡು, ಸಾಮಾಜಿಕ ಜಾಲತಾಣದ ಗೀಳಿನಲ್ಲಿ ಸಿಲುಕಬಾರದು ಎಂಬ ಉದ್ದೇಶದಿಂದ, ಆಸ್ಟ್ರೇಲಿಯಾ ದೇಶದಲ್ಲಿ ಆ ವಯೋಮಾನದ ತನಕ ಮಕ್ಕಳು ಮೊಬೈಲ್ / ಸಾಮಾಜಿಕ ಜಾಲತಾಣ ಬಳಸಬಾರದು ಎಂಬ ಕಾನೂನನ್ನು ಜಾರಿಗೆ ತರಲಾಗಿದೆ. ಇಂದು ಪುಟಾಣಿ ಮಕ್ಕಳು ಸಹ ಮೊಬೈಲ್‌ಗೆ ಅಂಟಿಕೊಂಡಿರುವುದು ಸಾಮಾನ್ಯ ದೃಶ್ಯ; ಮೊಬೈಲ್‌ನ ವಿದ್ಯಮಾನಗಳನ್ನು, ಮನಸ್ಸನ್ನು ಕೆರಳಿಸುವ ದೃಶ್ಯಗಳನ್ನು ಸೂಕ್ತ ರೀತಿಯಲ್ಲಿ ಅರ್ಥೈಸಿಕೊಂಡು ವಿಶ್ಲೇಷಿಸುವ ಶಕ್ತಿ ಪುಟ್ಟ ಮಕ್ಕಳಲ್ಲಿ ಇರುವುದಿಲ್ಲ. ಆದ್ದರಿಂದ, ಪುಟ್ಟ ಮಕ್ಕಳಿಗೆ ಮೊಬೈಲ್ ಕೊಡಬೇಡಿ; ಅನಿವಾರ್ಯವಾಗಿ ಕೊಟ್ಟರೂ, ಕೆಲವೇ ನಿಮಿಷಗಳ ಮಿತಿ ಹೇರಿ; ಶಾಲೆಗೆ ರಜಾ ಇರುವ ಈ ದಿನಗಳಲ್ಲಿ ಮಕ್ಕಳು ಮೊಬೈಲ್‌ಗಿಂತ ಹೆಚ್ಚಿನ ಸಮಯವನ್ನು ಹೊರಾಂಗಣ ಆಟಗಳಲ್ಲಿ, ಪುಸ್ತಕ ಓದುವುದರಲ್ಲಿ, ಚೆಸ್ ಕೇರಂನಂತಹ ಒಳಾಂಗಣ ಆಟಗಳಲ್ಲಿ ಕಳೆಯಲಿ.

ಚಿತ್ತವಿಹಾರ

ಸಮಯೋಚಿತ ಸಹಾಯ

ಕಠಿಣ ಸಂದರ್ಭಗಳಲ್ಲಿ ಬುದ್ಧಿವಂತಿಕೆ ಉಪಯೋಗಿಸಿ, ಶೀಘ್ರ ಕಾರ್ಯೋನ್ಮುಖರಾಗಿ ಪರಿಸ್ಥಿತಿಯನ್ನು ಹಗುರ ಗೊಳಿಸುವುದು ಒಂದು ಅದ್ಭುತ ಕಲೆ. ಇದು ಕೇವಲ ಶಿಕ್ಷಣ, ನಾಗರೀಕತೆ, ಆಧುನಿಕತೆಗಳನ್ನು ಅವಲಂಬಿಸಿರುವುದಲ್ಲ. ಪರಿಸ್ಥಿತಿಯ ಗಾಢತೆಯನ್ನು ಕ್ಷಣಮಾತ್ರದಲ್ಲಿ ಗ್ರಹಿಸಿ, ತಕ್ಷಣವೇ ಸಮಯೋಚಿತ ಹೆಜ್ಜೆಗಳನ್ನಿಟ್ಟು ಸಮಸ್ಯೆಯನ್ನು ತಿಳಿಗೊಳಿಸಲು ಹೃದಯ ಸ್ಪಂದನೆಯೇ ಮುಖ್ಯ.

ಊರ ಹೊರವಲಯದಲ್ಲಿ ನಿಸರ್ಗದ ರಮಣೀಯತೆ ಹಲವು ವಿಧಗಳಲ್ಲಿ ತೆರೆದುಕೊಳ್ಳುವ ತಾಣ ಅದು. ಹುಲಸಾಗಿ ಬೆಳೆದ ಹುಲ್ಲುಗಾವಲು, ಅದಕ್ಕಂಟಿಕೊಂಡ ಗುಡ್ಡ, ದೂರದಲ್ಲೊಂದು ಕೊಳ ಎಲ್ಲವೂ ಆ ಪಟ್ಟಣದ ಜನರನ್ನು ಆಕರ್ಷಿಸುವ ಸಂಗತಿಗಳು. ಪ್ರತಿದಿನ ಸಂಜೆ ಹಲವಾರು ಜನ ವಾಯು ವಿಹಾರಕ್ಕಾಗಿ ಅಲ್ಲಿ ಸೇರುವುದುಂಟು.

ಎಂದಿನಂತೆ ಗೋಪಾಲಕ ಬಾಲಕನೊಬ್ಬ ತನ್ನ ಹಸು ಕರುಗಳೊಂದಿಗೆ ಮರಳಿ ಮನೆಗೆ ಹೊರಡುವ ಸಮಯ. ಆಕಸ್ಮಿಕವಾಗಿ ಆತನ ಕರುವೊಂದು ಕೊಳದಲ್ಲಿ ಬಿದ್ದುಬಿಟ್ಟಿತು. ಗಾಬರಿಗೊಂಡ ಆ ಹುಡುಗ ಸಹಾಯಕ್ಕಾಗಿ ಕೂಗಿದ. ತಕ್ಷಣವೇ ಅಲ್ಲಿ ಸೇರಿದ ನಾಗರಿಕರೆನಿಸಿಕೊಂಡವರು ಆ ಹುಡುಗನನ್ನು ತರಹಾವರಿ ಪ್ರಶ್ನೆಗಳಿಂದ ಇನ್ನಷ್ಟು ಗಾಬರಿಗೊಳಿಸಲು ತೊಡಗಿದರು.

'ನಿನ್ನ ಮನೆಯಲ್ಲಿ ಎಷ್ಟು ಹಸುಗಳಿವೆ? ಈ ಕರುವಿಗೆ ವಯಸ್ಸೆಷ್ಟು? ಈ ಕರುವಿನ ತಾಯಿ ಹಸು ಯಾವುದು? ನೀನು ಪ್ರತಿದಿನವೂ ಇಲ್ಲಿಗೆ ಬರುವೆಯಾ? ಪ್ರತಿದಿನವೂ ಬರುವೆಯಾದರೆ ಇಲ್ಲಿ ಇದ್ದ ತೊಂದರೆಯ ಬಗ್ಗೆ ನಿನಗೆ ಅರಿವಿರಲಿಲ್ಲವೇ?' ಎಂಬೆಲ್ಲಾ ಪ್ರಶ್ನೆಗಳೊಂದಿಗೆ ತಮ್ಮಲ್ಲಿಯೇ ಚರ್ಚಿಸಲು ಪ್ರಾರಂಭಿಸಿದರು. ಆ ಚರ್ಚೆಯ ನಡುವೆ, 'ಸಣ್ಣಪುಟ್ಟ ಉಪಕಾರಗಳಿಂದ ಏನೂ ಪ್ರಯೋಜನವಿಲ್ಲ. ದೊಡ್ಡ ಸಾಮಾಜಿಕ ಕ್ರಾಂತಿಯಾಗಬೇಕು, ಎಲ್ಲರಿಗೂ ಉತ್ತಮ ಬದುಕು ಸಿಗಬೇಕು, ಆಗ ಇಂತಹ ಅಪಾಯಕ್ಕೆ ಕರುಗಳು ಸಿಕ್ಕಿಹಾಕಿಕೊಳ್ಳುವುದಿಲ್ಲ' ಎಂಬೆಲ್ಲ ವಿಚಾರಗಳು ಹಾದು ಹೋದವು. ಆದರೆ ಆ ಕರುವನ್ನು ರಕ್ಷಿಸುವ ಬಗ್ಗೆ ಯಾರೊಬ್ಬರೂ ಮುಂದಡಿ ಇಡಲೇ ಇಲ್ಲ. ಜನ ಸಂದಣಿ ಗಮನಿಸಿದ ರೈತನೊಬ್ಬ ತಕ್ಷಣವೇ ಕೊಳಕ್ಕೆ ಇಳಿದು ಕಷ್ಟಪಟ್ಟು ಕರುವನ್ನು ಮೇಲಕ್ಕೆತ್ತಿ ತಂದು ಇನ್ನೊಂದು ಮಾತನ್ನೂ ಆಡದೆ ಕಣ್ಮರೆಯಾದ.

ಸಜ್ಜನರು, ಪರೋಪಕಾರಿಗಳು ಯಾವುದೇ ಲಿಖಿತ ನಿಯಮಗಳನ್ನು ಗಣನೆಗೆ ತಂದುಕೊಳ್ಳದೆ, ಸಹಾಯಾರ್ತಿಗಳ ಉದ್ಧಾರಕ್ಕಾಗಿ ಶ್ರಮಿಸುತ್ತಾರೆ. ವಿವೇಕಾನಂದರು ಹೇಳುವ 'ವ್ಯಕ್ತಿಯು ಎಂತಹುದೇ ಸಾಮಾಜಿಕ ವ್ಯವಸ್ಥೆಯಲ್ಲಿರಲಿ, ಆ ವ್ಯಕ್ತಿಯ ಅಸಹಾಯಕತೆಯನ್ನು ದೂರಗೊಳಿಸಲು ನೆರವಾಗುವವನೇ ಮಾನವ ಜನಾಂಗದ ನಿಜವಾದ ಉಪಕಾರಿ' ಎಂಬ ಮಾತು ಸರ್ವಸಮ್ಮತ.

● ಮಾಯಾ ಬಾಲಚಂದ್ರ

ಮಕ್ಕಳ ಚಿಂತೆ

ಇಷ್ಟು ದಿನ ಒಂದೇ ಚಿಂತೆ
ಯಾವಾಗ ಬರುವುದು ರಜೆ?
ಪರೀಕ್ಷೆ ಆಯ್ತು ರಜೆ ಬಂತು;
ಹೇಳಿದೆ ಶಾಲೆಗೆ ಟಾಟಾ
ಪ್ರತಿದಿನ ಒಂದೇ ಚಿಂತೆ
ಬೇಗ ಮುಗಿಯುತ್ತಿದೆ ಅಪ್ಪನ
ಮೊಬೈಲ್ ಡಾಟಾ!

● ವೆಂಕಟೇಶ ಚಾಗಿ

ಬೆವರು ಹರಿಸಿ ಗಳಿಸಿ ಉಣ್ಣಬೇಕು

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು?
ದೊರೆತುದಹಸಾದವೆಂದುಣ್ಣು ಗೊಣಗಿಡದೆ?
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ!
ಹೊರಡು ಕರೆ ಬರಲ್ ಅಳದೆ - ಮಂಕುತಿಮ್ಮ॥

ಈ ಜಗತ್ತಿನಲ್ಲಿ ನಮಗೆ ಕಾಯಕ ಪ್ರಜ್ಞೆ ಇರಬೇಕು. ಕಾಯಕದಲ್ಲಿ ಕೈಲಾಸ ಕಾಣುವ ಮನೋಭಾವ ರೂಡಿಸಿಕೊಳ್ಳಬೇಕು. ಕಾಯಕದಲ್ಲಿ ಶ್ರೇಷ್ಠ ಕಾಯಕ - ಕನಿಷ್ಠ ಕಾಯಕ, ಮೇಲು - ಕೀಳು ಎಂಬುದಿಲ್ಲ ಎನ್ನುವ ಅರಿವು ನಮ್ಮಲ್ಲಿರ ಬೇಕು. ಯಾವ ಕಾಯಕವಾದರೂ ಸರಿಯೇ ಅದರಲ್ಲಿ ಮನಸ್ಸಿಟ್ಟು ಮಾಡ ಬೇಕು. ಹಸಿವಾದಾಗ ಆ ಸಮಯಕ್ಕೆ ಭಗವಂತ ಕೊಡಮಾಡಲ್ಪಡುವ ಅನ್ನ ವನ್ನು ನಾವು ಗೊಣಗದೆ, ಟೀಕಿಸದೆ ಭಗವಂತ ನೀಡಿದ ಪ್ರಸಾದವೆಂದು ಕಣ್ಣಿಗೆ ಒತ್ತಿಕೊಂಡು ಸೇವಿಸಬೇಕು. ಹಾಗೆಯೇ ಈ ಜಗತ್ತಿಗೆ ನಾವು ಬಂದಿ ದ್ದೇವೆ, ಆ ಭಗವಂತ ನಮ್ಮನ್ನು ಯಾವುದೋ ಸದುದ್ದೇಶಕ್ಕೆ ಕಳಿಸಿದ್ದಾನೆ ಎಂಬ ಭಾವವನ್ನು ಮನದಲ್ಲಿಟ್ಟುಕೊಂಡು ಪರೋಪಕಾರ ಮಾಡುತ್ತಾ ಇಲ್ಲಿ ನಿಸ್ವಾರ್ಥವಾಗಿ, ಪರಮಾರ್ಥವನ್ನಳವಡಿಸಿಕೊಂಡು ಜೀವಿಸಬೇಕು. ಕೊನೆಗೆ ಕಾಲನ ಕರೆ ಬಂದಾಗ ಅವನನ್ನು ತಬ್ಬಿಕೊಂಡು ನಗನಗುತ್ತಾ ಇಲ್ಲಿಂದ ಹೊರಡಬೇಕು ಎಂಬುದೇ ಜೀವನದ ಗುರಿಯಾಗಬೇಕು ಎಂಬುದನ್ನು ಈ ಕಗ್ಗದಲ್ಲಿ ತಿಳಿಸಿದ್ದಾರೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಮನುಷ್ಯನೂ ಸೇರಿ ಇರುವ ಸಕಲ ಜೀವರಾಶಿಗಳೂ ಮೂರು ಅಂಶಗಳ ಮೇಲೆಯೇ ಜೀವಿಸುವುದು. ಅವುಗಳಾವುವೆಂದರೆ ಬೆದರು, ಬೆದೆ ಹಾಗೂ ಹಸಿವುಗಳು. ಬೇರೆ ಪ್ರಾಣಿಗಳಿಂದ, ಬೇರೆಯವರಿಂದ ಹಾನಿಯಾಗಬಹುದು ಎಂಬ ಬೆದರಿಕೆಯಿಂದ, ದೇಹ ವಾಂಚಲ್ಯೆಯ ಕಾಮಕ್ಕಾಗಿ (ಬೆದೆ) ಮತ್ತು ಜೀವಿಸಲು ಪಿಷ್ಠದ ಅವಶ್ಯಕವಿರುವುದರಿಂದ ಹಸಿವಿಗೆ ಅನ್ನಕ್ಕಾಗಿ ಮಾತ್ರವೇ ಜೀವನ ನಡೆಸುವುದು. ಬೆದರಿಕೆ ಎಂಬುದು ಮನಸ್ಸಿನ ತಳಮಳ, ಬೆದೆ ಎಂಬುದು ದೇಹದ ಬೇಡಿಕೆಯಾದರೆ ಹಸಿವಾದಾಗ ಅನ್ನವುಣ್ಣುವುದು ದೈಹಿಕವಾಗಿಯೂ ಮತ್ತು ಮಾನಸಿಕವಾಗಿಯೂ ಶಕ್ತಿ ತುಂಬಲಿಕ್ಕೆ ಮಾತ್ರ.

ಬೆದೆ ಮತ್ತು ಬೆದರು ದೈಹಿಕ ಮತ್ತು ಮಾನಸಿಕ ವ್ಯವಸ್ಥೆಯಾದರೆ ತಿನ್ನುವ ಅನ್ನವನ್ನು ನಾವು ಕಷ್ಟಾರ್ಜಿತವಾಗಿ, ಬೆವರು ಹರಿಸಿ ದುಡಿದು ತಿನ್ನಬೇಕು. ದುಡಿಮೆ ಎಂದರೆ ಕಾಯಕ ತತ್ವ, ಕಾಯಕ ಮಾಡುವುದು ಅದರಿಂದ ಬಂದಿದ್ದನ್ನು ಉಣ್ಣುವುದು. ಇಂಥಹ ಕಾಯಕದಲ್ಲಿ ಮೇಲು ಕೀಳೆಂಬುದಿಲ್ಲ, ಶ್ರೇಷ್ಠ ಕನಿಷ್ಠ ಎಂಬುದಿಲ್ಲ ಎಂಬುದನ್ನು ಮನದಲ್ಲಿಟ್ಟುಕೊಂಡು ಇರುವ ಕಾಯಕ ಮಾಡು ಕಿರಿದೆನದೆ ಮನವಿಟ್ಟು.

ಹಾಗೆಯೇ ಕಾಯಕದಿಂದ ಬಂದ ಆದಾಯದಲ್ಲಿಯೇ ಅನ್ನವನ್ನುಣ್ಣಬೇಕು. ಅನ್ನವನ್ನು ಕೊಡುವುದು ಈ ಪ್ರಕೃತಿ, ಭಗವಂತ. ಭಗವಂತ ಕೊಡುವ ಅನ್ನವನ್ನುಣ್ಣುವಾಗ ಅದರ ಬಗ್ಗೆ ಟೀಕಿಸದೆ, ಅಸಹ್ಯಿಸದೆ, ಗೊಣಗಿಡದೆ ಅದನ್ನು ದೇವರ ಪ್ರಸಾದ ಎಂದು ತಿಳಿದು ಕಣ್ಣಿಗೆ ಒತ್ತಿಕೊಂಡು ನಮಸ್ಕರಿಸಿ ತಿನ್ನವಂತವನಾಗು. ಈ ಜಗತ್ತಿನಲ್ಲಿ ನೀನು ಹುಟ್ಟುವಾಗಲೇ 10 ಲಕ್ಷ ಜನರೊಂದಿಗೆ ಹೋರಾಡಿ ಜಯಶಾಲಿಯಾಗಿ ಬಂದಿರುವೆ, ಹುಟ್ಟುವಾಗಲೇ ಆ ಭಗವಂತನ ಕೃಪೆಯಿಂದ ಆತನ ಆಶೀರ್ವಾದದಿಂದ ಇಲ್ಲಿಗೆ ಬಂದಿರುವೆ. ಆ ಭಗವಂತ ನಿನ್ನನ್ನು ಆಯ್ಕೆ ಮಾಡಿ ಇಲ್ಲಿಗೆ ಕಳಿಸಿರುವುದೇ ಆತನ ಯಾವುದೋ ಕಾರ್ಯಸಿದ್ದಿಗಾಗಿ ಎಂಬ ತತ್ವವನ್ನು ಅರಿತುಕೊಂಡು ಈ ಬದುಕಿನ ಪರಮಾರ್ಥವನು ಬಿಡದೆ ನೀನು ಪರೋಪಕಾರ, ನಿಸ್ವಾರ್ಥ, ಕ್ಷಮೆ, ಭಾತೃತ್ವ, ವಿಶ್ವಾಸ, ಪ್ರೀತಿ, ಪ್ರೇಮ ಎಂಬ ಸದ್ವಿಚಾರಗಳಿಗೆ ಮನಸೋತು ಅವುಗಳನ್ನು ರೂಢಿಸಿಕೊಂಡು ಜೀವನ ಮಾಡು. ಅಂತೆಯೇ ನಿನ್ನ ಜೀವನದ ಪಯಣ ಮುಗಿದಾಗ ಆ ಕಾಲನು ಬಂದು ಬಾ ಎಂದಾಗ ಇಲ್ಲಿಯ ಲೌಕಿಕ ಜಗತ್ತಿನ ದಾಸನಾಗಿ ಅಳದೆ, ಆತ ಕರೆದಾಗ ನಗುನಗುತ್ತಾ ಆ ಕಾಲನ ಕರೆಯನ್ನು ಅಪ್ಪಿಕೊಂಡು ಸಂತಸದಿಂದ ಈ ಜಗದ್ವ್ಯಾಪಾರವನ್ನು ಮುಗಿಸಿ ಹೊರಡವಂತವನಾಗು ಎಂದು ಜೀವನ ನಡೆಸುವ ಕಲೆಯ ಪಾಠವನ್ನ ಈ ಕಗ್ಗದಲ್ಲಿ ಹೇಳಿದ್ದಾರೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಅದೇನು ಶತ್ರುತ್ವ ಆತನದು (4)
5. ಹೊದಿಕೆ, ಮೇಲ್ಮುಸುಕು (5)
6. ಒಂದಕ್ಕೊಂದು ಸಂಬಂಧವಿಲ್ಲದ ಎಂದರ್ಥ (4)
7. ಚೆಲುವಾದ ಎಂದರ್ಥ (4)
9. ಹುಡುಕಿ ಕಾಣದಿದ್ದಾಗ ಹೇಳಿದ ನೆಪ (3)
10. ಕಳೆದು ಹೋದ ಸಮಯ (4)
12. ಇಂದ್ರನ ಆನೆಯ ಹೆಸರು (4)
13. ತೆರೆಯುವಿಕೆಯ ನಡುವೆ ಮದುವೆಯ ಗಂಡೂ ಇದ್ದಾನೆ (5)
14. ಕಿವಿಯಿಂದ ಕಿವಿಗೆ ಹರಡಿದ ನುಡಿ (4)

ಮೇಲಿಂದ ಕೆಳಕ್ಕೆ

2. ಶಿಕ್ಷಕರು ಮಕ್ಕಳಿಗೆ ಪಾಠ ಮಾಡುವ ಕೊಠಡಿ (4)
3. ಮೇಲಿನಿಂದ ಕೆಳಕ್ಕೆ ಇಳಿದು ಬರುವಿಕೆ (5)
4. ದ್ವೇಷವು ಎರಡೇ ಅಕ್ಷರದಲ್ಲಿ ಬಂದಿದೆ (2)
6. ಅವನು ತೋರಿದ ಪ್ರೀತಿ (4)
8. ಔಚಿತ್ಯಕ್ಕೆ ತಕ್ಕಂತೆ (4)
9. ವ್ಯರ್ಥವಾಗಿ ಸಮಯ ಕಳೆಯುವುದು (5)
11. ಸಮುದ್ರದ ದಂಡೆ (4)
13. ಹೆತ್ತ ತಾಯಿ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಹಗೆತನ 5. ಗವಸಣಿಗೆ
6. ಅಸಂಗತ 7. ರಮಣೀಯ
9. ಕಾರಣ 10. ಗತಕಾಲ
12. ಐರಾವತ 13. ಅನಾವರಣ
14. ಗಾಳಿಮಾತು

ಮೇಲಿಂದ ಕೆಳಕ್ಕೆ
2. ತರಗತಿ 3. ಅವತರಣ
4. ಹಗೆ 6. ಅನುರಾಗ
8. ಯಥೋಚಿತ 9. ಕಾಲಹರಣ
11. ಕರಾವಳಿ
13. ಅಮ್ಮ

ಸಾವಿಲ್ಲದ ಮನೆಯ ಸಾಸಿವೆ ಉಂಟೇ?

ತಾಯಿಯೊಬ್ಬಳಿಗೆ, ತನ್ನ ಸರ್ವಸ್ವ ಎಂಬಂತಿದ, ತನ್ನ ಒಬ್ಬನೇ ಮಗ ತೀರಿಕೊಂಡಾಗ, ದಿಕ್ಕೇ ತೋಚದಂತಾಯಿತು. ಇದಕ್ಕೆ ಮೊದಲೇ ಆಕೆಯ ಪತಿ ಮತ್ತಿಬ್ಬರು ಮಕ್ಕಳೂ ತೀರಿಹೋಗಿದ್ದರು. ಆಕೆ ದುಃಖ ತಡೆಯಲಾರದೇ, ಸಿಕ್ಕ ಸಿಕ್ಕವರೊಂದಿಗೆ, ಯಾರಾದರೂ ನನ್ನ ಮಗನನ್ನು ಹೇಗಾದರೂ ಬದುಕಿಸಿಕೊಡಿ, ಇವನನ್ನು ಬದುಕಿಸಿ ಕೊಡುವಂತವರು ಯಾರಾದರೂ ಇದ್ದರೆ ದಯವಿಟ್ಟು ನನಗೆ ತಿಳಿಸಿ, ನನಗೀಗ ಇವನಲ್ಲದೇ, ಇನ್ಯಾರೂ ದಿಕ್ಕಿಲ್ಲ. ಯಾರಾದರೂ ನನ್ನ ಈ ಒಂದು ಕುಡಿಯನ್ನು ಬದುಕಿಸುವಂಥ ಮಹಾತ್ಮರು ಎಲ್ಲಿದ್ದಾರೆ ಎಂಬುದನ್ನು ತಿಳಿಸಿ, ಎಂದು ದುಃಖದಿಂದ ಯಾಚಿಸುತ್ತಾ ಅಲೆದಾಡುತ್ತಿದ್ದಳು.

ಆಗ ಅವಳಿಗೆ ಯಾರೋ ಒಬ್ಬರು, 'ಗೌತಮ ಬುದ್ಧರು, ತಮ್ಮ ಹಳ್ಳಿಗೆ ಆಗಮಿಸಿ ಒಂದು ಮಾವಿನ ತೋಪಿನಲ್ಲಿ ತಮ್ಮ ಶಿಷ್ಯರೊಂದಿಗೆ ತಂಗಿದ್ದಾರೆ. ಅವರು ನಿನಗೆ ಪರಿಹಾರ ನೀಡಬಹುದ' ಎಂದರು. ಈ ಮಾತನ್ನು ಕೇಳಿದ ಅವಳು ಬಹಳ ಹಂಬಲದಿಂದ, ತಕ್ಷಣ ತನ್ನ ಮಗನ ಶವವನ್ನು ಹೊತ್ತುಕೊಂಡು ಬುದ್ಧರ ಬಳಿಗೆ ಓಡಿ ಹೋಗಿ ಅವರ ಪಾದದ ಬಳಿಗೆ ಇಡುತ್ತಾ, 'ಹೇ ಪ್ರಭುವೇ, ಹೇಗಾದರೂ ಮಾಡಿ ನನ್ನ ಮಗನನ್ನು ಜೀವಂತವಾಗಿ ಉಳಿಸಿ' ಎಂದು ಬೇಡಿಕೊಂಡಳು.

ಆಗ ಬುದ್ಧರು ತಾಯಿ, 'ಇದೇನು ಅಷ್ಟು ಕಷ್ಟದ ವಿಷಯವಲ್ಲ, ಆದರೆ ನೀನೊಂದು ಚಿಕ್ಕ ನಿಯಮವನ್ನು ಪಾಲಿಸಬೇಕಾಗುತ್ತದೆ ಅಷ್ಟೇ' ಎಂದರು. 'ಮಗನಿಗಾಗಿ ಏನನ್ನಾದರೂ ಮಾಡುತ್ತೇನೆ, ದಯವಿಟ್ಟು ತಿಳಿಸಿ' ಎಂದು ಅಂಗಲಾಚಿದಳು. 'ಈ ಹಳ್ಳಿಯಲ್ಲಿ ಹೇರಳವಾಗಿ ಸಾಸಿವೆಯನ್ನು ಬೆಳೆಯುತ್ತಾರೆಂದು ಕೇಳಿದ್ದೇನೆ, ನೀನು ಯಾರ ಮನೆಯಲ್ಲಿ ಅವರ ಕುಟುಂಬದ ಯಾರೊಬ್ಬರೂ ಕೂಡ ಸತ್ತಿಲ್ಲವೋ ಅಂಥವರ ಮನೆಯಲ್ಲಿ ಒಂದು ಮುಷ್ಟಿ ಸಾಸವೆ ಕಾಳುಗಳನ್ನು ತೆಗೆದುಕೊಂಡು ಬಾ, ಆಗ ನಿನ್ನ ಮಗ ಬದುಕುತ್ತಾನೆ' ಎಂದು ಹೇಳಿದರು ಬುದ್ಧ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV
Special
ಯೂಟ್ಯೂಬ್
ಚಾನೆಲ್‌ನಲ್ಲಿ

ಆಕೆಗೆ ಬುದ್ಧರ ಮಾತಿನ ಗುಟ್ಟು ಅರಿವಿಗೆ ಬರಲೇ ಇಲ್ಲ. ತಕ್ಷಣ ಅಲ್ಲಿಂದ ಓಡುತ್ತಾ ಪ್ರತಿಯೊಂದು ಮನೆ ಮನೆಗೂ ಹೋಗಿ ಸಾಸಿವೆ ಬೇಡಲಾರಂಭಿಸಿದಳು. ಪ್ರತಿಯೊಂದು ಕುಟುಂಬದಲ್ಲೂ ಬದುಕಿರುವವರಿಗಿಂತ ಸತ್ತಿರುವವರೇ ಜಾಸ್ತಿ. ತಂದೆ ತಾಯಿ, ಅಜ್ಜಿ ತಾತಂದಿರು ಲೆಕ್ಕವಿಲ್ಲದಷ್ಟು ಮಂದಿ ಸತ್ತಿರುವವರು.

ಈಕೆ ಸಂಜೆಯ ತನಕ ಮನೆ ಮನೆಗೆ ಹೋಗಿ ಸಾಸಿವೆ ಬೇಡಿದಳು. ಬಹಳ ದಣಿದಳು. ಆದರೆ ಸಾವಿಲ್ಲದ ಮನೆಯ ಸಾಸಿವೆ ಎಲ್ಲೂ ಅವಳಿಗೆ ಸಿಗಲೇ ಇಲ್ಲ . ಆಗ ಆಕೆಗೆ ಬುದ್ಧರ ಮಾತಿನ ಅರ್ಥವಾಯಿತು ಆಕೆಯ ಕಣ್ಣೀರೆಲ್ಲಾ ಬತ್ತಿ ಹೋಗಿದ್ದವು. ಆಕೆ ಬುದ್ಧರ ಬಳಿಗೆ ಹಿಂತಿರುಗಿ ಬಂದು ಅವರ ಪಾದಕ್ಕೆರಗಿದಳು. ನಂತರ ಹೇಳಿದಳು

'ಪ್ರತಿಯೊಬ್ಬರೂ ಈ ಜಗತ್ತಿನಲ್ಲಿ ಒಂದಲ್ಲ ಒಂದು ದಿನ ಸಾಯಲೇಬೇಕು. ನನ್ನ ಮಗನೂ ಅಷ್ಟೇ, ನಾಳೆ ನಾನೂ ಅಷ್ಟೇ, ಅದರ ಬಗ್ಗೆ ಚಿಂತಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಇದನ್ನು ನೀವು ನನಗೆ ಅರ್ಥ ಮಾಡಿಸಿದ್ದೀರಿ. ನೀವೀಗ ನನಗೆ ದಯವಿಟ್ಟು ಸನ್ಯಾಸ ದೀಕ್ಷೆಯನ್ನು ನೀಡಿ. ಯಾವುದು ಶಾಶ್ವತವೋ, ಅಮರವೋ, ಆದಿ ಅಂತ್ಯ ರಹಿತವಾಗಿ ಇರುವಂತದ್ದೊ, ಅದರ ಅನುಭವವನ್ನು ಹೊಂದುವ ಪಥದಲ್ಲಿ ನಾನೀಗ ಸಾಗುವೆ' ಎಂದಳು.

ಬುದ್ಧರು ಆಕೆಗೆ 'ತಾಯೇ ನೀನೊಬ್ಬ ಪ್ರಬುದ್ಧೆ. ನಿನಗೆ ಬಲು ಬೇಗನೆ ನನ್ನ ಮಾತಿನ ಇಂಗಿತ ಅರ್ಥವಾಗಿರುವುದು' ಎಂದು ಹೇಳಿ ಅವಳನ್ನು ಹರಸಿದರು. ಮುಂದೆ ಆಕೆ ಸನ್ಯಾಸಿನಿಯಾದಳು, ಆಕೆ ಏನು ಸಾಮಾನ್ಯ ಸನ್ಯಾಸಿನಿ ಅಲ್ಲ! ಬುದ್ಧರು ಜೀವಂತವಾಗಿದ್ದಾಗಲೇ ಸಂಬುದ್ಧತ್ವವನ್ನು ಹೊಂದಿದಂತಹ ಮಹಿಳೆ. ಬುದ್ಧರ ಮಹಿಳಾ ಸನ್ಯಾಸಿನಿಯರಲ್ಲಿ ಸಂಬುದ್ಧತ್ವವನ್ನು ಹೊಂದಿದ ಮೊದಲ ಮಹಿಳೆ ಈಕೆ. ಈಕೆಯ ಹೆಸರು, ಕಿಸಾ ಗೌತಮಿ ಎಂದು.

ಇದು ಗೊತ್ತಿರುವ ಕಥೆಯೇ. ಆದರೆ ಮರೆತುಬಿಡುತ್ತೇವೆ; ಮನುಷ್ಯರಾಗಿ ಹುಟ್ಟಿದ ಮೇಲೆ ಕಷ್ಟಗಳು ಸಾವು ನೋವು ಇದ್ದೇ ಇರುತ್ತವೆ. ಅದನ್ನು ಎದುರಿಸುತ್ತಾ ಬದುಕಬೇಕು. ಯಾವ ನೋವು ಕೂಡ ನಮ್ಮ ಬದುಕಿಗಿಂತ ದೊಡ್ಡದಲ್ಲ. ಈಸಬೇಕು ಈಸಿ ಜೈಸಬೇಕು. ಇದೇ ಬದುಕಿನ ನಿಯಮ.

ನಿಷ್ಪಕ್ಷಪಾತವಾಗಿರುವುದು

ಕೃಷ್ಣ ಹೇಳುತ್ತಾನೆ -ಯಾರ ಮನಸ್ಸು ಹಾಗೂ ಬುದ್ಧಿ ಆತ್ಮದಲ್ಲೇ ಸ್ಥಿರಗೊಂಡಿರುತ್ತದೆಯೋ ಹಾಗೂ ಯಾರ ಪಾಪಗಳು ಜಾಗೃತಿಯಿಂದ ನಾಶವಾಗುತ್ತವೆಯೋ ಅಂತವರು ಪುನ'ರಾಗಮನದ ಸ್ಥಿತಿಯನ್ನು ತಲುಪುವುದಿಲ್ಲ. (5.17).

ಅಜಾಗ್ರತ ಜೀವನ ಅಂಧಕಾರದಲ್ಲಿಯ ಜೀವನದಂತೆ. ಅಲ್ಲಿ ನಾವು ಬೀಳುತ್ತಾ ನಮಗೆ ನೋವುಂಟು ಮಾಡಿ ಕೊಳ್ಳುತ್ತಿರುತ್ತೇವೆ. ಮುಂದಿನ ಹಂತವೆಂದರೆ ಪ್ರಕಾಶದ ಅನುಭವ ಹೊಂದಿದಂತಿರುತ್ತದೆ. ಅಲ್ಲಿ ವ್ಯಕ್ತಿ ಒಂದು ಕ್ಷಣ ಜಾಗೃತನಾಗುತ್ತಾನೆ ಆದರೆ ಮರುಕ್ಷಣ ಅಜ್ಞಾನಕ್ಕೆ ಒಳಗಾಗುತ್ತಾನೆ. ಅಂತಿಮ ಹಂತವೆಂದರೆ ಸೂರ್ಯ ಪ್ರಕಾಶದ ಹಾಗೆ ಶಾಶ್ವತ ಪ್ರಕಾಶ ಪಡೆಯುವುದು. ಅಲ್ಲಿ ವ್ಯಕ್ತಿ ಮಹತ್ವದ ಹಂತ ತಲುಪುತ್ತಾನೆ ಹಾಗೂ ಅದರಿಂದ ಅವನು ಹಿಂದಿರುಗುವುದಿಲ್ಲ. ಈ ಪುನರಾಗಮನ ಇಲ್ಲದ ಸ್ಥಿತಿಯನ್ನು ಮೋಕ್ಷ ಅಥವಾ ಅಂತಿಮ ಸ್ವಾತಂತ್ರ್ಯವೆಂದು ಕರೆಯುತ್ತಾರೆ. ಇದು ನನ್ನ ಸ್ವಾತಂತ್ರವಲ್ಲ ಆದರೆ 'ನನ್ನಿಂದ' ಸ್ವಾತಂತ್ರ ಯಾಕೆಂದರೆ ಎಲ್ಲಾ ಕಷ್ಟಾನುಭವಗಳು ನನ್ನಿಂದಾಗಿಯೇ ಆಗಿರುತ್ತವೆ.

ವ್ಯಕ್ತಿಯು ಪುನರಾಗಮನವಿಲ್ಲದ ಸ್ಥಿತಿ ತಲುಪಿದಾಗ ಸಮತ್ವ ಉಂಟಾಗುತ್ತದೆ. ಜ್ಞಾನಿಗಳು, ಶಿಕ್ಷಕ, ಸುಸಂಸ್ಕೃತ ಬ್ರಾಹ್ಮಣರನ್ನು, ಆಕಳು, ಆನೆ, ನಾಯಿ ನಾಯಿಭಕ್ಷಕ ಎಲ್ಲರನ್ನೂ ಸಮದೃಷ್ಟಿಯಿಂದ ನೋಡುತ್ತಾರೆ. (5.18) ಸಮತ್ವ ಗೀತೆಯ ಆಧಾರ ಸ್ಥಂಭಗಳಲ್ಲಿ ಒಂದಾಗಿದೆ. ಎಲ್ಲ ಜೀವಿಗಳಲ್ಲಿರುವ ಆತ್ಮ ಒಂದೇ ಎಂದು ತಿಳಿಯುವುದೇ ಗೀತೆಯ ತಿರುಳಾಗಿದೆ. (5.7) ಉಳಿದವರಲ್ಲಿಯೂ ನಮ್ಮ ಹಾಗೆ ಒಳ್ಳೆಯತನವಿದೆ ಹಾಗೂ ನಮ್ಮಲ್ಲಿಯೂ ಉಳಿದವರ ಹಾಗೆ ಕೆಟ್ಟತನವಿದೆ ಎಂದು ತಿಳಿಯುವುದೇ ಇದಾಗಿದೆ. ಮುಂದಿನ ಹಂತವೆಂದರೆ ತೋರಿಕೆಯ ವೈರುಧ್ಯಗಳನ್ನು ಅಥವಾ ಭಿನ್ನತೆ ಗಳನ್ನು ಸಮನಾಗಿ ನೋಡುವ ಸಾಮರ್ಥ್ಯ. ಪ್ರಾಣಿಯನ್ನು ಹಾಗೂ ಪ್ರಾಣಿ ಭಕ್ಷಕನನ್ನು ಸಮಾನವಾಗಿ ನೋಡಿದಂತೆ ಇರುತ್ತದೆ. ಅಜ್ಞಾನದಿಂದ ಉಂಟಾಗುವ ದ್ವೇಷ ಅಥವಾ ಅಸಹ್ಯತೆಯನ್ನು ಬಿಡುವುದೇ ಈ ಕ್ರಿಯೆಯಾಗಿದೆ.(5.3) ನಮ್ಮ ಲಾಭ ಹಾಗೂ ಹಾನಿಗೆ ಒಂದೇ ಮಾನದಂಡ ಉಪಯೋಗಿಸುವ ಕ್ರಮ ಇದಾಗಿದೆ. ಸಮತ್ವ ಎನ್ನುವುದು ಜಾಗೃತಿಯಿಂದ ಉಂಟಾಗುವ ಒಂದು ಭಾವನೆಯಾಗಿದೆ. ಅಸಮತೋಲ ಮನಸ್ಸಿನಿಂದಾಗಿ ಬರುವ ಕಾರ್ಯ ದುಃಖವನ್ನು ತಂದೇತರುತ್ತದೆ. ಕೃಷ್ಣ ಭರವಸೆ ನೀಡುತ್ತಾನೆ-ಇಲ್ಲಿಯೂ ಕೂಡ (ಈ ಜಗತ್ತಿನಲ್ಲಿ) ಈ ಕ್ಷಣದಲ್ಲಿ ಪ್ರಕಟಿತ ಅಸ್ತಿತ್ವದ ವೈರುಧ್ಯಗಳು (ಜೀವನ /ಮರಣ) ಸಮಚಿತ್ತ ಮತ್ತು ನಿಷ್ಪಕ್ಷಪಾತ ಮನಸ್ಸಿನವರಿಂದ ಜೈಸಲ್ಪಡುತ್ತವೆ ಹಾಗೂ ಅವರು ಬ್ರಹ್ಮನ್‌ನಲ್ಲಿ ಸ್ಥಿರಗೊಳ್ಳುತ್ತಾರೆ. ಆ ಬ್ರಹ್ಮನ್ ದೋಷರಹಿತ ಹಾಗೂ ನಿಷ್ಪಕ್ಷಪಾತವಾಗಿರುತ್ತದೆ.(5.19)

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

03-04-2025, ಗುರುವಾರ
vishwavani.news

ಇಂದಿನ ಪಂದ್ಯ

7.30 PM

ಕೋಲ್ಕತ್ತಾ ನೈಟ್ ರೈಡರ್ಸ್ VS ಸನ್‌ರೈಸರ್ಸ್ ಹೈದರಾಬಾದ್

ಈಡನ್ ಗಾರ್ಡನ್ಸ್, ಕೋಲ್ಕತ್ತಾ



ತಪ್ಪುಗಳನ್ನು ತಿದ್ದಿಕೊಳ್ಳುತ್ತೇವೆ: ಪಂತ್

'ನಾವು 20-25 ರನ್‌ಗಳನ್ನು ಕಡಿಮೆ ಗಳಿಸಿಕೊಂಡೆವು, ಅದೂ ಸಹ ಆಟದ ಒಂದು ಭಾಗ. ತವರು ಮೈದಾನದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಇನ್ನೂ ನಮ್ಮಿಂದ ಸಾಧ್ಯವಾಗಲಿಲ್ಲ. ಆರಂಭದಲ್ಲಿ ನಾವು ವಿಕೆಟ್‌ಗಳನ್ನು ಕಳೆದುಕೊಂಡ ಕಾರಣಕ್ಕೆ ಹೆಚ್ಚಿನ ರನ್‌ಗಳನ್ನು ಗಳಿಸುವುದು ಕಷ್ಟಕರವಾಗಿತ್ತು, ಆದರೆ ಎಲ್ಲಾ ಆಟಗಾರರು ಬೃಹತ್ ಮೊತ್ತ ಕಲೆಹಾಕಲು ಶ್ರಮಿಸಿದ್ದಾರೆ. ನಿಧಾನಗತಿಯ ವಿಕೆಟ್‌ನ ಲಾಭವನ್ನು ಪಡೆಯಲು ನಾವು ನಿರ್ಧರಿಸಿದ್ದೆವು, ನಾವು ಅಂದುಕೊಂಡಂತೆ ಯಾವುದೂ ಸಹ ನಡೆದಿರಲಿಲ್ಲ. ಪಂದ್ಯದ ಸೋಲಿನಿಂದಾಗಿ ನಾವು ಪಾಠ ಕಲಿತಿದ್ದೇವೆ, ಅಲ್ಲದೆ ಸೋಲಿನ ತಪ್ಪುಗಳನ್ನು ತಿದ್ದಿಕೊಂಡು ಮುಂದುವರಿಯುತ್ತೇವೆ' ಎಂದು ಲಖನೌ ತಂಡದ ನಾಯಕ ರಿಷಭ್ ಪಂತ್ ಬೇಸರ ವ್ಯಕ್ತಪಡಿಸಿದ್ದಾರೆ. ಮಂಗಳವಾರ ತನ್ನ ನಾಯಕತ್ವದ ಲಖನೌ ತಂಡವು ಪಂಜಾಬ್ ಕಿಂಗ್ಸ್ ವಿರುದ್ಧದ ಸೋಲಿನ ಬಳಿಕ ತಮ್ಮ ನಿರಾಶೆಯನ್ನು ಈ ರೀತಿ ಪಂತ್ ವ್ಯಕ್ತಪಡಿಸಿದರಲ್ಲದೆ, ಮುಂದಿನ ಪಂದ್ಯಗಳಿಗೆ ಉತ್ತಮವಾಗಿ ಸಿದ್ಧರಾಗುವ ಆತ್ಮವಿಶ್ವಾಸನ್ನೂ ಇರಿಸಿಕೊಂಡಿದ್ದಾರೆ.

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	02	02	00	04
ಡೆಲ್ಲಿ	02	02	00	04
ಬೆಂಗಳೂರು	03	02	01	04
ಗುಜರಾತ್	03	02	01	04
ಮುಂಬೈ	03	01	02	02
ಲಖನೌ	03	01	02	02
ಚೆನ್ನೈ	03	01	02	02
ಹೈದರಾಬಾದ್	03	01	02	02
ರಾಜಸ್ಥಾನ್	03	01	02	02
ಕೋಲ್ಕತ್ತಾ	03	01	02	02

ಸ್ಕೋರ್ ಬೋರ್ಡ್

169/8 (20 ಓವರ್)

ಆರ್‌ಸಿಬಿ			
ಸಾಲ್ಟ್	ಬೌಲರ್ ▸▸ ಸಿರಾಜ್	14	13
ಕೊಹ್ಲಿ	ಬೌಲರ್ ▸▸ ಅರ್ಷದ್, ಕ್ಯಾಚ್ ▸▸ ಪ್ರಸಿದ್ಧ್	7	6
ಪಡಿಕ್ಕಲ್	ಬೌಲರ್ ▸▸ ಸಿರಾಜ್	4	3
ಪಾಟಿದಾರ್	ಎಲ್‌ಬಿಡಬ್ಲ್ಯು ▸▸ ಬೌಲರ್ ▸▸ ಇಶಾಂತ್	12	12
ಜಿತೇಶ್	ಬೌಲರ್ ▸▸ ಕಿಶೋರ್, ಕ್ಯಾಚ್ ▸▸ ತೆವಾಟಿಯಾ	33	21
ಪಾಂಡ್ಯ	ಕ್ಯಾಚ್, ಬೌಲ್ಡ್ ಕಿಶೋರ್	5	5
ಡೇವಿಡ್	ಬೌಲರ್ ▸▸ ಪ್ರಸಿದ್ಧ್	32	18
ಭುವನೇಶ್ವರ್	(ನಾಟೌಟ್)	1	2

ಗುಜರಾತ್ ಟೈಟಾನ್ಸ್	ಓವರ್	ರನ್	ವಿಕೆಟ್
ಸಿರಾಜ್	4	19	3
ಅರ್ಷದ್	2	17	1
ಪ್ರಸಿದ್ಧ್	4	26	1
ಇಶಾಂತ್	2	27	1
ಕಿಶೋರ್	4	22	2
ರಶೀದ್	4	54	0

ಆರ್‌ಸಿಬಿ-ಬೌಲಿಂಗ್	ಓವರ್	ರನ್	ವಿಕೆಟ್
ಭುವನೇಶ್ವರ್	4	23	1
ಪಾಂಡ್ಯ	3	34	0
ರಾಸಿಖ್	3	35	0
ಯಶ್	3	20	0
ಲಿವಿಂಗ್‌ಸ್ಟೋನ್	1	12	0
ಹ್ಯಾಝಲ್‌ವುಡ್	3.5	43	1

170/2 (17.5 ಓವರ್)

ಗುಜರಾತ್ ಟೈಟಾನ್ಸ್			
ಸುದರ್ಶನ್	ಹ್ಯಾಝಲ್‌ವುಡ್, ಕ್ಯಾಚ್ ▸▸ ಜಿತೇಶ್	49	36
ಗಿಲ್	ಬೌಲರ್ ▸▸ ಭುವನೇಶ್ವರ್, ಕ್ಯಾಚ್ ▸▸ ಲಿವಿಂಗ್‌ಸ್ಟೋನ್	14	14
ಬಟ್ಲರ್	ನಾಟೌಟ್*	73	39
ರುಥರ್‌ಫೋರ್ಡ್	ನಾಟೌಟ್*	30	18

ಸಿರಾಜ್ ಮಾರಕ ದಾಳಿಗೆ ಆರ್‌ಸಿಬಿ ತತ್ತರ | ಜೋಸ್ ಬಟ್ಲರ್ ಅಮೋಘ ಬ್ಯಾಟಿಂಗ್ | ಲಿವಿಂಗ್‌ಸ್ಟೋನ್ ಅರ್ಧ ಶತಕ ವ್ಯರ್ಥ

ತವರಿನಲ್ಲಿ ಆರ್‌ಸಿಬಿಗೆ ಸೋಲಿನ ಕಹಿ

ಬೆಂಗಳೂರು: ಮೊಹಮ್ಮದ್ ಸಿರಾಜ್ ಹಾಗೂ ಕನ್ನಡಿಗ ಪ್ರಸಿಧ್ ಕೃಷ್ಣ ಅವರ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿದ ಆರ್‌ಸಿಬಿ ತಂಡವು ತನ್ನ ತವರು ಕ್ರೀಡಾಂಗಣವಾದ ಎಂ. ಚಿನ್ನಸ್ವಾಮಿ ಮೈದಾನದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಮೊತ್ತ ಮೊದಲ ಬಾರಿಗೆ ಹಿನ್ನಡೆಯನ್ನು ಅನುಭವಿಸಿ, ನೆರೆದಿದ್ದ ಸಾವಿರಾರು ಪ್ರೇಕ್ಷಕರಲ್ಲಿ ನಿರಾಶೆ ಮೂಡಿಸಿತು. ಈಗಾಗಲೇ ಎರಡು ಪಂದ್ಯಗಳನ್ನು ಗೆದ್ದು ಬೀಗಿದ್ದ ಆರ್‌ಸಿಬಿ ತಂಡದ ವಿರುದ್ಧ ಗುಜರಾತ್ ಟೈಟಾನ್ಸ್ ತಂಡವು 8 ವಿಕೆಟ್‌ಗಳ ಭರ್ಜರಿ ಜಯವನ್ನು ದಾಖಲಿಸಿತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಆರ್‌ಸಿಬಿ 2ನೇ ಓವರ್‌ನಲ್ಲಿ ವಿರಾಟ್ ಕೊಹ್ಲಿಯ ವಿಕೆಟ್ ಕಳೆದುಕೊಂಡಿತು. ಕಳೆದ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದ್ದ ವಿರಾಟ್ ಕೊಹ್ಲಿ ಬುಧವಾರ ಕೂಡ ಬೆಂಗಳೂರಿನಲ್ಲಿ ಕೇವಲ 5 ರನ್ ಗಳಿಸಿ ಅರ್ಷದ್ ಖಾನ್ ಬೌಲಿಂಗ್‌ನಲ್ಲಿ ಪ್ರಸಿಧ್ ಕೃಷ್ಣಗೆ ಕ್ಯಾಚ್ ನೀಡಿ ಔಟ್ ಆದರು. ದೇವದತ್ ಪಡಿಕ್ಕಲ್ 4 ರನ್ ಗಳಿಸಿದ್ದಾಗ ಮೊಹಮ್ಮದ್ ಸಿರಾಜ್ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು, ಅದಾದ ಬಳಿಕ ಸಿರಾಜ್ ಬೌಲಿಂಗ್ ನಲ್ಲಿ ಸಾಲ್ಟ್ 14 ರನ್ ಗಳಿಸಿ ಪೆವಿಲಿಯನ್‌ಗೆ ತೆರಳಿದರು. ನಾಯಕ ರಜತ್ ಪಟಿದಾರ್ 12 ರನ್ ಗಳಿಸಿದ್ದಾಗ ಇಶಾಂತ್ ಶರ್ಮಾ ಎಸೆತದಲ್ಲಿ ಎಲ್ ಬಿಡಬ್ಲ್ಯೂ ಆಗಿ ಔಟ್ ಆದರು. 21 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ 33 ರನ್ ಗಳಿಸಿದ್ದ ಜಿತೇಶ್ ಶರ್ಮಾ ಸ್ಪಿನ್ನರ್ ಸಾಯಿ ಕಿಶೋರ್ ಬೌಲಿಂಗ್‌ನಲ್ಲಿ ತೆವಾಟಿಯಾಗೆ ಕ್ಯಾಚ್ ನೀಡಿ ಪೆವಿಲಿಯನ್‌ಗೆ ತೆರಳಿದರು.

ಆದರೆ ಕೊನೆಯಲ್ಲಿ ಅಬ್ಬರಿಸಿದ ಲಿವಿಂಗ್‌ಸ್ಟೋನ್ 40 ಎಸೆತಗಳಲ್ಲಿ 1 ಬೌಂಡರಿ 4 ಸಿಕ್ಸರ್‌ಗಳ ನೆರವಿನಿಂದ 54 ರನ್ ಗಳಿಸಿದರೆ, ಟಿಮ್ ಡೇವಿಡ್ 18 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಸೇರಿ 32 ರನ್ ಗಳಿಸಿ ಗುಜರಾತ್ ಟೈಟಾನ್ಸ್‌ಗೆ 170ರ ಗುರಿ ನೀಡಲು ನೆರವಾದರು.

ಈ ಮೊದಲು ಆರ್‌ಸಿಬಿಯಲ್ಲೇ ಇದ್ದು, ಈ ಆವೃತ್ತಿಯಲ್ಲಿ ಗುಜರಾತ್ ಟೈಟನ್ಸ್ ಪಾಲಾದ ಹೈದರಾಬಾದ್ ಎಕ್ಸ್ ಪ್ರೆಸ್ ಎಂಬ ಹೆಗ್ಗಳಿಕೆಗೆ ಪಾತ್ರರಾದ ಮೊಹಮ್ಮದ್ ಸಿರಾಜ್ 19 ರನ್ ನೀಡಿ 3 ವಿಕೆಟ್‌ಗಳನ್ನು ಕಬಳಿಸಿದರು. ಸಾಯಿ ಕಿಶೋರ್ 22 ರನ್ ನೀಡಿ 2 ವಿಕೆಟ್ ಪಡೆದರೆ, ಅರ್ಶದ್ ಖಾನ್, ಪ್ರಸಿದ್ಧ್ ಕೃಷ್ಣ, ಇಶಾಂತ್ ಶರ್ಮಾ ತಲಾ ಒಂದು ವಿಕೆಟ್ ಪಡೆದರು.

170ರನ್‌ಗಳ ಗುರಿ ಬೆನ್ನಟ್ಟಿದ ಗುಜರಾತ್ ಟೈಟನ್ಸ್ ಆರಂಭದಲ್ಲೇ ನಾಯಕ ಶುಭ್‌ಮನ್ ಗಿಲ್ ಅವರ ವಿಕೆಟ್ ಕಳೆದುಕೊಂಡಿತು. 14 ರನ್‌ಗಳಿಸಿದ್ದ ಗಿಲ್, ಭುವನೇಶ್ವರ್ ಕುಮಾರ್ ಬೌಲಿಂಗ್‌ನಲ್ಲಿ ಲಿವಿಂಗ್‌ಸ್ಟೋನ್‌ಗೆ ಕ್ಯಾಚ್ ನೀಡಿ ಔಟ್ ಆದರು. ಆದರೆ ಆ ಸಂಭ್ರಮ ಆರ್‌ಸಿಬಿ ಪಾಳಯದಲ್ಲಿ ಹೆಚ್ಚು ಸಮಯ ಉಳಿಯಲಿಲ್ಲ. ಬಟ್ಲರ್ ಮತ್ತು ಸುದರ್ಶನ್ ಆರ್‌ಸಿಬಿ ಬೌಲರ್‌ಗಳ ಬೆವರಿಳಿಸಿದರು. ಈ ಜೋಡಿ 2ನೇ ವಿಕೆಟ್‌ಗೆ 47 ಎಸೆತಗಳಲ್ಲಿ 75 ರನ್‌ಗಳ ಜತೆಯಾಟ ನೀಡಿದರು. 36 ಎಸೆತಗಳಲ್ಲಿ 7 ಬೌಂಡರಿ, 1 ಸಿಕ್ಸರ್ ಸಹಿತ 49 ರನ್ ಗಳಿಸಿದ್ದ ಸಾಯಿ ಸುದರ್ಶನ್ ಹ್ಯಾಝಲ್‌ವುಡ್ ಬೌಲಿಂಗ್ ನಲ್ಲಿ ಜಿತೇಶ್ ಶರ್ಮಾಗೆ ಕ್ಯಾಚ್ ನೀಡಿ ಔಟ್ ಆದರು.

ಆದರೆ ಬಟ್ಲರ್, ರುಥರ್‌ಫೋರ್ಡ್ ಜೊತೆ ಸೇರಿ ಅಜೇಯ 63 ರನ್‌ಗಳ ಜೊತೆಯಾಟದ ಮೂಲಕ ತಂಡವನ್ನು ಗೆಲುವಿನಂಚಿಗೆ ದಾಟಿಸಿದರು. ಬಟ್ಲರ್ ಎಸೆತಗಳಲ್ಲಿ 39 ಎಸೆತಗಳಲ್ಲಿ 5 ಬೌಂಡರಿ, 6 ಸಿಕ್ಸರ್ ಗಳ ಸಹಿತ 73 ರನ್ ಗಳಿಸಿದರೆ, ರುಥರ್‌ಫೋರ್ಡ್ 18 ಎಸೆತಗಳಲ್ಲಿ 1 ಬೌಂಡರಿ, 3 ಸಿಕ್ಸರ್‌ಗಳ ಸಹಿತ ಅಜೇಯ 30 ರನ್ ಗಳಿಸಿ ತಂಡಕ್ಕೆ ಗೆಲುವನ್ನು ತಂದುಕೊಟ್ಟರು.

ಆರ್‌ಸಿಬಿ ಸೋಲಿಗೆ ಕಾರಣವಾದ ಅಂಶಗಳು

- ಪಂದ್ಯದಲ್ಲಿ ಟಾಸ್ ನಿರ್ಣಾಯಕ ಪಾತ್ರ ವಹಿಸಿದ್ದು, ಯಾವುದೇ ತಂಡ ಟಾಸ್ ಗೆದ್ದರೂ ಫೀಲ್ಡಿಂಗ್ ತೆಗೆದುಕೊಳ್ಳುವುದು ಖಚಿತವಾಗಿತ್ತು. ಆ ಅದೃಷ್ಟ ಆರ್‌ಸಿಬಿ ಪಾಲಾಗಲಿಲ್ಲ.
- ಮೊಹಮ್ಮದ್ ಸಿರಾಜ್ ಕಳೆದ 7 ಸೀಸನ್‌ಗಳಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರವಾಗಿ ಆಡಿದ್ದ ಕಾರಣ ಸಿರಾಜ್‌ಗೆ ಪಿಚ್ ಹೇಗೆ ವರ್ತಿಸುತ್ತದೆ ಎಂಬುದನ್ನು ಅರಿತಿದ್ದರಿಂದ ಬೆಂಗಳೂರು ಬ್ಯಾಟರ್ಸ್‌ಗಳಿಗೆ ಅವರು ಸಿಂಹಸ್ವಪ್ನರಾದರು.
- ಚಿನ್ನಸ್ವಾಮಿ ಸ್ಟೇಡಿಯಂ ಬ್ಯಾಟರ್ಸ್‌ಗಳ ಸ್ವರ್ಗ, ಹಾಗಾಗಿ ಕನಿಷ್ಠ 200 ರನ್ ಸಿಡಿಸಿದರೆ ಮಾತ್ರ ವಿರೋಧಿ ತಂಡದ ಮೇಲೆ ಒತ್ತಡ ಹೇರಬಹುದಿತ್ತು. ಆದರೆ ಬೃಹತ್ ಸ್ಕೋರ್ ಕಲೆ ಹಾಕುವಲ್ಲಿ ಆರ್‌ಸಿಬಿ ವಿಫಲವಾದದ್ದು ತಂಡದ ಸೋಲಿಗೆ ಕಾರಣವಾಯಿತು.
- ಆರ್‌ಸಿಬಿ ಮೊದಲ 6 ಓವರ್‌ಗಳಲ್ಲಿ ಪ್ರಮುಖ 4 ವಿಕೆಟ್ ಕಳೆದುಕೊಂಡಿತು, ಇದರಿಂದ ತಂಡ ಬೃಹತ್ ಮೊತ್ತ ಪೇರಿಸುವಲ್ಲಿ ವಿಫಲವಾಯಿತು.
- ಕೊಹ್ಲಿ, ಫಿಲ್ ಸಾಲ್ಟ್, ಪಡಿಕ್ಕಲ್ ಹಾಗೂ ಪಾಟಿದಾರ್ ಕ್ರೀಸ್‌ಗೆ ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿಕೊಂಡರು, ಇದರಿಂದಾಗಿ ಬೃಹತ್ ಮೊತ್ತ ಸೇರಿಸುವ ಆರ್‌ಸಿಬಿ ಕನಸಿಗೆ ಕೊಳ್ಳಿ ಇಟ್ಟಂತಾಯಿತು.

ಫೋಟೋ: ಸುಧಾಕರ್ ದೇವರಾಜ್

ದಿಗ್ವೇಶ್ ರಾಠಿಗೆ ದಂಡ

ಲಖನೌ: ಮಂಗಳವಾರ ಏಕಾನ ಕ್ರೀಡಾಂಗಣದಲ್ಲಿ ಪಂಜಾಬ್ ಮತ್ತು ಲಕ್ನೋ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ಆರಂಭಿಕ ಆಟಗಾರ ಪ್ರಿಯಾಂಶ್ ಆರ್ಯ ಅವರನ್ನು ಔಟ್ ಮಾಡಿದ ಬಳಿಕ ನೋಟ್ ಬುಕ್ ಸೆಲೆಬ್ರೇಷನ್ ಮಾಡಿದ್ದ ಲಕ್ನೋ ಸ್ಪಿನ್ನರ್ ದಿಗ್ವೇಶ್ ರಾಠಿಗೆ ಐಪಿಎಲ್ ಆಡಳಿತ ಮಂಡಳಿ ದಂಡದ ಬಿಸಿ ಮುಟ್ಟಿಸಿದೆ.

ರಾಠಿಗೆ ಪಂದ್ಯ ಶುಲ್ಕದ ಶೇ.25ರಷ್ಟು ದಂಡ ವಿಧಿಸಲಾಗಿದೆ, ಅಲ್ಲದೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ. ಸದ್ಯ ಒಂದು ಡಿಮೆರಿಟ್ ಪಾಯಿಂಟ್ ಪಡೆದಿರುವ ದಿಗ್ವೇಶ್ ರಾಠಿ, ಮೂರು ವರ್ಷದೊಳಗೆ 4 ಡಿಮೆರಿಟ್ ಪಾಯಿಂಟ್ ಪಡೆದರೆ ಒಂದು ಪಂದ್ಯದಿಂದ ನಿಷೇಧಕ್ಕೆ ಒಳಗಾಗಲಿದ್ದಾರೆ. ಈ ಹಿಂದೆ ವಿರಾಟ್ ಕೊಹ್ಲಿ ಮತ್ತು ಗೌತಮ್ ಗಂಭೀರ್, ನಿತೀಶ್ ರಾಣಾ ಮತ್ತು ಹೃತಿಕ್ ಶೋಕೀನ್ ಮೈದಾನದಲ್ಲಿ ಜಗಳವಾಡಿಕೊಂಡು ದಂಡ ಕಟ್ಟಿದ್ದರು, ಇದೀಗ ಈ ಪಟ್ಟಿಗೆ ದಿಗ್ವೇಶ್ ರಾಠಿ ಸೇರ್ಪಡೆಗೊಂಡಿದ್ದಾರೆ.

2-0 ಅಂತರದಲ್ಲಿ ಏಕದಿನ ಸರಣಿ ವಶಪಡಿಸಿಕೊಂಡ ನ್ಯೂಜಿಲೆಂಡ್

ಪಾಕ್‌ಗೆ ಏಕದಿನದಲ್ಲೂ ಸರಣಿ ಸೋಲು

ಹ್ಯಾಮಿಲ್ಟನ್: ನ್ಯೂಜಿಲೆಂಡ್ ಪ್ರವಾಸದಲ್ಲಿರುವ ಪಾಕಿಸ್ತಾನ ಕ್ರಿಕೆಟ್ ತಂಡ ಮೊದಲಿಗೆ ಟಿ20ಐ ಸರಣಿಯಲ್ಲಿ ಹೀನಾಯ ಸೋಲು ಅನುಭವಿಸಿದ್ದು, ಇದೀಗ ಏಕದಿನ ಸರಣಿಯನ್ನೂ ಕಳೆದುಕೊಂಡಿದೆ. ಮಿಚೆಲ್ ಹೇ ಅವರ ಬಿರುಸಿನ ಬ್ಯಾಟಿಂಗ್ ಮತ್ತು ಬೆನ್ ಸಿಯರ್ಸ್ (ಐದು ವಿಕೆಟ್) ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ನ್ಯೂಜಿಲೆಂಡ್ ತಂಡವು ಪಾಕಿಸ್ತಾನ ತಂಡವನ್ನು 84 ರನ್‌ಗಳಿಂದ ಮಣಿಸಿದೆ. ಇದರೊಂದಿಗೆ ಆತಿಥೇಯ ನ್ಯೂಜಿಲೆಂಡ್ ತಂಡ ಇನ್ನೂ ಒಂದು ಪಂದ್ಯ ಬಾಕಿ ಇರುವಾಗಲೇ ಏಕದಿನ ಸರಣಿಯನ್ನು 2-0 ಅಂತರದಲ್ಲಿ ವಶಪಡಿಸಿಕೊಂಡಿದೆ.

ಇಲ್ಲಿನ ಸೆಡಾನ್ ಪಾರ್ಕ್‌ನಲ್ಲಿ ನಡೆದಿದ್ದ ಎರಡನೇ ಏಕದಿನ ಪಂದ್ಯದಲ್ಲಿ ನ್ಯೂಜಿಲೆಂಡ್ ನೀಡಿದ್ದ 293 ರನ್ ಗಳ ಗುರಿಯನ್ನು ಬೆಂಬತ್ತಿದ್ದ ಪಾಕಿಸ್ತಾನ ತಂಡ ಅಗ್ರ ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದ 41.2 ಓವರ್‌ಗಳಾಗುವಷ್ಟರಲ್ಲಿಯೇ 208 ರನ್‌ಗಳಿಗೆ ಆಲೌಟ್ ಆಯಿತು. ಆ ಮೂಲಕ ದೊಡ್ಡ ಅಂತರದಲ್ಲಿ ಪ್ರವಾಸಿ ಪಾಕಿಸ್ತಾನ ತಂಡ ಸೋಲು ಅನುಭವಿಸಿದೆ.

ನ್ಯೂಜಿಲೆಂಡ್ ತಂಡದ ಬೌಲರ್‌ಗಳ ಮಾರಕ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸುವಲ್ಲಿ ಪಾಕಿಸ್ತಾನದ ಬಹುತೇಕ ಬ್ಯಾಟ್ಸ್‌ಮನ್‌ಗಳು ವಿಫಲರಾದರು. ಆರಂಭಿಕ ದಾಂಡಿಗರಾದ ಅಬ್ದುಲ್ಲಾ ಶಫಿಕ್ 1, ಇಮಾಮ್ ಉಲ್ ಹಕ್ 3, ಬಾಬರ್ ಆಝುಮ್ 1, ಕ್ಯಾಪ್ಟನ್ ಮೊಹಮ್ಮದ್ ರಿಝ್ವಾನ್ 5, ಸಲ್ಮಾನ್ ಅಘಾ 9, ಮೊಹಮ್ಮದ್ ವಸಿಂ ಜೂನಿಯರ್ 1, ಹ್ಯಾರಿಸ್ ರೌಫ್ 3, ಅಕಿಫ್ ಜಾವೇದ್ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆ ಮೂಲಕ ಈ ಎಲ್ಲಾ ಬ್ಯಾಟರ್ ಗಳು ಎರಡಂಕಿ ವೈಯಕ್ತಿಕ ಮೊತ್ತವನ್ನು ಕಲೆ ಹಾಕುವಲ್ಲಿ ವಿಫಲರಾದರು.

ಫಹೀಮ್-ನಸೀಮ್ ಜತೆಯಾಟ: ಫಹೀಮ್ ಅಶ್ರಫ್ ಪಾಕಿಸ್ತಾನದ ಪರ ವೈಯಕ್ತಿಕ ಗರಿಷ್ಠ 73 ರನ್ ಗಳಿಸಿದರು ಮತ್ತು ಅವರು ನಸೀಮ್ ಶಾ ಅವರೊಂದಿಗೆ 9ನೇ ವಿಕೆಟ್‌ಗೆ 60 ರನ್‌ಗಳ ಜತೆಯಾಟವನ್ನು ಪ್ರದರ್ಶಿಸಿದರು. ನಸೀಮ್ ಶಾ ಕೂಡ ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿ 51 ರನ್ ಗಳಿಸಿದ್ದು, ಅದು ಇವರಿಬ್ಬರ ಮೊದಲ ಏಕದಿನ ಅರ್ಧಶತಕವಾಗಿದೆ. ನ್ಯೂಜಿಲೆಂಡ್ ಪರ ವಿಲ್ ಒ'ರೂರ್ಕ್ ಮೊದಲ ಆರು ಓವರ್‌ಗಳಲ್ಲಿ ಎಂಟು ರನ್ ನೀಡಿ ಒಂದು ವಿಕೆಟ್ ಪಡೆದರು, ಚೊಚ್ಚಲ ಏಕದಿನ ಪಂದ್ಯವನ್ನಾಡಿದ ಸಿಯರ್ಸ್ ಐದು ವಿಕೆಟ್ ಪಡೆದರೆ, ಜಾಕೋಬ್ ಡಫಿ ಮೂರು ವಿಕೆಟ್ ಪಡೆದರು.

292 ರನ್ ಕಲೆ ಹಾಕಿದ್ದ ಕಿವೀಸ್: ಇದಕ್ಕೂ ಮುನ್ನ ನ್ಯೂಜಿಲೆಂಡ್ ತನ್ನ ಪಾಲಿನ 50 ಓವರ್‌ಗಳಿಗೆ 8 ವಿಕೆಟ್ ನಷ್ಟಕ್ಕೆ 292 ರನ್ ಗಳಿಸಿತು, ಇದರಲ್ಲಿ ಮಿಚ್ ಹೇ 99 ರನ್ ಕೊಡುಗೆ ನೀಡಿದರು. ಅವರು ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಎರಡು ಬೌಂಡರಿಗಳೊಂದಿಗೆ 22 ರನ್ ಗಳಿಸಿದರು ಆದರೆ ಬರೀ ಒಂದು ರನ್‌ನಿಂದ ಶತಕವನ್ನು ತಪ್ಪಿಸಿಕೊಂಡರು. ನೇಪಿಯರ್‌ನಲ್ಲಿ ನಡೆದಿದ್ದ ಮೊದಲನೇ ಪಂದ್ಯದಲ್ಲಿ ನ್ಯೂಜಿಲೆಂಡ್ 73 ರನ್‌ಗಳಿಂದ ಗೆದ್ದಿತ್ತು. ಮೂರನೇ ಪಂದ್ಯ ಶನಿವಾರ ಮೌಂಟ್ ಮೌಂಗನುಯಿಯಲ್ಲಿ ನಡೆಯಲಿದೆ.

ಮುಂಬೈ ತೊರೆದ ಜೈಸ್ವಾಲ್

ದೆಹಲಿ: ಟೀಮ್ ಇಂಡಿಯಾದ ಸ್ಟಾರ್ ಬ್ಯಾಟರ್ ಯಶಸ್ವಿ ಜೈಸ್ವಾಲ್ ಮುಂಬೈ ತಂಡವನ್ನು ತೊರೆದು, ಮುಂಬರುವ ದೇಶೀಯ ಸೀಸನ್‌ನಲ್ಲಿ ಗೋವಾ ಪರ ಕಣಕ್ಕಿಳಿಯಲು ನಿರ್ಧರಿಸಿದ್ದಾರೆ. ಈಗಾಗಲೇ ಅವರು ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ಗೆ ಎನ್‌ಒಸಿಗಾಗಿ ಪತ್ರ ಬರೆದಿದ್ದಾರೆ.

'ಮಂಗಳವಾರ ನಿರಾಕ್ಷೇಪಣಾ ಪ್ರಮಾಣಪತ್ರ ಕೋರಿ ಇಮೇಲ್ ಬಂದಿದೆ, ಅವರು ತಮ್ಮ ಇಮೇಲ್‌ನಲ್ಲಿ ವೈಯಕ್ತಿಕ ಕಾರಣಗಳಿಂದಾಗಿ ಮುಂಬರುವ ಸೀಸನ್ ನಲ್ಲಿ ಗೋವಾ ರಾಜ್ಯ ತಂಡದ ಪರ ಕಣಕ್ಕಿಳಿಯುವುದಾಗಿ ತಿಳಿಸಿದ್ದಾರೆ' ಎಂದು ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ನ ಮೂಲಗಳು ತಿಳಿಸಿವೆ.

ಗೋವಾ ಕ್ರಿಕೆಟ್ ಅಸೋಸಿಯೇಷನ್ ಅಧಿಕಾರಿಗಳು ಸಹ ಈ ಬೆಳವಣಿಗೆಯನ್ನು ದೃಢಪಡಿಸಿದ್ದಾರೆ. ನಾವು ಯಶಸ್ವಿ ಜೈಸ್ವಾಲ್ ಅವರೊಂದಿಗೆ ಮಾತನಾಡಿದ್ದೇವೆ, ಅವರು ಮುಂಬರುವ ದೇಶೀಯ ಸೀಸನ್‌ನಲ್ಲಿ ಗೋವಾ ಪರ ಆಡಲಿದ್ದಾರೆ ಎಂದು ತಿಳಿಸಿದ್ದಾರೆ.

ಮುಂಬೈ ಕ್ರಿಕೆಟ್ ಅಸೋಸಿಯೇಷನ್ ?ನಿಂದ ನಿರಾಕ್ಷೇಪಣಾ ಪ್ರಮಾಣಪತ್ರ ಸಿಕ್ಕಿಲ್ಲ. ಎನ್‌ಒಸಿ ಲೆಟರ್ ಸಿಕ್ಕ ಬಳಿಕ ಅವರನ್ನು ಮುಂದಿನ ಸೀಸನ್‌ಗೆ ಗೋವಾ ತಂಡದಲ್ಲಿ ಸೇರಿಸಿಕೊಳ್ಳಲು ನಿರ್ಧರಿಸಿದ್ದೇವೆ ಎಂದು ಜಿಸಿಎ ಕಾರ್ಯದರ್ಶಿ ಶಂಬಾ ನಾಯಕ್ ದೇಸಾಯಿ ತಿಳಿಸಿದ್ದಾರೆ.

ಇದಕ್ಕೂ ಮುನ್ನ ಮುಂಬೈ ಪರ ಕಣಕ್ಕಿಳಿದಿದ್ದ ಅರ್ಜುನ್ ತೆಂಡೂಲ್ಕರ್ ಅವರು ಗೋವಾ ಪರ ವಲಸೆ ಹೋಗಿದ್ದರು, ಇದೀಗ ಯಶಸ್ವಿ ಜೈಸ್ವಾಲ್ ಕೂಡ ಮುಂಬೈ ತಂಡವನ್ನು ತೊರೆಯಲು ನಿರ್ಧರಿಸಿದ್ದಾರೆ.

ಯಶಸ್ವಿ ಜೈಸ್ವಾಲ್ 2019ರಲ್ಲಿ ಮುಂಬೈ ಪರ ಪಾದಾರ್ಪಣೆ ಮಾಡಿದ್ದರು. ಛತ್ತೀಸ್‌ಗಢ ವಿರುದ್ಧ ತಮ್ಮ ಮೊದಲ ಪ್ರಥಮ ದರ್ಜೆ ಪಂದ್ಯವಾಡಿದ್ದ ಅವರು, ಈವರೆಗೆ 36 ಪಂದ್ಯಗಳಲ್ಲಿ ಕಾಣಿಸಿಕೊಂಡಿದ್ದಾರೆ. 60ಕ್ಕಿಂತ ಹೆಚ್ಚಿನ ಸರಾಸರಿಯಲ್ಲಿ ಒಟ್ಟು 3712 ರನ್ ಗಳಿಸಿದ್ದಾರೆ.

ಇರ್ಫಾನ್ ಪಠಾಣ್‌ಗೆ ಪಂಜಾಬ್ ಕಿಂಗ್ಸ್ ನೆಚ್ಚಿನ ತಂಡ

ದೆಹಲಿ: ಭಾರತ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಇರ್ಫಾನ್ ಪಠಾಣ್ ಅವರು 2008ರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿಯೇ ವಿಶ್ವದ ಅತ್ಯಂತ ಶ್ರೀಮಂತ ಫ್ರಾಂಚೈಸಿ ಲೀಗ್‌ಗೆ ಪದಾರ್ಪಣೆ ಮಾಡಿದ್ದರು. ಅವರು ತಮ್ಮ ಐಪಿಎಲ್ ವೃತ್ತಿ ಜೀವನದಲ್ಲಿ ಹಲವು ಫ್ರಾಂಚೈಸಿಗಳ ಪರ ಆಡಿದ್ದಾರೆ. ಇದೀಗ ಅವರು ತಮ್ಮ ನೆಚ್ಚಿನ ಐಪಿಎಲ್ ತಂಡವನ್ನು ಆಯ್ಕೆ ಮಾಡಿದ್ದಾರೆ. ತನ್ನ ನೆಚ್ಚಿನ ಐಪಿಎಲ್ ತಂಡ ಪಂಜಾಬ್ ಕಿಂಗ್ಸ್ ಎಂದು ಹೇಳಿದ ಪಠಾಣ್, ಅದಕ್ಕೆ ಬಲವಾದ ಕಾರಣವೇನೆಂಬುದನ್ನು ಕೂಡ ವಿವರಿಸಿದ್ದಾರೆ.

ಇರ್ಫಾನ್ ಪಠಾಣ್ ಅವರು 2008ರಿಂದ 2017ರವರೆಗೆ ವಿವಿಧ ಫ್ರಾಂಚೈಸಿಗಳ ಪರ ಐಪಿಎಲ್ ಆಡಿದ್ದಾರೆ. ಕಿಂಗ್ಸ್ ಇಲೆವೆನ್ ಪಂಜಾಬ್ (ಈಗಿನ ಪಂಜಾಬ್ ಕಿಂಗ್ಸ್), ಡೆಲ್ಲಿ ಡೇರ್ ಡೆವಿಲ್ಸ್ (ಡೆಲ್ಲಿ ಕ್ಯಾಪಿಟಲ್ಸ್), ಸನ್‌ರೈಸರ್ಸ್ ಹೈದರಾಬಾದ್, ರೈಸಿಂಗ್ ಪುಣೆ ಸೂಪರ್ ಜಯಂಟ್ಸ್ ಹಾಗೂ ಗುಜರಾತ್ ಲಯನ್ಸ್ ತಂಡಗಳ ಪರ ಆಡಿದ್ದಾರೆ. ಇವರು 2008ರಿಂದ 2010ರ ವರೆಗೆ ಪಂಜಾಬ್ ಕಿಂಗ್ಸ್ ಪರ ಅತ್ಯುತ್ತಮ ದಾಖಲೆಗಳನ್ನು ಹೊಂದಿದ್ದಾರೆ. 'ನನ್ನ ನೆಚ್ಚಿನ ಐಪಿಎಲ್ ತಂಡ ಪಂಜಾಬ್ ಕಿಂಗ್ಸ್, ಏಕೆಂದರೆ ಐಪಿಎಲ್ ಟೂರ್ನಿಯಲ್ಲಿ ನಾನು ಪ್ರತಿನಿಧಿಸಿದ ಮೊದಲ ತಂಡ ಪಂಜಾಬ್ ಕಿಂಗ್ಸ್, ಆ ತಂಡದ ಪರ ಆಡಿದ ನೆನಪುಗಳು ಇನ್ನೂ ನನ್ನಲ್ಲಿ ಇವೆ. ತಂಡದ ಓನರ್ ಪ್ರೀತಿ ಝಿಂಟಾ ಅವರು ಅಸಾಧಾರಣ ವ್ಯಕ್ತಿ ಹಾಗೂ ಇತರೆ ಓನರ್‌ಗಳು ಕೂಡ ಅದ್ಭುತವಾಗಿದ್ದರು. ಪಂಜಾಬ್ ಕಿಂಗ್ಸ್ ತಂಡವನ್ನು ಪ್ರತಿನಿಧಿಸಿದ ಆರಂಭಿಕ ಮೂರು ವರ್ಷಗಳು ಮೋಜಿನಿಂದ ಕೂಡಿದ್ದವು. ನಾಲ್ಕನೇ ಆವೃತ್ತಿಯಲ್ಲಿಯೂ ಅವರು ನನ್ನನ್ನು ಉಳಿಸಿಕೊಳ್ಳಲು ಬಯಸಿದ್ದರು. ಆದರೆ ಮೆಗಾ ಹರಾಜಿನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಕೊನೆಯವರೆಗೂ ಬಿಡ್ ವಾರ್ ನಡೆಸಿ ನನ್ನನ್ನು ಖರೀದಿಸಲು ಸಾಧ್ಯವಾಗಿರಲಿಲ್ಲ. ತಂಡವನ್ನು ನಾನು ತುಂಬಾ ಇಷ್ಟಪಡುತ್ತೇನೆ ಎಂದು ಇರ್ಫಾನ್ ಪಠಾಣ್ ತಿಳಿಸಿದ್ದಾರೆ.

ಮುಂದಿನ ಪಂದ್ಯಗಳ ಕ್ರಿಕೆಟ್ ವೇಳಾಪಟ್ಟಿ

ದೆಹಲಿ: ತನ್ನ ತವರಿನಲ್ಲಿ ಆಡುವ ಸರಣಿಗಳ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ. ಅಕ್ಟೋಬರ್ 2ರಿಂದ ಪ್ರಾರಂಭವಾಗಿ ಡಿಸೆಂಬರ್ 19 ರವರೆಗೆ ಪಂದ್ಯಗಳು ನಡೆಯಲಿದೆ.

ವೆಸ್ಟ್ ಇಂಡೀಸ್ ವಿರುದ್ಧ ಮೊದಲ ಟೆಸ್ಟ್ ಅಕ್ಟೋಬರ್ 2ರಿಂದ ಅಕ್ಟೋಬರ್ 6ರವರೆಗೆ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಎರಡನೇ ಟೆಸ್ಟ್ ಅಕ್ಟೋಬರ್ 10ರಿಂದ ಅಕ್ಟೋಬರ್ 14ರವರೆಗೆ ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿದೆ.

ವೆಸ್ಟ್ ಇಂಡೀಸ್ ನಂತರ, ಭಾರತ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ಕಣಕ್ಕಿಳಿಯಲಿದೆ. ದಕ್ಷಿಣ ಆಫ್ರಿಕಾ ತಂಡದ ಭಾರತ ಪ್ರವಾಸವು ನವೆಂಬರ್ 14ರಿಂದ ಟೆಸ್ಟ್ ಸರಣಿಯೊಂದಿಗೆ ಪ್ರಾರಂಭವಾಗಲಿದೆ. ಮೊದಲ ಟೆಸ್ಟ್ ಪಂದ್ಯವು ನವೆಂಬರ್ 14ರಂದು ದೆಹಲಿಯಲ್ಲಿ ನಡೆಯಲಿದೆ, ಎರಡನೇ ಮತ್ತು ಅಂತಿಮ ಪಂದ್ಯವು ನವೆಂಬರ್ 22ರಿಂದ ಗುವಾಹಟಿಯಲ್ಲಿ ನಡೆಯಲಿದೆ.

ಏಕದಿನ ಸರಣಿ: ಟೆಸ್ಟ್ ಪಂದ್ಯದ ನಂತರ ಎರಡೂ ತಂಡಗಳ ನಡುವೆ ಏಕದಿನ ಸರಣಿ ನಡೆಯಲಿದೆ. ಏಕದಿನ ಸರಣಿಯಲ್ಲಿ 3 ಪಂದ್ಯಗಳು ನಡೆಯಲಿವೆ. ಮೊದಲ ಪಂದ್ಯ ನವೆಂಬರ್ 30ರಂದು ರಾಂಚಿಯಲ್ಲಿ ನಡೆಯಲಿದೆ. ಎರಡನೇ ಪಂದ್ಯ ಡಿಸೆಂಬರ್ 3ರಂದು ರಾಯ್‌ಪುರದಲ್ಲಿ ನಡೆಯಲಿದೆ. ಮೂರನೇ ಮತ್ತು ಅಂತಿಮ ಪಂದ್ಯ ಡಿಸೆಂಬರ್ 6 ರಂದು ವೈಜಾಕ್‌ನಲ್ಲಿ ನಡೆಯಲಿದೆ.

ಟಿ20 ಸರಣಿ ವೇಳಾಪಟ್ಟಿ: ದಕ್ಷಿಣ ಆಫ್ರಿಕಾದ ಭಾರತ ಪ್ರವಾಸವು ಟಿ20ಐ ಸರಣಿಯೊಂದಿಗೆ ಮುಕ್ತಾಯಗೊಳ್ಳಲಿದೆ. ಡಿಸೆಂಬರ್ 9ರಿಂದ 19ರವರೆಗೆ ನಡೆಯಲಿರುವ ಟಿ20ಐ ಸರಣಿಯಲ್ಲಿ ಒಟ್ಟು 5 ಟಿ20ಐ ಪಂದ್ಯಗಳು ನಡೆಯಲಿವೆ. ಮೊದಲ ಪಂದ್ಯ ಡಿಸೆಂಬರ್ 9ರಂದು ಕಟಕ್‌ನಲ್ಲಿ ನಡೆಯಲಿದೆ. ಎರಡನೇ ಪಂದ್ಯ ಡಿಸೆಂಬರ್ 11ರಂದು ನವದೆಹಲಿಯಲ್ಲಿ ನಡೆಯಲಿದೆ. ಮೂರನೇ ಪಂದ್ಯ ಡಿಸೆಂಬರ್ 14ರಂದು ಧರ್ಮಶಾಲಾದಲ್ಲಿ ನಡೆಯಲಿದೆ. ನಾಲ್ಕನೇ ಪಂದ್ಯ ಡಿಸೆಂಬರ್ 17ರಂದು ಲಕ್ನೋದಲ್ಲಿ ನಡೆಯಲಿದೆ ಮತ್ತು ಐದನೇ ಮತ್ತು ಅಂತಿಮ ಪಂದ್ಯ ಅಹಮದಾಬಾದ್‌ನಲ್ಲಿ ನಡೆಯಲಿದೆ.

ತವರಿನಲ್ಲಿ ರಹಾನೆ ಪಡೆಗೆ ಪುಟಿದೇಳುವ ನಿರೀಕ್ಷೆ | ಕೆಕೆಆರ್‌ಗೆ ಕಮಿನ್ಸ್ ಪಡೆಯ ಸವಾಲು

ಇಂದು ಹೈದರಾಬಾದ್-ಕೋಲ್ಕತ್ತಾ ಸೆಣಸಾಟ

ಕೋಲ್ಕತ್ತಾ: ಇಲ್ಲಿನ ಈಡನ್ ಗಾರ್ಡನ್ಸ್ ಮೈದಾನದಲ್ಲಿ ಇಂದು ನಡೆಯುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು (ಕೆಕೆಆರ್) ಸನ್ ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ತಂಡವನ್ನು ಎದುರಿಸಲಿದೆ. ಕೋಲ್ಕತ್ತಾ ಮತ್ತು ಹೈದರಾಬಾದ್ ತಂಡಗಳು ಈ ವರೆಗೆ ಐಪಿಎಲ್ ನಲ್ಲಿ ಒಟ್ಟು 28 ಪಂದ್ಯಗಳನ್ನು ಆಡಿದ್ದು, 18 ಪಂದ್ಯಗಳಲ್ಲಿ ಕೆಕೆಆರ್ ಗೆಲುವನ್ನು ಕಂಡಿದ್ದು, 9 ಪಂದ್ಯಗಳಲ್ಲಿ ಎಸ್‌ಆರ್‌ಎಚ್ ಜಯ ಗಳಿಸಿದೆ, ಒಂದೆ ಒಂದು ಪಂದ್ಯದಲ್ಲಿ ಮಾತ್ರ ಯಾವುದೇ ಫಲಿತಾಂಶ ಬಂದಿರಲಿಲ್ಲ.

ಈ ಆವೃತ್ತಿಯ ಐಪಿಎಲ್‌ನಲ್ಲಿ ಕೆಕೆಆರ್ ಇದುವರೆಗೆ 3 ಪಂದ್ಯಗಳನ್ನು ಆಡಿದ್ದು 1 ಪಂದ್ಯದಲ್ಲಿ ಮಾತ್ರ ಗೆದ್ದಿದ್ದು, 2 ಪಂದ್ಯಗಳಲ್ಲಿ ಸೋತಿವೆ. ಮಾರ್ಚ್ 22ರಂದು ತವರು ನೆಲದಲ್ಲಿ ನಡೆದಿದ್ದ ಪಂದ್ಯದಲ್ಲಿ ಕೆಕೆಆರ್ ತಂಡವನ್ನು ಆರ್‌ಸಿಬಿ ತಂಡವು ಸೋಲಿಸಿತ್ತು. 174 ರನ್ ಮಾಡಿದ್ದ ಕೆಕೆಆರ್ ಗುರಿಯನ್ನು ಬೆಂಬತ್ತಿದ್ದ ಆರ್‌ಸಿಬಿ 16.2 ಓವರ್‌ಗಳಲ್ಲೇ ಪಂದ್ಯದಲ್ಲಿ ಗೆಲುವು ಪಡೆದಿತ್ತು. ಆ ಪಂದ್ಯದಲ್ಲಿ ಕೋಲ್ಕತ್ತಾ ನಾಯಕ ಅಜಿಂಕಾ ರಹಾನೆ ಅರ್ಧ ಶತಕ ಗಳಿಸಿದ್ದರು.

ಮಾರ್ಚ್ 26ರಂದು ನಡೆದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಕೋಲ್ಕತ್ತಾ ತಂಡವು ಜಯ ದಾಖಲಿಸಿತ್ತು. ಅಂದು ಕೋಲ್ಕತ್ತಾ ಪರ ಡಿ. ಕಾಕ್ ಅಜೇಯ 97 ರನ್ ಗಳಿಸಿ, ತಂಡದ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿದ್ದರು.



ಮಾರ್ಚ್ 31ರಂದು ನಡೆದ ಐಪಿಎಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಕೋಲ್ಕತ್ತಾ ಕೇವಲ 116 ರನ್ ಗಳಿಸಿತ್ತು. ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಮುಂಬೈ ಎದುರು ವೈಫಲ್ಯ ಕಂಡಿದ್ದ ಕೆಕೆಆರ್ ಆ ಪಂದ್ಯದಲ್ಲಿ ಹೀನಾಯ ಸೋಲನ್ನು ಕಂಡಿತ್ತು.

ತವರಿನ ಆತ್ಮವಿಶ್ವಾಸದ ಬಲದೊಂದಿಗೆ ಗುರುವಾರ ದಂದು ಪಂದ್ಯ ಆಡಲಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ಹೈದರಾಬಾದ್ ತಂಡ ಪ್ರಬಲ ಸವಾಲೊಡ್ಡುವ ನಿರೀಕ್ಷೆಯಲ್ಲಿದೆ. ಈಗಾಗಲೇ ಈ ಐಪಿಎಲ್ ಆವೃತ್ತಿಯಲ್ಲಿ ಹೈದರಾಬಾದ್ ತಂಡವು 3 ಪಂದ್ಯಗಳನ್ನು ಆಡಿದೆ. ಮಾರ್ಚ್ 23ರಂದು ನಡೆದ ಮೊದಲ ಪಂದ್ಯದಲ್ಲಿ ಹೈದರಾಬಾದ್ ತಂಡವು ರಾಜಸ್ಥಾನ ರಾಯಲ್ಸ್ ತಂಡವನ್ನು 44 ರನ್‌ಗಳಿಂದ ಸೋಲಿಸಿತ್ತು. ಹೈದರಾಬಾದ್ ತಂಡದ 286 ರನ್‌ಗಳ ಗುರಿಯನ್ನು ಬೆಂಬತ್ತಿದ ರಾಜಸ್ಥಾನ ತಂಡವು 242 ರನ್ ಗಳನ್ನಷ್ಟೇ ಗಳಿಸಲು ಶಕ್ತವಾಗಿತ್ತು, ಆ ಪಂದ್ಯದಲ್ಲಿ ಹೈದರಾಬಾದ್ ತಂಡದ ಪರ ಇಶಾನ್ ಕಿಶನ್ ಅಜೇಯ ಶತಕ ಬಾರಿಸಿದ್ದರು.

ಮಾರ್ಚ್ 27ರಂದು ನಡೆದಿದ್ದ ಪಂದ್ಯದಲ್ಲಿ ಹೈದರಾಬಾದ್ ತಂಡವು ಲಖನೌ ಎದುರು 5 ವಿಕೆಟ್‌ಗಳ ಸೋಲು ಅನುಭವಿಸಿತ್ತು. ಹೈದರಾಬಾದ್‌ನ 190 ರನ್ ಗಳ ಗುರಿಯನ್ನು ಬೆಂಬತ್ತಿದ ಲಖನೌ ಆ ಪಂದ್ಯದಲ್ಲಿ ಅನಾಯಾಸವಾಗಿ ಗೆಲುವನ್ನು ಪಡೆದಿತ್ತು.

ಮಾರ್ಚ್ 30ರಂದು ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು ಹೈದರಾಬಾದನ್ನು 7 ವಿಕೆಟ್ ಗಳಿಂದ ಬಗ್ಗು ಬಡಿದಿತ್ತು. ಹೈದರಾಬಾದ್ ಪರ ಅನಿಕೇತ್ ವರ್ಮಾ 74 ರನ್ ಗಳಿಸಿದ್ದನ್ನು ಬಿಟ್ಟರೆ ಉಳಿದ ಯಾರೂ ಕೂಡಾ ಅಂದಿನ ಪಂದ್ಯದಲ್ಲಿ ಡೆಲ್ಲಿಗೆ ಪ್ರತಿರೋಧವನ್ನು ಒಡ್ಡಿರಲಿಲ್ಲ.

ಗುರುವಾರದ ಪಂದ್ಯವು ತನ್ನ ತವರಿನಲ್ಲಿ ನಡೆಯುತ್ತಿರುವುದರಿಂದ ಕೋಲ್ಕತ್ತಾ ತಂಡಕ್ಕೆ ಪ್ರೇಕ್ಷಕರ ಹೆಚ್ಚಿನ ಬೆಂಬಲ ಸಿಗುವುದು ಸಹಜ. ಈ ಪಂದ್ಯದಲ್ಲಿ ಎಸ್‌ಆರ್‌ಎಚ್ ವಿರುದ್ಧ ಕೆಕೆಆರ್ ಗೆಲ್ಲದಿದ್ದರೆ ತನ್ನ ಅಭಿಮಾನಿಗಳ ವ್ಯಾಪಕ ಟೀಕೆಗೂ ಗುರಿಯಾಗ ಬೇಕಾಗುತ್ತದೆ. ಹೈದರಾಬಾದ್ ಕೂಡಾ ಈ ಪಂದ್ಯವನ್ನು ಹೇಗಾದರೂ ಗೆದ್ದು ತನ್ನ ಮುಂದಿನ ಹಾದಿಯನ್ನು ಸುಗಮಗೊಳಿಸುವ ಯೋಚನೆ ಯಲ್ಲಿದೆ. ಆದ್ದರಿಂದ ಗುರುವಾರದ ಪಂದ್ಯ ಕೋಲ್ಕತ್ತಾ ಮತ್ತು ಹೈದರಾಬಾದ್ ತಂಡಗಳಿಗೆ ತುಂಬಾ ಮಹತ್ವದ್ದಾಗಿದೆ.

ಕೋಲ್ಕತ್ತಾ ತಂಡ

ಅಜಿಂಕ್ಯ ರಹಾನೆ (ನಾಯಕ)	ವರುಣ್ ಚಕ್ರವರ್ತಿ	ಟ್ರಾವಿಸ್ ಹೆಡ್
ಕ್ವಿಂಟನ್ ಡಿ ಕಾಕ್	ಆರ್. ಪೊವೆಲ್	ಹರ್ಷಲ್ ಪಟೇಲ್
ಸುನಿಲ್ ನರೈನ್	ಲುವ್‌ನಿತ್ ಸಿಸೋಡಿಯಾ	ಅಭಿಷೇಕ್ ಶರ್ಮಾ
ವೆಂಕಟೇಶ್ ಅಯ್ಯರ್	ರಣದೀಪ್ ಸಿಂಗ್	ನಿತೇಶ್ ರೆಡ್ಡಿ
ರಿಂಕು ಸಿಂಗ್	ಹೈದರಾಬಾದ್ ತಂಡ:	ಮೊಹಮ್ಮದ್ ಶಮಿ
ಆಂಡ್ರೆ ರಸೆಲ್	ಪ್ಯಾಟ್ ಕಮಿನ್ಸ್ (ನಾಯಕ)	ರಾವುಲ್ ಚಾಹರ್
ಅಂಗ್‌ಕ್ರಿಶ್ ರಘುವಂಶಿ	ಇಶಾನ್ ಕಿಶಾನ್	ಆ್ಯಡಂ ಝಂಪಾ
ಮೊಯಿನ್ ಅಲಿ	ಅಭಿನವ್ ಮನೋಹರ್	ಸಿಮ್ರಜಿತ್ ಸಿಂಗ್
ವೈಭವ್ ಅರೋರಾ	ಅನಿಕೇತ್ ವರ್ಮಾ	ಜಯದೇವ್
ಹರ್ಷಿತ್ ರಾಣಾ	ಸಚಿನ್ ಬೇಬಿ	ಉನಾದ್ಕಟ್